
# ಚಿತ್ರ ಚಿತ್ತಾರಗಳು

ಡಾ. ಶ್ರೀನಿವಾಸ ಕುಲಕರ್ಣಿ



# ಚಿತ್ರ ಚಿತ್ತಾರಗಳು

(ಆಯ್ದ ಕಥೆಗಳು)

ಡಾ॥ ಶ್ರೀನಿವಾಸ ಕುಲಕರ್ಣಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

**CHITTA CHITTARAGALU :** Short Stories by Dr. Srinivasa Kulakarni. Published by V.N. Mallikarjunaswamy Administrative Officer, Kannada Pustaka Pradikara, (Kannada Book Authority), Chamarajapet, Bangalore - 560 010.

Pages : 166

ಪ್ರಕಟಣೆ ವರ್ಷ : 2001

ಈ ಆವೃತ್ತಿಯ ಗ್ರಂಥಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ

ಪ್ರತಿಗಳು : 1000

ಬೆಲೆ : ರೂ. 45-00

ISBN : 81-7713-074-9

ಮುಖಪುಟ ವಿನ್ಯಾಸ : ಯು.ಟಿ. ಸುರೇಶ್

ಮುದ್ರಣ :
ಸಿದ್ದೇಶ್ವರ ಪ್ರಿಂಟರ್ಸ್
ನಂ. 171, ಕಾಟನ್‌ಪೇಟೆ ಮುಖ್ಯರಸ್ತೆ
ಬೆಂಗಳೂರು - 560 053

# ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರೀ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಅತ್ಯಾಕರ್ಷಕವೂ, ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನವೂ, ಬುದ್ಧಿಮನಸ್ಸುಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಸಾಹಕಾರಿಯಾದ ಉತ್ತಮ ಜ್ಞಾನ ಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರಂಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಯ್ಯ ಅವರಿಗೆ ಸಲ್ಲಬೇಕು. ಕನ್ನಡ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸತ್ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದೀಗ ಈ ಮಾಲೆಯಲ್ಲಿ "ಚಿತ್ತ ಚಿತ್ತಾರಗಳು" ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಡಾ. ಶ್ರೀನಿವಾಸ ಕುಲಕರ್ಣಿ ಅವರು ಈ ಕೃತಿಯನ್ನು ಬಹು ಪರಿಶ್ರಮದಿಂದ, ಶ್ರದ್ಧೆ, ಆಸಕ್ತಿಗಳಿಂದ ತಮ್ಮ ಸಂಕಲನಗಳಿಂದ ಆರಿಸಿ ಪ್ರಾಧಿಕಾರಕ್ಕಾಗಿ ಸಿದ್ಧಪಡಿಸಿಕೊಟ್ಟಿದ್ದಾರೆ. ಲೇಖಕರಾದ ಪ್ರೊ. ಶ್ರೀನಿವಾಸ ಕುಲಕರ್ಣಿ ಇವರಿಗೆ ಮತ್ತು ಇದನ್ನು ಶೀಘ್ರವಾಗಿ ಸುಂದರವಾಗಿ ಮುದ್ರಿಸಿಕೊಟ್ಟಿರುವ ಸಿದ್ಧೇಶ್ವರ ಪ್ರಿಂಟರ್ಸ್‌ನ ಮಾಲೀಕರಿಗೆ, ಸಿಬ್ಬಂದಿ ವರ್ಗದವರಿಗೆ ಹಾಗೂ ಈ ಕೃತಿಯನ್ನು ಈ ಮಾಲೆಯಲ್ಲಿ ಪ್ರಕಟಿಸಲು ಸಮ್ಮತಿಸಿದ ಪ್ರಾಧಿಕಾರದ ಸದಸ್ಯ ಬಂಧುಗಳಿಗೆ ಹೃತ್ಪೂರ್ವಕ ವಂದನೆಗಳು.

1-3-2001 ಡಾ. ಎಚ್.ಜೆ. ಲಕ್ಕಪ್ಪಗೌಡ

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

# ನನ್ನ ಮಾತು

ಕನ್ನಡ ಪುಸ್ತಕ ಪ್ರಾಧಿಕಾರದಿಂದ ನನ್ನ ಈ ಆಯ್ದ ಕಥೆಗಳ ಸಂಕಲನ 'ಚಿತ್ತ ಚಿತ್ತಾರಗಳು' ಪ್ರಕಟಗೊಳ್ಳುತ್ತಿರುವುದು ನನಗೆ ತುಂಬಾ ಸಂತಸ ನೀಡಿದೆ.

ಇದು ನನ್ನ ನಾಲ್ಕನೆಯ ಕಥಾ ಸಂಕಲನ. ಎಂಟನೆಯ ಕೃತಿ. ಸುಮಾರು ನಾಲ್ಕು ದಶಕಗಳಿಂದ ಬರೆದ ನನ್ನ ಕಥಾಗುಚ್ಛದಿಂದ ಆಯ್ದ ಇಪ್ಪತ್ತು ಕಥೆಗಳು ಇಲ್ಲಿವೆ. ಹತ್ತು ಮೊದಲಿನ ಮೂರು ಕಥಾ ಸಂಕಲನದಿಂದ ಆಯ್ದವು. ಉಳಿದ ಹತ್ತು ಕಥೆಗಳು ಕನ್ನಡದ ಹೆಸರಾಂತ ಪತ್ರಿಕೆಗಳಲ್ಲಿ ಪ್ರಕಟವಾದವು.

ನನ್ನ ಈ ನಾಲ್ಕೂ ಕಥಾ ಸಂಕಲನಗಳು ನನಗೆ ಒಂದಲ್ಲ ಒಂದು ರೀತಿಯಲ್ಲಿ ತೃಪ್ತಿಯನ್ನು ನೀಡಿವೆ. ನನ್ನ 'ಬಾಳು ನಂಜು - ಬಯಕೆ ಮಂಜು' ಮೊದಲನೆಯ ಕಥಾ ಸಂಕಲನವೇ ಓದುಗರ, ವಿಮರ್ಶಕರ ಮೆಚ್ಚುಗೆಗೆ ಪಾತ್ರವಾದುದು; ಎರಡನೆಯ ಸಂಕಲನ 'ಫಲಿತಾಂಶ' ಕನ್ನಡದ ಹೆಸರಾಂತ ಚಲನಚಿತ್ರ ನಿರ್ದೇಶಕ ದಿ. ಪುಟ್ಟಣ ಕಣಗಾಲ್ ಅವರಿಂದ ಚಿತ್ರೀಕರಣಗೊಂಡ ಕಥೆ 'ಗೋಳಿಗುಮ್ಮಟ'ದಿಂದ ಕೂಡಿದ್ದುದು. ಮೂರನೆಯ ಕಥಾ ಸಂಕಲನ ಅಂಗೈ ತುಂಬ ಆಕಾಶ 'ಕರ್ನಾಟಕ ವಿಶ್ವವಿದ್ಯಾಲಯ'ದ ಬಿ.ಎ. (ಎರಡು) ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವಾದುದು; ಈಗ ನಾಲ್ಕನೆಯ ಸಂಕಲನ 'ಚಿತ್ತ-ಚಿತ್ತಾರಗಳು' ಪ್ರತಿಷ್ಠಿತ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟಗೊಳ್ಳುತ್ತಿದೆ.

ಈ 'ಚಿತ್ತ-ಚಿತ್ತಾರಗಳು' ಅಂದವಾಗಿ ಪ್ರಕಟವಾಗಲು ಮುಖ್ಯ ಕಾರಣ - ಪ್ರೇರಣೆ - ಪ್ರಾಧಿಕಾರದ ಅಧ್ಯಕ್ಷರು ಹಾಗೂ ನನ್ನ ಆತ್ಮೀಯರೂ ಆದ ಡಾ. ಎಚ್.ಜೆ. ಲಕ್ಕಪ್ಪಗೌಡ ಅವರು. ಅವರಿಗೂ ಹಾಗೂ ಪ್ರಕಟಣೆಯ ಆಯ್ಕೆ ಸಮಿತಿಯ ಸದಸ್ಯರಿಗೂ ನನ್ನ ಅನಂತ ಕೃತಜ್ಞತೆಗಳು.

ನನ್ನ ಕಥೆಗಳನ್ನು ಪ್ರಕಟಿಸಿ ಪ್ರೋತ್ಸಾಹಿಸಿದ 'ಪ್ರಜಾವಾಣಿ', 'ಕನ್ನಡಪ್ರಭ', 'ಸಂಯುಕ್ತ ಕರ್ನಾಟಕ', 'ಸುಧಾ', 'ಕರ್ಮವೀರ', 'ತರಂಗ', 'ಪ್ರಜಾಮತ', 'ಮಲ್ಲಿಗೆ', 'ನೂತನ' ಪತ್ರಿಕೆಗಳ ಸಂಪಾದಕರಿಗೆ ನನ್ನ ವಂದನೆಗಳು.

'ಚಿತ್ತ ಚಿತ್ತಾರ'ಗಳಿಗೆ ಒಪ್ಪುವ ಅಂದದ ಮುಖಚಿತ್ರ ನೀಡಿದ ಕಲಾವಿದರನ್ನು ಇಲ್ಲಿ ಸ್ಮರಿಸುತ್ತೇನೆ.

ಧಾರವಾಡ

ಡಾ. ಶ್ರೀನಿವಾಸ ಕುಲಕರ್ಣಿ

# ಪರಿವಿಡಿ


| | | |
|---|---|---|
| ೧. | ದಾಖಲೆ ಪತ್ರ | ೧ |
| ೨. | ಅಸ್ತಿತ್ವ | ೯ |
| ೩. | ಅಳಲ ನೆಳಲಲ್ಲಿ | ೧೬ |
| ೪. | ಮುದ್ರೆ | ೨೦ |
| ೫. | ತಿರುವು | ೨೫ |
| ೬. | ನೆಲಗಟ್ಟು | ೩೮ |
| ೭. | ಊನ | ೪೬ |
| ೮. | ಬಾಳು ನಂಜು; ಬಯಕೆ ಮಂಜು | ೫೭ |
| ೯. | ಗಾಳದ ಹುಳ | ೬೭ |
| ೧೦. | ಗ್ಯಾಸ ಸ್ಟೋವ್ | ೭೫ |
| ೧೧. | ಒಂದು ವರದಿ | ೮೧ |
| ೧೨. | ಮದುವೆಗಿಂತ ಮುಂಚೆ | ೮೮ |
| ೧೩. | ಕರಿಯನ ಕನಸು | ೯೯ |
| ೧೪. | ಚುನಾವಣೆ ಮತ್ತು ಬ್ರಹ್ಮರಾಕ್ಷಸ | ೧೦೫ |
| ೧೫. | ಆರನೆಯ ಬೆರಳು | ೧೧೪ |
| ೧೬. | ಅಮಾನತ್ | ೧೨೨ |
| ೧೭. | ಗೋಳಗುಮ್ಮಟ | ೧೨೯ |
| ೧೮. | ರಾಜೀನಾಮೆ | ೧೩೭ |
| ೧೯. | ಪ್ರಾಣದೇವ | ೧೪೪ |
| ೨೦. | ಪುರಸ್ಕಾರ | ೧೫೩ |

# ೧. ದಾಖಲೆ ಪತ್ರ

ನನ್ನ ತಂದೆ ಸತ್ತರು. ಅದೊಂದು ಸಾಮಾನ್ಯ ಅನುಭವವಾಗಿದ್ದರೆ ನಾನು ಇಲ್ಲಿ ಪ್ರಸ್ತಾಪಿಸುತ್ತಲೇ ಇರಲಿಲ್ಲ. ಒಂದು ತಿಂಗಳು ದೀರ್ಘ 'ಕೋಮಾ'ದಲ್ಲಿ ಮುಳುಗಿ, ದೊಡ್ಡ ಆಸ್ಪತ್ರೆಯೊಂದರಲ್ಲಿ ಕೊನೆಯುಸಿರೆಳೆದರು. ಆ ದಿನ ನಾನು ನಿಜವಾಗಿಯೂ ಸಾವಿನ ವಿವಿಧ ಹಂತಗಳನ್ನು ಕಂಡೆ. ಕೊರಳ ಮಣಿಗಳ ಮಧ್ಯೆ ಸಿಕ್ಕು ಗೊರ್ ಗೊರ್ ಸದ್ದು ಮಾಡುವ ಜೀವ ಶಾಂತವಾಯಿತು. ಸಿಲೆಂಡರಿನಿಂದ ಪಾರದರ್ಶಕ ನಳಿಕೆಯ ಮೂಲಕ ಅವರ ಮೂಗಿನೊಳಗೆ ತೂರಿಸುತ್ತಿದ್ದ 'ಆಕ್ಸಿಜನ್' ಗುಳ್ಳೆಗಳೂ ನಿಶ್ಚಲವಾಗಿದ್ದವು. ಆಗಲೂ ನಾನು ಏಕಚಿತ್ತದಿಂದ ಅವರ ಮುಖವನ್ನೇ ನೋಡುತ್ತ ಕುಳಿತಿದ್ದೆ.

"ಸ್ಸಾರಿ ಅರುಣ್, ನಿಮ್ಮ ತಂದೆಯವರನ್ನು ಕೊನೆಗೂ ಉಳಿಸಿಕೊಳ್ಳಲಿಕ್ಕಾಗಲಿಲ್ಲ. ಬಿಲ್ ತುಂಬಿ ಅವರ ಶವವನ್ನು ತೆಗೆದುಕೊಂಡು ಹೋಗಿ. ನರ್ಸ್, ಇವರಿಗೆ ಕ್ಯಾಷ್ ಕೌಂಟರ್ ತೋರಿಸಿ" ಎಂದು ಡಾಕ್ಟರರು ನನ್ನ ಬೆನ್ನ ಮೇಲೆ ಕೈಯಿರಿಸಿ ಸಾಂತ್ವನಗೊಳಿಸಿ ಹೊರಟು ಹೋದರು. ನರ್ಸ್ ಶವದ ಮೇಲೆ ಬಿಳಿಯ ಹೊದಿಕೆ ಹೊದಿಸಿ, ಅಲ್ಲಿಂದಲೆ ಕ್ಯಾಷ್ ಕೌಂಟರ್ ಇರುವ ದಾರಿ ತೋರಿಸಿದಳು.

ಕಂಗೆಟ್ಟಿದ್ದ ನಾನು ಮುಂದಿನ ಕಾರ್ಯಕ್ಕೂ ಅಣಿಯಾಗಲೇಬೇಕಾಯಿತು. ತಂದೆಯನ್ನು ಆಸ್ಪತ್ರೆಗೆ ಸೇರಿಸಿದ್ದಕ್ಕಿಂತ ಹೆಚ್ಚು ಅವರ ಶವವನ್ನು ಪಡೆಯಲು ಶ್ರಮಿಸಬೇಕಾಯಿತು. ಏದುಸಿರು ಬಿಡುತ್ತ ನಾನು ಕ್ಯಾಷ್ ಕೌಂಟರ್ ಬಳಿ ಬಂದೆ. ಒಳಗಡೆ ಇದ್ದ ವ್ಯಕ್ತಿ ತಲೆ ಕೆಳಗೆ ಹಾಕಿಕೊಂಡು ಆಗಲೇ ಜಮವಾಗಿದ್ದ ಹಣವನ್ನು ಎಣಿಸಿ, ಖಾತೆ ಪುಸ್ತಕದಲ್ಲಿ ಬರೆಯುವುದರಲ್ಲಿ ಮಗ್ನನಾಗಿದ್ದ.

"ಸಾರ್, ಈ ಹಣ ತೆಗೆದುಕೊಂಡು ರಶೀದಿ ಕೊಡುತ್ತೀರಾ,  ನನ್ನ ತಂದೆಯ ಶವ ತೆಗೆದುಕೊಳ್ಳಬೇಕಾಗಿದೆ" ಎಂದು ನಾನು ಮೆಲ್ಲಗೆ ಕೇಳಿದೆ. ಆತ ಮುಖ ಕಿವುಚಿ ನನ್ನತ್ತ ನೋಡುತ್ತ "ಸ್ವಲ್ಪ ತಾಳಿ, ದುಡ್ಡು ಎಣಿಸುತ್ತಿರುವುದು ಕಾಣಿಸುವುದಿಲ್ಲವೆ?" ಎಂದು ಅಬ್ಬರಿಸಿ ಮತ್ತೆ ತನ್ನ ಕೆಲಸದಲ್ಲಿ ತೊಡಗಿದ್ದ. "ನನಗೆ ಬೇಗ ನನ್ನ ತಂದೆಯ ಶವ ತೆಗೆದುಕೊಂಡು ಕ್ರೆಮಿಟೋರಿಯಂಗೆ ಹೋಗಬೇಕಾಗಿದೆ" ಎಂದು ಮತ್ತೆ ದೈನ್ಯದಿಂದ ಕೇಳಿದೆ. "ಇಲ್ಲಿ ಎಲ್ಲರಿಗೂ ಅವಸರವೇ, ಕೊಡಿ" ಎನ್ನುತ್ತಿದ್ದಂತೆ ಅವರಿಗೆ ಟೆಲಿಫೋನ್ ಕರೆ ಬಂತು. ನನ್ನ ಕೈಯಿಂದ ದುಡ್ಡು ತೆಗೆದುಕೊಳ್ಳುವುದನ್ನು ಬಿಟ್ಟು ಅದರತ್ತ ನಡೆದು, ಫೋನ್ ಸಂಭಾಷಣೆಯಲ್ಲಿ ತೊಡಗಿ ನನ್ನನ್ನು ಮರೆತೇಬಿಟ್ಟ. "ಹಲೋ, ಯಾರು ಸುಧೀರ, ಏನು ಸಮಾಚಾರ, ಸಂಜೆ ಪಾರ್ಟಿ

ಇದೆಯಾ? ಹಾಂ! ಖಂಡಿತಾ ಬರ್ತೇನೆ. ಆದ್ರೆ ನೀನೆ ಪಿಕ್‌ಅಪ್ ಮಾಡಿಕೊಂಡು ಹೋಗು. ತಿಳೀತೆ.." ಇನ್ನು ಅವನು ಏನೇನೋ ಮಾತಾಡುತ್ತಿದ್ದಂತೆ ನನ್ನ ಮನದ ಉದ್ವೇಗ ಹೆಚ್ಚತೊಡಗಿತ್ತು. ನಾನು ಚಡಪಡಿಸತೊಡಗಿದೆ. 'ಅವನಿಗೇನು, ಇದು ಅವನಿಗೆ ನಿತ್ಯದ ಸಾವು' ಎನ್ನಿಸಿತು.

ಅಂತೂ ಅವನ ಮಾತು ಮುಗಿಯಿತು. ನನ್ನಿಂದ ಹಣ ಪಡೆದು ರಶೀದಿ ಕೊಡುತ್ತ "ಇದೇನು ಅವಸರದಲ್ಲಿ ಇಪ್ಪತ್ತು ರೂಪಾಯಿ ಹೆಚ್ಚಿಗೆ ಕೊಟ್ಟಿದ್ದೀರಾ! ತಗೊಳ್ಳಿ... ಅಂದಹಾಗೆ ಶವವಾಹಿನಿಗಾಗಿ ಕಾರ್ಪೋರೇಷನ್ನಿಗೆ ಫೋನ್ ಮಾಡಿದ್ದೀರಾ? ಅದು ತಡವಾಗಿ ಬಂದರೆ ನಿಮಗೆ ತೊಂದರೆ..." ಎಂದು ನುಡಿದು ರಶೀದಿ ನನ್ನ ಕೈಗಿತ್ತ. ನಾನು ಅದನ್ನು ತೆಗೆದುಕೊಂಡು, ಸಾರ್ವಜನಿಕ ಟೆಲಿಫೋನ್ ಬೂಥ್‌ನಿಂದ ಶವವಾಹಿನಿಗಾಗಿ ಫೋನ್ ಮಾಡಿ, ನಾಲ್ಕನೆಯ ಮಹಡಿಯಲ್ಲಿದ್ದ ನನ್ನ ತಂದೆಯ ಶವದ ಬಳಿ ಬಂದೆ.

ನಾನು ರಶೀದಿಯನ್ನು ನರ್ಸ್ ಕೈಯಲ್ಲಿತ್ತು. "ಈ ಶವವನ್ನು ಶವಾಗಾರಕ್ಕೆ ಯಾರು ತೆಗೆದುಕೊಂಡು ಬರುತ್ತಾರೆ" ಎಂದು ಪ್ರಶ್ನಿಸಿದೆ. "ನೀವೇ ವ್ಯವಸ್ಥೆ ಮಾಡಿಕೊಳ್ಳಬೇಕು" ಎಂದು ಅವಳು ನನ್ನ ಮುಖಕ್ಕೆ ಹೊಡೆದಂತೆ ನಿರ್ದಯವಾಗಿ ಹೇಳಿದಾಗ ನಾನು ಗಡಿಬಿಡಿಗೊಂಡೆ. ಮತ್ತೆ ಅವಳಿಗೇನು ಕನಿಕರ ಬಂದಿತೊ, ಆಚೆ ಹೊರಟವಳು ನನ್ನತ್ತ ತಿರುಗಿ "ಅದೋ ಅಲ್ಲಿ ಇಬ್ಬರು ನಿಂತಾರಲ್ಲ ಅವರಿಗೆ ದುಡ್ಡು ಕೊಡಿ. ಅವರೇ ಶವಾಗಾರಕ್ಕೆ ತೆಗೆದುಕೊಂಡು ಹೋಗುತ್ತಾರೆ" ಎಂದು ಹೇಳಿ ಹೊರಟುಹೋದಳು. ಆಸ್ಪತ್ರೆಯವರೇಕೆ ಈ ವ್ಯವಸ್ಥೆ ಮಾಡಬಾರದು ಎಂದು ನನ್ನ ಮನಸ್ಸು ಪ್ರಶ್ನಿಸಿದರೂ, ತೆಪ್ಪಗೆ ಅವರತ್ತ ಸಾಗಿ ಅವರು ಕೇಳಿದಷ್ಟು ಹಣ ಕೊಟ್ಟು ಶವಾಗಾರಕ್ಕೆ ತಂದೆ.

ಶವಾಗಾರ ಆಸ್ಪತ್ರೆಯ ಕಟ್ಟಡದ ಕೆಳಗಡೆ ಸೆಲ್ಲರ್‌ದಲ್ಲಿದ್ದ ಪುಟ್ಟಕೋಣೆ. ಹೊಲಸು ಹರಡಿತ್ತು. ಮಸಕು ಮಸಕು ಬೆಳಕು. ಕೆಟ್ಟವಾಸನೆ, ಕೋಣೆಯ ಮಧ್ಯದಲ್ಲಿದ್ದ ಎತ್ತರದ ಕಲ್ಲಿನ ಕಟ್ಟೆಯ ಮೇಲೆ ನನ್ನ ತಂದೆಯ ಶವವನ್ನು ಇರಿಸಲಾಯಿತು. ನಾನು ಅದನ್ನೇ ನೋಡುತ್ತ ನಿಂತುಕೊಂಡುಬಿಟ್ಟೆ.

"ಸಾರ್, ನೀವೇನಾ ಅರುಣ್.." ಎಂದು ಕೇಳಿ ಬಂದ ಧ್ವನಿಯತ್ತ ತಿರುಗಿದೆ. ಕಪ್ಪನೆಯ ದಪ್ಪ ದೇಹ, ಉದ್ದನೆಯ ಅಸ್ತವ್ಯಸ್ತವಾಗಿ ಹರಡಿದ ತಲೆಗೂದಲು, ಕುರುಚಲು ಗಡ್ಡ, ಮಾಸಿದ ಉಡುಗೆ ಉಟ್ಟ ಆ ವ್ಯಕ್ತಿಯನ್ನು ನೋಡಿ ಆತ ಆ ಶವಾಗಾರದ ಪರಿಚಾರಕನಿರಬೇಕು ಎನ್ನಿಸಿತು. ನಾನು 'ಹೌದು' ಎನ್ನುವಂತೆ ತಲೆ ಹಾಕಿದಾಗ "ಇದು ನೋಡಿ ಸಾಮಿ, ಇದು ದಾಖಲೆ ಪತ್ರ. ನಿಮ್ಮ ತಂದೆ ಅವರು ಸತ್ತದ್ದು ಇದರಲ್ಲಿದೆ. ಈ ಚೀಟಿ ತೋರಿಸಿದ್ರೇನೆ ಚಿತೆಗೆ ಹಾಕೋದು. ಜೋಪಾನವಾಗಿ ಇಟ್ಟುಕೊಳ್ಳಿ" ಎನ್ನುತ್ತ ನನ್ನ ಕೈಗೆ ಆ ಚೀಟಿಯನ್ನಿತ್ತ. ನಾನು ಹಾಗೇ ಅದನ್ನೂ ಕಿಸೆಯಲ್ಲಿ ತುರುಕಿಕೊಂಡೆ. ಅವನು ಮತ್ತೆ ಅದನ್ನೇ ಹೇಳುತ್ತಿರುವುದನ್ನು ನೋಡಿ ನನಗೆ ಅವನ ಮನದ ಇಂಗಿತ ಅರ್ಥವಾಯಿತು. ಅವನ ಕೈಯಲ್ಲಿ ಹತ್ತು ರೂಪಾಯಿ ಇರಿಸಿದೆ. ಅವನು ಖುಷಿಪಟ್ಟ. "ಅಲ್ಲೆ ಆಚೆ ಮರದ ಕೆಳಗೆ ಕುಳಿತುಕೊಳ್ಳಿ, ವ್ಯಾನ್ ಬಂದ ಮೇಲೆ ಶವ ತೆಗೆದುಕೊಂಡು ಹೋಗಿ" ಎಂದ.

ಅವನ ಆದೇಶದಂತೆ ಅಲ್ಲಿಯೇ ಇದ್ದ ಮರದ ಕೆಳಗೆ ಕುಳಿತುಕೊಂಡೆ. ವ್ಯಾನ್ ಬರಲು ತಡವಾಗುತ್ತಿದ್ದಂತೆ ನನ್ನ ಮನದಲ್ಲಿ ಆತಂಕ ಹೆಚ್ಚತೊಡಗಿತು. ಸಂಜೆಯ ದಣಿದ ಕಿರಣಗಳು ಕರಗಿ ಕತ್ತಲಾವರಿಸತೊಡಗಿತು.

"ಸಾರ್, ನೀವು ಶವವಾಹಿನಿಗೆ ಹೇಳಿದ್ದೀರಾ? ಬಂದಿದೆ"

ಖಾಕಿ ಉಡುಪಿನ ಶವವಾಹಿನಿಯ ಡ್ರೈವರ್ ನುಡಿದಾಗ ನನ್ನ ಮನದ ಆತಂಕ ಸ್ವಲ್ಪ ಶಮನಗೊಂಡಿತು. 'ಹೌದು' ಎನ್ನುತ್ತ ನಾನು ಎದ್ದು ನಿಂತೆ.

"ಬನ್ನಿ ಹಾಗಾದರೆ ಶವವನ್ನು ಶವವಾಹಿನಿಗೆ ತೆಗೆದುಕೊಂಡು ಹೋಗುವಾ" ಎನ್ನುತ್ತ ಆ ವ್ಯಕ್ತಿ ಮತ್ತೆ ನನ್ನತ್ತ ದೃಷ್ಟಿ ಬೀರಿ "ನೀವೊಬ್ಬರೇನಾ, ನಿಮ್ಮ ಜೊತೆಗೆ ಮತ್ಯಾರೂ ಇಲ್ಲವೆ?" ಎಂದು ಪ್ರಶ್ನಿಸಿದ. ನಾನು 'ಹೌದು' ಎಂದು ನಿರ್ವಿಕಾರವಾಗಿ ಹೇಳಿದೆ.

ನನ್ನ ಬಗ್ಗೆ ಅವರಿಗೆ ಕರುಣೆ ಬಂದಂತಾಯಿತು. "ಬನ್ನಿ ಪರವಾ ಇಲ್ಲ. ನಾನು ಸಹಾಯ ಮಾಡುತ್ತೇನೆ. ಇದೆಲ್ಲಾ ನಮಗೆ ಮಾಮೂಲು. ಏನೂ ಯೋಚಿಸಬೇಡಿ".

ಅವರ ಹಿಂದೆ ನಾನು ಮೂಕನಂತೆ ಶವಾಗಾರದೊಳಗೆ ನಡೆದೆ. ಅಲ್ಲಿಯ ಕಲ್ಲಿನ ಕಟ್ಟೆಯ ಮೇಲಿದ್ದ ಶವವನ್ನು ನೋಡಿ ಆತ "ಇದೇನಾ ನಿಮ್ಮ ತಂದೆ ಶವಾ. ಅವರ ಮುಖದ ದರ್ಶನ ಮಾಡಿ, ಪಾದ ಮುಟ್ಟಿ ಕೊನೆ ನಮಸ್ಕಾರ ಮಾಡಿ" ಎಂದ.

ನಾನು ಮೆಲ್ಲಗೆ ಶವದ ಬಳಿ ಸಾಗಿ ಮುಖದ ಹೊದಿಕೆ ಸರಿಸಿ ದಿಟ್ಟಿಸಿ ನೋಡಿದೆ. ತಂದೆ ಶಾಂತವಾಗಿ ಮಲಗಿದಂತಿತ್ತು. ನನಗೆ ಅರಿವಿಲ್ಲದಂತೆ ಕಣ್ಣೀರು ಉದುರಿತು. ಮತ್ತೆ ಮುಖ ಮುಚ್ಚಿ ಪಾದದ ಬಳಿ ಬಂದು ಅವುಗಳಿಗೆ ತಲೆ ಹಚ್ಚಿ ಅಂತಿಮ ನಮಸ್ಕಾರ ಸಲ್ಲಿಸಿದೆ.

"ಸಾರ್, ಈ ವಾಕಿಂಗ್ ಸ್ಟಿಕ್ ನಿಮ್ಮ ತಂದೆ ಅವರದಾ?"

ಡ್ರೈವರ್ ಕಟ್ಟೆಯ ಕೆಳಗಡೆ ಇದ್ದ ಅದನ್ನು ಎತ್ತಿಕೊಂಡು ನನ್ನ ಹತ್ತಿರ ತಂದ. ನಾನು 'ಹೌದು' ಎಂದು ತಲೆ ಅಲ್ಲಾಡಿಸಿದೆ. "ಅವರ ನೆನಪಿಗೆ ಇದನ್ನು ಇಟ್ಟುಕೊಳ್ಳಿ. ತುಂಬಾ ಚೆನ್ನಾಗಿದೆ. ಕುಸುರು ಕುಸುರಾದ ನಾಜೂಕಾದ ಕೆತ್ತನೆಯ ಕೆಲಸ ಇದೆ. ಇದರಲ್ಲಿ. ಈ ಹಿಡಿಕೆ ಎಷ್ಟು ಸುಂದರವಾಗಿದೆ. ಅವರು ತುಂಬಾ ರಸಿಕರಿದ್ದಿರಬೇಕು!"

"ಹೌದು, ಅವರು ಜೀವನದಲ್ಲಿ ಒಳ್ಳೆಯದನ್ನು, ಸುಂದರವಾದುದನ್ನು ಪ್ರೀತಿಸಿದರು."

"ಅಲ್ಲಾ ನಿಮಗಾಗಲಿ, ನಿಮ್ಮ ತಂದೆ ಅವರಿಗಾಗಲಿ ಬಂಧುಬಳಗ ಅನ್ನುವವರು ಯಾರೂ ಇಲ್ಲವೆ?"

"ಹೌದು, ಅವರೂ ಒಬ್ಬರೇ, ನಾನೂ ಒಬ್ಬನೇ. ನಾನು ಚಿಕ್ಕವನಿದ್ದಾಗಲೇ ನನ್ನ ತಾಯಿ ತೀರಿಕೊಂಡಿದ್ದಾಳೆ.."

"ಇರಲಿ ಬಿಡಿ ಸಾರ್. ಜಗತ್ತಿನಲ್ಲಿ ಒಬ್ಬರೇ ಎಷ್ಟು ಜನ ಇರುವುದಿಲ್ಲ. ಹಾಗೆ ನೋಡಿದರೆ ಈ ಜಗತ್ತಿನಲ್ಲಿ ನಾವು ಬರುವಾಗ ಒಬ್ಬರೇ ಇರುತ್ತೇವೆ. ಹೋಗುವಾಗ ಕೂಡ ಒಬ್ಬರೇ ಅಲ್ಲವೇ?"

ಜೀವನದ ಸಾರಾಂಶವನ್ನೇ ಬಿಡಿಸಿಡುತ್ತ, ನನ್ನ ಮೇಲೆ ಅನುಕಂಪ ತೋರಿ, ಶವಾಗಾರದ ಪರಿಚಾರಕನ ನೆರವಿನೊಂದಿಗೆ ಶವವನ್ನು ಶವವಾಹಿನಿಯ ಬಳಿ ತೆಗೆದುಕೊಂಡು ಹೋದ.

ನಾನೂ ಅವನನ್ನು ಹಿಂಬಾಲಿಸಿ ವಾಹಿನಿಯ ಹಿಂಬಾಗಿಲನ್ನು ತೆರೆದೆ. ಅಕ್ಕಪಕ್ಕದ ಆಸನಗಳ ಮಧ್ಯದ ಭಾಗದಲ್ಲಿ ಉದ್ದನೆಯ ಹಲಗೆಗಳನ್ನು ಜೋಡಿಸಿ ನಿರ್ಮಿಸಿದ ಎತ್ತರದ ಆಸನದ ಮೇಲೆ ಶವವನ್ನಿರಿಸಿದರು. ನಾನು ಒಳಗೆ ಹೋಗಿ ಕುಳಿತುಕೊಂಡು ಬಾಗಿಲು ಹಾಕಿದೆ.

ಶವವಾಹಿನಿ ವಿದ್ಯುತ್ ಚಿತಾಗಾರದತ್ತ ಧಾವಿಸಿತು. ಆಗಲೇ ಕತ್ತಲಾಗಿತ್ತು. ನಾನು ಮೌನವಾಗಿ ಆಸನಕ್ಕೆ ತಲೆ ಆನಿಸಿ ಕುಳಿತಿದ್ದೆ. ಡ್ರೈವರನೇ ಆಗಾಗ ಒಂದೆರಡು ಮಾತಾಡಿ ನನ್ನ ಗಮನ ತನ್ನತ್ತ ಸೆಳೆದುಕೊಳ್ಳಲು ಯತ್ನಿಸುತ್ತಿದ್ದ. ನಾನು 'ಹಂ!ಹುಂ!' ಎಂದಷ್ಟೇ ಉತ್ತರಿಸುತ್ತಿದೆ. ಸ್ವಲ್ಪ ದೂರ ದಾರಿ ಕ್ರಮಿಸಿತ್ತು. ಮಳೆ ಹನಿಯತೊಡಗಿತು. ದೊಡ್ಡ ಹನಿಯೊಂದಿಗೆ ಸುರಿಯತೊಡಗಿತು. ಅಲ್ಲಲ್ಲಿಯ ದಾರಿದೀಪಗಳು, ಅಷ್ಟೇ ವೇಗಕ್ಕೆ ನಂದಿ ಹೋಗಿದ್ದವು. ದೂರದಲ್ಲಿ ಕೇಳಿ ಬಂದ ನಾಯಿಯ ಅಳು, ಗೂಬೆಯ ಕರ್ಕಶಧ್ವನಿ ನನ್ನ ಎದೆ ನಡುಗಿಸಿತು. ಥಕ್ಕನೆ ಕಣ್ಣು ತೆರೆದೆ. ವಾಹಿನಿಯ ಚಿಕ್ಕ ಬಲ್ಬಿನ ಮಂದ ಬೆಳಕಿನಲ್ಲಿ ಬಿಳಿ ಬಟ್ಟೆ ಸುತ್ತಿಕೊಂಡಿದ್ದ ಶವ ಅಲ್ಲಾಡತೊಡಗಿತ್ತು. ಒಂದುಕ್ಷಣ ತಂದೆ ನಿದ್ರೆ ಬಾರದೆ ಹೊರಳಾಡುತ್ತಿರಬಹುದೇ ಎನ್ನಿಸಿತು. ಕಣ್ಣು ಮುಚ್ಚಿಕೊಂಡೆ. ಮಸುಕಿನಿಂದಲೇ ತಂದೆ ಆಸ್ಪತ್ರೆ ಸೇರುವುದಕ್ಕಿಂತ ಮುಂಚೆ ತಾವು ಹೇಳಿದ ಮಾತುಗಳನ್ನು ನೆನಪಿಸಿದಂತಾಯಿತು...

"ಮಗು, ಅರುಣ... ಈ ಜಗತ್ತು ಬಹಳ ವಿಚಿತ್ರವಾಗಿದೆ... ಷೇರು ವ್ಯವಹಾರದಲ್ಲಿ ಸೋತು ನಾನು ನಿರ್ಗತಿಕನಾಗಿದಕ್ಕೆ ಯಾರೂ ಇತ್ತ ಸುಳಿಯುತ್ತಿಲ್ಲ. ಅದೇ ನನ್ನಲ್ಲಿ ಹಣ ಇದ್ದಾಗ ಇವರೆಲ್ಲ ಸಕ್ಕರೆಗೆ ಇರುವೆಗಳು ಮುತ್ತುವಂತೆ ಮುತ್ತುತ್ತಿದ್ದರು. ಇವರನ್ನೆಲ್ಲ ನಂಬಿ ಮೋಸಹೋದೆ. ನಿನ್ನ ಚಿಕ್ಕಪ್ಪ ನನಗೆ ಕೊಡಬೇಕಾದ ಇಪ್ಪತ್ತೈದು ಸಾವಿರ ರೂಪಾಯಿ ಮುಗಿಸಿದ. ನಿನಗೆ ಸುಮಾಳನ್ನು ಕೊಟ್ಟು ಮದುವೆ ಮಾಡಬೇಕೆಂದಿದ್ದ ನನ್ನ ಸ್ನೇಹಿತ ಶಾಮರಾಯ ಈಗ ಹಿಂಜರಿದಿದ್ದಾನೆ. ಇವರೆಲ್ಲಾ ಮೋಸಗಾರರು. ಅರುಣ, ನಾನಿನ್ನು ಬಹಳ ದಿವಸ ಬಧುಕಲಾರೆ. ನಾನು ಸತ್ತರೆ ಯಾವ ಸ್ನೇಹಿತರಿಗೂ, ಬಂಧು-ಬಳಗದವರಿಗೂ ತಿಳಿಸಬೇಡ.... ನೀನೊಬ್ಬನೇ ನನ್ನ ಶವವನ್ನು ಚಿತಾಗಾರಕ್ಕೊಯ್ದು ದಹನ ಮಾಡಿ ಬಾ... ಅರುಣ..."

ತಂದೆಯವರ ಆ ನುಡಿಗಳು ನನ್ನ ಮನದ ಆಳಕ್ಕಿಳಿದು ಅಸ್ಥಿರಗೊಳಿಸಿದ್ದವು. ವಿಹ್ವಲನಾದೆ. 'ಎಷ್ಟು ನಿರ್ದಯ ಜಗತ್ತು' ಎಂದು ಚಡಪಡಿಸುತ್ತ, ಜೋರಾಗಿ ಬಡಿದುಕೊಳ್ಳುತ್ತಿದ್ದ ಎದೆಯನ್ನು ಅದುಮಿಕೊಂಡೆ.

ಶವವಾಹಿನಿ ದಾರಿ ಕ್ರಮಿಸಿತ್ತು. ಅಷ್ಟರಲ್ಲಿ ಏನೋ 'ಧಡಲ್' ಎಂದು ಸದ್ದಾಯಿತು. ಡ್ರೈವರ್ 'ಗಕ್ಕನೆ' ಬ್ರೇಕ್ ಹಚ್ಚಿದ್ದ. ಶವದ ಮೇಲೆ ಉರುಳಿಬಿದ್ದ ನಾನು ಗಾಬರಿಯಿಂದ ಎದ್ದು 'ಏನಾಯಿತು ಡ್ರೈವರ್..' ಎಂದು ಕೇಳಿದೆ. ಸ್ಟೇರಿಂಗಿಗೆ ಅಪ್ಪಳಿಸಿದ ಆತ ಮೆಲ್ಲಗೆ ಚೇತರಿಸಿಕೊಂಡು ದೀಪ ಹಾಕಿ ಆಚೆ ತೋರಿಸಿದ. 'ಓವರ್ ಟೇಕ್' ಮಾಡಲು ಹೊರಟಂತಿದ್ದ ವ್ಯಾನೊಂದು ಮೆಲ್ಲಗೆ 'ಡಿಕ್ಕಿ' ಹೊಡೆದು ಆಚೆ ನಿಂತಿತ್ತು. ಸುದೈವದಿಂದ ನಮಗೇನೂ ಆಗಿಲ್ಲ ಎನ್ನಿಸಿತು.

ಆ ವ್ಯಾನಿನಿಂದ ಇಳಿದು ಬಂದ ಆರೇಳು ಜನ ನಮ್ಮ ಶವವಾಹಿನಿಯನ್ನು ಸುತ್ತುವರೆದರು. ಅವರಲ್ಲೊಬ್ಬ ತೆಳ್ಳನೆಯ ಎತ್ತರ ನಿಲುವಿನ ವ್ಯಕ್ತಿ, ನಾನು ಕುಳಿತತ್ತ ಧಾವಿಸಿ ಕಿಟಕಿ ಬಳಿಬಂದು "ಸಾರ್ ಪೆಟ್ಟಾಯಿತೆ? ಕ್ಷಮಿಸಿ, ತಪ್ಪು ನಮ್ಮದೆ, ನಿಮ್ಮ ಡ್ರೈವರ್‌ನದಲ್ಲಾ. ಓವರ್‌ಟೇಕ್ ಮಾಡಲು ಹೋಗಿ ಹೀಗಾಯಿತು." "ಪರವಾ ಇಲ್ಲ ಬಿಡಿ" ಎಂದು ನಾನು ನಿರಾಸಕ್ತಿಯಿಂದ ನುಡಿದೆ. ಆತ ನನ್ನ ಹಣೆಯ ಮೇಲೆ ಕೈಯಾಡಿಸಿ, "ಅರೆ ಇದೇನು! ನಿಮಗೆ ಗಾಯವಾಗಿದೆ. ರಕ್ತ ಬರ್ತಾ ಇದೆ. ಸ್ವಲ್ಪ ಈಚೆ ಬನ್ನಿ. ನನ್ನ ಹತ್ತಿರ ಬ್ಯಾಂಡೇಜ ಇದೆ. ಕಟ್ಟುತ್ತೇನೆ. ಪರವಾ ಇಲ್ಲ ಮಳೆ ನಿಂತಿದೆ ಬನ್ನಿ" ಎನ್ನುತ್ತ ನನ್ನನ್ನು ಕೆಳಗಿಳಿಸಿಕೊಳ್ಳಲು ಯತ್ನಿಸಿದ. ನನಗೆ ಮುಜುಗರವಾಯಿತು.

"ನನಗೇನೂ ಆಗಿಲ್ಲ. ನಾನು ಬೇಗ ಕ್ರೆಮಿಟೋರಿಯಂಗೆ ಹೋಗಬೇಕು. ನನ್ನ ತಂದೆಯ ಈ ಶವ ಸಂಸ್ಕಾರವಾಗಬೇಕು" ಎಂದೆ. ಆತ ಶವದತ್ತ ನೋಡಿ, "ಓ! ಹೌದಲ್ಲ. ನೋಡಲೇ ಇಲ್ಲ. ನೀವು ಒಬ್ಬರೇ ಹೋಗ್ತಾ ಇದ್ದೀರಾ ಸಾರ್.." ಎಂದ.

"ಹೌದು. ನಾನೊಬ್ಬನೇ ದಿಕ್ಕು ನಮ್ಮ ತಂದೆಗೆ"

"ಅಯ್ಯೋ! ಪಾಪ! ಬೇಗನೆ ಇಳಿದು ಬನ್ನಿ. ಬ್ಯಾಂಡೇಜ್ ಹಾಕ್ತೀನೆ. ಆಮೇಲೆ ನಾನೂ ನಿಮ್ಮ ಜೊತೆ ಬರ್ತೀನೆ. ಇಂಥ ಸಮಯದಲ್ಲಿ ಒಬ್ಬರೇ ಇರಬಾರದು".

ನಾನು ಆಗ್ರಹಕ್ಕೆ ಕಟ್ಟುಬಿದ್ದು ಕೆಳಗಿಳಿದು ಅವನ ಹಿಂದೆ ಹೊರಟೆ. ರಸ್ತೆಯ ಪಕ್ಕದಲ್ಲಿದ್ದ ಕಟ್ಟೆಯ ಮೇಲೆ ನನ್ನನ್ನು ಕೂಡಿಸಿದರು. ಸ್ವಲ್ಪ ದೂರದಲ್ಲಿಯೇ ಇದ್ದ ಬೀದಿ ದೀಪದ ಮಂದ ಬೆಳಕು ಬಿದ್ದಿತ್ತು. ವ್ಯಾನಿನ ಡ್ರೈವರ್ ನಮ್ಮ ಡ್ರೈವರನ ಯೋಗಕ್ಷೇಮ ವಿಚಾರಿಸಿಕೊಳ್ಳ ತೊಡಗಿದ್ದ.

"ನನಗೇನೂ ಆಗಿಲ್ಲ. ನಮ್ ಸಾರ್‌ಗೆ ಸ್ವಲ್ಪ ತಾಗಿದೆ. ನಾವಿಬ್ಬರೂ ಗಾಡಿ ಸ್ಲೋ ಮಾಡಿದ್ದಕ್ಕೆ ದೊಡ್ಡ ಅನಾಹುತ ತಪ್ಪಿತು" ಎನ್ನುತ್ತ ನನ್ನ ಡ್ರೈವರ್ ಕೂಡ ನನ್ನ ಬಳಿ ಬಂದ. ಆ ಡ್ರೈವರ್ ಮತ್ತೆ ತನ್ನ ವ್ಯಾನ್ ಬಳಿ ಹೋಗಿ ಎಂಜಿನ್ ಆನ್ ಮಾಡಿ ಏನೋ ರಿಪೇರಿ ನಡೆಸಿದ.

ಕರುಣಾಮಯಿಯಂತಿದ್ದ ಆ ಎತ್ತರ ನಿಲುವಿನ ವ್ಯಕ್ತಿ 'ಮುನಿಸ್ವಾಮಿ' 'ಬೇಗ ಬ್ಯಾಂಡೇಜ ತೆಗೆದುಕೊಂಡು ಬಾ' ಎಂದು ಕೂಗಿದ. ಅಷ್ಟರಲ್ಲಿ ಒಬ್ಬ ಬ್ಯಾಂಡೇಜ ಪೆಟ್ಟಿಗೆಯನ್ನೇ ತೆಗೆದುಕೊಂಡು ಬಂದ. ನನ್ನ ಯೋಗಕ್ಷೇಮ ತೆಗೆದುಕೊಳ್ಳುತ್ತಿದ್ದ ಆ ವ್ಯಕ್ತಿ ನನ್ನ ಹಣೆಗೆ ಬ್ಯಾಂಡೇಜ ಹಾಕುತ್ತ "ನಿಮ್ಮನ್ನು ಎಲ್ಲೋ ನೋಡಿದಂತಿದೆ ಸಾರ್!" ಎಂದ. ನಾನೂ ಏನೂ ಉತ್ತರಿಸದೆ ಬರಿ ಅವನತ್ತ ನೋಡಿದೆ. ಅವನೇ ಬಹುಶಃ ಆಸ್ಪತ್ರೆಯಲ್ಲೇ ನೋಡಿರಬೇಕು" ಎಂದ.

ಬ್ಯಾಂಡೇಜ ಕಟ್ಟಿದ ಮೇಲೆ ನನ್ನ ಡ್ರೈವರ್ ನನ್ನ ಶವವಾಹಿನಿಗೆ ಕರೆದುಕೊಂಡು ಬಂದ. ನಮ್ಮ ಹಿಂದೆ ಆ ಎತ್ತರದ ನಿಲುವಿನ ವ್ಯಕ್ತಿಯೂ ಬಂದು ಶವವಾಹಿನಿಯಲ್ಲಿ ನನ್ನ ಪಕ್ಕದಲ್ಲೇ ಕುಳಿತುಕೊಂಡ. ಉಳಿದವರು ತಾವು ಬಂದ ವ್ಯಾನಿನಲ್ಲೆ ಶವವಾಹಿನಿಯನ್ನು ಹಿಂಬಾಲಿಸಿದರು.

'ಕ್ರಿಮಿಟೋರಿಯಂ' ಬರುವವರೆಗೂ ನನ್ನ ಪಕ್ಕದಲ್ಲಿ ಕುಳಿತ ವ್ಯಕ್ತಿ ಮಾತಾಡಿದ್ದೇ ಮಾತಾಡಿದ್ದು. ನನಗೆ ಧೈರ್ಯ ತುಂಬಿದ್ದು. ನನಗಿದೆಲ್ಲ ಕನಸೋ ಎನ್ನುವಂತಾಯಿತು. ಭರ್ತಿ ನಡೆದ ಮಾತು ತನ್ನ ಮಾತು ನಿಲ್ಲಿಸಿ ಆತ ಕೇಳಿದ "ಸಾರ್ ನೀವು ಆಸ್ಪತ್ರೆಯಿಂದ ನಿಮ್ಮ ತಂದೆ ಸತ್ತ ದಾಖಿಲೆ ಪತ್ರ ತಂದಿದೀರಲ್ಲ! ಆದಿಲ್ಲದೇ ಹೋದರೆ ಚಿತೆಗೆ ಹಾಕೋದೇ ಇಲ್ಲ.."

ನಾನು ಕಿಸೆಯಲ್ಲಿದ್ದ ಪತ್ರವನ್ನು ಮೌನವಾಗಿಯೇ ತೋರಿಸಿದೆ. "ಸರಿಸರಿ, ನಿಮ್ಮ ಹತ್ರಾನೇ ಇಟ್ಟುಕೊಳ್ಳಿ" ಎಂದು ಆತನೇ ಮತ್ತೆ ಅದನ್ನು ನನ್ನ ಕಿಸೆಗೆ ತುರುಕಿದ.

'ಕ್ರಿಮಿಟೋರಿಯಂ' ಬಂದಿತು. ನಾನು ಭಾರವಾದ ಎದೆಯನ್ನು ಒತ್ತಿಕೊಂಡೆ. ಭಾರವಾದ ಹೆಜ್ಜೆಗಳನ್ನು ಎತ್ತಿ ಇಡುತ್ತ ಶವವಾಹಿನಿಯಿಂದ ಕೆಳಗಿಳಿದೆ. ಅವರ ವ್ಯಾನೂ ಕೂಡ ಬಂದು ದೂರ ನಿಂತಿತು. ಅದರಲ್ಲಿದ್ದವರೂ ಬಂದು ನನ್ನ ಜೊತೆಗಿದ್ದು ನನ್ನನ್ನು ಸೇರಿಕೊಂಡರು.

ನಾನು ಚಿತಾಗಾರದತ್ತ ನೋಡಿದೆ. ಅಸಂಖ್ಯ ಶವಗಳನ್ನು ಕಬಳಿಸಿದ ಆ ಚಿತಾಗಾರ ಇನ್ನೂ ಹಸಿವೆಯಿಂದ ಬಾಯ್ತೆರೆದು ಕುಳಿತಂತೆ ಭಾಸವಾಯಿತು.

ಆತ, ನನ್ನ ಜೊತೆಗೆ ಬಂದಾತ ನನ್ನನ್ನು ಮೆಲ್ಲಗೆ ಒಳಗೆ ಕರೆದುಕೊಂಡು ಹೋಗಿ ಅಲ್ಲಿಯೇ ಇದ್ದ ಬೆಂಚಿನ ಮೇಲೆ ಕೂಡಿಸಿ "ನೀವೇನು ಯೋಚನೆ ಮಾಡಬೇಡಿ. ನಾವೆಲ್ಲ ವ್ಯವಸ್ಥೆ ಮಾಡಿಕೊಂಡು ಬರುತ್ತೇನೆ. ಆ ದಾಖಿಲೆ ಪತ್ರ ಕೊಡಿ' ಎಂದು ನನಗೆ ಮಾತನಾಡಲೂ ಆಸ್ಪದ ಕೊಡದೆ, ಆ ಪತ್ರವನ್ನು ತೆಗೆದುಕೊಂಡು ಹೊರಟೇಬಿಟ್ಟ.

ನಾನು ಬರಿ ನೋಡುತ್ತಲೆ ಕುಳಿತಿದ್ದೆ. ಅವರೆಲ್ಲ ಸೇರಿ ಆ ಶವವನ್ನು ಇಳಿಸಿದರು. ಆತ ಚಿತಾಗಾರದ ಮುಖ್ಯಸ್ಥನೊಡನೆ ಏನೇನೋ ಮಾತಾಡಿ ನನ್ನ ತಂದೆಯ ಮರಣ ದಾಖಿಲೆಪತ್ರವನ್ನು ಆವನ ಕೈಗಿತ್ತ. ಅಷ್ಟರಲ್ಲಿ ಇಬ್ಬರು ಚಟ್ಟವನ್ನು ತಂದಿರಿಸಿದರು. ನನ್ನ ತಂದೆಯ ಶವವನ್ನು ಅದರ ಮೇಲಿಟ್ಟು ಹೊತ್ತುಕೊಂಡು ಹೋಗಿ ಚಿತಾಗಾರದ ಬಾಗಿಲು ತೆರೆದು ಅದನ್ನು ಒಳಗೆ ನೂಕಿದರು. ಆತ ನನ್ನ ಬಳಿ ಬಂದು "ಬನ್ನಿ, ನಿಮ್ಮ ತಂದೆ ಶವ ಚಿತೆ ಏರುವ ಮೊದಲು ನಮಸ್ಕರಿಸಿ" ಎಂದ. ನಾನು ಮೆಲ್ಲಗೆ ಸಾವರಿಸಿಕೊಂಡು ಎದ್ದು ಅಲ್ಲಿ ಹೋದೆ.

ಮೇಲ್ವಿಚಾರಕ ಸ್ವಿಚ್ ಹಾಕಿದ. ಗರ್ ಸದ್ದು ಇಡಿಗಿ ನನ್ನ ಮೈನಡುಗಿತು. ಆತ ಚಿತಾಗಾರದ ಬಾಗಿಲದ ಚಿಕ್ಕ ವೀಕ್ಷಕ ಗವಾಕ್ಷಿಯನ್ನು ತೆರೆದು ತೋರಿಸಿದ. ಕಬ್ಬಿಣದ ರೈಲು ಡಬ್ಬಿಯಂತಿದ್ದ ಆ ಚಿತಾಗಾರದಲ್ಲಿ ಉರಿ ಧಗಧಗನೆ ಹೊತ್ತಿ ಪಾರ್ಥಿವ ಶರೀರವನ್ನು ಸುಡತೊಡಗಿತ್ತು. ನನ್ನ ಕೊನೆಯ ನಮಸ್ಕಾರ ಸಲ್ಲಿಸಿದೆ. ದುಃಖ ಒತ್ತರಿಸಿ ಬಂದಿತು. ಭಾವಾವೇಶದಲ್ಲಿ ತೇಲಿಹೋದೆ. ಜವಳಿ ಬಂದಂತಾಗಿ ಪಕ್ಕದಲ್ಲಿದ್ದಾತನನ್ನು ಹಿಡಿದುಕೊಂಡೆ. "ನಾನು ಇನ್ನು ಬರುತ್ತೇನೆ, ನೀವು ವಿಶ್ರಾಂತಿ ತೆಗೆದುಕೊಂಡು ಹೊರಡಿ" ಎಂದು ನಮಸ್ಕರಿಸಿ ಹೊರಟುಹೋದ. ಎಷ್ಟೊಂದು ಸಹಾಯ ಮಾಡಿದ ಈತ, ನನ್ನ ಪಾಲಿನ ದೇವರು ಎಂದು ಮನದಲ್ಲೇ ವಂದಿಸಿದೆ. ಈ ದೇಹದ ಗತಿ ಇಷ್ಟೇನೆ ಅಂದುಕೊಳ್ಳುತ್ತಿದ್ದಂತೆ 'ಸಾರ್, ಈ ಮಡಿಕೆಯಲ್ಲಿ ನಿಮ್ಮ ತಂದೆಯವರ ಅಸ್ಥಿಯನ್ನು ಇಟ್ಟಿರುತ್ತೇವೆ. ನಾಳೆ ಬೆಳಿಗ್ಗೆ ಬಂದು ತೆಗೆದುಕೊಂಡು ಹೋಗಿ'

ಎಂದು ಕ್ರಿಮಿಟೋರಿಯಂದ ಮೇಲ್ವಿಚಾರಕ ನುಡಿದಾಗ 'ಆಗಲಿ' ಎಂದು ಮೆಲ್ಲಗೆ ಉಸುರಿ ಹೊರಬಂದು, ಶವವಾಹಿನಿಯನ್ನು ಏರಿ ಡ್ರೈವರ್ ಪಕ್ಕದಲ್ಲಿ ಕುಳಿತುಕೊಂಡೆ. ಅದು ಚಲಿಸಿತು. ನನ್ನ ಅಂತಃಕರಣದ ವಸ್ತುವನ್ನು ಕಳೆದುಕೊಂಡಂತೆ ಭಾಸವಾಗತೊಡಗಿತ್ತು.

ಸ್ವಲ್ಪ ದೂರ ಬಂದ ನಂತರ ಶವವಾಹಿನಿ ಗಕ್ಕನೆ ನಿಂತಿತು. ನಾನು ಅಲುಗಿದೆ. 'ಏನಾಯ್ತು' ನಾನು ಅವರತ್ತ ಹೊರಳಿ ಕೇಳಿದೆ. ಅವನು ನನಗೆ ಉತ್ತರಿಸದೆ ಬಾಗಿಲು ತೆರೆದು ಕೆಳಗಿಳಿದು 'ಇಲ್ಲಿ ಬನ್ನಿ ಸಾರ್, ಏನೊ ದಾರಿಯಲ್ಲಿ ಬಿದ್ದಂತಿದೆ.' ಎಂದು ಕೂಗಿದ. ನಾನೂ ಕೆಳಗಿಳಿದು ಅವನತ್ತ ಬಂದೆ. "ಸಾರ್, ಇದು ನಿಮ್ಮ ತಂದೆ ಅವರ ವಾಕಿಂಗ್‌ಸ್ಟಿಕ್ ಅಲ್ವಾ, ನೋಡಿ" ಎಂದು ನನ್ನ ಕೈಗಿತ್ತು ಸ್ವಲ್ಪ ಮುನ್ನಡೆದ. ನಾನು 'ವಾಕಿಂಗ್‌ಸ್ಟಿಕ್' ತಂದೆಯವರದೇ ಎಂದು ಗುರುತಿಸಿಕೊಳ್ಳುವಷ್ಟರಲ್ಲಿ 'ಸಾರ್ ಈ ಕಡೆಗೆ ಬನ್ನಿ, ಇಲ್ಲಿ ಯಾವುದೋ ಶವ ಬಿದ್ದಂತಿದೆ' ಎಂದು ಕೂಗಿದ. ನಾನು ಅತ್ತ ಧಾವಿಸಿದೆ. ಆ ಶವ ಉದ್ದಕ್ಕೆ ಅರ್ಧಭಾಗ ರಸ್ತೆಯಲ್ಲಿ ಅರ್ಧ ಭಾಗ ಪೊದೆಯಲ್ಲಿ ಚಾಚಿ ಬಿದ್ದಿತ್ತು. ಹತ್ತಿರದ ಬೀದಿಯ ಬೆಳಕಿನಲ್ಲಿ ಬಿಳಿಯಾಗಿ ಕಾಣಿಸುತ್ತಿದ್ದ ಹೊದಿಕೆಯನ್ನು ಮೆಲ್ಲಗೆ ಸರಿಸಿ ನೋಡಿದೆ. ನನ್ನ ಎದೆಗೆ ಯಾರೋ ಜೋರಾಗಿ ಗುದ್ದಿದಂತಾಯಿತು. ಬೆಚ್ಚಿಬಿದ್ದೆ. ಮೈ ತುಂಬ ಬೆವರು ಇಳಿಯತೊಡಗಿತು. ಕೈಕಾಲುಗಳು ನಡುಗ ಹತ್ತಿದವು. "ಅಪ್ಪಾ" ಎಂದು ಕಿರುಚಿ ಶವದ ಮೇಲೆ ಉರುಳಿ ಬಿದ್ದೆ.

"ಏನ ಸಾರ್ ನೀವು ಹೇಳ್ತಿರೋದು. ಈಗ ತಾನೆ ನಿಮ ತಂದೆ ಶವಸಂಸ್ಕಾರ ಮಾಡಿದಿರಿ" ಡ್ರೈವರ್ ದಿಗ್ಭ್ರಾಂತನಾಗಿ ಕೇಳಿದ. ನನಗೆ ಮಾತೇ ಹೊರಡಲಿಲ್ಲ.

ಕೆಲ ಕ್ಷಣದ ನಂತರ ಡ್ರೈವರ್ ನನ್ನ ಬೆನ್ನ ಮೇಲೆ ಮೆಲ್ಲಗೆ ಕೈಯಿರಿಸಿ ಕೇಳಿದ : "ನೀವು ನೋಡಿದ್ರಲ್ಲಾ ಸಾರ್ ಶವಾನ ಚಿತೆಯಲ್ಲಿ ಹಾಕಿದ್ದು" ಬಾಯೊಳಗೆ ಸೆಳೆದು ಹೋಗಿದ್ದ ನಾಲಿಗೆಯೊಳಗೆ ಶಕ್ತಿ ಹಾಕಿ ಉಸುರಿದೆ: "ಹೌದು, ನಾನೇ ಕಣ್ಣಾರೆ ನೋಡಿದ್ದೇನೆ, ಅದು ಸುಡುತ್ತಿದ್ದದು. ಆದರೆ... ಆದರೆ..." ನನ್ನ ಮಾತು ಅರ್ಧಕ್ಕೆ ನಿಂತಿತು.

"ಆದರೆ.... ಏನು ಸಾರ್...?"

ಚಿತಾಗಾರದಲ್ಲಿ ತಂದೆಯವರ ಶವವನ್ನು ಸರಿಸುವಾಗ ಆತ ಅವರ ಮುಖ ತೋರಿಸಲಿಲ್ಲ. ಈ ಮಾತನ್ನು ನಾನು ನೆನಸಿಕೊಳ್ಳುತ್ತಿದ್ದಂತೆ ನಾನು ಉಡುಗಿಹೋಗತೊಡಗಿದೆ. ಡ್ರೈವರ್ ಒಂದು ಕ್ಷಣ ಯೋಚಿಸಿ ಗಾಬರಿಯಿಂದ "ಸಾರ್, ಇಲ್ಲೇ ಅಲ್ವೇನು ಸಾರ್. ಅವರ ವ್ಯಾನು ನಮ್ಮ ಶವವಾಹಿನಿಗೆ 'ಡಿಕ್ಕಿ' ಹೊಡೆದದ್ದು. ನೀವು ಅಲ್ಲೇ ಆ ಕಟ್ಟೆ ಮೇಲೆ ಕುಳಿತು ಬ್ಯಾಂಡೇಜ ಹಾಕಿಸಿಕೊಂಡಿದ್ದು. ಸಾರ್ ನನಗೆ ಅನಸ್ತೆ, ಅವರು ಕೊಲೆಗಡುಕರಿರಬೇಕು... ನಿಮ್ಮ ತಂದೆಯ ಶವವನ್ನು ಇಲ್ಲಿ ಬಿಸಾಕಿ, ತಾವು ಕೊಲೆ ಮಾಡಿ ತಂದ ಶವವನ್ನು ಬದಲಿಸಿಕೊಂಡು ದಹನ ಮಾಡಿರಬೇಕು."

ಅವನು ಏನೇನೋ ಹೇಳತೊಡಗಿದ್ದ. ನನಗೆ ಅದರ ಪರಿವೇ ಉಳಿದಿರಲಿಲ್ಲ. ಒಡಲಲ್ಲಿ ಅನಂತ ವೇದನೆ, ತಳಮಳ, ಸಂಕಟ ಬಿರುಗಾಳಿಯಂತೆ ಭುಗಿಲೆದ್ದಿತು. ನಿರ್ದಯ ಜಗತ್ತಿನ ಹೇಯಕೃತ್ಯದ ಒಂದೊಂದು ದೃಶ್ಯ ಕಣ್ಮುಂದೆ ಸುಳಿದು ಮತ್ತಷ್ಟು ಕಂಗೆಡಿಸಿತು.

ದಹನಗೊಂಡ ತಂದೆಯ ಶವದ ಮರು ದಹನವೆಂತು? ದಾಖಲೆ ಪತ್ರವೆಲ್ಲಿ? ಧುತ್ತೆಂದು ಭೂತಾಕಾರವಾಗಿ ಮುಗಿಲೆತ್ತರ ಬೆಳೆದು ನಿಂತ ಪ್ರಶ್ನೆ ನನ್ನನ್ನು ಪಾತಾಳಕ್ಕೆ ತಳ್ಳಿತ್ತು. ಪ್ರಜ್ಞಾಹೀನನಾಗಿ ನೆಲಕ್ಕುರುಳಿದೆ.

○

# ೨. ಅಸ್ತಿತ್ವ

ನಾ ಸಾಯುವದರಲ್ಲಿದ್ದೆ. ಅರೆಸತ್ತ ಹೆಣದ ಮೆರವಣಿಗೆ ತೆಗೆದರು. ಅದ್ದೂರಿ ಮೆರವಣಿಗೆ. ನನ್ನ ದೇಹದ ಬೆತ್ತಲೆ ಪ್ರದರ್ಶನ. ವಿಷಯಾಸಕ್ತಿಯನ್ನು ಕೆರಳಿಸುವ ವಸ್ತುವಿಗೆ ಹೊಳೆವ ನಕ್ಷತ್ರಗಳನ್ನಂಟಿಸಿ ಸುಸಂಸ್ಕೃತ ಸಮಾಜ ನನ್ನ ಸುತ್ತಲು ಕುಣಿದು ನರ್ತಿಸಿತು. ಇದೇ ನಿಜವಾದ ಜೀವನ! ಇದು ನಿಜವಾದ ಜೀವನವೇ? ಇದರಲ್ಲಿಯೇ ಜೀವನದ ದ್ವಿಮುಖವಿದೆಯಲ್ಲವೆ? ಎಷ್ಟೊಂದು ಅರ್ಥ ವ್ಯತ್ಯಾಸ, ಅರ್ಥ ವಿನ್ಯಾಸ. ಒಂದರಿಂದ ಇನ್ನೊಂದಕ್ಕೆ ತಾಗಿ ಮನದ ಅಲೆಗಳು ಉಂಗುರುಂಗುರಾಗಿ ವಿಸ್ತೃತಗೊಂಡು ಅಂಚಿನವರೆಗೂ ಪಸರಿಸತೊಡಗಿದ್ದವು.

"ಶೀಲಾ, ಏನ ಯೋಚ್ನೆ ಮಾಡ್ತಿ. ಇದು ಹೋಟೆಲ 'ಮೂನ್ ಲೈಟ್'. ಏಳು ಯಾವ ಗಂಡಸಾದ್ರೇನು? ಹರವಾದ ಎದೆ, ಬಿರುಸು ಬಾಹು ಇದ್ರಾಯ್ತು. ಮೈಮರೆತು ಕುಣಿ" ಇದು ನವೀನಾಳ ದರ್ಶನ.

ನನ್ನ ಯಜಮಾನರೋ,

"ಪ್ರೀತಿ ಗೀತಿ ಹಚ್ಕೆಬ್ಯಾಡಾ, ನಾ ಎಷ್ಟೇ ಹೇಳ್ತೀನಿ ಕೇಳು, ಸೀರಿ ಕಳೆದು ಹಾಸಿಗಿ ಮ್ಯಾಲೆ ಬೀಳು. ಇಷ್ಟು ನಿನ್ನ ಕೆಲಸಾ, ನಿನ್ಗ ಬೇಕಾದದ್ದು ಪೂರೈಸಿದರ ಆತಿಲ್ಲೋ?" ಇದು ಅವರ ಆದರ್ಶ.

ಇನ್ನು ನಾನು? ನಿರಾಕಾರಿ ಪ್ರೇತ. ನನಗೆಲ್ಲಿದೆ ಅಸ್ತಿತ್ವ? ನಾನು ಯಾವ ರೂಪ ಧರಿಸಲಿ. ನವೀನಾಳೊಂದಿಗೆ ಒಂದಾಗಿರಲೊ, ಅಥವಾ ನನ್ನ ಯಜಮಾನರಿಗೆ ಗಾದಿಯಾಗಲೊ, ತೆಕ್ಕೆಯಾಗಲೊ, ಉಣ್ಣೆಯ ಹೊದಿಕೆಯಾಗಲೊ, ನಾಸು ಏನಾಗಲಿ, ಯಾರಾಗಲಿ, ಯಾವದಾಗಲಿ?

ಬರಿ ನಿರಾಕಾರ ಪ್ರೇತ ಈ ಶೀಲಾ.... ಅಂದರೆ ನಾನು ಯಜಮಾನರು. ಯಜಮಾನರು ನವೀನಾ, ನಾನು ನವೀನಾ... ನನ್ನಷ್ಟಕ್ಕೆ ನಾನೇ ನಕ್ಕೆ. ನಾನು ಅರ್ಥೈಯಿಸಿಕೊಳ್ಳಬಯಸಿದ ವಿಚಾರಕ್ಕೆ.

ಹಾಗಾದರೆ ನನ್ನ ಮುಂದೆ ನಿಂತ ಈ ಪ್ರಶ್ನಾರ್ಥಕ ಚಿನ್ಹೆಗೆ ಎಲ್ಲಿ ಉತ್ತರ ಹುಡುಕಲಿ. ಅಗೋ ಅಲ್ಲಿದೆ ಆ ಪ್ರಪಂಚ. ನಿನ್ನಂತೆ, ನನ್ನಂತೆ, ಅನೇಕ ಹೆಣ್ಣುಗಳು ಶೋಧಿಸಿದ ಪ್ರಪಂಚ. ಓ! ಸಾಕ್ ಮುಗಿಸು ನವೀನಾ ನಿನ್ನ ಮಾತು. ಹೋಗಲಿ ನನ್ನ ಯಜಮಾನರ ಹೇಳಿಕೆಯಂತೆಯೇ ಆಗಲಿ. ಆದರೆ ಅದನ್ನು ಅವರು ಪೂರೈಸಬಲ್ಲರೆ? ನಿರರ್ಥಕ. ಅವರು ಖಾಲಿ ಪಿಪಾಯಿ, ಸೋರಿ ಹೋದ ಪಿಪಾಯಿ.

ಕುಡಿದು ಮತ್ತರಾಗಿ ಮಧ್ಯರಾತ್ರಿ ಮರಳಿದ ಹಾಸಿಗೆ ಮೇಲೆ ಹಾಗೆ ಉರುಳಿದ, ಅವರನ್ನು ನನ್ನ ಕಡೆಗೆ ಹೊರಳಿಸಿಕೊಂಡೆ. ಏನು? ಅವರು ನಾನು ಬಳಸಿದ ಬಾಹುಗಳನ್ನು ಬಿಡಿಸಿಕೊಂಡು ಏನು ಎಂದು ಕೇಳಿದರು.

'ಹಾಗೆ ಕೇಳಿದರೆ ನಾನು ಏನು ಹೇಳಲಿ? ನಾನು ಹೆಣ್ಣು ನನಗೂ ಸಂಸಾರದ ಆಸೆ ಇದೆ ಎಂಬುದು ಅರಿವಾಗಬಾರದೆ ನಿಮಗೆ?' ಎಂದು ನಾನು ಎದ್ದು ಕುಳಿತೆ. ಸ್ವಿಚ್ ಹಾಕಿದೆ. ಜಗ್ಗನೆ ಬೆಳಕು ಬಿತ್ತು. ಮುಸುಕೆಳೆಯುತ್ತಾ ಅವರು ಚಿವುಗಣ್ಣಿನಿಂದ ಇತ್ತ ಉತ್ತರ 'ಈಗ ಸಾಧ್ಯವಿಲ್ಲ. ಸುಮ್ಮನೆ ಮಲಗಿಕೊ!'

ನಾನು ಏನು ಮಾಡಲಿ. ಆರಾಮಿ ರೂಮಿಗೆ ಬಂದು ಆರಾಮ ಖುರ್ಚಿಯ ಮೇಲೆ ಕುಸಿದೆ. ಎದುರುಗಡೆಯ ಗೋಡೆಯ ಮೇಲೆ ತೂಗು ಬಿದ್ದ ಕೆಲೆಂಡರಿನಲ್ಲಿಯ ಗಂಡು ಹೆಣ್ಣಿನ ಆಲಿಂಗನದ ತೈಲಚಿತ್ರ ಕಂಡು ನನ್ನೊಳಗಿನ ಜ್ವಾಲೆ ಭುಗಿಲ್ಲೆಂದಿತು. ಮುಟ್ಟು ಮುಗಿದ ಮರುದಿನ, ಅಧೋಭಾಗದ ಸ್ನಾಯುಗಳು ಬಿಗಿಯತೊಡಗಿದ್ದವು. ಆ ಗಾಸಿಗೆ, ಯಾತನೆಗೆ ಕಸಿವಿಸಿಗೊಂಡೆ. ನಾನು ತಪ್ಪಾಗಿ ಕೇಳಿದೆ, 'ಖರೇ, ಹೇಳ್ರೀ ಎಲ್ಲಿ ಹೋಗಿದ್ರಿ?'

ಅವರು ಮಾದಕ ನಗೆ ಬೀರಿ. ನನ್ನನ್ನು ಸೆಳೆದುಕೊಂಡು ನನ್ನ ತುಟಿಗಳ ಮೇಲೆ ಬೆರಳಾಡಿಸುತ್ತಾ 'ಖರೇ ಹೇಳಲಾ ಶೀಲಾ, ಮಿಸೆಸ್ ಲಿಲಿಯನ್ನು ನೋಡಿದಾಗಿನಿಂದ ನನ್ನ ಮನಸ್ಸಿನೊಳಗೆ ನಾಯಿಕೊಡಿ ಹಂಗ ಆಶಾ ತಲಿ ಎತ್ತಿ ನಿಂತಿತ್ತು. ಇವತ್ತ ನನ್ನ ಅದೃಷ್ಟ....' ಅವರು ಏನೇನೋ ಬಡಬಡಿಸಿದರು. ಒಂದು ಕ್ಷಣ ಆ ಚಿತ್ರ ಕಣ್ಮುಂದೆ ಸುಳಿದು ಹೋಯಿತು. ಯಾವ ಚಿತ್ರ! ಅದೇ ಚಿತ್ರ... ಅದೇ... ನಾನು.... ಲಿಲಿ... ಲಿಲಿ... ನಾನು ನನ್ನಲ್ಲಿ ಇಲ್ಲದ್ದು ಲಿಲಿಯಲ್ಲೇನಿದೆ? ನನ್ನಲ್ಲಿ ಇದ್ದುದೇ ಅವಳಲ್ಲಿಯೂ ಇದೆ ಅವಳಲ್ಲಿ ಅವಳ ದೇಹದಲ್ಲಿ ಇದ್ದುದೆಲ್ಲಾ ನನ್ನಲ್ಲಿದೆ. ನಾನೂ ಹೆಣ್ಣು, ಅವಳೂ ಹೆಣ್ಣು. ಹಾಗಾದರೆ ಮತ್ತ್ಯಾವ ವ್ಯತ್ಯಾಸ?

ರುಚಿ! ರುಚಿ! ಹಣ್ಣಿನಂತೆಯೇ ಹೆಣ್ಣಿಗೂ ಭಿನ್ನ ವಿಭಿನ್ನ ರುಚಿಯೇ? ಮೂರ್ಖ ಗಂಡಸು. ಬತ್ತಲೆಯಾದಾಗ ಕತ್ತಲೆಯಲ್ಲಿ ಎಲ್ಲ ಹೆಂಗಸು ಒಂದೇ. ಈ ಗೊಡ್ಡು ವೇದಾಂತ ನನ್ನ ದಾಹ ಹಿಂಗಿಸುವುದೆ? ನನ್ನ ಬದುಕನ್ನು ಕುದುರಿಸಬಲ್ಲದೆ... ಮೇಣದಂತೆ ಕರಗಿ ಹೋಗುತ್ತಿರುವ ನನ್ನ ಆದರ್ಶ, ಚಾರಿತ್ರ್ಯವನ್ನು ಮತ್ತೆ ರೂಪಿಸಿಕೊಡಬಲ್ಲದೆ? ಮತ್ತೆ ನಾನು ನಾನಾಗಬಹುದೊ?

ಸ್ವಿಚ್ ಆರಿಸಿದೆ. ಆ ಕತ್ತಲೆಯೊಳಗಿಂದ ನವೀನಾ ಎದ್ದು ಬಂದಳು. 'ಮತ್ಯಾಕ ಬಂದೆ. ಹೊರಟುಹೋಗು ನನ್ನ ಶೀಲಾಸಂಸ್ಕೃತಿ ಬ್ಯಾಡ ಅಂತಿ ಏನು?' ನನ್ನ ಗಂಟಲಿನೊಳಗೇ ಕಿರುಚಿಕೊಂಡೆ. ಅವಳು ನಕ್ಕಳು, ಆ ನಗು ನಿವದಿಸಿತು. ಅಲೆಗಳನ್ನು ಇಮ್ಮಡಿಸಿತು. ಆ ಮಾತು ಗಂಡಸಿಗೂ ಅನ್ವಯಿಸುತ್ತದೆ ಶೀಲಾ, ನಾನೂ ಮೊದಲು ನಿನ್ನ ಹಾಗೆ ಇದ್ದೆ. ನಿನ್ನ ಹಾಗೇ ವಿಚಾರ ಮಾಡುತ್ತಿದ್ದೆ. ನನ್ನ ಯಜಮಾನರ ಹಿಂಸೆ ತಡೆಯಲಿಕ್ಕಾಗಲಿಲ್ಲ, ನಿನ್ನ ಹಾದಿ ನಿನ್ಗೆ. ನನ್ನ ಹಾದಿ ನನ್ಗೆ ಅಂದ್ರು. ಆದ್ರ ಆ ಮಾತನ್ನ ನಾ ಹ್ಯಾಗ ಅರಗಿಸಿಕೊಳ್ಳಲಿ ಹ್ಯಾಗೆ ಅರಗಿಸಿಕೊಂಡೆ ಗೊತ್ತೆ? ಹಂತಹಂತವಾಗಿ ಅದನ್ನು ಸಾಧಿಸಲಿಕ್ಕೆ ಪ್ರಯತ್ನಿಸಿದೆ.'

ಅವಳ ಮಾತು ನೆನಪಾದವು. ನಾನು ಅದು ಹ್ಯಾಗೆ ಎಂದೂ ಕೇಳಿದ್ದೆ. ಅವಳು ನೀಡಿದ ವಿವರಣೆ ಕೇಳಿ ನನಗೆ ಮುಖಕ್ಕೆ ತಣ್ಣೀರು ಎರಚಿದಂತಾಯ್ತು, 'ಹೆಣ್ಣು ಗಂಡು ಅರಿತೂ ಅರಿಯದಂತೆ ಬಸ್ ಪ್ರಯಾಣದಲ್ಲಿ, ಗುಡಿಗುಂಡಾರಗಳಲ್ಲಿ ಘರ್ಷಣೆಯ ಸುಖ ಪಡೆವ ಸುಸಂಧಿ ನಾನು ಹೊಂದಿದೆ. ಅಂತಹ ಪ್ರಸಂಗ ತಂದುಕೊಂಡೆ. ಅದರಿಂದಲೇ ತೃಪ್ತಿ ಹೊಂದಲಿಚ್ಛಿಸಿದೆ. ಆದರೆ ನಾನು ಈ ಸಿದ್ಧಿಯನ್ನು ಯಾವಾಗ ಮುಟ್ಟಿದ್ದು ಗೊತ್ತೆ?'

ಅವಳು ಮುಂದುವರೆಸಿದ್ದಳು : ನಾನು ಮೂಕ ಗೊಂಬೆಯಂತೆ ಕುಳಿತಿದ್ದೆ. ಕಣ್ಣೆವೆಯನ್ನು ಕೂಡ ನಿಯತವಾಗಿ ಪಿಳುಕಿಸುತ್ತಿದ್ದೆ.

'ಅಂದು ನಮ್ಮ ಮನೆಗೆ ನಮ್ಮ ಯಜಮಾನರ ಗೆಳೆಯ ಬಂದಿದ್ದ. ಇವರಿಗಿಂತ ಅವನು ಮೈ ಕೈ ತುಂಬಿಕೊಂಡು ದುಂಡು ದುಂಡಾಗಿದ್ದ. ಶೀಲದ ಚೀಲ ಹರಿದುಹೋಗಿತ್ತು. ಕೂರಿ ಹತ್ತಿದ ಅರಿವೆ ಕಳಚಿ ಒಗೆದೆ. ಬರೀ ಹೆಣ್ಣಾದೆ..'

ನಾನು ಬರೀ ಹೆಣ್ಣಾದೆ. ಅವಳ ಮಾತನ್ನೇ ನಾನು ಹತ್ತಾರು ಸಲ ಮೆಲುಕು ಹಾಕಿದೆ, ನಾನು ನವೀನಾ ಆಗಲೆ? ಶೀಲಾಳ ಅಸ್ತಿತ್ವ ಅಳಿದುಹೋಗಿ ಅವಳೂ ಬರೀ ಹೆಣ್ಣಾಗಬೇಕೆ? ಇಲ್ಲದಿದ್ದರೆ ಈ ಪ್ರಪಂಚದಲ್ಲಿ ನನದೆಂಬುದು ಅಳಿದು ಬರಿ ನಿರಾಕಾರವಾದೀತು. ನನ್ನ ರೂಪು, ಏನು ಮಾಡಲಿ?

ದಿನಗಳು ಇಳಿಜಾರಿನಲ್ಲಿ ಜಾರುತ್ತ ಸಾಗಿವೆ. ಅಂದು ಅವರು ಅಲಂಕಾರದ ಕೋಣೆಯಲ್ಲಿ ನಿಲುಗನ್ನಡಿಯ ಮುಂದೆ ನಿಂತು ನೆಕ್‌ಟೈ ಸರಿಪಡಿಸಿಕೊಳ್ಳತೊಡಗಿದ್ದರು. ನಾನು ಅವರ ಬಳಿಯಲ್ಲಿಯೇ ಇದ್ದ ನೀರು ತುಂಬಿದ ಗಾಜಿನ ತೊಟ್ಟಿಯತ್ತ ದೃಷ್ಟಿ ಹರಿಸಿದೆ. ಅದರೊಳಗಿದ್ದ ಪುಟ್ಟ ಪುಟ್ಟ ಮೀನುಗಳು ಪುಳಕ್ ಪುಳಕ್ ಎಂದು ತಳದಿಂದ ಮೇಲ್ಗಡೆ ಈಜುತ್ತ ಸಾಗಿದ್ದವು. ಸೊಂಪಾಗಿದ್ದ ಸಣ್ಣ ಸಣ್ಣ ಹುಲ್ಲಿನ ಸೂಡುಗಳ ಮೇಲೆ ಅವುಗಳು ಲಾಗಾ ಹಾಕುತ್ತ ಚೆಲ್ಲಾಟ ಹಾಕುವುದನ್ನು ಕಂಡೆ. ಆ ಕೃತ್ರಿಮ ಕೊಳದಲ್ಲಿ ಆ ಮೀನುಗಳ ಕೃತ್ರಿಮ ಬದುಕು, ಅವರು ಸಿಳ್ಳು ಹಾಕಿದಾಗ ಅವು ಭಯದಿಂದ ತಳದತ್ತ ಸಾಗಿ ಅಡಗಿ ಕುಳಿತವು. ನನ್ನ ಕನಸೂ ಒಡೆಯಿತು. ಅವರು ಹೊರಟುಹೋದರು ಹೊಸ ಹೊಸ ಮೀನುಗಳನ್ನರಸಿ. ನನ್ನ ಮೈಮನಸ್ಸು ಗಾಸಿಗೊಂಡವು. ಅವರಿಗೂ ಮೀನಾಳ ಮೈ ಸಿಕ್ಕಿತು. ಅಮೀನಾಳ ಮೈ ಸಿಕ್ಕಿತು. ಒಂದೇ... ಎರಡೇ....

ಮತ್ತೆ ಕಣ್ಮುಂದೆ ನವೀನಾಳ ಚಿತ್ರ, ಶೀಲಾ ಸಂಸ್ಕೃತಿ, ಸಮಾಜ, ನೀತಿ ನಿನ್ನಲ್ಲಿದ್ದಷ್ಟೇ ನಿನ್ನ ಗಂಡನಲ್ಲೂ ಇರಬೇಕು. ಶ್ರೀಮಂತಿಕೆಯೊಂದಿದ್ದರೆ ಸಾಕು, ನೀತಿಯ ಸಮಾಧಿ ಕಟ್ಟಬಹುದು. ಸಮಾಜಕ್ಕೆ ಸಿದಗಿ ಬಿಗಿಯಬಹುದು. ಸ್ವೇಚ್ಛಾಜೀವನದ ಸ್ವರ್ಗಸುಖ ಪಡೆಯಬಹುದು. ಅವಳ ಆ ನುಡಿ ನನ್ನ ಪದೇ ಪದೇ ಕಾಡತೊಡಗಿತು. ಹೆಣ್ಣು ಒಂದು ಪ್ರವಾಹ, ಗಂಡು ಅದಕ್ಕೆ ಸೇತುವೆಯಾಗಿ ನಿಂತು, ಸಂಸಾರದ ವಿಸ್ತಾರ ಮರಭೂಮಿಯಲ್ಲಿ ತೃಪ್ತಿ ಹರಿಸಬೇಕು. ಆದರೆ ಅದು ದೊರೆಯದಿದ್ದಾಗ ಸ್ವೇಚ್ಛೆಯಿಂದ ಹುಚ್ಚು ಹೊಳೆಯಾಗಿ ಹರಿಯಬೇಕು ನವೀನಾಳಂತೆ. ಹೌದು, ನಾನೂ ಪ್ರಪಾತದತ್ತ ಧುಮುಕುತ್ತಿದ್ದೇನೆ. ಇನ್ನು

ನನ್ನನ್ನು ಯಾರೂ ತಡೆ ಹಿಡಿದು ನಿಲ್ಲಿಸಲಾರರು. ನನ್ನ ಶೀಲ ಅವರ (ನನ್ನ ಯಜಮಾನರ) ಶೀಲಕ್ಕೆ ಸವಾಲಾಗಬೇಕು. ಆಹಾರ, ನಿದ್ರೆ, ಮೈಥುನ ಇವಷ್ಟೆ ನನ್ನ ಸೊತ್ತು. ಬಾಳಿನ ಬಂಧನವೇ ಬೇಡ. ಪ್ರಾಣಿಗಳಂತೆ ಬದುಕಿ ಬಾಳುವುದು ಎಷ್ಟು ಸುಖಕರವಲ್ಲವೆ?

ನವೀನ ಹೇಳುತ್ತಲೇ ಇದ್ದಳು. "ನೀನು ಹಿಪ್ಪಿ ಜನರನ್ನು ನೋಡಿದ್ದೀಯಾ? ಪಣಜಿಯ ಮರಳಿನ ಮೇಲೆ ಹೆಣ್ಣು ಗಂಡು ಭೇದವಿಲ್ಲದೇ ಬೆತ್ತಲೇ ಬಿದ್ದ ಈ ಜನರು ಪಶುವಿನಂತೆ ಬದುಕಿ ಸತ್ತರಾಯಿತು ಎನ್ನುತ್ತಾರೆ. ಇದರಂಥಾ ಸುಖಾ ಮತ್ತಾವುದೂ ಇಲ್ಲ. ಅಲ್ಲವೆ? ನಾನು ಅವರ ಜೊತೆ ಹೋಗಿಬಿಡಬೇಕು ಅನಕೊಂಡೀನಿ ಏನಂತಿ?"

ನನಗೆ ಮೊದಮೊದಲು ಇದು ಬಹಳ ವಿಚಿತ್ರವೆನಿಸಿತು. ಒಂದು ಕಾಲವಿತ್ತು ಮನುಷ್ಯತ್ವದಿಂದ ದೇವತ್ವದತ್ತ ಸಾಗಬಯಸಿದರು ಜನ. ಆದರೆ ಈಗ ಮನುಷ್ಯತ್ವದಿಂದ ಪಶುತ್ವ ಲೇಸೆನ್ನುವ ಸಮಯ ಬಂದಿದೆ. ನಾನು ಬದಲಾಗುತ್ತಿರುವ ಯುಗದ ಜೊತೆ ಓಡಲೇಬೇಕು.

'ಏಳು ಶೀಲಾ, ಇನ್ನೂ ಹಂಗ ಕೂತಿಯಲ್ಲ. ಕ್ಲಬ್ಬಿಗೆ ಹೊತ್ತಾಗಿಲ್ಲೇನು?' ನವೀನಾಳ ಕರೆ.

'ಆಂ! ಬಂದೆ, ಈಗ ಬಂದೆ. ಇವತ್ತೇನು ವಿಶೇಷ.'

'ಇವತ್ತು ಪರಸ್ಪರ ಪರಿಚಯದ ದಿನ ಇಂಥ ಛಾನ್ಸ್ ಕಳೆದುಕೊಳ್ಳಬಾರದು'

'ಬರೋ ವ್ಯಕ್ತಿ ಯಾರು?'

'ನಾವು ಅಲ್ಲಿಗೆ ಹೋದಾಗಲೇ ಗೊತ್ತು? ಒಬ್ಬರಿಗೊಬ್ಬರು ಅಭಿರುಚಿ ಅರಿತುಕೊಂಡು ನಲಿಯಬಹುದು.'

ನಾನು ಅನುವಾದೆ. ಇವರೂ ನನ್ನಲ್ಲಿಯ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸಿದರು. ಆದರೆ ನಾನು ಅವರನ್ನು ಲೆಕ್ಕಿಸದೆ ಅಸ್ತಿತ್ವ ಕಳೆದುಕೊಂಡು ಬರಿ ಹೆಣ್ಣಾಗಲು ಪ್ರಯತ್ನಿಸಿದೆ.

ಸ್ವೇಚ್ಛೆಯ ಕ್ಯಾನ್ಸರರೋಗಕ್ಕೆ ನಾನು ತುತ್ತಾದೆ. ಮನದಲ್ಲಿ ಬರೀ ಅದೇ ಇನ್ನೂ ಇನ್ನೂ.... ದಡದಿಂದ ದೂರ ಹೋಗಬೇಕು. ನಾನು ಮುಳುಗುವುದನ್ನು ಕಾಣುತ್ತಿದ್ದರೂ ಉಳಿಸಿಕೊಳ್ಳುವವರು ಯಾರೂ ಇರಬಾರದು. ಆಳಕ್ಕೆ ಇಳಿಯುಬೇಕು. ಕ್ಲಬ್, ಹೋಟಲ್ ಹೋಟಲ್, ಕ್ಲಬ್, ಅವರೂ, ನಾನು ವಿರುದ್ಧ ದಿಶೆಯಲ್ಲಿ ನಡೆದೆವು.

ನಗರದಲ್ಲಿ ವಿಶಿಷ್ಟ ಮಾದರಿಯ ಹೋಟಲ್ಲೊಂದು ತೆರೆದಿತ್ತು. ಅದೇ ಹೋಟೆಲ್ ಹೆವನ್. ನವೀನಾ ಅಲ್ಲಿಗೂ ಎಳೆದುಕೊಂಡು ಹೋದಳು.

'ನವೀನಾ ಆ ಕೋಣೆಯೊಳಗೆ ಯಾಕ ಕರಕೊಂಡ ಬಂದಿ. ಹೋಟಲ ಒಳಗೆ ಹೋಗೋದು ಬ್ಯಾಡಾ'.

'ಈ ಹೊಟಲ ವೈಶಿಷ್ಟ್ಯ ಅಂದ್ರ ನಾವು ಮುಖವಾಡಾ ಹಕ್ಕೊಂಡು ಹೋಗಬೇಕು. ಬಾ ಇತ್ಲಾಗ'.

ಅವಳು ನಡೆದತ್ತ ನಡೆದೆ. ಅದೊಂದು ಕನ್ನಡಿಗಳಿಂದ ಅಲಂಕೃತವಾದ ಕೋಣೆ, ನಾನಾ ವಿಧದ ನಾನಾ ರೂಪದ ಮುಖವಾಡಗಳು ನೇತು ಬಿದ್ದಿದ್ದವು.

'ಇವುಗಳೊಳಗೆ ಯಾವ ಮುಖವಾಡ ಪಸಂದ ಅದ ತೊಗೊ.'

'ಇವೆಲ್ಲಾ ಯಾಕ?'

ನಾನು ಏನೂ ತೋಚದೆ ಕೇಳಿದೆ.

'ಅದ್ರಲ್ಲೇ ಇರೋದು ಮಜಾ. ಈ ಮುಖವಾಡಾ ಹಕ್ಕೊಂಡು ಪೋಟಲ ಒಳಗೆ ಹೋಗಿ ಕೂಡಬೇಕು.'

'ಆದ್ರ ಯಾಕ?'

ನನ್ನ ಈ ಮುಗ್ಧಪ್ರಶ್ನೆಗೆ ಅವಳು ನಕ್ಕಳು. ಮುಖವಾಡ ಹಾಕಿಕೊಳ್ಳುವುದಾದರೂ ಯಾಕೆ? ತಮ್ಮ ನಿಜರೂಪ, ಕಪ್ಪು ರೂಪ ಬಚ್ಚಿಟ್ಟುಕೊಳ್ಳಲಿಕ್ಕೆ ಅಲ್ಲವೆ ಇಂಥೆಲ್ಲ ಸೋಗು. ಇಲ್ಲಿಯ ಮುಖವಾಡ ಇನ್ನೂ ವಿಚಿತ್ರ. ಅತಿ ಲೈಂಗಿಕ ಸಮಸ್ಯೆ. ಅತಿ ನಾಗರಿಕತೆಯ ವರ್ಣನಾತೀತ ರೀತಿ, ಅದು ಹೀಗೆಯೇ?..

ನಾವು ಯಾರು ಅನ್ನುವುದು ಗೊತ್ತಾಗಬಾರದು, ಅಣ್ಣ-ತಂಗಿ, ಅಕ್ಕ, ತಮ್ಮ, ಆ ಗಂಡ ಈ ಹೆಂಡತಿ, ಈ ಗಂಡ, ಆ ಹೆಂಡತಿ ಯಾರಿಗ್ಯಾರೊ ವ್ಯಕ್ತಿತ್ವ ಕಳೆದುಕೊಂಡ ಗಂಡು ಹೆಣ್ಣು.

'ಆದರೆ ಒಂದು ವಿಷಯ ಹೆಣ್ಣು, ಹೆಣ್ಣಿನ ಮುಖವಾಡಾ ಹಾಕಿಕೊಳ್ಳಬೇಕು. ಗಂಡು ಗಂಡಿನ, ಮುಖವಾಡಾ ಹಾಕಿಕೊಳ್ಳಬೇಕು. ಯಾರು ಬೇಕು ಅವರು ನಿಮ್ಮನ್ನು ಕರೆದುಕೊಂಡು ಹೋಗಬಹುದು?' ಇದು ನವೀನಾಳ ವಿವರಣೆ.

ನಮ್ಮ ಧ್ವನಿಯಿಂದ ಯಾರು ಯಾರು ಅನ್ನೋದು ಗೊತ್ತು ಆಗೋದಿಲ್ಲೇನು? ನಾನು ನಿರ್ವಿಕಾರ ಭಾವದಿಂದ ಪ್ರಶ್ನಿಸಿದೆ.

ಆಕೆಯ ಉತ್ತರ ಇನ್ನೂ ಮೋಜು, ಅಲ್ಲಿಯ ನಿಯಮಗಳ ಪ್ರಕಾರ ನಾವು ಯಾವ ವ್ಯಕ್ತಿಯ ಜೊತೆ ಇರ್ತಿವೋ ಆ ವ್ಯಕ್ತಿ ಜೋಡಿ ಮಾತಾಡಬಾರದು. ವಾಪಸ್ ಮುಖವಾಡದ ಕೋಣೆಗೆ ಹೋಗುವವರೆಗೂ ಮುಖವಾಡ ತೆಗೆಯಬಾರದೆಂದು. ನವೀನಾ ನನಗೂ ಸುಪ್ರಸಿದ್ಧ ಸಿನೇಮಾ ನಟಿಯ ಮುಖವಾಡ ಹಾಕಿ ತಾನೊಂದು ಹಾಕಿಕೊಂಡು ಹೋಟಲಿನೊಳಗೆ ಕರೆದುಕೊಂಡು ಹೋದಳು.

ಆವರೆಗೂ ನಿರ್ವಿಕಾರವಾಗಿದ್ದ ನನ್ನ ಮುಖ ವಿಕಾರವಾಗತೊಡಗಿತ್ತು. ಮೈ ಬೆವತಿತ್ತು. ನಾನು ಮೆಲ್ಲನೆ ನಡೆದೆ. ಮಂದ ನೀಲಿ ಬಣ್ಣದ ಬೆಳಕು ಚೆಲ್ಲುವರೆದಿತ್ತು. ಮೆಲುವಾಗಿ 'ಪಾಪ್' ಸಂಗೀತ ತೇಲಿ ಬರತೊಡಗಿತು. ಹೊಕ್ಕಳದ ಕೆಳಗೆ ಸರಿದ ಸೀರೆಯ ಅಪ್ಸರೆಯರು ಸ್ವಪ್ನಲೋಕದಲ್ಲಿ ಇದ್ದಂತಿತ್ತು.

ನಾವು ಖುರ್ಚಿಯ ಮೇಲೆ ಕುಳಿತುಕೊಳ್ಳುವಷ್ಟರಲ್ಲಿ ಲೈಟ್ ನಂದಿ ಕ್ಯಾಬರೆ ನೃತ್ಯ ಪ್ರಾರಂಭವಾಯಿತು. ನರ್ತಕಿ ಒಂದೊಂದು ಅರಿವೆಗಳನ್ನು ಕಳಚುತ್ತ ಅರೆನಗ್ನದಿಂದ ನಗ್ನಾವಸ್ಥೆಗೆ

ಬಂದಾಗ ಹೆವನ್ ಹುಚ್ಚೆದ್ದು ಕುಣಿದಿತು. ಸ್ವೇಚ್ಛಾ ಪ್ರಪಂಚದಲ್ಲಿ ಅನೈತಿಕತೆ ತಾಂಡವವಾಡುತ್ತಿರುವಂತೆ ಎನ್ನಿಸಿತು. ಆ ನೃತ್ಯ ನಿಂತು ಸಾಮೂಹಿಕ ನೃತ್ಯ ಪ್ರಾರಂಭವಾಯಿತು. ಒಬ್ಬ ವ್ಯಕ್ತಿ ಬಂದು ನನ್ನ ಕಂಕುಳಲ್ಲಿ ಕೈ ಹಾಕಿ ಎತ್ತಿದ. ನಾನು ಬಿಡಿಸಿಕೊಳ್ಳಲು ಯತ್ನಿಸಿದೆ. ಹಿಡಿತ ಬಿಗಿಯಾಗಿತ್ತು.

ನೃತ್ಯದ ನಂತರ ಆ ವ್ಯಕ್ತಿ ನನ್ನ ಕರೆದುಕೊಂಡು ಎರಡನೆಯ ಅಂತಸ್ತಿನ ನಾಲ್ಕನೆ ಕೋಣೆಗೆ ಕರೆದೊಯ್ದು ಬಾಗಿಲು ಹಾಕಿದ. ನನಗೆ ಏನು ಮಾಡಬೇಕೋ ತೋಚಲಿಲ್ಲ.

ನಾನು ಅರೆ ಸತ್ತುದೇನೋ ನಿಜ. ಆದರೆ ನಾನೀಗ ಪೂರ್ತಿ ಸಾಯುತ್ತಿದ್ದೇನೆ. ನಾನು ನಾನಿಲ್ಲದಾಗುತ್ತಿದ್ದೇನೆ. ನನ್ನ ತಂದೆತಾಯಿ ಕುಟುಂಬ ನೀಡಿದ ಸಂಸ್ಕಾರ ಸಂಸ್ಕೃತಿಗಳನ್ನು ಸುಡುತ್ತಿದ್ದೇನೆ. ದೈಹಿಕವಲ್ಲ ನನ್ನ ಆಂತರಿಕ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದ್ದೇನೆ. ಇಷ್ಟೊಂದು ಪ್ರಪಾತಕ್ಕೆ ನಾನು ಬಾಳಬಾರದಿತ್ತು ಎನ್ನಿಸಿತು.

ಮತ್ತನಾದ ವ್ಯಕ್ತಿ ನನ್ನತ್ತ ಧುಮುಕಿದ. ನಾನು ಹಾಸಿಗೆ ಅತ್ತ ಉರುಳಿ ಬಾಯಿಬಿಡಲು ಯತ್ನಿಸಿದೆ. ಅವನು ಸರ್ರನೆ ನನ್ನತ್ತ ಹಾರಿ ಬಾಯಿಮುಚ್ಚಿದ. ಆದರೂ ನನ್ನಲ್ಲಿದ್ದ ಶಕ್ತಿಯನ್ನೆಲ್ಲ ಉಪಯೋಗಿಸಿ ಅವನಿಂದ ಕೊಸರಿ ದೂರಸರಿದು ನಿಂತೆ. ನನ್ನ ಧ್ವನಿ ಕಂಪಿಸತೊಡಗಿತ್ತು. ನನ್ನ ಅಂತರಾತ್ಮ ಜಾಗೃತವಾಗಿತ್ತು. "ನನ್ನ ಕ್ಷಮಿಸಿರಿ, ನಾ ಮೊದ್ಲನೇ ಸಲ ಇಲ್ಲಿಗೆ ಬಂದದ್ದು. ಅದೂ ಪರಿಸರದ ಒತ್ತಾಯಕ್ಕೆ" ಎಂದೆ ಅಷ್ಟೆ.

ನನ್ನ ಪುಣ್ಯ ಎನ್ನಬೇಕು. ಆ ವ್ಯಕ್ತಿ ಅಲ್ಲಿಯೇ ನಿಂತ ಅಲುಗದೆ.

ನನ್ನ ದುಃಖ ಕಟ್ಟೊಡೆದು ಬಂತು. ಎದೆಯೊಳಗೆ ಹುದುಗಿದ್ದನ್ನೆಲ್ಲ ಹೊರಗೆಡವಿದೆ.

'ನಾನು ಹತಭಾಗ್ಯಳು, ನನ್ನ ಪತಿ ವಿಲಾಸಿ. ಅವನ ಮೇಲೆ ಪ್ರತೀಕಾರ ತೀರಿಸಿಕೊಳ್ಳೋದು ಅಂದ್ರೆ ಇದೊಂದೆ ಹಾದಿ ಅಂತ ನನ್ನ ಗೆಳತಿ ಹೇಳಿದಳು. ನನ್ನ ಪತಿ ಮಾಡಿದ ದ್ರೋಹಕ್ಕೆ ರೊಚ್ಚಿನಿಂದ ನಾ ವಿಚಲಿತಳಾಗಿ ಈ ಹೇಯ ಕೆಲಸಕ್ಕೆ ಒಪ್ಪಿದೆ. ಆದ್ರೆ ನನಗೀಗ ಇದರಿಂದ ಮುಕ್ತಿ ಬೇಕಾಗಿದೆ. ನನ್ನ ಮೊದಲನೆಯ ಜೀವನಾನೆ ನನಗಿರಲಿ. ದಯಮಾಡಿ ನನ್ನ ಬಿಟ್ಟು ಬಿಡ್ರಿ.'

ನಾನು ಬಿಕ್ಕಿ ಬಿಕ್ಕಿ ಅತ್ತೆ, 'ಈ ಮುಖವಾಡಾ ನನ್ಗ ಬ್ಯಾಡಾ' ನನ್ನ ನನ್ನ ನಿಜ ರೂಪಾ ಇರಲಿ' ಎಂದು ಅದನ್ನು ಕಿತ್ತಿ ಎಸೆದೆ. ಆ ವ್ಯಕ್ತಿ ಮತ್ತೆ ಮೆಲ್ಲನೆ ಹೆಜ್ಜೆ ಇರಿಸುತ್ತ ನನ್ನತ್ತ ಬಂದ. ಆಗ ನಾನು ಪೂರ್ತಿ ಸತ್ತೆ ಎಂದುಕೊಂಡೆ. ಆತ ತನ್ನ ಬಾಹುಗಳಲ್ಲಿ ಬಿಗಿದುಕೊಂಡ. ನಾನು ಕೋಪದಿಂದ ಪರಚಲು ಹೋದೆ, ಆದರೇನು? ಆ ಮುಖವಾಡವೇ ಕಿತ್ತಿ ನನ್ನ ಕೈಯಲ್ಲಿ ಬಂತು... ಆಗ??...

"ಅಂ! ನೀವಾ?".....

"ಹೌದು ಶೀಲಾ, ನಾನೇ. ನಿನ್ನ ಧ್ವನಿ ಕೇಳಿದ ಕೂಡಲೇ ನಾನು ತತ್ತರಿಸಿಹೋದೆ. ನಿಷ್ಕ್ರಿಯಗೊಂಡು ಅಲ್ಲಿಯೇ ನಿಂತುಬಿಟ್ಟೆ. ನೀ ಆಡಿದ ಒಂದೊಂದು ಮಾತು ನನ್ನೊಳಗೆ ಬಿರುಗಾಳಿ ಎಬ್ಬಿಸಿತು."

ಇವು ನನ್ನ ಯಜಮಾನರ ನುಡಿಗಳು, ಓ ನಾನು ಪಾರಾದೆ. ನನ್ನನ್ನು ಸಾವಿನಿಂದ ಅವರು ಉಳಿಸಿದರು. ಅವರನ್ನೂ ನಾನು ಬದುಕಿಸಿದೆ. ನಿಜ ಇದು ಆಕಸ್ಮಿಕ. ಜೀವನದಲ್ಲಿ ಇಂಥ ಆಕಸ್ಮಿಕಗಳು ಆಸರೆಯಾಗಿ ಬರುತ್ತವೆ....

ನನಗೆ ಈಗ ಆ ಕ್ಷಣಗಳು ನೆನಪಾದರೆ ಮೈ ನವಿರೇಳುತ್ತದೆ. ನನ್ನತನ ಅಳಿದು ಹೋಗುತ್ತಿತ್ತು. ಶೀಲಾ ಸುಟ್ಟುಹೋಗುತ್ತಿದ್ದಳು. ಪೂರ ಸತ್ತ ನನ್ನ ದೇಹಕ್ಕೆ ಇನ್ನೂ ಯಾವ ರೀತಿ ಶೃಂಗರಿಸಿ ಪ್ರದರ್ಶನಕ್ಕೆ ಬಿಡ್ತಿದ್ದರೊ?

ಬದುಕಿದೆ, ಕಣ್ಣು, ಮೂಗು, ದೇಹ, ಸ್ತನಗಳುಳ್ಳ ಬರೀ ಹೆಣ್ಣು ನಾನಲ್ಲ. ನಾನು ಶೀಲಾ.... ಈಗ ನನ್ನ ಅಸ್ತಿತ್ವ ನನಗೆ ಉಳಿದಿದೆ.

# ೩. ಅಳಲ ನೆಳಲಲ್ಲಿ

'ಸೌಜನ್ಯ ಎಲ್ಲಾದರೂ ಸೂಸುತ್ತಿದ್ದರೆ ಅದು ರೇಷನ್ ಅಂಗಡಿಯಲ್ಲಿ' ಎಂದು ನನ್ನಾಕೆ ಆಗಾಗ ಹೇಳುತ್ತಲೇ ಇರುತ್ತಾಳೆ. ಅಂತಲೆ ಅವಳು ಎಂದೂ ಆ ಕಡೆ ತಲೆ ಕೂಡಾ ಹಾಕುವುದಿಲ್ಲ. 'ನೀವೇನಾದ್ರೂ ಹೇಳಿ, ನಾನು ಆ ರೇಷನ್ನ ಅಂಗಡಿಗೆ ಮಾತ್ರ ಹೋಗೋದಿಲ್ಲ. ಆ ಮಾಲಕನ ಸೆರೆಯಾಳು ಆಗಿ ಅನಿಸಿಕೊಳ್ಳಬೇಕರಿ' ಎನ್ನುತ್ತ ಅವಳು ನನ್ನ ಮುಂದೆ ರೇಷನ್ ಕಾರ್ಡು ಚೀಲ ಕುಕ್ಕರ ಬಡೆದಳು.

'ಅಂದ್ರೆ ಆ ಅಂಗಡಿ ಅವ್ನ ಸೆರೆ ನಾನು ಅನಿಸಿಕೊಂಡ್ರ ನಡೀತದೇನು?'

ಅದೇ ಆಗ ಆಫೀಸಿನಿಂದ ಬಂದ ನಾನು, ಬೇಸರದಿಂದ ಒಟಗುಡುತ್ತ, ಟೇಬಲ್ ಮೇಲೆ ಚಾಳೀಸು ಇರಿಸಿ ಕುರ್ಚಿಯ ಕೈಗೆ ತೂಗುಬಿದ್ದ ಟವೆಲ್ಲಿನಿಂದ ಮುಖವರೆಸಿಕೊಳ್ಳುತ್ತ ಕೇಳಿದೆ.

ಅವಳು ನನ್ನ ಬಳಿಸಾರಿ ಮುಂಗುರುಳ ಮೇಲೆ ಕೈಯಾಡಿಸುತ್ತ 'ಅಲ್ಲಾರೀ, ನೀವು ಗಂಡಸರು ನಿಮಗ ಇದೆಲ್ಲಾ ರೂಢೀ ಇರ್ತದ, ಆಫೀಸಿನ್ಯಾಗ ಬಾಸನ ಕಡೀಂದ ಅನಿಸಿಕೊಳ್ಳೋದಿಲ್ಲೇನು? ಎಂದಳು.

'ಹೌದು ಹೌದು, ಆಫೀಸಿನ್ಯಾಗ ಬಾಸನ ಕಡಿಂದ, ಮನ್ಯಾಗ ಹೆಂಗಸರ ಕಡೀಂದ ಇನ್ನು ರೇಷನ್ ಅಂಗಡ್ಯಾಗ ಮಾಲಕನ ಕಡೀಂದ ಅನಿಸಿಕೊಳ್ಳಲಿಕ್ಕೆ ನಾವು ಗಂಡಸರು ಹುಟ್ಟಿದ್ದು.'

ಅವಳು ಜೋರಾಗಿ ನಗಹತ್ತಿದಳು.

'ನಾ ಬೈದರ ಹಿತ ಅಲ್ಲೇನು! ಲಗೂ ಹೋಗ್ರಿ ಅಂಗಡಿ ಬಂದ ಆಗ್ತದ. ಅಂವಾ ಅರ್ಧ ತಾಸು ತಡಾ ಆಗಿ ತೆಗೆದು ಅರ್ಧ ತಾಸು ಲಗೂ ಮುಚ್ಚುತಾನ ಗದ್ದಲಾನೂ ಭಾಳಾ ಇರ್ತದ'

ರೈಲಿನಲ್ಲಿ ತುಂಬಿದ ಡಬ್ಬಿಯಲ್ಲಿ ಏರುವ ಪ್ರಯಾಣಿಕನನ್ನು ಮುಂದಿನ ಡಬ್ಬಿಗೆ ನೂಕುವಂತೆ ನನ್ನಾಕಿ, ಚೀಲದಲ್ಲಿ ರೇಷನ್ ಕಾರ್ಡು ತುರುಕಿ ನನ್ನ ಬೆನ್ನಿಗೆ ತೂಗ ಹಾಕಿ ಅಟ್ಟಿದಳು.

ನಾನು ಒಂಬತ್ತನೆಯ ಮೇನ್ ದಾಟಿ, ನಾಲ್ಕನೆಯ ಕ್ರಾಸಿಗೆ ಹೊರಳಿ ಐದನೆಯ ಕ್ರಾಸ್ ತುದಿಗೆ ಬಂದೆ. ಅಬ್ಬಬ್ಬಾ ಆ 'ಕ್ಯೂ' ನೋಡಿ ಕಣ್ಣು ತಿರುಗಿದಂತಾಯಿತು. ಅದು ಹತ್ತನೆಯ ಮೇನ್ ದಾಟಿ ಐದನೆಯ ಕ್ರಾಸಿಗೆ ಹೊರಳಿ ನಾಲ್ಕನೆಯ ಕ್ರಾಸಿಗೆ ಮುಟ್ಟಿತ್ತು.

ನನ್ನ ಪಾಳಿ ಬರಬೇಕಾದರೆ ಸುಮಾರು ಎಂಟು ಗಂಟೆಯಾದರೂ ಬೇಕು. ಪುಸ್ತಕವನ್ನಾದರೂ ತರಬೇಕಿತ್ತು ಎನ್ನಿಸಿತು. ನಿಂತಲ್ಲೇ ಹೊರಳಾಡುತ್ತ 'ಕ್ಯೂ' ದಗುಂಟ ಕಣ್ಣು ಹಾಯಿಸಿ ನೋಡಿದೆ. ನನಗಿಂತ ಮುಂಚೆ 56 ನೆಯ ನಂಬರಿನಲ್ಲಿ 'ಒನಪಿನ ವೈಯ್ಯಾರಿ'ಯೊಬ್ಬಳು ನಿಂತಿದ್ದು ಕಾಣಿಸಿತು. ಆ ಪಾದರಸ ನೇತ್ರೆ ನಿಮಿಷ ನಿಮಿಷಕ್ಕೆ ಕತ್ತನ್ನು ಅಲ್ಲಾಡಿಸುತ್ತ ನೀಳ ಹೆರಳನ್ನು

ತೂರ್ಯಾಡಿಸುತ್ತ ಪಾಳಿಯಲ್ಲಿ ನಿಂತವರ ಪಾಳ್ಯವನ್ನು ಹೊಕ್ಕಿದ್ದಳು. ಕಣ್ಣು ಮಧುಬಟ್ಟಲಲ್ಲಿ ಎರಡು ದುಂಬಿಗಳು ಸುತ್ತಾಡುವಂತೆ ಕರಿಗುಡ್ಡೆಗಳು ಗಿರಿಗಿರಿ ತಿರುಗುತ್ತಿದ್ದವು. ಪರವಾ ಇಲ್ಲ. ಎರಡು ಗಂಟೆ ಸುಖವಾಗಿ ಕಳೆಯಬಹುದು ಎನ್ನಿಸಿತು.

ಒಮ್ಮೆಲೆ ನೆನಪಾಯಿತು. ಮನೆ ಮನೆಯಲ್ಲಿಯ ಅಡುಗೆಮನೆ, ಅಡುಗೆಮನೆಯಲ್ಲಿಯ ನನ್ನವಳದು, ತಂತಾನೆ ದೃಷ್ಟಿ ಮುಂದೆ ಸರಿಯಿತು.

ಇಬ್ಬರು ವೃದ್ಧರು ಮಾತುಕತೆಯಲ್ಲಿ ಮಗ್ನರಾಗಿದ್ದರು. ಬಹುಶಃ ಅವರಲ್ಲಿ ಒಬ್ಬರಿಗೆ ಶಬ್ದ ಮಾಂದ್ಯವಿರಬೇಕು. ಅಕ್ಕಪಕ್ಕದಲ್ಲಿ ನಿಂತವರ ಪರವೇ ಇಲ್ಲದೆ ಜೋರು ಜೋರಾಗಿ ಮಾತಾಡಹತ್ತಿದ್ದರು.

'ರಿಟೈರ್ ಆಗಿ ಎಷ್ಟು ವರುಷಾತು' ಒಬ್ಬ ವೃದ್ಧ ಕೇಳಿದ. 'ಹಾಂ ಮೊಮ್ಮಗಳನ್ನು ಕರೆಕೊಂಡು ಬಂದೆ, ರಿಟೈರ್ ಆದಮ್ಯಾಲೆ ಏನ ಆದ ಲೈಫ್‌ನ್ಯಾಗ ಹೇಳ್ರಿ? ರೈಲ್ವೇ ಹಳೀ ಕಡೆಹೋಗೋ ಬದಲು ರೇಷನ್ ಅಂಗಡಿ ಕಡೆ ಬಂದ್ರೆ ಹೊತ್ತು ಹೋಗ್ತದ ಅಂತ ಬಂದೆ, ನೀವು....' 'ನಂದೂ ಅಷ್ಟೇ... ಅಂದ ಹಂಗ ನಿಮ್ಮ ಮಗಳ ಮದುವಿ ನಿಶ್ಚಯ ಆತೇನು?'

ಇನ್ನೂ ಏನೇನೋ ವೃಥಾ ಚರ್ಚೆ ನಡೆದಿತ್ತು. ನೋಟವನ್ನು ಸ್ವಲ್ಪ ಮುಂದೆ ಓಡಿಸಿದೆ. ಪಾಳಿಯಲ್ಲಿ ನಿಂತಲ್ಲೇ ಮಕ್ಕಳು ಬಗಾಟಬಗರಿ ಆಟ ಆಡತೊಡಗಿದ್ದರು.

ಅಷ್ಟರಲ್ಲಿ ನನ್ನ ಹಿಂದೆಯೂ ಸಾಲು ಬೆಳೆದಿತ್ತು ಹೊರಳಿ ನೋಡಿದೆ. ನೀರಿಗಾಗಿ ಕಂಗೆಟ್ಟ ಗೃಹಿಣಿಯರು ಯದ್ವಾ ತದ್ವಾ ಜಲಮಂಡಳಿಯನ್ನು ಹಾಡಿ ಹೊಗಳ ಹತ್ತಿದ್ದರು.

ನೋಡುತ್ತಿದ್ದಂತೆ ನನ್ನ ಪಕ್ಕದಲ್ಲಿ ಇನ್ನೊಂದು ಕ್ಯೂ ಬೆಳೆದಿತ್ತು. ರೇಷನ್ನಿಗಾಗಿ ಅಲ್ಲ, ಅದು ಭಿಕ್ಷುಕರದ್ದು, ಶೇಂಗಾ ಮಾರುವವರದ್ದು, ಐಸ್ಕ್ರೀಮು, ಬೊಂಬಾಯಿ ಮಿಠಾಯಿ ಮಾರುವವರದ್ದು, ಕೂಗಾಟ ಷಡ್ಜದವರೆಗೂ ಏರುತ್ತಿತ್ತು.

ಸ್ವಲ್ಪ ಹೊತ್ತಿನಲ್ಲಿ ಪಾಳೆಯ ಮುಂಭಾಗದಲ್ಲಿ ಏನೋ ಗದ್ದಲು ಕೇಳಿಸಿತು. ಜನರು ಚದುರಿ ಓಡತೊಡಗಿದರು. ಏನಾಯಿತೆಂದುಕೊಳ್ಳುವಷ್ಟರಲ್ಲಿ ಬೀದಿಯ ಗೂಳಿಗಳೆರಡು ಗುಟುರು ಹಾಕುತ್ತಾ ಕಾದಾಡುತ್ತಾ ಓಡಿ ಬಂದವು. ನಾನು ಆಚೆ ಓಡಿಹೋದೆ. ಅವುಗಳನ್ನು ಓಡಿಸಿ ಜನ ತಮ್ಮ ತಮ್ಮ ಪಾಳೆಯಲ್ಲಿಯ ಜಾಗಗಳಿಗೆ ಬಂದರು. ಈ ಗದ್ದಲದಲ್ಲಿ ನನ್ನಿಂದ ಸ್ವಲ್ಪ ದೂರದಲ್ಲಿ ನಿಂತಿದ್ದ ಪುಟ್ಟ ಹುಡುಗಿಯ ಕೈಯಲ್ಲಿದ್ದ ಒಂದು ರೂಪಾಯಿ ನೋಟು ಗಾಳಿಗೆ ಹಾರಿಹೋಯಿತು. ಅದನ್ನು ಹಿಡಿಯಲು ಜನ ಎಷ್ಟು ಪ್ರಯತ್ನಿಸಿದರೂ ಸಿಕ್ಕಲಿಲ್ಲ. ಬಡತನದ ಬೇಗೆಯಲ್ಲಿ ಬೆಂದ ಆ ಹೂವು ಕಸಿವಿಸಿಗೊಂಡಿತು. ಪೂರ್ತಿ ರೇಷನ್ ತೆಗೆದುಕೊಳ್ಳಲಿಕ್ಕೆ ಹಣ ಸಾಲದು, ಹಾಗೇ ಮನೆಗೆ ಹೋದರೆ ಬೆನ್ನಿಗೆ ಬಾಸುಂಡೆ ಭೋಜನ. ಆ ತತ್ತರಿಸಿದ ಮಗುವಿನ ಕಣ್ಣೀರು ನನ್ನಿಂದ ನೋಡಲಿಕ್ಕಾಗಲಿಲ್ಲ. ನನ್ನ ಕಿಸೆಯಿಂದ ಒಂದು ರೂಪಾಯಿ ಕೊಟ್ಟು ಸಮಾಧಾನಪಡಿಸಿದೆ. ಕಣ್ಣೀರು ಕರಗಿತ್ತು.

ನನ್ನ ಪಾಳಿ ಬಂದಾಗ ಆಗಲೇ ಸಂಜೆ ಏಳು ಗಂಟೆಯಾಗಿರಬೇಕು. ರಸ್ತೆಯ ದೀಪಗಳೂ ಪಾಳಿಯಂತೆ ಕೆಲವು ಹೊತ್ತಿದ್ದವು. ಕೆಲವು ನಿದ್ದೆ ಹೋಗಿದ್ದವು. ಇನ್ನೇನು ಅರ್ಧ ಗಂಟೆಯಲ್ಲಿ

ಬಾಗಿಲು ಹಾಕಿಬಿಡುತ್ತಾನೆ ಈ ಭೂಪ ಎಂದುಕೊಳ್ಳುತ್ತ ಅವಸರವಸರವಾಗಿ ಹಣದ ಚೀಲ ಸಿದ್ಧಪಡಿಸಿಕೊಂಡು ಅಲ್ಲಿ ದೊರೆವ ಸಾಮಾನುಗಳ ಪಟ್ಟಿಯ ಬೋರ್ಡಿನತ್ತ ನೋಡಹತ್ತಿದೆ. 'ಏನ್ರೀ ಅದು ಏನ ಸಾಮಾನಬೇಕು ಹೇಳ್ರಿ. ಅದೇನು ಹಂಗ ಬೋರ್ಡನೋಡ್ತೀರಿ. ಚಾಳೀಸ ಬದಲಾಸರಿ...' ನಾನು ದುರುಗುಟ್ಟಿ ಅವನತ್ತ ನೋಡಿದೆ. 'ಬರೇ ನನಗೆ ಸಕ್ಕರಿ ಬೇಕು ಕೊಡ್ರೀ' ಎಂದೆ. ಅದೇನೋ ಅದನ್ನು ಕೇಳಿದ ಕೂಡಲೆ ಅವನ ಧ್ವನಿ ಇಳಿಯಿತು.

'ನಾಲ್ಕು ಕೆ.ಜಿ. ಸಕ್ಕರೆ..' ಎಂದು ಬಿಲ್ಲು ಸಿದ್ಧಪಡಿಸತೊಡಗಿದ.

'ಸಾ...ಹೇ...ಬ್ರ...' ಪಕ್ಕದಲ್ಲಿ ಬಂದ ದೀನಧ್ವನಿ ಎಚ್ಚರಿಸಿತು. ದೃಷ್ಟಿ ಅವನತ್ತ ಹರಿಯಿತು. ಬಿಳಿ ಕುರುಚಲು ಗಡ್ಡ, ಗುಳಿಬಿದ್ದ ಕಣ್ಣುಗಳು, ಕೆದರಿದ ಕೂದಲು, ಹರಿದ ಕೊಳಕು ಬಟ್ಟೆ ಧರಿಸಿದ ಕೈಯಲ್ಲಿ ಚೀಲ ಹಿಡಿದ ಆ ವ್ಯಕ್ತಿ ಕೇಳಬೇಕೊ ಬೇಡವೊ ಎಂಬುವನಂತೆ ಉಗುಳು ನುಂಗತೊಡಗಿದ್ದ.

'ಏನು ಬೇಕಿತ್ತು' ನಾನು ಕೇಳಿದೆ.

'ಸಾಹೇಬ್ರ ನೀವ್ರು ಜ್ವಾಳಾ ತೊಗೊಳ್ಳೋದಿಲ್ಲೇನ್ರೀ?'

ಕ್ಷೀಣ ಸ್ವರ ನನ್ನನ್ನು ಅಲುಗಿಸಿತು.

'ಇಲ್ಲಲ್ಲ. ನಾ ಬರೇ ಸಕ್ಕರೀ ತೊಗೋತೀನಿ...'

'ಸಾಹೇಬ್ರ ಮನ್ಯಾಗ ತಿನ್ನಾಕ ರೊಟ್ಟಿ ಇಲ್ಲರಿ. ತಿಂಗಳದ ರೇಷನ್ನ ಮುಗದಹೋಗೇದ ಮನ್ಯಾಗ ಹತ್ತ ಮಂದಿ ಅದೀವಿ, ನಿಮ್ಮ ಜ್ವಾಳಾ ನನಗೆ ತೊಗೊಳ್ಳಾಕು ಕೊಡ್ತೀರಾ?'

ಅವನ ಒಂದೊಂದು ಮಾತು ನನ್ನೊಡಲಲ್ಲಿ ಅಲುಗು ಹಾಕಿ ತಿರುವಿದಂತಾಯಿತು. ಪಾಪ! ಬಡತನದ ಬೇಗೆಯಲ್ಲಿ ಬೇಯುವ ಈ ಜನಕ್ಕೆ ಹೊಟ್ಟೆ ತುಂಬುವಷ್ಟು ಆಹಾರ ಸಿಕ್ಕುವುದು ಯಾವಾಗ?

'ತೊಗೊಳಪ್ಪಾ! ನೀನ ತೊಗೊ' ಇದ್ರಿಂದ ನಿನ್ನ ಕುಟುಂಬಕ್ಕೆ ಸಹಾಯ ಆಗತಿದ್ದರ ನಾನು ಧನ್ಯ' ಎಂದೆ.

ಇದನ್ನೆಲ್ಲ ಕೇಳುತ್ತಿದ್ದ ಮಾಲಕ 'ಸಾಹೇಬ್ರ ಎರಡು ದಿವಸದಿಂದ ಇಂವಾ ಹಿಂಗ ಬಂದ ಬಂದ ಹೋಗಲಿಕ್ಕೆ ಹತ್ಯಾನ ಪಾಪ! ನೀವು ಉಪಕಾರ ಮಾಡಿದ್ರಿ.'

ಇನ್ನೂ ಅದೇನೊ ಅವನು ಹೇಳುತ್ತಿದ್ದ. ನನ್ನ ಪಾಡಿಗೆ ನಾನು ಸಕ್ಕರೆ ತೆಗೆದುಕೊಂಡು ಹೊರಟೆ. ಆ ವ್ಯಕ್ತಿ ಕೃತಜ್ಞತೆಯಿಂದ ಟೊಂಕ ಮುರಿದವನಂತೆ ಬಾಗಿದ.

ನೇರವಾಗಿ ಮನೆ ಸೇರಬೇಕೆಂದಿದ್ದ ನನಗೆ ಹಳೆಯ ಸ್ನೇಹಿತ ಗಂಟುಬಿದ್ದ. ಅಲ್ಲಿ ಇಲ್ಲಿ ಸುತ್ತಾಡಿ, ಹರಟುತ್ತ ಹೊಟೇಲಿನಲ್ಲಿ ಚಹ ಹೀರಿ ಅವನಿಂದ ಬಿಡುಗಡೆಯಾದಾಗ ರಾತ್ರಿ 8 ಗಂಟೆಯಾಗಿರಬಹುದು.

ನೇರ ರಸ್ತೆಯ ಬದಲು ರೇಲ್ವೆ ಹಳಿ ದಾಟಿ ಹೋದರೆ ಮನೆ ಹತ್ತಿರವಾಗಬಹುದೆಂದು ಭಾವಿಸಿ ಅಡ್ಡರಸ್ತೆ ಹುಡುಕಿದೆ.

ಹಳಿ ದಾಟಿ ಎಂಟು ಹತ್ತು ಗುಡಿಸಲು ದಾಟಿ ಮುಖ್ಯ ರಸ್ತೆಗೆ ಬರಬೇಕು ಎನ್ನುವಷ್ಟರಲ್ಲಿ ರಸ್ತೆ ದೀಪದ ಬಳಿಯ ಗುಡಿಸಲದ ಮುಂದೆ ಜೋಳದ ಚೀಲ ಕಾಣಿಸಿತು. ಹಾಗೆ ಸಮೀಪಿಸಿದಂತೆ ಅದರ ಮುಂದೆ ಒಬ್ಬ ಹುಡುಗ ಹಾಗೂ ಮುದುಕ ಕುಳಿತಂತೆ ಕಾಣಿಸಿತು. ಅನತಿ ದೂರದ ಗುಡಿಸಲಿನಿಂದ ಬಂದ ವೃದ್ಧೆ 'ಎಪ್ಪಾ ಕೊಡ... ಒಂದು ಕೆ.ಜಿ. ಜ್ವಾಳಾ... ಹಂಗ್ಯಾಕ ಮಾಡ್ತಿ. ಪಹಿಲಾಕ್ಕ ರೊಕ್ಕಾ ಕೊಡ್ತೇನಿ. ಮನ್ಯಾಗ ತಿನ್ನಾಕ ರೊಟ್ಟಿ ಇಲ್ಲಾ' ಎಂದು ಅಂಗಲಾಚಿದಳು. ಅವನಿಗೇನನ್ನಿಸಿತೊ ಅವಳತ್ತ ಬಿರುಗಣ್ಣಿನಿಂದ ನೋಡಿ 'ಹಾಳಿ ತಂದೀ ಇಲ್ಲೊ, ತತ್ತಾ ಇಲ್ಲೆ ಅಂದ ಹಂಗ ನನ್ನ ರೇಟ ಗೊತ್ತೈತೊ ಇಲ್ಲೋ ಒಪ್ಪಿಗಿ ಇದ್ರ ತೊಗೋ ಇಲ್ಲದಿದ್ದರ?' ಎನ್ನುತ್ತಿದ್ದ. 'ಗೊತ್ತೈತಿ ಕೊಡ ಎಪ್ಪಾ ರೇಸನ್ನದವರು ಎಷ್ಟು ತೊಗೋತಾರ ಅಷ್ಟ ತೊಗಳಲ್ಲ ನೀನು' ಎಂದಳು.

"ಹೂಂ! ಹಂಗಿದ್ರೆ. ಅಲ್ಲೇ ರೇಸನ್ನದಾಗ ತೊಗೋ ಹೋಗು. ನೀ ಹೋದಾಗೊಮ್ಮೆ ಕೊಡಲಿಕ್ಕೆ ಅಲ್ಲೆ ನಿನ್ನ ಚಿಗಪ್ಪ ಇಲ್ಲಾ ಬೇಕಾದ್ರೆ ತೊಗೊ ಸಾಕಾದ್ರ ಎದ್ದ ನಡೀ..."

ಅವನು ಗದರಿಸಿದ ಆ ಮುದುಕಿ ಮತ್ತೆ ಚಕಾರ ಎತ್ತದೆ ಉದ್ರೀ ಚೀಟಿಯನ್ನು ಬರೆಸಿ ಜೋಳ ತೆಗೆದುಕೊಂಡು ಹೋದಳು.

ನಾನು ಅಲ್ಲಿಯೇ ಗರಬಡಿದವನಂತೆ ನಿಂತು ಇದನ್ನೆಲ್ಲ ನೋಡುತ್ತಿದ್ದುದನ್ನು ಕಂಡು ಆ ಮುದುಕ ಒಳಗೆ ಹೋದವನು ಹೊರಗೆ ಬರಲೇ ಇಲ್ಲ. ಜೋಳದ ಚೀಲದ ಬಳಿ ಕುಳಿತ ಹುಡುಗ ನನ್ನ ಪಿಳಿಪಿಳಿ ನೋಡತೊಡಗಿದ. ನನಗೇನು ಮಾತಾಡಬೇಕು ತಿಳಿಯಲೇ ಇಲ್ಲ. ಹಾಗೆಯೆ ಅಲ್ಲಿಂದ ಕಾಲ್ತೆಗೆದೆ. ರೇಷನ್ನ ರಕ್ತ ಎಲ್ಲರನ್ನೂ ತೆಳುವಾಗಿಸುತ್ತದೆ. ಹಲವಾರು ಮುಖವಾಡದಲ್ಲಿ ನರ್ತಿಸುವ ಮಾನವನ ಅಳಲಿನ ನೆಳಲಿನಲ್ಲಿಯೂ ಜೀವಿಸಬೇಕಲ್ಲವೆ?

ಆ ಮುದುಕ ಮತ್ತಾರೂ ಅಲ್ಲ. ನನ್ನ ರೇಷನ್ ಕಾರ್ಡಿನಲ್ಲಿ ಜೋಳ ತೆಗೆದುಕೊಂಡವನು.

○

# ೪. ಮುದ್ರೆ

ದೂರದ ದಾರಿಯನ್ನು ನಾನು ಕ್ರಮಿಸುವಾಗ ಅನೇಕ ವಿಷಯಗಳನ್ನು ಮೆಲಕುಹಾಕುತ್ತ ಸಾಗುತ್ತೇನೆ. ಈಗ ನನ್ನ ಅಂತರಾಳದಲ್ಲಿ ಇಳಿದದ್ದು ಜೀವಾತ್ಮ ಪರಮಾತ್ಮ ಜ್ಞಾನ ಭಕ್ತಿ, ಹುಟ್ಟು ಸಾವು- ವಿಶ್ವದ ನಿಗೂಢ ಸಮಸ್ಯೆಗಳು. ಇವು ನನ್ನಂಥ ನಾಸ್ತಿಕನನ್ನು ಒಮ್ಮೊಮ್ಮೆ ಹಿಡಿದು ನಿಲ್ಲಿಸುತ್ತವೆ. ಗೀತೆಯ ಶ್ಲೋಕ ನೆನಪಾಯಿತು; ಮರುಕಳಿಸಿತು "ಅಚ್ಛೇದ್ಯೋಽ..." ಗುನುಗುನಿಸಿದಾಗ ಹಿಂದಿನಿಂದ ಕಾರಿನ ಹಾರ್ನ್ ಕೇಳಿ ಮೆಟ್ಟಿಬಿದ್ದೆ. ಮಗ್ಗಲು ಸರಿದೆ. ಚಾಲಕ ದುರುಗುಟ್ಟಿ ನೋಡಿ... ಇದೆಂಥ 'ಚಲನಾಸಮಾಧಿ' ಎಂದುಕೊಂಡಿರಬೇಕು.

ಇನ್ನೂ ನಾನು ದೂರ ಹೋಗಬೇಕಾಗಿತ್ತು. ಮತ್ತೆ ಆ ನುಡಿಗಳನ್ನು ಮೆಲಕುಹಾಕಿದೆ.

ಈ ಆತ್ಮ ಕತ್ತರಿಸಲ್ಪಡದು, ಸುಡದು, ನೆನೆಯದು; ಒಣಗದು, ಅದು ನಿತ್ಯ; ಸರ್ವವ್ಯಾಪಕ, ಸ್ಥಿರ ಮತ್ತು ಸನಾತನವಾಗಿದೆ. ಹಾಗಾದರೆ 'ಸಾವು' ಏನು? ತುಟಿಯ ಮೇಲೆ ಬೆರಳಾಡಿಸಿಕೊಂಡೆ.

ಮನುಷ್ಯನು ಜೀರ್ಣವಾದ ವಸ್ತುಗಳನ್ನು ಬಿಟ್ಟು, ಬೇರೆ ಹೊಸ ವಸ್ತ್ರಗಳನ್ನು ಗ್ರಹಿಸುವಂತೆ, ದೇಹದಲ್ಲಿ ಇರುವ ಜೀವನ ಜೀರ್ಣವಾದ ಶರೀರಗಳನ್ನು ತ್ಯಜಿಸಿ ಹೊಸ ಹೊಸ ದೇಹಗಳನ್ನು ಹೊಂದುತ್ತಾನೆ. ಎಂಥ ಸುಂದರವಾದ ಉಪಮೆ ಎನ್ನಿಸಿತು. ಆದರೆ 'ಭಸ್ಮೀಭೂತಸ್ಯ ದೇಹಸ್ಯ ಪುನರಾಗಮಂ ಕುತಃ' ಎಂಬ ಚಾರ್ವಾಕ ನುಡಿ ನೆನಪಾಗಿ ನಕ್ಕೆ. ಆದರೆ ಇದೆಲ್ಲ ವಿಚಾರ ಈಗ ಮನದಲ್ಲಿ ಸುಳಿದಿದ್ದೇಕೆ? ಒಂದು ಪವಾಡ ಪುರುಷ ಬಿಂದನ ದರುಶನಕ್ಕೆ ಹೊರಟಿದ್ದು. ಎರಡನೆಯದು ಈ ಕೆಲ ದಿನಗಳ ಹಿಂದೆಯೇ ಈ ಬಿಂದನೊಂದಿಗೆ ನೆರೆಮನೆಯ ಕೃಷ್ಣಾಚಾರಿಯನ್ನು ಸುಡಲು ಸ್ಮಶಾನಕ್ಕೆ ಹೋಗಿದ್ದು ಶಿದಿಗೆ ಹೊತ್ತುಕೊಂಡು.

"ಸರಿಯಾಗಿ ಶಿದಿಗಿ ಹೊತ್ತಕೋಳ್ರೊ ಮಹಾರಾಯ ಶವಾ ಹೊಳ್ಳ್ಯಾಡಲಿಕ್ಕೆ ಹತ್ತೇದ ನೋಡು" ಎಂದು ಎಚ್ಚರಿಸಿದ್ದ ಬಿಂದ.

"ನಾನು ಹಿಂಗ ದೂರ ಹೊಂಟೆ ಅಂದ್ರ ವಿಚಾರನೂ ಹೊತಗೊಂಡ ಹೊಂಟಿರ್‍ತೀನಿ ನಿನಗೇನಾತು ತ್ರಾಸಾ?"

"ನನಗೇನೂ ತ್ರಾಸ ಇಲ್ಲ ಬಿಡು ಕೆಲಸಕ್ಕೆ ಬಾರದ್ದನ್ನು ಬರದೀ ಅಲ್ಲಽ ಅದ್ನ ಈ ಕಿಚ್ಚಿನ್ಯಾಗ ಹಾಕಿ ಉಪಯೋಗಕ್ಕೆ ಬರೋದನ್ನ ಏನಾದ್ರು ಯೋಚ್ನೆ ಮಾಡು" ಎಂದು ಶಿದಗಿ ಸ್ವಲ್ಪ ಕೆಳಗಿರಿಸಲು ಹೇಳಿ ಬರ್ಖಿರಿ ಸಿಗರೇಟನ್ನು ಎಳೆದು ಕೃಷ್ಣಾಚಾರಿಗೆ ಹಿಡಿಶಾಪ ಹಾಕುತ್ತ ಯಾತ್ರೆ ಮುಂದುವರೆಸಿದ್ದ ಅದೇ ನೆನಪು ಬಿಂದ ಹೇಳಿದ ಮಾತುಗಳ ಔಚಿತ್ಯ.

ಬಿಂದ ನೆರೆ ಹಳ್ಳಿಯ ಹನುಮಂತದೇವರ ಗುಡಿಯ ಪೂಜಾರಿ ರಾಮಾಚಾರಿಯ ಮಗ. ಹಳ್ಳಿಯಲ್ಲಿಯೇ ವೈದಿಕ ಮಾಡಿಕೊಂಡು ಮಗ ಇರಬೇಕೆಂದು ರಾಮಾಚಾರಿ ಬಯಸಿದ್ದು. ಆದರೆ ಬಿಂದ ಕೇಳಬೇಕಲ್ಲ. ಶಹರದಲ್ಲಿಯ ಪರಿಚಯದವರ ಮನೆಯಲ್ಲಿ ಪೂಜೆ ಮಾಡಿ ಶಾಲೆ-ಓದುವುದಾಗಿ ನಗರಕ್ಕೆ ಜಿಗಿದಿದ್ದ.

"ಪೂಜೆ ಮಾಡುವಾಗ ಮಂತ್ರ ಏನು ಹೇಳ್ತಿಯೋ ಬಿಂದಾ" ಎಂದು ಕೇಳಿದಾಗ "ಮಂತ್ರದ ಹಾಗೆ ಚಿತ್ರಗೀತೆ ಹೇಳಿದರಾಯಿತು" ಎನ್ನುತ್ತಿದ್ದ.

ಇನ್ನೊಂದು ವಿಷಯ: ಹಳ್ಳಿಯ ಶಾಲೆಯಲ್ಲಿ ಬಿಂದನನ್ನು 'ಹಸಿಮೆಣಸಿನ ಕಾಯಿಬಿಂದ' ಎಂದು ಕರೆಯುತ್ತಿದ್ದರು. ಇದೊಂದು ಬಿಂದನ ಬಾಲಲೀಲೆ. ಹೋಳಿಹುಣ್ಣಿಮೆ ಸಂದರ್ಭ ಒಂದು ಸೇರು ಹಸಿ ಮೆಣಸಿನಕಾಯಿ ತಿಂದವರಿಗೆ ಐದು ರೂಪಾಯಿ ಬಹುಮಾನ ಶರ್ತು! ಊರಿನ ಎಂತೆಂಥವರೋ ಲಾಗ ಹಾಕಿದ್ದರು. ಆದರೆ ಬಿಂದ ಮಾತ್ರ ಅದಿಷ್ಟು ಮೆಣಸಿನಕಾಯಿಯನ್ನು ತಿಂದು, ಐದು ರೂಪಾಯಿ ಗಿಟ್ಟಿಸಿಕೊಂಡು ಬೊಬ್ಬೆ ಹಾಕುತ್ತ ಓಡಿದ್ದ. ಅಂದಿನಿಂದ ಬಿಂದ, ಹಸಿ ಮೆಣಸಿನಕಾಯಿ ಬಿಂದನಾಗಿದ್ದು. ಇಂಥ ಬಿಂದ ರಾತ್ರೋ ರಾತ್ರಿ ಪವಾಡಪುರುಷ ಬಿಂದನಾಗಿದ್ದು ತನ್ನ ಬುದ್ಧಿಗೆಟುಕದ ಸಂಗತಿಯಾಗಿದೆ. ನಗರದ ಹೊಸ ಬಡಾವಣೆಯಲ್ಲಿ ಈ ಪವಾಡ ನಡೆದದ್ದು. ನಮ್ಮ ಮನೆಯಿಂದ ಏಳೆಂಟು ಕಿಲೋಮೀಟರಾದರೂ ಆಗಬಹುದು, ಆ ಸ್ಥಳ. ಅದನ್ನರಸಿಕೊಂಡು ಹೊರಟಿದ್ದೆ. ಈ ಹಿಂದೆ ಎಂದೋ ಒಂದು ಸಲ ಆ ಕಡೆಗೆ ಹೋಗಿದ್ದ ನೆನಪು.

ಈಚೆಗೆ ಕೆಲತಿಂಗಳಿಂದ ಬಿಂದನ ಭೇಟಿಯಾಗಿರಲಿಲ್ಲ. ಆಧ್ಯಾತ್ಮಿಕ ಪ್ರವಚನಗಳ ಶಿಬಿರಗಳನ್ನು ನಡೆಸಿದ್ದಾನೆಂದು ಕೇಳಿದ್ದೆ. ರಾಘವೇಂದ್ರ ಸ್ವಾಮಿಗಳ ಭಜನೆಯ ಮೇಳಗಳನ್ನು ಕಟ್ಟಿ ಭಕ್ತಿಯನ್ನು ಕುದುರಿಸಿದ್ದ.

ಅಂದು ಹುಣ್ಣಿಮೆಯ ರಾತ್ರಿ. ಮಧ್ಯರಾತ್ರಿವರೆಗೆ ರಾಘವೇಂದ್ರ ಸ್ವಾಮಿಗಳ ಭಕ್ತಿ ಸಮುದ್ರದಲ್ಲಿ ಭಕ್ತರು ಓಲಾಡಿದರು. ಎಲ್ಲರೂ ಹೊರಟುಹೋದ ಮೇಲೆ ಬಿಂದ ಗೋವಿಂದನೊಂದಿಗೆ ಕೋಣೆಗೆ ಬಂದು ಮಲಗಿಕೊಂಡ.

ಬೆಳಗಿನ ಪ್ರಹರ. ಬಿಂದ ಒಮ್ಮೆಲೆ ಕಿರುಚಿಕೊಂಡ. "ಏನಾಯಿತು ಬಿಂದ, ಏನಾಯಿತು!"

ಗಾಬರಿಯಿಂದ ಗೋವಿಂದ ಅವನನ್ನು ಅಲ್ಲಾಡಿಸಿ ಎಬ್ಬಿಸಿದ. ಬಿಂದ ಕಣ್ಣೊರೆಸಿಕೊಳ್ಳುತ್ತ ಎದ್ದ. ಕರದಲ್ಲಿಯ ಲಕ್ಷ್ಮಿಗೆ ವಂದಿಸಿ "ಇದೆಂಥ ಅದ್ಭುತ ಕನಸು ಗೋವಿಂದ" ಎಂದ.

"ಏನಾಯಿತು, ಏನು ಕಂಡೆ?"

"ಕಿಟಕಿಯಿಂದ ತೂರಿ ಬರುತ್ತಿರುವ ಈ ಬೆಳದಿಂಗಳ ರಾತ್ರಿಯಲ್ಲಿ, ಹಣೆಯಲ್ಲಿ ಮಂಗಳನಾಮ, ಕೊರಳಲ್ಲಿ ತುಳಸೀಮಾಲೆ, ಕೈಯಲ್ಲಿ ಬೆತ್ತ ಹಿಡಿದ ರಾಘವೇಂದ್ರ ಸ್ವಾಮಿಗಳು ಕಡಾವು ಮೆಟ್ಟಿಕೊಂಡು ಬೆಳದಿಂಗಳಲ್ಲಿಯೇ ಮೆಟ್ಟಿಲನ್ನು ಇಳಿದಂತೆ 'ಖಟ್ ಖಟ್' ಶಬ್ದ ಮಾಡುತ್ತ ನನ್ನ ಬಳಿ ಬಂದರು."

"ಎಂಥ ಪುಣ್ಯಾತ್ಮ ನೀನು ಗುರುದರುಶನವಾಯಿತು, ಆಮೇಲೆ ?"

"ಆಮೇಲೆ, 'ಬಾ ಇಲ್ಲಿ!' ಎಂದು ಶ್ರೀಗಳು ನನ್ನನ್ನು ಕರೆದರು. ನಾನು ಭಯ ಭಕ್ತಿಯಿಂದ ಅವರ ಬಳಿ ಹೋದೆ. ಆಮೇಲೆ ಗೋವಿಂದ!"

"ಏನಾಯಿತು ಆಮೇಲೆ!"

ಬಿಂದ ದೀರ್ಘ ಉಸಿರೆನ್ನೆಳೆದು ಭಾವಪೂರ್ಣವಾಗಿ ಹೇಳತೊಡಗಿದ :

"ನನ್ನನ್ನು ಹತ್ತಿರ ಕರೆದುಕೊಂಡು ಮೈ ದಡವಿದರು. ಎಂಥ ಅವರ್ಣನೀಯ ಆನಂದ! ಆ ಸುಖಲೋಕದಲ್ಲಿ ನಾನು ತೇಲಿಹೋದಾಗ ಒಮ್ಮೆಲೆ ನನ್ನ ಹೊಟ್ಟೆಗೆ ಮುದ್ರಾಧಾರಣ ಮಾಡಿಸಿದಂತಾಯಿತು. ಆ ಬಿಸಿ 'ಚುರ್' ಎಂದುದಕ್ಕೆ ನಾನು ಚೀರಿಕೊಂಡೆ" ಎಂದ ಬಿಂದ.

ಅಶ್ರು ತುಂಬಿದ ಕಣ್ಣುಗಳಿಂದ ಗೋವಿಂದ ಬಿಂದನನ್ನು ತಬ್ಬಿಕೊಂಡು "ಬಿಂದಾ ನೀನು ಕೃತಾರ್ಥನಾದೆ. ಎಲ್ಲಿ ನಿನ್ನ ಹೊಟ್ಟೆ ತೋರಿಸು" ಎಂದು ಕೇಳಿದಾಗ ಬಿಂದ ಹೊಟ್ಟೆ ಮೇಲಿದ್ದ ಪಂಚೆಯನ್ನು ಸರಿಸಿದ.

ಗೋವಿಂದ ತನ್ನ ಕಣ್ಣುಗಳನ್ನೇ ನಂಬದಾದ. "ಎಂಥ ಪವಾಡ ಬಿಂದ ಇದು. ನಿನ್ನ ಹೊಟ್ಟೆಯ ಮೇಲೆ ರಾಯರು ಹಾಕಿದ ಮುದ್ರೆಗಳು ಸ್ಪಷ್ಟವಾಗಿ ಮೂಡಿವೆ ನೋಡು" ಎಂದು ಸಂತಸದಿಂದ ಕೂಗಿಕೊಂಡ.

ಪತ್ರಿಕೆಗಳ ಮುಖಪುಟದಲ್ಲಿ ಈ ಪವಾಡಕಥೆ ಪ್ರಕಟವಾದದ್ದೇ ತಡ, ಭಕ್ತಸ್ತೋಮ ಬಿಂದನ ಮನೆಯತ್ತ ಪ್ರವಹಿಸಿತು.

"ನೋಡಿದ್ರಾ ಎಂಥ ಆಶ್ಚರ್ಯ! ಬಿಂದಾಚಾರಿಗೆ ರಾಯರ ಸ್ವತಃ ಮುದ್ರಿ ಹಾಕ್ಯಾರಂತ" ಎಲ್ಲಿ ಕೇಳಿದಲ್ಲಿ ಇದೇ ಮಾತು. ಶ್ರೀಮಂತರ ಕಾರು ಸಾಲಿಟ್ಟಿತು. ವಿದ್ವಾಂಸರು ಬಿಂದನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಮಹಿಳೆಯರು ದೂರದಿಂದಲೇ ಈ ಪವಾಡ ಪುರುಷನನ್ನು ಕಂಡು ಜನ್ಮ ಸಾರ್ಥಕವಾಯಿತು ಎಂದುಕೊಂಡರು.

ಹೊರಗಡೆಯ ತುಳಸಿಕಟ್ಟೆಯ ಮೇಲೆ ದೊಡ್ಡ ಆಸನ ಹಾಕಲಾಯಿತು. ಅದರ ಮೇಲೆ ಪದ್ಮಾಸನ ಹಾಕಿಕೊಂಡು ಹೊಟ್ಟೆಯ ಮೇಲಿನ ಮುದ್ರೆಗಳು ಕಾಣಿಸುವಂತೆ ಕುಳಿತುಕೊಂಡ! ಮುದ್ರೆಗಳನ್ನು ಚೆನ್ನಾಗಿ ಕಣ್ತುಂಬ ನೋಡಬಯಸುವ ಕೆಲ ಭಕ್ತರು ದುರ್ಬಿನ್ ಹಿಡಿದುಕೊಂಡು ಬಂದರು. ಹಾರ್ಸ್ ರೇಸಿನಲ್ಲಿಯ ಕುದುರೆ ಓಟವನ್ನು ಈಕ್ಷಿಸುವಂತೆ.

"ಅಲ್ಲಿ ನೋಡ್ರಿ ಅದು ಶಂಖ"

"ಇದು ನೋಡ್ರಿ ಎಡಕ್ಕಿದು ಚಕ್ರ"

"ಎಷ್ಟ ಸ್ಪಷ್ಟ ಮೂಡ್ಯಾವಲ್ಲ. ಸುತ್ತ ಹೆಂಗ ಕೆಂಪು ಆಗೇದ ನೋಡ್ರಿ!"

ಈ ಪವಾಡ ಘಟಿಸಿ ಎರಡು ದಿನಗಳ ಮೇಲೆ ನಾನು ಬಿಂದನ ದರುಶನಕ್ಕೆ ಹೊರಟಿದ್ದೆ. ವಿಚಾರ ಮಂಥನದಲ್ಲಿ ನಾನಾಗಲೇ ಹೊಸ ಬಡಾವಣೆಯ ತಿರುವಿಗೆ ಬಂದಿದ್ದೆ.

ಹಿಂದೆ ನಾನು ಕಾಣದ್ದು ಅಲ್ಲಿ ಕಂಡಿತು. ಎದುರುಗಡೆ ಬಯಲಲ್ಲಿ ಈಶ್ವರಲಿಂಗ ಉದ್ಭವಿಸಿದೆ. ಆಗಲೇ ಅದರ ಸುತ್ತಲೂ ಮೂರುಕಡೆ ಗೋಡೆ ಎದ್ದಿದ್ದವು. ಅದರ ಬಳಿಯ

ಬೇವಿನ ಮರಕ್ಕೆ ಗಂಟೆ ತೂಗುಬಿದ್ದಿತ್ತು. ಭಕ್ತರು ಲಿಂಗಕ್ಕೆ ಎಣ್ಣೆ ಸುರಿಯತೊಡಗಿದ್ದರು. ಹೊರಗಡೆ ಭಿಕ್ಷುಕರ ಸಣ್ಣ ಸಣ್ಣ ತಂಡಗಳು ತಂಗಿದ್ದವು.

"ಈ ಮಂದಿರ ಮೊದಲು ಇರಲಿಲ್ಲ ಅಲ್ಲ?" ದಾರಿಹೋಕನನ್ನು ಕೇಳಿದೆ.

"ನಿಮಗ ಗೊತ್ತಿಲ್ಲ! ಎಂಥ ಜಾಗೃತ ಸ್ಥಳ ಇದು. ಇಲ್ಲಿ ಮನೆ ಕಟ್ಟಲಿಕ್ಕೆ ಹೋದಾಗ ಈ ಲಿಂಗ ಉದ್ಭವಿಸ್ತು. ಅದಕ್ಕೆಯಂದೇ ಮನೆ ಬದಲು ಮಂದಿರ ಕಟ್ಟುತ್ತಿದ್ದಾರೆ" ಎಂದ ಆ ವ್ಯಕ್ತಿ!

ನನಗೆ ಇನ್ನೂ ಆಶ್ಚರ್ಯ! ಕಲಿಯುಗದಲ್ಲಿ ಒಂದಕ್ಕಿಂತ ಒಂದು ಅದ್ಭುತ ಪವಾಡಗಳು ಘಟಿಸುತ್ತಿವೆಯಲ್ಲ ಲಿಂಗೋದ್ಭವ, ಸಾಕ್ಷಾತ್ಕಾರ! 'ನನ್ನಂಥ ನಾಸ್ತಿಕರನ್ನು ಇನ್ನೂ ಜನ ಎತ್ತಿ ಬಾವಿಯಲ್ಲಿ ಹಾಕುತ್ತಾರೆ' ಎನ್ನಿಸಿತು. ಮಂದಿರದ ಬಳಿ ನಾನು ಮೆಲುವಾಗಿ ನಕ್ಕೆ; ಅದೇ ಕ್ಷೇಮಕರ ಎಂದುಕೊಂಡೆ. ಮುಂದೆ ನಡೆದೆ.

ಬೂದಿ ಉದುರಿದ ಹಾದಿಯಲ್ಲಿ ಹೊರಡುವ ಭಕ್ತಾದಿಗಳನ್ನು ಕಂಡು ಮರುಕಗೊಂಡೆ.

ಬಿಂದನ ಮನೆಯ ಮುಂದೆ ನೂಕು ನುಗ್ಗಲು. ಭಕ್ತಿಯ ಭಾವಾವೇಶವಲ್ಲ; ಕ್ರೋಧವಿತ್ತು. ಕೂಗಾಟ ಕಿರುಚಾಟ ಕೇಳಿಸಿತು. "ಎಳೀರಿ ಅವ್ನ ಹೊರಗ! ಎಳೀರಿ ಅವ್ನ ಹೊರಗ"

ಮೂಲೆಯ ಒಂದು ಕಡೆಯಿಂದ ಧ್ವನಿ ಎದ್ದಿತು ಎಲ್ಲಾ ಕಡೆಯಿಂದಲೂ ಅದು ಪ್ರತಿಧ್ವನಿಸಿತು.

"ಏನಾಗೇದ ಬಿಂದಾಚಾರ್ ಇಲ್ಲೇನು?"

ಹತ್ತಿರದ ವ್ಯಕ್ತಿಯನ್ನು ಕೇಳಿದೆ. ಅವನು ಕ್ರುದ್ಧನಾಗಿ-

"ಅವ್ನ ಹೆಸರ ಎತ್ತಬ್ಯಾಡ್ರೀ"

"ಯಾಕ ಏನಾತು! ಪವಾಡ ಪುರುಷಗ!"

"ಏನಾಗ್ತದರಿ! ಜನರಿಗೆ ಮೋಸಾ ಮಾಡಿ ದೋಚಿದ ಈ ಬಿಂದಾ ಗೋವಿಂದಾ..."

ಆಮೇಲೆ ಘಟಿಸಿದ್ದನ್ನು ಸಂಗ್ರಹಿಸಿದೆ. ಎರಡು ದಿನಗಳಲ್ಲಿ ಬಿಂದನ ಹೊಟ್ಟೆಯ ಮೇಲೆ ಮೂಡಿದ್ದ ರಾಯರ ಮುದ್ರೆ ಸುತ್ತ ಪಾಪದ ಘೇನಗಳಂತೆ ನೀರಗುಳ್ಳೆಗಳೆದ್ದು ಕೀವಾಗತೊಡಗಿತು. ಬಿಂದ ಆ ನೋವನ್ನು ತಾಳದಾದ. ಈ ಹಿಂದೆ ಇಂದಿನ ಸ್ವಾಮಿಗಳಿಂದ ಮುದ್ರೆ ಹಾಕಿಕೊಂಡಾಗ ಹೀಗೇನೂ ಆಗಿರಲಿಲ್ಲ. ಇಂದೇಕೆ ಹೀಗಾಯಿತು? ಭಯದಿಂದ ವಿಹ್ವಲನಾದ. ನಿಮಿಷ ನಿಮಿಷಕ್ಕೆ ಗುಳ್ಳೆಗಳು ಉಬ್ಬತೊಡಗಿ ಒಂದೊಂದಾಗಿ ಒಡೆಯತೊಡಗಿದವು. ಕೀವು ರಕ್ತ ಬಸಿಯತೊಡಗಿತು.

"ಗೋವಿಂದ! ಡಾಕ್ಟರ ಹತ್ರ ಕರಕೊಂಡು ಹೋಗು, ನೋವು ಸಾಯ್ತೀನಿ" ಎಂದು ಹೊರಳಾಡತೊಡಗಿದ.

ಗೋವಿಂದನಿಗೆ ಏನು ಮಾಡಬೇಕು ಎಂದು ತೋಚದಾಯಿತು.

"ಏನು ಮಾಡ್ಲಿ ಬಿಂದ, ಹೊರಗ ಜನಾ ತುಂಬ್ಯಾರಾ. ಇದೇನಾದ್ರು ಗೊತ್ತಾದ್ರ ನಮ್ಮನ್ನ ಕೊಂದ ಬಿಡ್ತಾರ"

"ನನಗೆ ಗೊತ್ತಿಲ್ಲ. ನೀ ಏನಾದರೂ ಮಾಡಿ ನನ್ನ ಡಾಕ್ಟರ ಹತ್ತಿರ ಕರಕೊಂಡು ಹೋಗು.?"

"ಹಾಗಾದ್ರೆ ನಮ್ಮ ಗುಟ್ಟೆಲ್ಲಾ ಹೊರಗೆ ಬೀಳ್ತದ. ಏನ ಮಾಡ್ತಿ ಬಿಂದಾ"

"ಅಯ್ಯೋ ನೋವು! ನಾನು ಅಪರಾಧ ಮಾಡಿದೆ. ಗೋವಿಂದ! ಬಾಗಲಾ ತಗದಬಿಡು. ಜನರು ಒಳಗ ಬರಲಿ ಎಲ್ಲಾ ಹೇಳಿಬಿಡ್ತೀನಿ, ಕ್ಷಮಾ ಕೇಳಿಕೊಳ್ತೀನಿ"

ಬಿಂದನ ದರುಶನಕ್ಕಾಗಿ ಕಾತರಿಸಿದ ಜನಸ್ತೋಮ ಒಳಗ್ಗೆ ನುಗ್ಗಿ ಬಂತು. ಬಿಂದ ಯಾತನೆಯಿಂದ ನರಳತೊಡಗಿದ್ದ; ಮುದ್ರೆಗಳು ಮಾತ್ರ ಬಿಲಗಳಾಗಿದ್ದವು.

ದರುಶನಕ್ಕೆ ಬಂದವರು ಉಗಿಯತೊಡಗಿದರು. ಬಿಂದ ತನ್ನ ಮೋಸದ ಸಂಚನ್ನು ನೋವು ನುಂಗಿಕೊಳ್ಳುತ್ತ ವಿವರಿಸಿದ. ತಾನೇ ಗೋವಿಂದನಿಗೆ ಮುದ್ರೆ ಹಾಕಲು ಹೇಳಿ ರಾಯರೇ ಮುದ್ರೆ ಹಾಕಿದರೆಂಬ ಪವಾಡ ಗಾಥೆಯನ್ನು ಹರಡಿಬಿಟ್ಟ. ಅದರ ಫಲ ಯಾತನೆ!

"ಇವ್ನ ಬಿಡಬ್ಯಾಡ್ರಿ ಪೋಲೀಸರ ಕೈಯಾಗ ಕೊಡ್ರಿ. ಎರಡು ದಿವ್ಸದೊಳಗೆ ಹಣದ ಸೂರಿ ಮಾಡ್ಯಾರ"

"ರಾಯರ ಮುದ್ರೆ ಆದ್ರೆ ಹುಣ್ಣ ಆಗ್ತದೇನ್ರೀ ಎಂಥಾ ಮೋಸ!"

ಇದು ಹೇಗೆ ಸಾಧ್ಯ? ನಂತರ ನಾನು ಮುದ್ರೆಗಳನ್ನು ಪರಿಶೀಲಿಸಿದೆ. ಬಿಂದ ಅವಸರದಲ್ಲಿ ತುಕ್ಕು ಹಿಡಿದ ಮುದ್ರೆಗಳನ್ನು ಕಾಯಿಸಿಕೊಂಡು ಒತ್ತಿಸಿಕೊಂಡಿದ್ದ. ಅದರಲ್ಲಿಯ ಧೂಳು ಕೀವಾಡಿಸಿತ್ತು.

ಬಿಂದನಿಗೆ ನೋವು ತಾಳದಾಯಿತು. ಜರನ್ನು ತಳ್ಳಿಕೊಂಡು ತಾನೇ ಹೊರಟ ಹೊರಗೆ! "ಹೊರಗೆ ಬಂದ ನೋಡ್ರಿ, ಹಾಕ್ರೀ ರೊಕ್ಕಾ ಹಾಕ್ಕೊಂಡು ಓಡಿ ಹೋಗ್ತಾನ, ಬಿಡಬ್ಯಾಡ್ರೀ ಬಡೀರಿ" ಜನ ಕೂಗಿದಾಗ ಆಗಲೇ ಒದೆತ ಬಿದ್ದಿದ್ದವು. ಕಂಪೌಂಡಿನ ಕಲ್ಲಿಗೆ ಹಾದು ಅವನ ತಲೆಯಿಂದ ರಕ್ತ ಸೋರತೊಡಗಿತು. ಯಾವನೋ ಒಬ್ಬ ದೈವ ಭಕ್ತ ಅವನ ಕತ್ತು ಹಿಡಿದು ಎತ್ತಿ ನೂಕಿದ. ನನ್ನ ಬಳಿ ಬಂದು ಬಿದ್ದ ಬಿಂದ. ನಾನು ಎತ್ತಿ ಹಣೆಯಿಂದ ಚಿಮ್ಮುತ್ತಿದ್ದ ರಕ್ತ ಒತ್ತಿ ಹಿಡಿದು ಹಿಂದಿನ ಬಾಗಿಲಿನಿಂದ ಜನರಿಗೆ ಸಮಾಧಾನ ಹೇಳುತ್ತ ಕರೆದುಕೊಂಡು ನುಸುಳಿದೆ.

# ೫. ತಿರುವು

ದೃಷ್ಟಿ ಹರಿದಲ್ಲೆಲ್ಲ ಸೃಷ್ಟಿಯ ಸೊಬಗು. ಶುಭ್ರ ಹಿಮರಾಶಿ. ಹಿಮವೃಕ್ಷಗಳ ಸಮುದ್ರ. ಥಳಥಳನೆ ಹೊಳೆವ ಜುಳುಜುಳು ನಿನಾದದ ನದಿಝರಿಗಳು ನಮ್ಮ ಯಾತ್ರಿಕರ ಬಸ್ಸು ಹರಿದ್ವಾರವನ್ನು ದಾಟಿ ಹೃಷಿಕೇಶವನ್ನು ಸಮೀಪಿಸಿತ್ತು. ಪವಿತ್ರಾ ಕಿಟಿಕೆಯ ಬಳಿ ಕುಳಿತಿದ್ದರೂ ಅವಳ ಮನದ ಕಿಟಿಕೆಯಲ್ಲಿ ಇಣಕುತ್ತಿದ್ದುದೇ ಬೇರೆ. ಅದೇ ಯೋಚನೆ, ಅದೇ ಗುಂಗು. ನಾನು ಕೇಳಿದೆ:

"ಪವಿತ್ರಾ, ಏನು ಯೋಚನೆ ಮಾಡಲಿಕ್ಕೆ ಹತ್ತೀದಿ?"

"ಏನೂ ಇಲ್ಲ" ಎನ್ನುವಂತೆ ತಲೆ ಅಲ್ಲಾಡಿಸಿದಳು.

"ಏನೂ ಇಲ್ಲದಿದ್ದರ ಹಿಂಗ್ಯಾಕ ಗುಂಗಿನ್ಯಾಗ ಇದ್ದೀದಿ? ಹರಿದ್ವಾರದಿಂದ ಹೃಷಿಕೇಶದ ಸಮೀಪಕ್ಕ ಬಂದ್ರೂ, ಒಂದೂ ಮಾತು ಆಡಿಲ್ಲ. ಯಾತ್ರೆಗೆ ಹೊರಡೋಮುಂದ ಹೇಳಿದ್ನ್ಯೋ ಇಲ್ಲ್ಯೋ ಗುಂಗು ಹಿಡಿದು ಕೂಡಬಾರದು, ಇಲ್ಲದ್ದೊಂದು ಯೋಚನೀ ಮಾಡಬಾರದೂ ಅಂತ?"

ನಾನು ನೆನಪಿಸಿದೆ. ಅವಳ ವಿಚಾರದ ಪ್ರವಾಹದ ಗತಿಯನ್ನು ಬದಲಿಸಲು ಯತ್ನಿಸಿದೆ. ಪ್ರಕೃತಿಯ ಬೃಹತ್ತಿನತ್ತ ಕೈಮಾಡಿ ತೋರಿಸಿದೆ.

ಕಿಟಿಕೆಯಲ್ಲಿಯ ಮುಖವನ್ನು ಹೊರಳಿಸದೇ ಹೇಳಿದಳು:

"ಅದ್ನಽ ನೋಡಕೋತ ಹೊಂಟೇನಿ ಅಶೋಕಾ! ಪರಮಾತ್ಮನ ಸೃಷ್ಟಿ ಅದ್ಭುತ ಅದಽ ಅಲ್ಲಽ? ಮುಗಿಲೆತ್ತರ ಬೆಳೆದ ಗಿಡ ಮರದೊಳಗ, ಹಿಮಾಲಯದ ಈ ತುತ್ತತುದಿಯೊಳಗ, ಭೋರ್ಗರೆವ ಗಂಗೆಯೊಳಗ ನನ್ನ ಶ್ರೀಕೃಷ್ಣನ ಲೀಲಾ ಕಾಣಸ್ತದ."

ಕಡಿದಾದ ದಾರಿಯಲ್ಲಿ ಬಸ್ಸು 'ಸರ್ರನೆ' ಹೊರಳಿದಾಗ ನನ್ನನ್ನೇ ಹಿಡಿದು ಅಲುಗಿಸಿದಂತಾಯಿತು.

"ಪವಿತ್ರಾ, ಮತ್ತ ಅದಽ ದಿಕ್ಕಿನೊಳಗ ಹರದು ಹೋಗಲಿಕ್ಕೆ ಹತ್ತೇದಲ್ಲ ನಿನ್ನ ಮನಸ್ಸು? ಈ ಸೃಷ್ಟಿಯ ಭವ್ಯತೆ ಏನ ಅದ ಅಲ್ಲಾ ಅದು ನಮ್ಮ ಅದಮ್ಯ ಆತ್ಮಶಕ್ತಿಯ ಪ್ರತೀಕ. ಅದು ಆ 'ಧೀ' ಶಕ್ತಿಯ ಸಾಕ್ಷಾತ್ಕಾರ ಮಾಡಿ ಕೊಡ್ತದಽ ಹೊರತಾಗಿ, ಅದರ ಅಧೀನ ಆಗಿ ಮನೋಸ್ಥೈರ್ಯ ಕಳಕೊಂಡು, ಹೇಡಿಹಂಗ ನಮ್ಮ ಜೀವಾ ಕಳಕೊಳ್ಳೋದನ್ನ ಕಲಿಸೋದಿಲ್ಲ. ದೇವರುದಿಂಡರು ಇದೆಲ್ಲ ಸುಳ್ಳು, ಆಡಂಬರ, ಸೋಗು. ಸೃಷ್ಟಿನಽ ಸತ್ಯ. ಅದಽ ನಿತ್ಯ.... ನಿನ್ನ ತಲ್ಯಾಗ ಹಕ್ಕೊಂಡಿದ್ದು ಬಿಟ್ಟುಬಿಡು."

ಪವಿತ್ರಾಳ ಮುಖವನ್ನು ನನ್ನತ್ತ ಸೆಳೆದುಕೊಂಡು ಹೇಳಿದೆ. ಅವಳ ಕಣ್ಣುಗಳು ಇನ್ನೂ ಹೊಳಪೇರಿದ್ದವು. ಆಳಕ್ಕೆ ಇಳಿದರೂ ನಿಶ್ಚಲತೆಯ ಸುಳುಹು ಹತ್ತಲಿಲ್ಲ.

"ಅಶೋಕ, ರುದ್ರ ಪ್ರಯಾಗದೊಳಗೆ ಅಲಕನಂದಾ ಮತ್ತ ಮಂದಾಕಿನಿ ನದಿ ಸಂಗಮ ಆಗ್ತಾವಂತ. ಮಂದಾಕಿನಿ ತೀರದಗುಂಟ ಹೋದ್ರ ಕೇದಾರಕ್ಕ, ಅಲಕನಂದಾ ತೀರದ ಗುಂಟ ಹೋದ್ರ ಬದ್ರಿಗೆ ಹೋಗ್ತಾರಂತ ಹಂಗ ನೋಡ್ಮ ವಿಚಾರಧಾರೆ..."

'ಪವಿತ್ರಾ' ನಾನು ಅಂದದ್ದು ಅಷ್ಟೆ! ನನಗೆ ಏನು ಉತ್ತರಿಸಬೇಕೊ ತಿಳಿಯಲಿಲ್ಲ. ಮನದಲ್ಲಿ ಕಸಿವಿಸಿಯಾಯಿತು. ಅವಳ ಮಾತಿನ ಧರತಿಯೇ ಬೇರೆಯಾಗಿತ್ತು. ಮಾರ್ಗದರ್ಶಿಯ 'ಮೈಕ್' ಕೊರ್ ಕೊರ್ ಎಂದಾಗ ಅತ್ತ ದೃಷ್ಟಿ ಹರಿಸಿದೆ. ಆತ ವಿವರಣೆ ಕೊಡಲು ಆರಂಭಿಸಿದ.

"ನಾವು ಈಗ ಹರಿದ್ವಾರದಿಂದ ಸುಮಾರು ೩೫ ಮೈಲು ದೂರವಿರುವ ಹೃಷಿಕೇಶವನ್ನು ತಲುಪುತ್ತಿದ್ದೇವೆ. ಇಲ್ಲಿಂದಲೇ ಬದರಿ ಕೇದಾರನಾಥಕ್ಕೆ ದಾರಿಯಿದೆ. ಅದೋ, ಅಲ್ಲಿ ಕಂಗೊಳಿಸುವಂಥ ಗಂಗಾನದಿಯ ದಡದಲ್ಲಿರುವ ಹೃಷಿಕೇಶದಲ್ಲಿ ಅನೇಕ ತಪೋವನಗಳಿವೆ. ಸಾಧುಸಂತರಿದ್ದಾರೆ...."

ಅವನು ಇನ್ನೂ ಏನೇನೊ ಉಸುರಿದ:

"ಇಲ್ಲಿ ಶಂಕರಾಚಾರ್ಯರು ಕಟ್ಟಿಸಿದರು ಎಂಬ ಪ್ರತೀತಿ ಇದ್ದ ಭರತ್‌ಜಿ ಮಂದಿರವಿದೆ. ಹೃಷೀಕ ಎಂದರೆ ಇಂದ್ರಿಯ, ಇಂದ್ರಿಯಗಳಿಗೆ ಅಧಿಪತಿ ಹೃಷಿಕೇಶ. ಶ್ರೀಮನ್ನಾರಾಯಣನಿಗೆ ಹೃಷಿಕೇಶ ಎಂದು ಹೆಸರು."

ಬಸ್ಸು ದಾರಿ ಕ್ರಮಿಸಿತು. ಹಿಂದೆಮುಂದೆ ಕಣ್ಣು ಹಾಯಿಸಿದೆ. ಕೆಲ ಯಾತ್ರಿಕರು ಭಜಗೋವಿಂದಂ ಭಜನೆಯಲ್ಲಿ ಮಗ್ನರಾಗಿದ್ದರು. ಇನ್ನು ಕೆಲವರಿಗೆ ಮನೆಯ ತಿಜೋರಿಯ ಚಿಂತೆ. ಸ್ಟೀಲಿನ ಕಪಾಟಿನಲ್ಲಿಯ ಬೆಳ್ಳಿಬಂಗಾರದ ಚಿಂತೆ. ಹೃಷಿಕೇಶನ ಸನ್ನಿಧಿಯಲ್ಲಿಯೂ ವ್ಯಾಮೋಹ ಬಳಸಿಕೊಂಡಿತ್ತು. ಯಾತ್ರೆದರುಶನ ಬರಿ ತೋರಿಕೆಯಷ್ಟೆ! ಮನಸ್ಸನ್ನು ಮತ್ತೆ ಬಸ್ಸಿನ ಹೊರಗಡೆ ತೂರಿದೆ. ಎಡಗಡೆ ಎತ್ತರವಾದ ಬೆಟ್ಟಗಳ ಸಾಲು ತಲೆಯೆತ್ತಿ ನಿಂತಿದ್ದರೆ ಬಲಗಡೆ ಆಳವಾದ ಕಂದಕ ಮಧ್ಯೆ, ನಮ್ಮ ಬಸ್ಸು ಕ್ರಿಮಿಯಂತೆ ನುಸುಳತೊಡಗಿತ್ತು.

ನಾನು ಪವಿತ್ರಾಳ ಮೈದಡವಿ ಕೇಳಿದೆ:

"ಇಂಥಾ ಸೊಬಗಿನಲ್ಲಿಯೂ ಎಂಥಾ ಭಯಾನಕತೆ ಅದs ಅಲ್ಲಾ?"

ಅವಳು ನನ್ನತ್ತ ತಿರುಗಿ ತುಟಿಅಂಚಿನಲ್ಲಿ ನಗೆ ಮಿನುಗಿಸಿ ಎಂದಳು:

"ನನಗೇನೂ ಭಯಾನಕ ಅನಸೋದಿಲ್ಲ. ಸಾವಿನ ಕೈಯಾಗ ಸಿಕ್ಕ ವ್ಯಕ್ತಿಗೆ ಜೀವದ ಹಂಗ ಯಾಕ?"

"ಪವಿತ್ರಾ, ಮತ್ತ ಯಾಕ ಆ ಮಾತು ತಗೀತಿದಿ?"

"ಮಾತು ತಗೀದಿದ್ದರ ಮೃತ್ಯು ಮಾತ ಕೊಟ್ಟದ್ದು ಮರೀಲಿಕ್ಕೆ ಆಗ್ತದೇನು? ಇನ್ನ ಒಂದು ವಾರ ನನ್ನ ಜೀವನದ ಅಂತ್ಯದ ಗಳಿಗೆ ಸಮೀಪಸಲಿಕ್ಕೆ ಹತ್ತೇದ ನಾ ನನ್ನ ಆಶಾಮಂದಿರ ಮುಟ್ಟತೀನೋ ಇಲ್ಲೊ?"

ಮತ್ತೆ ನಾನು ತಣ್ಣಗಾದೆ. ಮಾರ್ಗದರ್ಶಿ ಮೈಕಿನಲ್ಲಿ ಕೂಗಿಕೊಂಡ:

"ಇದು ಲಕ್ಷ್ಮಣ ಝೂಲಾ. ಹಿಂದೆ ಲಕ್ಷ್ಮಣನು ಕಟ್ಟಿಸಿದ ಸೇತುವೆ. ಇದಕ್ಕೆ ಪೌರಾಣಿಕ ಹಿನ್ನೆಲೆಯಿದೆ. ಇಂದ್ರಜಿತುನನ್ನು ಕೊಂದ ಲಕ್ಷ್ಮಣ, ಬ್ರಹ್ಮಹತ್ಯಾದೋಷದ ನಿವಾರಣೆಗಾಗಿ ಇಲ್ಲಿ ತಪಸ್ಸು ಮಾಡಿದನಂತೆ. ಈಶ್ವರನನ್ನು ಸಂತುಷ್ಟಗೊಳಿಸಿಕೊಂಡನಂತೆ. ಇಲ್ಲಿ ಲಕ್ಷ್ಮಣ ದೇವಸ್ಥಾನವಿದೆ. ರಾಮಮಂದಿರ, ಋಷಿಕುಂಡ, ವರಾಹ ಭಗವಾನ್ ಮಂದಿರ ಇವೆ... ಬನ್ನಿ..."

ಪ್ರತಿಯೊಂದು ಮೂರ್ತಿಯ ಮುಂದೆ ಪವಿತ್ರಾ ತನ್ಮಯಳಾಗಿ ನಿಂತುಬಿಡುತ್ತಿದ್ದಳು. ಬಸ್ಸಿನ ಕರೆ ಕೇಳುವದೊಂದೇ ತಡ, ಅವಳನ್ನು ಹಾಗೆಯೇ ಎಳೆದುಕೊಂಡು ಹೋಗುತ್ತಿದ್ದೆ. ರಮಣೀಯ ಲಕ್ಷ್ಮಣ ಝೂಲಾದಿಂದ ಗಂಗೆಯನ್ನು ದಾಟಿ ನಾವು ಸ್ವರ್ಗಾಶ್ರಮಕ್ಕೆ ಹೋದೆವು. ಸ್ವರ್ಗಸಮಾನವಾದ ಸೊಬಗು ಅಲ್ಲಿಯದು. ಅಲ್ಲಿಯ ಕಲ್ಲಿನ ಮಂಟಪಗಳಲ್ಲಿ ಯಾತ್ರಿಕರು ವಿಶ್ರಮಿಸಿದರು. ನಾನು, ಪವಿತ್ರಾ ಒಂದು ಮಂಟಪದಲ್ಲಿ ಕುಳಿತೆವು. ಪವಿತ್ರಾಳ ಕಣ್ಣು, ಮೋಡಗಳಲ್ಲಿ ನೆಟ್ಟಿತು. ಅಲ್ಲಿಯ ವಾತಾವರಣ ನನ್ನನ್ನು ಪ್ರಣಯದ ಕೇಳಿಗೆಳೆಸಿತು. ಅವಳು ಆಸ್ಪದವೀಯಲಿಲ್ಲ. ಮಗ್ಗಲು ಮಂಟಪದಲ್ಲಿಯ ನವದಂಪತಿಗಳ ನಗು, ಚೆಲ್ಲಾಟ, ಧ್ವನಿಯಲ್ಲಿಯೇ ಪ್ರತಿಯೊಂದು ಧ್ವನಿತವಾಗುತ್ತಿತ್ತು.

ನನಗೆ ಎಲ್ಲ ನಿರಾಸೆ. ಪವಿತ್ರಾ ತನ್ನದೇ ಆದ ಪ್ರಪಂಚದಲ್ಲಿದ್ದಳು.

ಬಸ್ಸಿನ ಕರೆ ಬಂತು. ನಾವು ಬಸ್ಸಿನ ಬಳಿ ಬರುವಷ್ಟರಲ್ಲಿ, ಯಾತ್ರಿಕರೆಲ್ಲ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತು ನಮ್ಮ ದಾರಿ ಕಾಯತೊಡಗಿದ್ದರು. ಬಸ್ಸು ಹೊರಟಿತು, ದಾರಿ ಕ್ರಮಿಸಿ ತನ್ನ ಗುರಿ ಎಡೆಗೆ ಬಂದು ನಿಂತಿತು. ಮಾರ್ಗದರ್ಶಿ ಹೇಳತೊಡಗಿದ:

"ಇದು ರುದ್ರಪ್ರಯಾಗ. ನಮ್ಮ ಬಸ್ಸು ಇಲ್ಲೇ ನಿಲ್ಲತದ; ಇನ್ನು ಯಾತ್ರಾರ್ಥಿಗಳು ಕಾಲುನಡಿಗೆಯಿಂದಾಗಲಿ, ಕುದುರೆ ಏರಿಯಾಗಲಿ ಯಾತ್ರೆಯನ್ನು ಮುಂದುವರಿಸಬೇಕು. ದಯಮಾಡಿ ತಾವು ಕೆಲವೊಂದು ನಿಯಮಗಳನ್ನು ಪಾಲಿಸಬೇಕು. ಕೈಯಲ್ಲಿ ಬಡಿಗೆಯನ್ನು ಹಿಡಿದುಕೊಂಡು ಊರುತ್ತ ನಡೆಯಬೇಕು. ದಿನಾಲು ಎಷ್ಟು ಸಾಧ್ಯವೊ ಅಷ್ಟೇ ದೂರದ ಪ್ರಯಾಣ ಕೈಕೊಳ್ಳಬೇಕು. ರಾತ್ರಿಯಾಗುವ ಹೊತ್ತಿಗೆ ಜನವಸತಿ ಇದ್ದ ಸ್ಥಳಗಳಲ್ಲಿ ಬೀಡುಬಿಡಬೇಕು. ಅಲ್ಲಲ್ಲಿ ನೀವೇ ಅಡಿಗೆ ಮಾಡಿಕೊಳ್ಳುವದು ಒಳ್ಳೆಯದು. ಸಿಕ್ಕ ಸಿಕ್ಕಲ್ಲಿ ನೀರು ಕುಡಿಯಬೇಡಿ. ಉಣ್ಣೆಯ ಬೆಚ್ಚನೆಯ ಉಡುಪು ಧರಿಸಿ. ಪ್ರಥಮ ಚಿಕಿತ್ಸೆಯ ಪೆಟ್ಟಿಗೆ, ನೀರಿನ ಬ್ಯಾಗು, ಹಣ್ಣುಹಂಪಲ, ಹಗುರಾದ ಪಾತ್ರೆ, ಬ್ಯಾಟರಿ, ಸ್ಟೋವ್, ತಿಂಡಿತಿನಿಸಿನ ಸಾಮಾನು ತೆಗೆದುಕೊಂಡು ಹೋಗಬೇಕು."

ಯಾತ್ರಿಕರ ತಂಡಗಳು ಬದರಿಯತ್ತ ಮುಖಮಾಡಿ ಶ್ರೀಹರಿ, ಶ್ರೀಕೃಷ್ಣ ಎಂದು ಜಪಿಸುತ್ತ ಭಜಗೋವಿಂದಂ ಭಜನೆಯ ಗುಂಗಿನಲ್ಲಿ ಬೆಟ್ಟದತ್ತ ನಡೆದರು.

ನಾನು, ಪವಿತ್ರಾ ಕೂಡ ಬೆಚ್ಚನೆಯ ಉಣ್ಣೆಯ ಉಡುಗೆಯನ್ನು ಧರಿಸಿ, ಗುಂಪಿನ ಹಿಂದೆ ಸಾಗಿದೆವು. ನನ್ನ ಬೆನ್ನಿಗೆ ಸಾಮಾನುಸರಂಜಾಮಿನ ಬ್ಯಾಗು. ಪವಿತ್ರಾ ಬರೀ ನೀರಿನ ಬ್ಯಾಗು ಹಿಡಿದಿದ್ದಳು. ನಮ್ಮ ಯಾತ್ರೆ ಸಾಗಿತು.

ಸಂಜೆಯವರೆಗೂ ನಾನು, ಪವಿತ್ರಾ ಹಾಗೂ ಹೀಗೂ ಆ ಕಡಿದಾದ ಮಾರ್ಗದಲ್ಲಿ ಸಾಗಿದೆವು. ಹೊತ್ತು ಮುಳುಗುವ ಹೊತ್ತಿಗೆ ಪವಿತ್ರಾ ಪೂರ್ತಿ ದಣಿದುಹೋಗಿದ್ದಳು. ಒಮ್ಮೆಯಂತೂ, ಜೋಲಿತಪ್ಪಿ ಕಂದಕದಲ್ಲಿ ಜಾರಿ ಬೀಳುವ ಪವಿತ್ರಾಳನ್ನು ತಬ್ಬಿಕೊಂಡು ಹೇಳಿದೆ:

"ಸುಮ್ಮನೆ ನೀನು ಹಟಾ ಮಾಡ್ತೀಯಾ ಪವಿತ್ರಾ. ಕುದುರೀಮ್ಯಾಲೆ ಅಥವಾ ಹೇಸರಗತ್ತಿಯ ಮ್ಯಾಲೆ ಪ್ರಯಾಣ ಮಾಡಿದ್ದರ ಆಗತಿದ್ದಿಲ್ಲೇನು?"

"ಬ್ಯಾಡಾ ಅಶೋಕ. ನಮ್ಮ ದೇಹಾ ದಂಡಿಸಿ ದೇವರ ದರುಶನ ಪಡದ್ರ ನಮ್ಮ ಹರಕಿ ಪೂರಾ ಆಗ್ತದ."

ಆ ದಣಿದ ದೇಹದಲ್ಲಿ ಕ್ಷೀಣಸ್ವರ ಹೊಮ್ಮಿತು.

ಹಿಮದೇವನಡಿಯಲ್ಲಿ ಸೂರ್ಯದೇವ ತಣ್ಣಗಾಗಿ ಹೋಗಿದ್ದ. ಹಿಮಗಾಳಿ ಹಿಮಗಡ್ಡೆಗಳನ್ನು ತೂರಾಡುತ್ತ ಬೀಸತೊಡಗಿತು. ಸಹಯಾತ್ರಿಕರ ತಂಡಗಳು ಆಗಲೇ ದೂರ ಹೋಗಿಬಿಟ್ಟಿದ್ದವು. ಪವಿತ್ರಾ ಕಾಲೆತ್ತಿ ಇಡುವ ಸ್ಥಿತಿಯಲ್ಲಿಯೂ ಉಳಿದಿರಲಿಲ್ಲ. ದಟ್ಟ ಕಾನನದ ಮಧ್ಯ ಉಳಿಯುವದೂ ಅಸಾಧ್ಯ. ದೃಷ್ಟಿಯನ್ನು ಚಾಚಿ, ಚಾಚಿ ಚಾಚಿ ನೋಡಿದೆ ಎಲ್ಲಿಯಾದರೂ ಜನವಸತಿಯ ಮಿಣುಕು ದೀಪ ಕಾಣಿಸುತ್ತದೊ ಹೇಗೊ ಎಂಬ ಆಸೆಯಲ್ಲಿ. ಆಸೆಗೆ ನಿರಾಶೆಯಾಗಲಿಲ್ಲ.

"ಪವಿತ್ರಾ, ಇನ್ನ ಸ್ವಲ್ಪ ದೂರ ನಡಿ, ಅಲ್ಲೆ ಮಿಣುಕ ದೀಪ ಕಾಣಸಲಿಕ್ಕೆ ಹತ್ತೇದ."

"ಆಂ! ನಡೀರಿ ಹಂಗಾದ್ರs...."

ನಾನು ಅವಳ ಬೆನ್ನ ಬಳಸಿ ಹಿಡಿದುಕೊಳ್ಳಲು ಹೋದೆ. ಅವಳ ಮೈ ಕಾದು ಕೆಂಡವಾಗಿತ್ತು. ಜ್ವರ ಏರತೊಡಗಿತ್ತು ನನಗೆ ಏನು ಮಾಡಬೇಕು, ತೋಚಲಿಲ್ಲ. ಪವಿತ್ರಾ ನನ್ನ ಎದೆಯ ಮೇಲೆ ಮುಖವಿರಿಸಿ

"ನಾ ಹ್ಯಾಂಗಾದ್ರೂ ಸಾಯ್ತೀನಿ ನನ್ನ ಇಲ್ಲೇ ಬಿಟ್ಟ ಹೋಗ್ರೀ" ಎಂದಳು.

ನಾನು ಸರ್ರನೆ ಅವಳ ಬಾಯ ಮೇಲೆ ಕೈಯಿರಿಸಿದೆ. ಇನ್ನು ಹೆಚ್ಚು ಹೊತ್ತು ಅವಳ ಬಾಯಿಂದ ಆ ಮಾತು ಕೇಳುವ ತಾಳ್ಮೆ ನನ್ನಲ್ಲಿ ಉಳಿದಿರಲಿಲ್ಲ. ನಾನು ಅಲ್ಲಿಯ ದಿನ್ನೆಯ ಮೇಲೆ ಕೂಡುವದೊಂದೇ ತಡ, ಅವಳು ನನ್ನ ತೊಡೆಯ ಮೇಲೆ ಕುಸಿದು ಬಿದ್ದಳು.

"ಶ್ರೀಹರಿ.... ಶ್ರೀಹರಿ.... ಯಾರು ನೀವು?"

ಆ ಹಿಮ ತುಂಬಿದ ಕತ್ತಲಲ್ಲಿ ಬೆಳಕಿನ ರೇಖೆ ಧ್ವನಿರೂಪದಲ್ಲಿ ನಮ್ಮನ್ನು ತಟ್ಟಿದಂತಾಯಿತು. ನನ್ನ ದೇಹದಲ್ಲಿ ಮತ್ತೆ ಜೀವ ಸಂಚರಿಸಿದಂತಾಯಿತು. ಕೈಯಲ್ಲಿ ದೀಪ ಹಿಡಿದ ಆ ವ್ಯಕ್ತಿಯ ಕಡೆಗೆ ನೋಡಿದೆ. ತೇಜಸ್ಸು ತುಂಬಿದ ಮುಖ, ಕಾರುಣ್ಯದ ಒರತೆಗಳಂತಿದ್ದ ಕಂಗಳು, ಅನುಭವದ ಆಳವನ್ನು ಸಾರುವ ನೀಳ ದಾಡಿ.

ಆ ವ್ಯಕ್ತಿಯನ್ನು ಹಾಗೇ ನೋಡುತ್ತ ನಿಲ್ಲಬೇಕು ಎನ್ನಿಸಿತು. ಆದರೆ ಆತನ ಪ್ರಶ್ನೆ ನೆನಪಿಸಿಕೊಂಡು, "ನಾವು ಯಾತ್ರಿಕರು ನಾನು ಆ ಅಶೋಕ ಇವಳು ನನ್ನ ಪತ್ನಿ ಸುಮಿತ್ರಾ. ನೀವೂ ಯಾತ್ರೀಕರೇ ಬಾಬಾ?" ಎಂದು ಕೇಳಿದೆ.

ಬಾಬಾ ಯಾತ್ರಿಕನಾಗಿರಲಿಲ್ಲ. ಹತ್ತಿರದಲ್ಲಿ ಕಾಣುತ್ತಿದ್ದ ಆ ಮಿಣಕು ದೀಪ ಬಾಬಾನ ಆಶ್ರಮ.

ಪವಿತ್ರಾಳ ಗಂಟಲು ಒಣಗಿರಬೇಕು, ನೀರಿಗಾಗಿ ತವಕಿಸಿದಳು.

"ಮಗು, ನಿಮ್ಮಂಥ ಯಾತ್ರಿಕರ ಸಲುವಾಗೀನಽ ನಾನು ಇಲ್ಲೆ ಆಶ್ರಮ ಮಾಡಿಕೊಂಡು ಇದ್ದೀನಿ. ಮೊದ್ಲೀಗೆ ನೀರು ಕೊಡು ಆ ತಾಯಿಗೆ..." ಎಂದ ಬಾಬಾ.

ವಾಟರ್ ಬ್ಯಾಗಿನಲ್ಲಿದ್ದ ನೀರನ್ನು ಪವಿತ್ರಾಗೆ ಕುಡಿಸಿದೆ. ಜ್ವರ ಇನ್ನೂ ಏರಿತ್ತು! 'ಬಾ ಮಗಳೆ, ಮೆಲ್ಲಗೆ' ಎಂದು ಬಾಬಾ ಕರೆದಾಗ, ಆವಳ ಅಂತಃಕರಣ ಕರಗಿತ್ತು. ಬಾಬಾನ ಆಸರೆಯೊಂದಿಗೆ ನಾನು ಪವಿತ್ರಾಳನ್ನು ಆಶ್ರಮಕ್ಕೆ ಕರೆದುಕೊಂಡು ಹೋದೆ.

ಬೆಳಗು ಹರಿದಿತ್ತು. ಆಶ್ರಮದ ಸುತ್ತಮುತ್ತಲಿನ ನಿಸರ್ಗರಮ್ಯ ವಾತಾವರಣವು ಸ್ವರ್ಗವನ್ನೇ ಧಿಕ್ಕರಿಸುವಂತಿತ್ತು. ಹತ್ತಿರದ ನದಿಯ ದಡದ ಮೇಲೆ ಸುತ್ತಾಡಿ, ಪಕ್ಷಿಗಳ ಕಲರವದ ಸವಿಯನ್ನು ಸವೆದು ಆಶ್ರಮಕ್ಕೆ ಬಂದಾಗ, ಬಾಬಾ ಪವಿತ್ರಾಳ ಬಳಿ ಕುಳಿತಿದ್ದ.

ಪವಿತ್ರಾ ಚೇತರಿಸಿಕೊಂಡಿದ್ದಳು. ಆವಳ ಕಣ್ಣಲ್ಲಿ ಹೊಳಪು ತುಳುಕಿತ್ತು. ನಾನು ಬಾಗಿಲು ಬಳಿಯೇ ನಿಂತುಕೊಂಡೆ.

ಬಾಬಾ ಕೇಳತೊಡಗಿದ್ದ:

"ಪವಿತ್ರಾ, ರಾತ್ರೆಲ್ಲಾ ನಿದ್ದಿ ಮಾಡಿದೆಲ್ಲ ನಾ ಕೊಟ್ಟ ಗಿಡಮೂಲಿಕಿ ತೇಯ್ದು ಹಾಕೇದಲ್ಲ?"

ಪವಿತ್ರಾ ಎದ್ದು ಕುಳಿತುಕೊಳ್ಳುತ್ತ ಕ್ಷೀಣಸ್ವರದಲ್ಲಿ ಹೇಳಿದಳು:

"ಹೌದು ಬಾಬಾ, ಅದ್ನ ಅಶೋಕ ತೇಯ್ದು ಹಾಕಿದ ಮ್ಯಾಲೆ ನಿದ್ದಿ ಬಂತು."

"ಅಶೋಕ ಎಲ್ಲಿದ್ದಾನ?"

"ನದೀ ಕಡೆ ಹೋಗಿರಬೇಕು."

ಕಿಟಕಿಯಿಂದ ಆಚೆ ದೃಷ್ಟಿ ಹಾಯಿಸಿ ಹೇಳಿದಳು ಪವಿತ್ರಾ.

ಬಾಬಾ ಮಾತು ಮುಂದುವರೆಸಿದ:

"ಇಲ್ಲೀ ಗಿಡಮೂಲಿಕಿಯೊಳಗ ಸಂಜೀವಿನೀ ಶಕ್ತಿ ಅದ! ಎಂಥಾ ರೋಗಕ್ಕೂ ಮದ್ದು!"

"ಬಾಬಾ, ನನ್ನ ಯಾವ ಗಿಡಮೂಲಿಕೀನೂ ಬದುಕಸಲಿಕ್ಕೆ ಸಾಧ್ಯನಽ ಇಲ್ಲಾ."

ಆ ವಿಷಣ್ಣನುಡಿ ಕೇಳಿ ಬಾಬಾ,

"ಇದೇನು ಮಗಳಽ, ಇಷ್ಟು ನಿರಾಸೆಯಾಗಿ ಮಾತಾಡ್ತಿ, ಈಗ ಆಗಿದ್ದಾದ್ರೂ ಏನು? ನಿನ್ನ ಪೂರ್ತಿ ಆರಾಮ ಆಗದ ಹೊರ್ತು, ನಾನೂ ಆರಾಮ ತೊಗೊಳ್ಳೋದಿಲ್ಲ" ಎಂದ ಸಂತೈಸುತ್ತ.

"ಬಾಬಾ, ನಿಮ್ಮ ಮುಖದೊಳಗ ಎಂಥಾ ತೇಜಸ್ಸು ಅದ? ನಿಮ್ಮ ಕಣ್ಣಾಗಿನ ಬೆಳಕು ನನ್ನ ಚೇತರಿಸಿಕೊಳ್ಳೋ ಹಂಗ ಮಾಡೇದ... ಆದ್ರ ಬಾಬಾ.... ಯಮಾ ನನ್ನ ಕೊಳ್ಳಾಗ... ಮೃತ್ಯುಪಾಶಾ ಒಗ್ದಾನ. ಅದ್ರಿಂದ ಯಾರಿಗೂ ಬಿಡಸಲಿಕ್ಕೆ ಸಾಧ್ಯನಽ ಇಲ್ಲಾ."

ಪವಿತ್ರಾಳ ಆ ಮಾತುಗಳನ್ನು ಕೇಳಿ ಬಾಬಾನ ಮುಖ ವಿವರ್ಣವಾಯಿತು. ಒಂದು ಕ್ಷಣ ಏನು ಉತ್ತರಿಸಬೇಕು ತೋಚದೆ, ಯೋಚನೆಯಲ್ಲಿ ಮುಳಗಿದಂತೆ ಗೋಚರಿಸಿತು. ಪವಿತ್ರಾ ಮಾನಸಿಕ ಯಾತನೆಯಿಂದ ಬಳಲುತ್ತಿರಬಹುದೆಂಬ ಅಂಶ ಆತನಿಗೆ ಸ್ಪಷ್ಟವಾಗಿರಬೇಕು.

ಮೌನ ಮುರಿದಳು ಪವಿತ್ರಾ. ಅರೆತೆರೆದ ಕಣ್ಣುಗಳಲ್ಲಿ ಅಂತರಂಗದ ತಳಮಳವನ್ನು ಸೂಸಿದಳು

"ಬಾಬಾ ಅದು... ಸಾಧ್ಯನಽ ಇಲ್ಲ. ಅಲ್ಲಾಽ.... ಹೋಗಲಿ...."

ಎಂದು ಎದ್ದುನಿಂತು ಬಾಬಾನನ್ನು ಕಿಟಿಕೆಯ ಬಳಿ ಕರೆದು, ಹೊರಗಡೆ ಹಿಮರಾಶಿಯತ್ತ ಕೈಮಾಡಿ ತೋರಿಸುತ್ತ

"ಆ ಹಿಮರಾಶಿಯೊಳಗ.... ಅಕಾ ಅಲ್ಲೇ ಆ ಹಿಮದ ದಿನ್ನೀ ಅತ್ಲಾಗ, ಅಲ್ಲೇ ಶ್ರೀಕೃಷ್ಣಮೂರ್ತಿ.... ಉದ್ಭವಿಸಿ ನನಗ ದರುಶನ ಕೊಡಬಹುದು.... ಅದು ಇವತ್ತು ತಾರೀಖು ೨೫ ಅಲ್ಲಽ.... ೩೦ನೆಯ ತಾರೀಖಿನ ದಿವಸ ಮುಂಜಾನೆ ನಾನು ದರುಶನ ಪಡದರ ಬದಕತೀನಿ.... ಬಾಬಾ, ಇರಲಿಲ್ಲಾ ಅಂದ್ರ, ಆ ಬೆಳಗಽ ನನಗೆ ಮೃತ್ಯು...."

ಪವಿತ್ರಾಳ ಕಣ್ಣು ಹನಿಯೊಡೆದಿತ್ತು. ಅದನ್ನು ನೇವರಿಸಿ ಬಾಬಾ ಅವಳನ್ನು ಚಾರ್‌ಪಾಯಿ ಮೇಲೆ ಕೂಡಿಸಿ ಮೆಲುವಾಗಿ ನಕ್ಕು "ಇದೆಲ್ಲ ನಿನ್ನ ಮನಸ್ಸಿನ ಭ್ರಮಾ ಮಗಳೇಽ" ಎಂದು ಅವಳ ಮನದ ಮೇಲೆ ಎಳೆದ ಪರದೆಯನ್ನು ಸರಿಸಲು ಯತ್ನಿಸಿದ.

ಸ್ವಲ್ಪ ಹೊತ್ತು ಬಿಟ್ಟು ಥಟ್ಟನೆ ಪವಿತ್ರಾ ಎದ್ದು ಕುಳಿತು:

"ಬಾಬಾ, ನಾವು ಸತ್ತಮ್ಯಾಲೆ ಈ ದೇಹ ಏನಾಗ್ತದ? ಎಲ್ಲಿ ಹೋಗ್ತದಽ....? ಈ ಜೀವರಾಶಿಗಳು ಎಲ್ಲಿ ಹೋಗ್ತಾವ...? ಮತ್ತ ನಾವು ಹುಟ್ಟಿ ಬರ್ತೀವೇನು?"

"ಮಗೂ! ಇದೆಲ್ಲ ವೇದಾಂತದ ಮಾತು. ಸತ್ತಮ್ಯಾಲ ಈ ದೇಹ ಸುಟ್ಟು ಬೂದಿಯಾಗಿ ಹೋಗ್ತದ. ಮಣ್ಣಾಗಿಂದ ಬಂದಿದ್ದು ಮಣ್ಣಾಗ ಸೇರಿ ಹೋಗ್ತದ."

"ದೇಹಾ ಮಣ್ಣ ಆಗ್ತದ ಬಾಬಾ.... ಆದ್ರ ಅದ್ರಾಗ ಇದ್ದ ಆತ್ಮ ಏನ ಆಗ್ತದ.... ಅವತ್ತು ಸ್ವಾಮೀಜಿ ದರುಶನ ಮಾಡಿಸೀದ್ರು...."

ಅಷ್ಟರಲ್ಲಿ ಅಲ್ಲಿಗೆ ಆಗಮಿಸಿದ. ನಾನು ಒಳಗೆ ಹೋಗದೆ ಅಲ್ಲೇ ನಿಂತೆ.

ಬಾಬಾ, 'ಯಾರು, ಏನು ಪವಿತ್ರಾ, ನೀ ಹೇಳೋದು' ಎಂದು ಆತುರದಿಂದ ಕೇಳಿದ.

ಪವಿತ್ರಾಳ ನೆನಪು ಅಲೆಅಲೆಯಾಗಿ ತೇಲಿ ಬಂತು:

"ಎರಡು ತಿಂಗಳ ಹಿಂದೆ... ಒಬ್ಬ ಸ್ವಾಮೀಜಿ ಮನೀಗೆ ಬಂದ್ರು. ಬಾಗಿಲು ತೆರೆದು ಸ್ವಾಗತಿಸಿದೆ. ನನ್ನಽ ದಿಟ್ಟಿಸಿ ನೋಡಿದ್ರು. ನನ್ನ ಮನದ ಭಕ್ತಿಯ ದೀಪ ಹೊತ್ತಿದ ಹಂಗ ಆತು. ಅವರನ್ನು ಕೂಡಿಸಿ ಹಾಲನ್ನು ತಂದುಕೊಟ್ಟೆ. ಆಶ್ಚರ್ಯ ಕಾದಿತ್ತು. 'ಇದೇನು ತಾಯಿ ಹಾಲಿನ ಬಟ್ಟಲದಲ್ಲಿ ಶ್ರೀಕೃಷ್ಣ ಮೂರ್ತಿ' ಎಂದು ಮೃದುವಾಗಿ ನಕ್ಕರು. ಹಾಲಿನಲ್ಲಿ ಬಟ್ಟೆರಿಸಿ ನೋಡಿದೆ ಎಂಥಾ ಆಶ್ಚರ್ಯ! ಮುದ್ದಾದ ಶ್ರೀಕೃಷ್ಣಮೂರ್ತಿ! ನಾನು ಭಕ್ತಿಯಿಂದ ಉಬ್ಬಿಹೋದೆ. ಸ್ವಾಮೀ ಪಾದಾಮುಟ್ಟಿ ನಮಸ್ಕರಿಸಿದೆ.

ಸ್ವಾಮೀಜಿ ಆಶೀರ್ವದಿಸುತ್ತ "ತಾಯಿ ನಿನಗೆ ಶ್ರೀಕೃಷ್ಣನ ಅನುಗ್ರಹವಾಗಿದೆ.... ಆದರೆ" ಮುಂದೆ ಅವರು ಮಾತನಾಡಲಿಲ್ಲ. ಕಣ್ಣೀರು ತುಂಬಿತ್ತು. ನನಗೆ ಅದನ್ನು ನೋಡಿ ಆಶ್ಚರ್ಯವಾಯಿತು. "ಇದೇನು ಸ್ವಾಮೀಜಿ, ನಿಮ್ಮ ಕಣ್ಣಾಗ ನೀರು?"

ಎಂದು ಕೇಳಿದೆ.

"ಆಂಹಾಂ! ತಾಯಿ, ಅಲ್ನೋಡು ಆ ಮಡಕಿಯೊಳಗ ನೀರು ಇಟ್ಟೀಯಲ್ಲ, ಅದ್ರೊಳಗ ಏನ ಮೂಡೇದ?"

"ಸೂರ್ಯನ ಪ್ರತಿಬಿಂಬ."

"ಆ ಮಡಿಕಿ ಒಡೀತಂದ್ರ ಏನಾಗ್ತದ?"

"ನೀರು ಚೆಲ್ಲಿ ಹೋಗ್ತಾವ."

"ಅಲ್ಲೆ ಮೂಡಿದ್ದ ಪ್ರತಿಬಿಂಬ?"

"ಬಿಂಬದೊಳಗ ಹೋಗಿ ಸೇರಿಬಿಡ್ತದ."

"ತಾಯಿ.... ಹಂಗಽ ಈ ಜೀವರಾಶಿ ಎಲ್ಲಾ ಇವು ಪರಮಾತ್ಮನ ಪ್ರತಿಬಿಂಬ. ಈ ದೇಹ ನಾಶ ಆದಮ್ಯಾಲೆ, ಅವ್ನೊಳಗ ಹೋಗಿ ಸೇರ್ತಾವ; ಅದಕಽ..."

"ಅದಕ್ಕಽ..... ಅಂದ್ರ ಸ್ವಾಮೀಜಿ?"

"ಇನ್ನ ಎರಡು ತಿಂಗಳೊಳಗೆ ನಿನ್ನ ದೇಹಾ ನಶಿಸ್ತದಽ"

"ಅಂ! ಅಂದ್ರ...?"

"ಜುಲೈ ೩೦ರಂದು ನಿನಗೆ ಮರಣ ಸಂಭವಿಸ್ತದ."

ಗಂಭೀರವಾಗಿ ಸ್ವಾಮೀಜಿ ಹೇಳಿದ್ರು... ನನ್ಗ ಒಂದು ನಿಮಿಷ ಏನೂ ತೋಚಲಿಲ್ಲ. ಸ್ವಾಮೀಜಿ ಮಸಕು ಮಸಕಾಗಿ ಗೋಚರಿಸಿದ್ರು. ಸ್ವಾಮೀಜಿ ನನ್ನ ತಲೀಮ್ಯಾಲೆ ಕೈಯಿರಿಸಿ "ತಾಯೀ ನೀನು ಸಾಧ್ವೀಮಣಿ, ನೀನು ಬದ್ರಿಯಾತ್ರಾ ಮಾಡು; ಶ್ರೀಕೃಷ್ಣನ ಅನುಗ್ರಹವಾದರೂ ಆಗಬಹುದು. ಈ ಯಾತ್ರಾ ಕೈಕೊಂಡಾಗ, ನೀನು ಜುಲೈ ೩೦ರಂದು ಎಲ್ಲೇ ಇರು, ಆ ಬೆಳಗ್ಗೆ ಹಿಮರಾಶಿಯ ಮೇಲೆ ಶ್ರೀಕೃಷ್ಣನ ಮೂರ್ತಿ ಉದ್ಭವಿಸಿ ದರುಶನ ಕೊಟ್ರ ನೀನು ಜೀವಂತ ಉಳೀತಿ ನಿನಗ ಒಳ್ಳೇದಾಗಲಿ ನಾ ಬರ್ತೀನಿ..."

"ಸ್ವಾಮೀಜಿ ಹೊರಟೇ ಹೋದ್ರು ನಾನು 'ಸ್ವಾಮೀಜಿ ಸ್ವಾಮೀಜಿ' ಎಂದು ಕೂಗ್ತಾನೇ ಇದ್ದೆ. ಬಾಬಾ ಈಗ ಹೇಳ್ರೀ ನನ್ಗ ಶ್ರೀಕೃಷ್ಣಮೂರ್ತಿ ದರುಶನ ಆಗ್ತದಽ ಆ ಹಿಮದ ಗಡ್ಡೀಮ್ಯಾಲೆ?..."

ಪವಿತ್ರಾ ಬಳಿ ಸಾರಿ ದೈನ್ಯದಿಂದ ಕೇಳಿದಳು. ಸ್ವಲ್ಪ ಹೊತ್ತಿನ ನಂತರ ಬಾಬಾ ಹೇಳಿದ:

"ತಾಯಿ, ನಾಸಿಲ್ಲೆ ಬಂದು ಐವತ್ತು ವರುಷ ಆತು. ಜೀವನದೊಳಗ ಜುಗುಪ್ಸೆಗೊಂಡು ಇಲ್ಲಿಗೆ ಬಂದೆ. ದೇವರ ಸಾಕ್ಷಾತ್ಕಾರ ಹಂಬಲಿಸಿ ಹಿಮಾಲಯ ಎಲ್ಲಾ ಸುತ್ತಾಡಿದೆ; ನಿರರ್ಥಕ ಆತು. ಮಾನವತೆಯ ಸೇವಾದೊಳಗಽ ತೃಪ್ತಿ ಪಡದೀನಿ. ಇದಽ ಸಾಕ್ಷಾತ್ಕಾರಽ... ಏಳು...

ನಿನ್ನ ಮನಸ್ಸು ಆ ಸ್ವಾಮೀಜಿಯ ಮಾತಿನಿಂದ ಕದಡಿದ ಕೊಳಾ ಆಗೇದ. ಭಾವನೆಗಳು ಅಲ್ಲೋಲ ಕಲ್ಲೋಲ ಅಗ್ಯಾವ... ಅದ್ನ ಶಾಂತಗೊಳಸು. ಇದಽ ನನ್ನ ಆಶೀರ್ವಾದ."

ಬಾಬಾ ಪವಿತ್ರಾಳನ್ನು ಸಂತೈಸಿ ಹೊರಟುಹೋದ.

* * *

ನಂತರ, ನಾನು ಬಾಬಾನ ಬಳಿ ಹೋದಾಗ, ಬಾಬಾ ನನ್ನ ಬರುವಿಕೆಯನ್ನೇ ನಿರೀಕ್ಷಿಸತೊಡಗಿದ್ದ. ಪವಿತ್ರಾಳ ಮನಸ್ಸನ್ನು ಕದಡಿದ ಆ ಕಪಟ ಸನ್ಯಾಸಿ, ನಾನಿಲ್ಲದಾಗ ಮನೆಗೆ ಬಂದು ತನ್ನ ಜಾಲವನ್ನು ಬೀಸಿ, ನನ್ನ ಮೇಲೆ ಸೇಡು ತೀರಿಸಿಕೊಳ್ಳುವ ಹೀನ ವಿಚಾರವನ್ನು ವಿವರಿಸಿದೆ.

"ನಾನು ನಾಸ್ತಿಕ. ಆದ್ರ ಪವಿತ್ರಾಳ ಮುಗ್ಧನಂಬಿಕೆಗೆ ನಾನೆಂದೂ ಅಡ್ಡ ಬರಲಿಲ್ಲ. ಆದ್ರ... ಆ ಸ್ವಾಮೀಜಿ ನನ್ನ ಮನೀಗೆ ಬರೋದಕ್ಕಿಂತ ಮುಂಚೆ ನನ್ನ ಗೆಳೆಯನ ಮನ್ಯಾಗ ಭೆಟ್ಟಿಯಾಗಿದ್ದ. ಇಂಥ ಪ್ರಯೋಗ ನಡೆಸಿದ. ನಾನು ಉರಿದೆದ್ದೆ, 'ಸ್ವಾಮೀಜಿ, ಇದೆಲ್ಲ ನನ್ನ ಮುಂದೆ ನಡಿಯೋದಿಲ್ಲ. ನಾನು ಸತ್ಯದಿಂದ ನಡೀತೀನಿ, ನಾನು ಯಾರ ಕುತ್ತಿಗೀನೂ ಕೊಯ್ಯೋದಿಲ್ಲ, ಯಾರಿಗೂ ಮೋಸಾ ಮಾಡಿಲ್ಲ. ಯಾವ ಶಾಪಕ್ಕೂ ಹೆದರೋದಿಲ್ಲ. ನೋಡ್ತೀನಿ ನನ್ನ ಯಾರು ನಾಶ ಮಾಡ್ತಾರ? ಎಂದೆ. ಆ ಕಪಟ ಸನ್ಯಾಸಿ ಕೆರಳಿ ಇಂಥ ಹೀನಕೃತ್ಯಕ್ಕ ಇಳಿದಾ ನನ್ನ ಮುಗ್ಧ ಪವಿತ್ರಾನ್ನ ಉಳಸರೀ ಬಾಬಾಽ... ಅವತ್ತಿನಿಂದ ಪವಿತ್ರಾ ವಿಚಿತ್ರ ಆಗಿಬಿಟ್ಟಾಳಽ... ಡಾಕ್ಟರರಿಗೆ ತೋರಿಸಿದೆ, ಏನೂ ಪ್ರಯೋಜನ ಆಗಲಿಲ್ಲ. ಆಕೀ ಮನಸ್ಸು ನೋಯಸ ಬ್ಯಾಡ್ರಿ ಯಾತ್ರಾಕ್ಕ ಕರಕೊಂಡು ಹೋಗ್ರೀ ಅಂದ್ರು. ಬಾಬಾ ಈಗ ನೀವಽ..."

"ಅಶೋಕ, ಚಿಂತಿಸಬ್ಯಾಡಾ. ನಿನ್ನ ಸ್ಥೈರ್ಯ, ಆತ್ಮನಿಷ್ಠೆ ಪಾರಮಾಡ್ತದ."

ಬಾಬಾನ ಮಾತುಗಳು ನನಗೆ ಸಂಜೀವಿನಿಯಾದವು.

ರಾತ್ರಿ ಇಡೀ, ನಾನು ಪವಿತ್ರಾಳ ಮನಸ್ಸನ್ನು ಸ್ತಿಮಿತಕ್ಕೆ ತರಲು ಯತ್ನಿಸಿ, ಹಾಗೇ ನಿದ್ರೆಹೋಗಿದ್ದೆ. ಬೆಳಗು ಹರಿದು, ಆಶ್ರಮದ ಹಕ್ಕಿಪಕ್ಕಿಗಳ ಕಲರವ ನನ್ನನ್ನು ಎಚ್ಚರಿಸಿದಾಗ, ಎದ್ದು ನೋಡಿದೆ. ಬಳಿಯಲ್ಲಿ ಪವಿತ್ರಾ ಇರಲಿಲ್ಲ. ಗಾಬರಿಯಾಗಿ ಆಶ್ರಮವನ್ನೆಲ್ಲ ಸುತ್ತುಹಾಕಿದೆ.

ಇನ್ನೂ ನಸುಮಸಕು. ಪವಿತ್ರಾ ಎಲ್ಲಿ ಹೋಗಿರಬಹುದು? 'ಪವಿತ್ರಾ' ಪರ್ವತಗಳು ಪ್ರತಿಧ್ವನಿಸುವಂತೆ ಕೂಗಿದೆ. ಪ್ರತಿಯಾಗಿ ಹತ್ತಿರದಲ್ಲಿ ಹರಿಯುವ ನದಿಯ ದಡದಿಂದ ತರಂಗಗಳ ನಿನಾದದೊಂದಿಗೆ ಪವಿತ್ರಾಳ ಧ್ವನಿ ಕೇಳಿಸಿತು. ಓಡಿದೆ ಆ ಧ್ವನಿಯತ್ತ ಮೈ ಕೊರೆವ ಚಳಿಯಲ್ಲಿ ನದಿ ಭೋರ್ಗರೆಯತೊಡಗಿತ್ತು. ಬೆಣ್ಣೆಯ ಮುದ್ದೆಗಳಂತೆ ಗಡ್ಡೆ ಗಡ್ಡೆಯಾಗಿ ಮಂಜು ತೇಲತೊಡಗಿತ್ತು.

ಅಂಥ ಮಂಜಿನ ನೀರಲ್ಲಿ ಮೈತೊಳೆದುಕೊಳ್ಳಲು ಅನುವಾಗಿದ್ದಳು ಪವಿತ್ರಾ.

"ಪವಿತ್ರಾ, ಇದೇನು ನಿನ್ನ ಹುಚ್ಚು?"

ಎಳೆದುಕೊಂಡೆ.

"ಅಶೋಕ್... ನಾಡದು ನಾನು ಮೃತ್ಯುವಶಾ ಆಗ್ತೀನಿ, ಈ ಎರಡೂ ದಿವಸ ನದೀ ಸ್ನಾನಾಮಾಡಿ ಪೂಜಾ ಮಾಡ್ತೀನಿ."

"ಪವಿತ್ರಾ, ಇನ್ನೂ ನಿನ್ನ ಆರಾಮ ಆಗಿಲ್ಲ, ಏಳು ಆಶ್ರಮಕ್ಕ ಹೋಗೋಣ... ಈ ಛಳೀಯೊಳಗ..."

"ಮೃತ್ಯುವಿನ ಥಣ್ಣನ ಮೈ ಅಪ್ಪಿಕೊಳ್ಳಲಿಕ್ಕೆ ತಯಾರ ಆದ ನಾನು, ಇದಕ್ಯಾಕ ಅಂಜಬೇಕು... ಬಿಡು ನನ್ನ ಅಶೋಕ... ಸಾಯೋ ಮುಂದ ನನ್ನ ಆಶಾ ಈಡೇರಿಸಿಕೊಳ್ಳಲಿಕ್ಕೆ ಬಿಡು."

ಪವಿತ್ರಾ ನನ್ನ ಬಿಗಿ ಬಾಹುವಿನಲ್ಲಿ ಸಿಕ್ಕು ಬಿಕ್ಕಳಿಸಿದಳು. ನಾನು ಸಂತೈಸಿದೆ ಸಂತಯಿಸಿಯೇ ಸಂತೈಸಿದೆ.

* * *

ಇನ್ನ ಒಂದೇ ದಿನ... ನನ್ನ ಪವಿತ್ರಾನ್ನ ನಾ ಹ್ಯಾಂಗ ಉಳಿಸಿಕೊಳ್ಳಬೇಕು. ಮಂಬುಗಡ್ಡೆ ಪೂರ್ತಿ ನೀರಲ್ಲಿ ಕರಗಿಹೋದ ನಂತರ ದಾರಿಕಾಣದೆ ಹಾಗೇ ಆಶ್ರಮಕ್ಕೆ ಮರಳಿದೆ.

* * *

ಬಾಬಾ ಪವಿತ್ರಾಳ ಬಳಿ ಕುಳಿತಿದ್ದರು. ಸನ್ಯಾಸಿ ಜೀವನ ಸಾಗಿಸುತ್ತಿದ್ದ ಅವರ ಕರಳೂ ಕಿತ್ತಿ ಬಂದಿತ್ತು. ಹೇಗಾದರೂ ಪವಿತ್ರಾಳನ್ನು ಉಳಿಸಿಕೊಳ್ಳಬೇಕೆಂಬುದೇ ಅವರ ಸೆಣಸಾಟ.

"ನೀನು ಬದುಕುತ್ತೀ ಪವಿತ್ರಾ, ನನ್ನ ಮಗಳ್ನ ನಾ ಉಳಿಸಿಕೊಳ್ತೀನಿ"

ಎಂದರು ಸಂತೈಸುತ್ತ.

ಪವಿತ್ರಾಳ ಮನದಲ್ಲಿ ಅದೇ ಗುಂಗು ಅದೇ ಮಿಡಿತ.

"ಬಾಬಾ, ಹರಿದ್ವಾರದೊಳಗಽ ನನ್ಗ ಗೊತ್ತ ಆತು ನಾನು ಬದಕೋದಿಲ್ಲ ಅಂತ."

ಆ ನೆನಪುಗಳ ಸೆಳವಿನಲ್ಲಿ ತೇಲಿ ಹೋದಳು... ಹೌದು... ಮಾರ್ಗದರ್ಶಿ... ಉಸಿರತೊಡಗಿದ್ದ... ಇದು ಹರಿದ್ವಾರ!...

ಭಗೀರಥ, ತಾಯಿ ಗಂಗಾದೇವಿಯನ್ನು ಬಾನಿನಿಂದ ಭುವಿಗೆ ತಂದ. ಈಶ್ವರನ ದಯೆಯಿಂದ, ಈಶ್ವರನ ಜಟಾಜೂಟದಿಂದ ಅವತರಿಸಿದ ಗಂಗೆ ಮೊದಲು ಕಾಣಿಸಿಕೊಂಡದ್ದು ಹರಿದ್ವಾರ ಸ್ಥಳದಾಗಽ... ಹರಿದ್ವಾರವನ್ನ ಕೆಲವರು ಹರದ್ವಾರವೆಂತಲೂ, ಗಂಗಾದ್ವಾರವೆಂತಲೂ ಕರೀತಾರ... ಬದರಿಯಲ್ಲಿರೋ ಹರಿಯ ಕಡೆಗೆ ಇದು ದಾರಿ ತೋರಸೋದ್ರಿಂದ ಹರಿದ್ವಾರಾ ಅಂತಾರಽ...

ಹರಿದ್ವಾರದ ಗಂಗೆಯಲ್ಲಿ ಮಿಂದು ಪುನೀತರಾಗ ಬಯಸಿದ ಭಕ್ತವೃಂದ, ದಡದಲ್ಲಿ ಪ್ರವಾಹದಂತೆ ಸೇರಿತ್ತು. ಗಂಗಾ ಘಾಟಿನ ಪಾವಟಿಗೆಯ ಮೇಲೆ ಆತ್ಮಶ್ರಾದ್ಧದ ಮಂತ್ರ ಓತಪ್ರೋತವಾಗಿ ಹರಿಯತೊಡಗಿತ್ತು. ಅತ್ತಕಡೆ ದೃಷ್ಟಿ ಹರಿಸಿದ ಪವಿತ್ರಾ,

"ಇಲ್ಲೇ ನಮ್ಮ ಶ್ರಾದ್ಧ ನಾವು ಮಾಡಕೋಬಹುದಂತ, ನನ್ನ ಶ್ರಾದ್ಧಾ ಮಾಡಸ್ತೀರಾ ಅಶೋಕ" ಎಂದಳು.

ನಾನು ತಡವರಿಸಿ ಎದ್ದೆ "ಇದೇನು ಪವಿತ್ರಾ, ಇದೆಲ್ಲ ಏನು? ಹಿಂಗೆಲ್ಲ ಮಾತಾಡಿದ್ರ ಏನ ಹೇಳಬೇಕು?" ಎಂದು ಅವಳನ್ನು ಬರಸೆಳೆದುಕೊಂಡೆ.

ಅವಳು ಹಾಗೇ ತೆರೆಗಳನ್ನು ನೋಡುತ್ತಲೇ ಕೇಳಿದಳು "ನನ್ನ ಮನಸ್ಸಿಗೆ ತೃಪ್ತಿ ಕೊಡಬೇಕಾದ್ರ ಒಪ್ಪಿಕೊಳ್ತೀರಾ?"

ನಾನು ಅವಳ ಪ್ರಶ್ನೆಗೆ ನಿರುತ್ತರನಾದೆ.

ಪವಿತ್ರಾಳ ಆತ್ಮಶ್ರಾದ್ಧವೂ ಮುಗಿದುಹೋಯಿತು.

ಶ್ರಾದ್ಧಕಾರ್ಯ ಮುಗಿಯುವಷ್ಟರಲ್ಲಿ ಸೂರ್ಯನೂ ಅಸ್ತಂಗತವಾದ. ತೆರೆಗಳಲ್ಲಿ ಮುಳುಗುತ್ತಿದ್ದ ಅವನ ಪ್ರತಿಬಿಂಬವನ್ನೇ ನೋಡುತ್ತ ಕುಳಿತಿದ್ದೆ.

ಜನ ಗುಂಪುಗುಂಪಾಗಿ ಕರ್ಪೂರದಾರತಿಯನ್ನು ಪ್ರವಾಹದಲ್ಲಿ ತೇಲಿ ಬಿಡತೊಡಗಿದ್ದರು. ತೆರೆಗಳಲ್ಲಿ ಸಾಲು ಸಾಲಾಗಿ ತೇಲುವ ನಕ್ಷತ್ರಗಳಂತೆ ಗೋಚರಿಸಿತು. ತೆರೆಗಳ ಮೇಲಿನ ತೇಲುವ ದೀಪಗಳು, ಮುಳುಗುವ ದೀಪಗಳು ನನ್ನ ಮನದ ಹೊಯ್ದಾಟದ ಪ್ರತೀಕಗಳಾಗಿದ್ದವು. ಪವಿತ್ರಾ ನನ್ನ ಬಳಿ ಓಡಿಬಂದು ಹೇಳಿದಳು:

"ಅಶೋಕ, ಆ ದೀಪಾ ತೇಲಿಬಿಟ್ಟಾರಲ್ಲ, ಅವು ಸರಾಗವಾಗಿ ತೇಲೀದ್ರ ನಮ್ಮ ಆಶಾ ಈಡೇರ್ತದ, ಇಲ್ಲಾ ಅಂದ್ರ... ಇರಲಿ, ನಾನೂ ನನ್ನ ಮನಸ್ಸಿನ ಇಂಗಿತ ಪರೀಕ್ಷಿಸಬೇಕು ಅಂತೀನಿ..."

"ನಿನ್ನ ಮನಸ್ಸಿಗೆ ಬಂದಹಂಗ ಮಾಡು"

ಅಷ್ಟೇ ನಾನು ಹೇಳಿದ್ದು.

ಪವಿತ್ರಾನೂ ಕರ್ಪೂರದಾರತಿ ತೇಲಿಬಿಟ್ಟಳು. ಸ್ವಲ್ಪ ಹೊತ್ತು ಸರಾಗವಾಗಿ ಸಾಗಿದ್ದ ದೀಪ ಮುಳುಗಿಹೋಯಿತು. ಅವಳ ಮುಖದ ಕಡೆಗೆ ನೋಡಿದೆ, ಕಳೆಗುಂದಿತ್ತು.

"ನಾ ಸಾಯ್ತೀನಿ... ನಾ ಸಾಯ್ತೀನಿ..." ...ಅವೇ ಮಾತುಗಳನ್ನು ಅವೇ ದೃಶ್ಯಗಳನ್ನು ಪವಿತ್ರಾ ಬಾಬಾನ ಮುಂದೆ ಬಡಬಡಿಸಿದಳು. ಬಾಬಾಗೆ ಏನೂ ತೋಚದಾಗಿ 'ಶ್ರೀಹರೀ ಶ್ರೀಹರೀ' ಎನ್ನುತ್ತ ಹೊರಟುಹೋದ.

* * *

ಹೌದು! ಅದು ಭಯಾನಕ ಕರಾಳ ರಾತ್ರಿ. ಆಶ್ರಮದ ಸುತ್ತಲಿನ ದಟ್ಟ ಅರಣ್ಯ ಮೈಚಾಚಿ ಚಾಚಿ ಕಬಳಿಸಲು ಬರುತ್ತಿದ್ದಂತೆ ಭಾಸವಾಯಿತು.

'ಚಾರ್‌ಪಾಯಿ' ಮೇಲೆ ಬಿಡುಗಣ್ಣಿನಿಂದ ಮಲಗಿದ್ದ ಪವಿತ್ರಾಳನ್ನು ನೋಡಿದಾಗ ನನ್ನ ಕರುಳು ಕತ್ತರಿಸಿ ಬಂತು. ಜೀವಂತ ಶವದಂತೆ ಮಲಗಿದ್ದಳು. ಕಣ್ಣುಗಳು ಇಂಗಿಹೋಗಿದ್ದವು. ಅವಳು ಏನೇನೋ ಬಡಬಡಿಸತೊಡಗಿದ್ದಳು.

"ಹಾದು, ಯಮದೇವ ನನ್ನ ಕಡೆ ಮೃತ್ಯುಪಾಶಾ ಬೀಸ್ತಾನ... ಇದು ನನ್ನ ಕಡೇ ರಾತ್ರಿ... ನನ್ನ..."

ನಾನು ಎಷ್ಟು ಮಾತಾಡಿಸಿದರೂ ಅವಳ ಚಿತ್ತ ಈ ಕಡೆ ಇರಲೇ ಇಲ್ಲ. ಬರೀ ನೀಳ ತೋಳುಗಳನ್ನು ಚಾಚಿದ ಮೃತ್ಯುವೇ ಅವಳೆದುರು.

ನನಗೇನೂ ತೋಚದಾಯಿತು. ಆಶ್ರಮದಲ್ಲಿ ಬಾಬಾ ಕೂಡ ಕಾಣಿಸಲಿಲ್ಲ... "ಪವಿತ್ರಾನ್ನ ನಾ ಹ್ಯಾಂಗ ಉಳಿಸಿಕೊಳ್ಳಲಿ? ಈ ಕರಾಳ ರಾತ್ರಿಯೊಳಗ ಯಾರ್ನ ಮೊರೆಹೋಗಲಿ? ಖರೇವಂದ್ರ ನಾನು ನಾಶಾಗಿ ಹೋಗ್ತೀನಾ? ದೇವರು ಇದ್ದಾನೋ?... ಇದೆಲ್ಲ ಏನು?"

ಕಿಟಕಿ ಬಳಿ ಹೋದೆ. ಬಾಗಿಲು ತೆರೆದೆ. ಮೆಲುವಾಗಿ ಕೇಳಿಸುತ್ತಿದ್ದ ಆಶ್ರಮದ ಭಜನೆ ನುಗ್ಗಿ ಬಂತು.

"ಆಂ!... ಛೆ... ಛೆ... ನಾನು ಇಷ್ಟು ಅಳುಕು ಮನಸ್ಸಿನವನಾಗಬೇಕs?... ನನ್ನ ನಂಬಿಕೀ ಒಳಗ ಅಪನಂಬಿಕಿ ತಾಳಬೇಕs... ಒಂದು ವ್ಯಾಳ್ಯಾ ನಾನು ಪ್ರಾರ್ಥನಾ ಮಾಡಿದ್ರ ಪವಿತ್ರಾ ಬದುಕಬಹುದಾ?... ಹೌದು, ನಾನು ಸೋಲ್ತೀನಿ... ನಾನು ಶ್ರೀಕೃಷ್ಣನ್ನ ಪ್ರಾರ್ಥಿಸ್ತೀನಿ... ಆ ಗುಂಪಿನ್ಯಾಗ ನಾನೂ ಸೇರ್ತೀನಿ ನನ್ನ ಪವಿತ್ರಾ ನನ್ಗ ಉಳಿದ್ರ ಸಾಕು." ನಾನು ದಡಾರನೆ ಬಾಗಿಲು ತೆಗೆದುಕೊಂಡು ಓಡಿಹೋಗಿ ಭಜನೆಯ ಮೇಳದಲ್ಲಿ ಸೇರಿ ತಲ್ಲೀನನಾದೆ.

ಪವಿತ್ರಾ ಮೆಲ್ಲನೆ ಎದ್ದು ನಾನು ಓಡಿದ ಕಡೆಗೇ ನೋಡಿದಳು. ಅವಳ ಮನ ಮಿಡಿಯಿತು. ಭಜನೆಯ ಮೇಳದಲ್ಲಿ ನನ್ನನ್ನು ಕಂಡು ತನ್ನ ಕಣ್ಣುಗಳನ್ನೂ ನಂಬದಾದಳು.

"ಪಾಪಾ! ನಾನು ಅಶೋಕನ ಮನಸ್ಸು ಎಷ್ಟೊಂದು ನೋಯಿಸಲಿಕ್ಕೆ ಹತ್ತೀನಿ. ಬೆಳಗ ಹರ್‍ಯೋವರೆಗೂ ಶ್ರೀಕೃಷ್ಣನ್ನ ಪ್ರಾರ್ಥಿಸ್ತೀನಿ ಬೆಳಗಾದಾಗ ಕಿಟಕಿ ತಗದು ನೋಡ್ತೀನಿ. ಶ್ರೀಕೃಷ್ಣಮೂರ್ತಿ ಆ ಹಿಮಗಡ್ಡೆ ಮೇಲ ಅವಿರ್ಭವಿಸಿದ್ದರ ಕಣ್ತುಂಬ ನೋಡಿ ಬದುಕತೀನಿ ಇಲ್ಲಾ, ಇಲ್ಲೆ ನನ್ನ ಜೀವಾ ಬಿಡ್ತೀನಿ."

ಪವಿತ್ರಾ ಗುಣುಗುಡುತ್ತಲೇ 'ಚಾರ್‌ಪಾಯ್' ಮೇಲೆ ಕುಸಿದಳು. ಕಸಿವಿಸಿ, ಕನವರಿಕೆ, ನಾನಾ ತರಹದ ಆಲಾಪಗಳು. ಕಣ್ಮುಂದೆ ಸುತ್ತುವ ಗೋಲಾಕಾರಗಳು...

ಬೆಳಗು ಹರಿಯಿತು. ಆಶ್ರಮದ ಪಕ್ಷಿಗಳು ಉದಯರಾಗ ಹಾಡಿ, ಅವಳ ಮುಗ್ಧ ಚೇತನವನ್ನು ಎಚ್ಚರಿಸಿದವು.

ಚಟ್ಟನೆ ಸಿಡಿದೆದ್ದು ಕಿಡಿಕಿ ಬಾಗಿಲು ತೆರೆದು ನೋಡುತ್ತಾಳೆ ಬಂಗಾರದ ಕಿರಣಗಳಿಂದ ಥಳಥಳಿಸುವ ಹಿಮದ ಗಡ್ಡೆಯಲ್ಲಿ ಶ್ರೀಕೃಷ್ಣನ ಸುಂದರ ಮೂರ್ತಿ ಉದ್ಭವಿಸಿದೆ.

"ಅಶೋಕ, ನಾ ಬದುಕಿದೆ, ನಾ ಬದುಕಿದೆ!"

ಪವಿತ್ರಾಳ ದನಿ ಕೇಳಿ ಬೆಳ್ಳಂಬೆಳಗು ನಡೆದ ಭಜನೆಯ ಗುಂಗಿನಿಂದ ಎಚ್ಚತ್ತೆ.

ಓಡಿ ಬಂದು ಕಿಟಕಿಯಲ್ಲಿ ನೋಡಿದೆ. ಪರಮಾಶ್ಚರ್ಯ ಕಾದಿತ್ತು. ಆ ಸುಂದರ ಮೂರ್ತಿ ನನ್ನ ಹೃದಯವನ್ನೇ ಸೂರೆಗೊಂಡಿತು. ಪವಿತ್ರಾಳನ್ನು ಬಿಗಿದಪ್ಪಿಕೊಂಡೆ. ಅವಳ ಕಾಯಿಲೆ

ಎಲ್ಲಾ ಪೂರ್ತಿ ಮಾಯವಾಗಿ ಹೋಗಿತ್ತು. ನಾನಾ ಬಾಬಾನ ಕೋಣೆಯ ಕಡೆಗೆ ಓಡಿದೆ. 'ಬಾಬಾ ನನ್ನ ಪವಿತ್ರಾ ಬದುಕಿದಳು' ಎಂದು ಕೂಗಿದೆ.

ಬಾಬಾನ ಶಿಷ್ಯ ಆನಂದ ಎದುರಿಗೆ ಬಂದ; ಅವನನ್ನೂ ತಬ್ಬಿಕೊಂಡು ಹೇಳಿದೆ:

"ಆನಂದ, ಪವಿತ್ರಾ ಬದುಕಿದಳು. ಬಾಬಾ ಎಲ್ಲಿ? ರಾತ್ರೆಯೆಲ್ಲಾ ಕಾಣಿಸಲೇ ಇಲ್ಲ!"

ಪವಿತ್ರಾನೂ ಕಾತರದ ದನಿಗೂಡಿಸಿದಳು

"ಬರ್ರೀ, ಇಲ್ಲೇ ತೋರಸ್ತೀನಿ ಬಾಬಾನ್ನ"

ಎಂದಷ್ಟೇ ಆನಂದ ಉಸಿರಿದ್ದು.

ನಾನು, ಪವಿತ್ರಾ ಅವನನ್ನು ಹಿಂಬಾಲಿಸಿದೆವು. ಆಶ್ರಮದ ಹಿಂಬಾಗಿಲಿನಿಂದ ಶ್ರೀಕೃಷ್ಣ ಮೂರ್ತಿ ಉದ್ಭವಿಸಿದ ಎತ್ತರದ ಹಿಮದ ಗಡ್ಡೆಯತ್ತ ಬಂದೆವು.

"ಪವಿತ್ರಾ, ಶ್ರೀ ಕೃಷ್ಣಮೂರ್ತಿ ಉದ್ಭವಿಸ್ತಲ್ಲ... ಇಲ್ಲೆ ನೋಡ್ರಿ... ಇಲ್ಲೆ ಈ ಹಿಮದಗಡ್ಡೆ ಓಂದs..." ಎಂದು ಆನಂದ ಉಸಿರುಗಟ್ಟಿದ ಧ್ವನಿಯಲ್ಲಿ ಹೇಳಿದ.

ನಾವಿಬ್ಬರೂ ಆಚೆ ಬಾಗಿ ನೋಡಿದಾಗ ನಮ್ಮ ಎದೆಗೆ ಯಾರೋ ಜೋರಾಗಿ ಗುದ್ದಿದಂತಾಯಿತು. ಬಾಬಾನ ಹೆಣ ಸೆಟೆದು ತಗ್ಗಿನಲ್ಲಿ ಹೂತುಹೋಗಿತ್ತು.

"ಬಾಬಾ..." ಪವಿತ್ರಾ ಜೋರಾಗಿ ಕಿರುಚಿದಳು. ನಾನು ಅವಳನ್ನ ನನ್ನ ಬಾಹುಗಳಲ್ಲಿ ಹಿಡಿದುಕೊಂಡೆ.

"ಪವಿತ್ರಾ, ಬಾಬಾ ಮಹಾನ್ ಜೀವಿ ಮಹಾಕಲಾವಿದ. ನಿನ್ನ ಜೀವಾ ಉಳಸಲಿಕ್ಕೆ..."

ಆನಂದ ತಡವರಿಸಿದ.

"ಹೇಳು ಆನಂದ ಏನಾತು ಬಾಬಾಗ?"

ಪವಿತ್ರಾ ಬಿಕ್ಕಳಿಸುತ್ತಾ ಕೇಳಿದಳು.

ಆನಂದ ಉಸಿರಿದ ಉಸಿರುಗಟ್ಟುವ ಕಥೆ:

"ನಿನ್ನೆ ರಾತ್ರಿ ಬಾಬಾ ನನ್ನ ಬಳಿ ಬಂದರು. ಅವರ ತೇಜಸ್ವೀ ಮುಖದಲ್ಲಿ ದೃಢ ನಿರ್ಧಾರದ ಬಿಗು ಮೂಡಿತ್ತು."

"ಆನಂದ, ನಾ ಹೆಂಗರ ಮಾಡಿ ಪವಿತ್ರಾಳ ಜೀವಾ ಈ ರಾತ್ರಿ ಉಳಿಸಲಿಕ್ಕೇ ಬೇಕು ಶಿಲ್ಪದೊಳಗೆ ಜೀವಾ ತುಂಬೋ ನಾನು, ಪವಿತ್ರಾನೊಳಗೆ ಜೀವಾ ತುಂಬಬೇಕು."

"ಅಂದ್ರ ಬಾಬಾ..."

"ಐವತ್ತು ವರುಷದ ಹಿಂದ ನಾ ಅಪೂರ್ಣ ಮಾಡಿ ಬಿಟ್ಟೆನಲ್ಲ ಈ ಕೃಷ್ಣನ ಶಿಲ್ಪ ಪೂರ್ತಿ ಮಾಡ್ತೀನಿ"

"ಆಮ್ಯಾಲೆ?"

"ರಾತ್ರೆಯೆಲ್ಲಾ ಆ ದಿನ್ನಿ ಹಿಂದಿನಿಂದ ಕಡಿದು ಅದ್ರೊಳಗ ಹೋಗಿ ಈ ಶಿಲ್ಪ ಮ್ಯಾಲಕ್ಕ ತೂರ್ತೀನಿ ಇದು ಹಿಮದೊಳಗಽ ಉದ್ಭವಿಸಿದ್ಹಂಗ ನನ್ನ ಪವಿತ್ರಾಗ ಕಾಣಸಬೇಕು... ಇದು

ನನ್ನ ಅಮರ ಕಲಾಕೃತಿ. ಮೂರ್ತಿಯೊಳಗ ಜೀವಾ ತುಂಬ್ತೀನಿ ಪವಿತ್ರಾನೊಳಗ ಸಂಜೀವಿನಿ ತುಂಬತೀನಿ."

"ಇದೇನು ಬಾಬಾ ಈ ಹಿಮಪಾತದೊಳಗ ಈ ಕೆಲಸಾ ಮಾಡ್ತೀರಾ? ನಿಮ್ಮ ಆರೋಗ್ಯ ಸರೀ ಇಲ್ಲಾ ಬೆಳಗು ಹರಿಯೋದ್ರೊಳಗೆ ನೀವು ಹಿಮದೊಳಗ ಹೂತುಹೋಗ್ತೀರಿ... ನಾನೂ ನಿಮ್ಮ ಜೋಡಿ ಬರ್ತೀನಿ."

"ಬ್ಯಾಡಾ ಆನಂದ! ನನ್ನ ಆಜ್ಞಾ... ಇದ್ನ ಯಾರ ಮುಂದೂ ಹೇಳಬೇಡಾ ರಾತ್ರೆಯೆಲ್ಲ ಆಶ್ರಮದೊಳಗ ಭಜನೆ ನಡೀಲಿ..."

ಎಂದ ಬಾಬಾ ತಮ್ಮ ಅಪೂರ್ಣ ಕೃತಿಯನ್ನು ಪೆಟ್ಟಿಗೆಯಿಂದ ಹೊರತೆಗೆದು ಕತ್ತಲಲ್ಲಿ ಕಣ್ಮರೆಯಾದರು.

ನಾನು ನಿಸ್ಸಹಾಯಕನಾಗಿ ಹಾಗೇ ಇಡೀ ರಾತ್ರಿ ಕಳೆದೆ. ಆ ಹಿಮದ ಗಡ್ಡೆ ಅಗೆಯುತ್ತ, ಅದರೊಡನೆ ಸೆಣಸಾಡುವ ಬಾಬಾನ ಧ್ವನಿ ಕೇಳಿ ಮರುಗಿದೆ. ಏನೂ ಮಾಡದವನಾಗಿ, ಹತಾಶನಾಗಿ ಹಾಗೇ ಉರುಳಿದೆ. ಬೆಳಗಾದ ಮೇಲೆ ಓಡಿ ಹೋಗಿ ನೋಡಿದೆ. ಕೃಷ್ಣಮೂರ್ತಿ ಉದ್ಭವಿಸಿತ್ತು. ಆದರೆ ಬಾಬಾನ ದೇಹ ಹಿಮದಲ್ಲಿ ಸೆಟೆದು ಬಿದ್ದಿತ್ತು. ಇದೋ, ಇದೇ ದೇಹ ಪವಿತ್ರಾ, ನಿನ್ನ ಜೀವಾ ಉಳಿಸಲಿಕ್ಕೆ ತನ್ನನ್ನೇ ಅರ್ಪಿಸಿಕೊಂಡಿದ್ದು" ಆನಂದನ ಮಾತು ನಿಂತುಹೋಯಿತು.

ಪವಿತ್ರಾಳಿಗೆ ದುಃಖ ಉಮ್ಮಳಿಸಿ ಬಂತು. 'ಬಾಬಾ ಬಾಬಾ' ಎಂದು ಬಿಕ್ಕಳಿಸುತ್ತ ಶವದ ಮೇಲೆ ಉರುಳಿದವು. "ಬಾಬಾ ಇದೇನ ಮಾಡಿದ್ರೀ ನನ್ನ ಮೂರ್ಖತನಕ್ಕೆ ನೀವು ಬಲಿ ಆದ್ರಿ... ಬಾಬಾ..."

ನಾನು ಮೆಲ್ಲಗೆ ಅವಳ ಬಳಿ ಹೋಗಿ, "ಏಳು ಪವಿತ್ರಾ, ಬಾಬಾ ಮಹಾನ್ ಆತ್ಮ... ದೇವರು ಮತ್ಯಾರೂ ಅಲ್ಲ ನಿನ್ನ ಜೀವಕ್ಕ ಹೊಸ ತಿರುವು ಕೊಟ್ಟ ಈ ದಿವ್ಯಚೇತಿ."

ನಾವಿಬ್ಬರೂ ದಿಟ್ಟಿಸಿ ಬಾಬಾನ ಮುಖ ನೋಡಿದೆವು. ಅದೇ ತೇಜಸ್ಸು ಅದೇ ಮಾಸದ ಮಂದಹಾಸ...

# ೬. ನೆಲಗಟ್ಟು

ಸುನೀತಳ ಮನದ ತುಂಬ ಕತ್ತಲು ಆವರಿಸಿತ್ತು. ಅದರ ನೆಲಗಟ್ಟನ್ನು ಯೋಚಿಸಿದಷ್ಟೂ, ಅರ್ಥೈಸಿಕೊಂಡಷ್ಟೂ ಅಸ್ಥಿರಳಾಗುತ್ತಿದ್ದಳು. ಬೆಳಕನ್ನು ಅರಸಿಕೊಂಡು ಹೋಗಲು ಯತ್ನಿಸಿದರೆ, ಆ ಘಟನೆ ಮಿಂಚಿನಂತೆ ಝಳಪಿಸಿ, ನೆನಪುಗಳು ಗುಡುಗಿನಂತೆ ಅಬ್ಬರಿಸಿ ಅಪ್ಪಳಿಸುತ್ತಿದ್ದವು. ಮತ್ತೆ ಗಟ್ಟಿಯಾಗಿ ಕಣ್ಣು ಮುಚ್ಚಿ ಚೀರಬೇಕೆನ್ನಿಸುತ್ತಿತ್ತು ಅವಳಿಗೆ. ಆದರೆ ಆ ಧ್ವನಿ ಗಂಟಲಲ್ಲೆ ಹುದುಗಿಹೋಗುತ್ತಿತ್ತು.

ಸುನೀತಾ ರಂಗಣ್ಣರವರ ಏಕಮಾತ್ರ ಪುತ್ರಿ. ದುಂಡನೆಯ ಮುಖದಲ್ಲಿ ಮಾದಕ ಸೂಸುವ ಅರಳಿದ ಕಂಗಳು. ಭುಜವನ್ನಷ್ಟೇ ಮುತ್ತುವ ಅಚ್ಚುಕಟ್ಟಾಗಿ ಕತ್ತರಿಸಿದ ಕಪ್ಪು ಕೂದಲ ಸಿರಿ. ಕೆಂಪು ಮೈ ಬಣ್ಣ. ವಯಸ್ಸಿಗೆ ಮೀರಿದ ಅಂಗಸೌಷ್ಠವ. ಮಿನಿ ಉಡುಪಿನಲ್ಲಿ ಸದಾ ಅವಳು ಇನ್ನಷ್ಟು ಮಿನುಗುತ್ತಿದ್ದಳು. ಕಾಲೇಜಿನಲ್ಲಿ ಬೆಡಗಿನ ರಾಣಿಯಾಗಿದ್ದಳು. ಆಟಗಳಲ್ಲಿ ತುಂಬ ಮುಂದು. ಬ್ಯಾಟ್‌ಮೆಂಟನ್ ಚಾಂಪಿಯನ್. ಗೆಳತಿಯರಿಗಿಂತ ಗೆಳೆಯರೇ ಅವಳ ಸುತ್ತ ಹೆಚ್ಚು ಸುತ್ತುತ್ತಿದ್ದರು.

ಸದಾಶಿವನಗರದಲ್ಲಿ ರಂಗಣ್ಣನವರದ್ದು ಭವ್ಯ ಬಂಗಲೆ. ಅವರೊಬ್ಬ ಶ್ರೀಮಂತ ಉದ್ಯಮಿ. ಅವರ ಧರ್ಮಪತ್ನಿ ಚೆಲುವಮ್ಮನವರನ್ನು ನೋಡಿದಾಗ ಅವರ ವ್ಯಕ್ತಿತ್ವದ ಅರಿವು ಢಾಳವಾಗಿ ಕಣ್ಣಿಗೆ ಕಟ್ಟುತ್ತಿತ್ತು. ದಪ್ಪನೆಯ ಎತ್ತರದ ನಿಲುವು, ಸದಾ ರೇಶ್ಮೆಸೀರೆ, ಸ್ಲೀವ್‌ಲೆಸ್ ಬ್ಲೌಜ್ ಅಲಂಕರಣ, ಬಾಬ್‌ಕಟ್, ಲಿಪ್‌ಸ್ಟಿಕ್, ಕಪ್ಪು ಕನ್ನಡಕ ಅವರಲ್ಲಿ ಎದ್ದು ಕಾಣುವ ಅಂಶಗಳು. ಮಹಿಳಾ ಸಮಾಜದ ಅಧ್ಯಕ್ಷೆ. ಸದಾ ತನ್ನನ್ನು, ತನ್ನ ಐಶ್ವರ್ಯವನ್ನು ಹೊಗಳಬೇಕು ಎನ್ನುವುದೇ ಅವಳ ಆಸೆ. ತನ್ನ ಪ್ರತಿಷ್ಠೆಗೆ ಮುಕ್ಕುಬರಬಾರದು. ಗರ್ವವೇ ಮೈವೆತ್ತಂತಿದ್ದಳು.

ಮನೆಯ ಹೊರಗಿನ ಚಟುವಟಿಕೆಗಳಲ್ಲಿ ಪತ್ನಿ ಮುಂದೊ, ಮಗಳು ಮುಂದೊ ರಂಗಣ್ಣನವರಿಗೆ ಅರ್ಥವೇ ಆಗುತ್ತಿರಲಿಲ್ಲ. ಇಬ್ಬರೂ ಸ್ಪರ್ಧೆಯಲ್ಲಿ ಮುಳುಗಿದ್ದರು.

ಸುನೀತಾ ಕಾಲೇಜಿನ ನಾಟಕ, ನೃತ್ಯ, ಆಟಗಳಲ್ಲಿ ನಿರತಳಾಗಿ ಸದಾ ಮನೆಗೆ ತಡವಾಗಿ ಬರುವುದು ರಂಗಣ್ಣನವರಿಗೆ ಎಳ್ಳಷ್ಟು ಸರಿ ಕಾಣುತ್ತಿರಲಿಲ್ಲ. ಅವಳ ಈ ವರ್ತನೆ ಅವರ ಮನದಲ್ಲಿ ಅಳುಕನ್ನುಂಟುಮಾಡುತ್ತಿತ್ತು. ಆದರೆ ತಾಯಿ ಪ್ರೋತ್ಸಾಹದ ನೀರು ಎರೆಯುತ್ತಿದ್ದಾಗ ಸುಮ್ಮನಾಗಬೇಕಾಯಿತು.

ಅಂದು ಸುನೀತಾ ಮಹಡಿಯ ತನ್ನ ಕೋಣೆಯಲ್ಲಿ ಅಲಂಕಾರ ಮಾಡಿಕೊಳ್ಳುತ್ತ, ಗುನುಗುಡು ತೊಡಗಿದ್ದಳು. ಚೆಲುವಮ್ಮ ಸಮಾಜ ಕಾರ್ಯಕ್ಕೆ ಹೋಗಲು ಅಣಿಯಾಗಿದ್ದರು.

ಕಾಲ್‌ಬೆಲ್ ಆಗುತ್ತಿದ್ದಂತೆ ಆಳು ಬಾಗಿಲು ತೆರೆದ. "ಸುನೀತಾ ಇದ್ದಾರೆಯೇ?" ಬಾಗಿಲು ಬಳಿಯೇ ನಿಂತು ಇಬ್ಬರು ಯುವಕರು ಕೇಳಿದರು. ಆಳು ಉತ್ತರಿಸಬೇಕೆನ್ನುವಷ್ಟರಲ್ಲಿ ಹೊರಗೆ ಎದ್ದು ಬಂದ ರಂಗಣ್ಣನವರು "ಯಾಕೆ ಏನು ಬೇಕಿತ್ತು?" ಎಂದು ಕೇಳಿದಾಗ ಆ ಯುವಕರು ನಮಸ್ಕಾರಿಸಿ "ಅಂಕಲ್ ಇವತ್ತು ಬ್ಯಾಡ್‌ಮೆಂಟಿನ್ ಫೈನಲ್ ಇದೆ. ನಮಗೆ ನೆನಪಿಸಲು ಹೇಳಿದ್ದಳು" ಎಂದರು.

ಮಹಡಿಯ ಮೆಟ್ಟಿಲಿಳಿದು ಬಂದ ಸುನೀತಾ, ಗೆಳೆಯರನ್ನು ಕಂಡು "ಹಾಯ್! ಯಾವಾಗ ಬಂದಿರಿ ಬನ್ನಿ ಒಳಗೆ " ಎನ್ನುತ್ತ ಸ್ವಾಗತ ಕೋರಿದಳು.

ಅಲ್ಲಿಯೇ ಇದ್ದ ಸೋಫಾದ ಮೇಲೆ ಆ ಇಬ್ಬರೂ ಯುವಕರು ಕುಳಿತುಕೊಳ್ಳುತ್ತ "ಈಗ ತಾನೆ ಬಂದಾಯ್ತು. ನೀನು ಹೇಳಿದ್ದೆಯಲ್ಲಾ ನೆನಪಿಸಿ ಅಂತಾ, ಇವತ್ತು ಸಾಯಂಕಾಲ ಬ್ಯಾಡಮೆಂಟಿನ್ ಫೈನಲ್ಸ್ ಮಿಕ್ಸಡ್ ಡಬಲ್ಸ್ ಇದೆ" ಎಂದರು.

"ಛೆ! ಹೌದಲ್ಲ! ಮರತೇಹೋಗಿತ್ತು Thanks."

"ಮತ್ತೆ ಮರೀಬೇಡಾ ಬರಬೇಕು!"

"ಓಕೆ ಬರ್ತೇನೆ. Dont worry!"

"ಬರ್ತೇನೆ ಹಾಗಾದ್ರೆ..."

"ಓ, ಕೆ, ಬಾಯ್."

ಯುವಕರು ಹೊರಟುಹೋದರು. ರಂಗಣ್ಣನವರು ಮಗಳನ್ನೇ ದಿಟ್ಟಿಸಿ ನೋಡ ತೊಡಗಿದರು.

"ಇದೇನು ಡ್ಯಾಡಿ ಹೀಗೆ ನೋಡ್ತೀರಾ, ಏನಾಯ್ತು...?"

"ನೋಡಮ್ಮ ಸುನೀತಾ, ಈಗ ನೀನು ದೊಡ್ಡವಳು ಆಗಿದ್ದೀಯಾ. ಈ ರೀತಿ ಆಡಿದರೆ ಜನ ಏನು ಅಂದುಕೊಳ್ಳುತ್ತಾರೆ ಗೊತ್ತೆ..."

"ಗಂಡುಬೀರಿ ಅನ್ನಬಹುದು. ಅನ್ನೋರು ಅನ್ನಲಿ ಬಿಡಿ. ಓಕೆ ಡ್ಯಾಡಿ..."

ಬ್ಯಾಗ್ ತೂರಾಡಿಸುತ್ತ ಹೊರಟೇ ಬಿಟ್ಟಳು.

ಚಲುವಮ್ಮ ಪತಿಯ ಬಳಿ ಬಂದು ಕುಳಿತು, "ಏನದು, ಮಗುವಿಗೆ ಹಾಗಂತೀರಾ...?" ಎಂದು ತೀಕ್ಷ್ಣವಾಗಿ ನೋಡಿದಳು.

"ನಿನ್ನ ಸವಾರಿಯು ಸಿದ್ಧವಾಗಿದೆಯೇ? ಅಲ್ವೆ ಸುನೀಗೆ ನೀನಾದರೂ ಬುದ್ಧಿ ಹೇಳಬೇಡವೆ? ನೀನೇನು ಹೇಳುತ್ತೀಯಾ ಬಿಡು, ಅವಳಿಗಿಂತ ಮೀರಿದವಳು ನೀನು..."

"ಏನ್ರಿ ನೀವು ಅಂತಾ ಇರೋದು.?"

"ಸುನೀಗೆ ಬೇಗ ಮದ್ವೆ ಮಾಡಿಬಿಡೋಣ. ನೋಡ್ತಾ ಗಂಡುಹುಡುಗರ ಜೊತೆಗೆ ಹೇಗೆ ತಿರಗಾಡುತ್ತಾಳೆ."

"ನನ್ನೊಂದು ಬೇಗ ಗಂಟು ಹಾಕಿಕೊಂಡಿದ್ದೀರಾ! ಇನ್ನು ಸುನೀಗೂ ಆ ಅವಸ್ಥೆ ತರಬೇಕು ಅಂತೀರಾ! ಅವಳಿಗೆ ತನ್ನ ಜವಾಬ್ದಾರಿ ಗೊತ್ತಿದೆ. ಏನೂ ಚಿಂತಿಸಬೇಡಿ. ನನಗೆ ಗೊತ್ತು ಅವಳೇನು ಅಂತಾ, ತಿಳೀತೆ!..."

ಚೆಲುವಮ್ಮ ಗಂಡನಿಗೇ ಬುದ್ಧಿವಾದ ಹೇಳಿ ಸಮಾಜಕ್ಕೆ ಹೊರಟುಹೋದರು...

ಸುನೀತ ಬರೀ ಅಂದಗಾತಿ ಅಷ್ಟೇ ಅಲ್ಲ; ತುಂಬಾ ಮಾತುಗಾರ್ತಿ. ಮಾತನಾಡಲು ಪ್ರಾರಂಭಿಸಿದರೆ ಅರಳು ಹುರಿದಂತೆ ಮಾತಾಡುತ್ತಿದ್ದಳು. ಅವಳು ಬಂದಳೆಂದರೆ ಕಾಲೇಜಿನಲ್ಲಿ ಗಂಡು ಹುಡುಗರೇ ದಾರಿ ಬಿಟ್ಟು, ಆಚೆ ಸರಿಯುತ್ತಿದ್ದರು. ಆದರೆ, "ಅವಳು ಹೇಗೆ ಎದೆಯುಬ್ಬಿಸಿಕೊಂಡು ಹೋಗುತ್ತಾಳೆ ನೋಡೋ" ಎಂದು ದೂರದಿಂದಲೇ ಕಸಿವಿಸಿ ನಗುತ್ತಿದ್ದರು. ಸಂಗೀತಾ ತುಂಬಾ 'ಫ್ರೀ' ಆಗಿದ್ದರೂ ಯಾರಿಗೂ ಸೊಪ್ಪು ಹಾಕುತ್ತಿರಲಿಲ್ಲ. ಎಲ್ಲರನ್ನು ಅಂಕುಶದಲ್ಲಿ ಇಟ್ಟಿರುತ್ತಿದ್ದಳು.

ಅಂದು ಸಂಜೆ ಸಮಯ. ಮೋಡ ಕವಿದದ್ದರಿಂದ ಇನ್ನಷ್ಟು ಬೇಗ ಕತ್ತಲಾವರಿಸಿತ್ತು. ಸಂಗೀತಾ ಅಂದವಾಗಿ ಅಲಂಕರಿಸಿಕೊಂಡು ಮಹಡಿಯ ಮೆಟ್ಟಿಲುಗಳನ್ನು ಟಿಣ್ ಟಿಣ್ ಜಿಗಿಯುತ್ತ ಕೆಳಗೆ ಇಳಿದು ಬಂದಳು.

"ಎಲ್ಲಿಗೆ ಹೊಂಟೆ ಸುನೀತಾ? ಕತ್ತಲಾಗ್ತಾ ಇದೆ. ಮಳೆ ಬರುವ ಹಾಗಿದೆ."

ಚೆಲುವಮ್ಮ ರಂಗಣ್ಣನವರ ದೃಷ್ಟಿಯ ಇಂಗಿತವನ್ನರಿತು ಕೇಳಿದರು.

"ನೀನೂ ಡ್ಯಾಡಿ ಹಾಗೆ ಮಾತಾಡೋಕೆ ಶುರು ಮಾಡಿದೆಯಾ? ಇಲ್ಲೇ ನಳಿನಿ ಮನೆಗೆ ಹೋಗಿಬರ್ತೇನೆ. ಬೇಗ ಬರ್ತೇನೆ ಡ್ಯಾಡಿ" ಎನ್ನುತ್ತ ಹೊರಟೇಬಿಟ್ಟಳು.

"ಬೇಗ ಬಂದುಬಿಡು." ಮಗಳಿಗೆ ತಾಕೀತು ಮಾಡುತ್ತ ಚೆಲುವಮ್ಮ ಗಂಡನ ಕಡೆಗೆ ತಿರುಗಿ "ಏನೂ ಯೋಚಿಸಬೇಡಿ ಬರತಾಳೆ..." ಎಂದು ಸಮಾಧಾನಪಡಿಸುವಂತೆ ಹೇಳಿದಳು.

ಸುನೀತಾ ತನ್ನ ಮನೆಯ ಬೀದಿಯನ್ನು ಇನ್ನೂ ದಾಟಿರಲಿಲ್ಲ ಮೋಡ ತುಂತುರು ಹನಿ ಗರಿಯಲಾರಂಭಿಸಿತು. ಪರವಾಗಿಲ್ಲ. ಅಷ್ಟೇನು ಜೋರಾಗಿ ಬರುತ್ತಿಲ್ಲ" ಎಂದು ತನ್ನೊಳಗೆ ಹೇಳಿಕೊಳ್ಳುತ್ತ ಮುನ್ನಡೆದಳು. ಪಕ್ಕದ ಬೀದಿಯ ಸರೋಜಳ ಮನೆಯ ಹತ್ತಿರ ಬರುತ್ತಿದ್ದಂತೆ ಹನಿಗಳು ದೊಡ್ಡದಾದವು.

"ನಳಿನಿ ಮನೆ ಬೇಡ. ಸರೋಜಕ್ಕ ಇದ್ದಾಳೆಯೇ? ನೋಡಿದರಾಯಿತು." ಎನ್ನುತ್ತ ಸುನೀತಾ ಅವಳ ಮನೆಯ ಗೇಟಿನ ಕಡೆಗೆ ನಡೆದಳು.

ಸರೋಜ ನಿವೃತ್ತ ಇಂಜಿನಿಯರ್ ಕೇಶವರಾಯರ ಮಗಳು. ಅವಳಿಗೆ ಇಬ್ಬರು ಹೆಣ್ಣು ಮಕ್ಕಳು. ಅಮೇರಿಕೆಯಲ್ಲಿದ್ದ ಪತಿ ಚಂದ್ರು ಅವಳನ್ನು ಕರೆದುಕೊಂಡು ಹೋಗಲು ಬೆಂಗಳೂರಿಗೆ ಬಂದಿದ್ದ.

ಕೇಶವರಾಯರ ಮನೆ ಚಿಕ್ಕದಾಗಿದ್ದರೂ ಚೊಕ್ಕದಾಗಿತ್ತು. ಸಂಗೀತಾ ಅರ್ಧ ಮುಚ್ಚಿದ ಬಾಗಿಲನ್ನು ಮೆಲ್ಲಗೆ ತಳ್ಳಿಕೊಂಡು ಒಳಗೆ ನಡೆದಳು. ಚಿಕ್ಕ ವರಾಂಡದ ನಂತರ ವಿಶಾಲವಾಗಿದ್ದ ಹಾಲ್‌ನಲ್ಲಿದ್ದ ಸೋಫಾದ ಮೇಲೆ ಚಂದ್ರು ಏನೋ ಬರೆಯುತ್ತ ಕುಳಿತಿದ್ದ. ನಡು ಹರೆಯದ ಅವನ ರೂಪ ಆಕರ್ಷಕವಾಗಿತ್ತು.

ನೇರವಾಗಿ ಒಳಗೆ ಬಂದ ಆ ಬೆಡಗಿನ ಹುಡುಗಿಯನ್ನು ನೋಡಿ ಅವನು ಒಂದು ಕ್ಷಣ ಚಕಿತನಾಗಿ "ಯಾರು ಬೇಕಿತ್ತು?" ಎಂದು ಕೇಳಿದ.

"ನೀವೇ ಬೇಕಿತ್ತು."

ಚಂದ್ರು ಅದನ್ನು ಕೇಳಿ ತಬ್ಬಿಬ್ಬಾದ "ನೀವು"..

"ನೀವು ಯಾಕೆ? ನೀನು ಯಾರು? ಅಂತಾ ಕೇಳಿ..." ಎಂದು ಸುನೀತಾ ನಸುನಗುತ್ತ ಅವನ ಬಳಿ ಸಾಗಿ ಪಕ್ಕದಲ್ಲಿ ಕುಳಿತುಕೊಂಡಳು.

ಚಂದ್ರು "ನೀವು... ನೀ...ನು..." ತೊದಲಿದ.

"ನಾನ್ ಯಾರು ಅಂತ ಆಮೇಲೆ ಹೇಳ್ತೇನೆ. ಮೊದಲು ನೀವು ಹೇಳಿ ಸರೋಜಕ್ಕ ಎಲ್ಲಿದ್ದಾಳೆ? ಅಂತ..."

"ಅವಳು ಮೈಸೂರಿಗೆ ಹೋಗಿದ್ದಾಳೆ. ಮನೆಯಲ್ಲಿ ಯಾರೂ ಇಲ್ಲ. ಎಲ್ಲರೂ ಹೋಗಿದ್ದಾರೆ. ನಾಳೆ ಬೆಳಗ್ಗೆ ಬರುತ್ತಾರೆ. ನಾವು ಇವನಿಂಗ್ ಫ್ಲೈಟ್‌ಗೆ ಅಮೇರಿಕೆಗೆ ಹೋಗುತ್ತೇವೆ."

"ಓ! ನಾಳೆ ಹೋಗ್ತಾಳಾ ಸರೋಜಕ್ಕ..."

"ಅಂದ ಹಾಗೆ ನೀನು ಯಾರು ಅಂತ ಹೇಳಲಿಲ್ಲ."

"ಓ! ಭಾವಯ್ಯ ನೀವು ನನ್ನ ಮರ್‍ತಬಿಟ್ರರಾ? ನಾನು ಸುನೀತಾ, ರಂಗಣ್ಣ ಅವರ ಮಗಳು. ಆಚೆ ಬೀದಿಯಲ್ಲಿ ನಮ್ಮ ಮನೆ ಇರೋದು." ಚಂದ್ರು ನೆನಪಿಸಿಕೊಳ್ಳಲು ಯತ್ನಿಸಿ 'ಹೌದಲ್ಲ' ಎಂದು ನಕ್ಕು ನುಡಿದ.

"ಭಾವಯ್ಯ, ನಿಮ್ಮ ಮದ್ವೇಲಿ ನಾನು ಲಂಗ ಹಾಕ್ಕೊಂಡು ಚೋಟಿಯಾಗಿ ಓಡಾಡ್ತಿದ್ದೆ. ಸರೋಜಕ್ಕನ್ನ ನೋಡೋದು ಬಿಟ್ಟು ನೀವು ನನ್ನೇ ನೋಡ್ತಾ ಇದ್ದರಿ."

ಚಂದ್ರು ಸುನೀತಾಳ ಆ ಮುಗ್ಧಮಾತಿಗೆ ಜೋರಾಗಿ ನಕ್ಕುಬಿಟ್ಟ.

"ಅಲ್ಲ ಭಾವಯ್ಯ, ಒಮ್ಮೆ ಸರೋಜಕ್ಕ ಮತ್ತು ನಿಮ್ಮ ಜೊತೆ ಸಿನೇಮಾಕ್ಕೆ ಬಂದಿದ್ದೆ ಅಂದ ಹಾಗೆ ಅಮೇರಿಕಾದಲ್ಲಿ ಎಷ್ಟು ವರುಷ ಇರ್‍ತೀರಾ?"

"ಇನ್ನು ನಾವು ಅಲ್ಲೇ ಇರೋದು ವಾಪಸ್ ಬರೋಲ್ಲ..."

"ಹೌದಾ! ಸರೋಜಕ್ಕನ ಭೇಟಿ ಇನ್ನು ಅಪರೂಪ ಅಲ್ವಾ. ಅಂದ ಹಾಗೆ ಸರೋಜಕ್ಕ ಅಲ್ಲಿ ಹೇಗೆ ಇರ್‍ತಾಳೆ. ತುಂಬಾ ಮಾಡ್ ಆಗಿರ್‍ತಾಳಾ...?"

"ಅಯ್ಯೋ ಅವಳೇ... ಅಲ್ಲೂ ಬಿಚ್ಚೋಲೆ ಗೌರಮ್ಮ. ಆ ಬೆಡಗಿನ ಲೋಕದಲ್ಲಿ ನೀನು ತುಂಬಾ ಬೆಳಗಬಹುದು."

ಅದೇಕೆ ಹಾಗೆಂದನೊ ಚಂದ್ರು, ಅವನಿಗೇ ಹೊಳೆಯಲಿಲ್ಲ. ಅವಳ ಕಣ್ಣಲ್ಲಿ ಆ ಮಾತು ಮಿಂಚು ಮೂಡಿಸಿತು.

ಚಂದ್ರು ಮತ್ತೆ ಸಾವರಿಸಿಕೊಂಡು ನಸುನಗುತ್ತ "ನಾಳೆ ಬಾ ಸುನೀತಾ, ನಿಮ್ಮ ಸರೋಜಕ್ಕ ಇರ್‍ತಾಳೆ..." ಎಂದ.

"ಅಂದ್ರೆ ನನ್ನ ಈಗ ಹೋಗು ಅಂತೀರಾ...?"

"ಹಾಗಲ್ಲ, ಮನೆಯಲ್ಲಿ ಯಾರೂ ಇಲ್ಲ ತುಂಬಾ ಹೊತ್ತಾಗುತ್ತೆ ನನ್ಗೆ..."

"ಯಾಕೆ ನೀವಿಲ್ವಾ! ನೀವೇನು ಹುಲೀನಾ ಕರಡೀನಾ... ನನ್ನ ತಿನ್ನುತ್ತೀರಾ...?"

ಚಂದ್ರುವಿಗೆ ಅವಳ ತುಂಟಪ್ರಶ್ನೆಗೆ ಏನೆಂದು ಉತ್ತರಿಸಬೇಕು ತಿಳಿಯಲಿಲ್ಲ.

"ಹಾಗೇನಿಲ್ಲ. ನನ್ಗೆ ಸ್ವಲ್ಪ ಬರಿಯೋದಿದೆ..." ಎಂದು ಚಂದ್ರು ಪೆನ್ನು ಎತ್ತಿಕೊಂಡು ಬರೆಯತೊಡಗಿದ.

"ಓ! ಇದು ಅಮೇರಿಕಾದ ಪೆನ್ನೆ? ತುಂಬಾ ಚೆನ್ನಾಗಿದೆ..." ಎಂದು ಸರ್ರನೆ ಅವನ ಕೈಯಿಂದ ಕಿತ್ತುಕೊಂಡಳು.

"ಇದೇನು ಸುನೀತಾ... ಕೊಡು ಆ ಪೆನ್ನು..."

ಚಂದ್ರು ನಸುಕೋಪದಿಂದ ಕೇಳಿದ.

ಸುನೀತಾ ತುಂಟಿಯ ಹಾಗೆ ಪೆನ್ನು ಹಿಡಿದುಕೊಂಡು 'ಉಹುಂ' ಎನ್ನುತ್ತ ಎದ್ದು ಆಚೆ ಮೈ ಹೊರಳಿಸಿ ಕಿಟಕಿ ಬಳಿ ನಿಂತಳು.

ಅವಳ ಮಿನಿ ಉಡುಪಿನಲ್ಲಿ ಸೀಳಿ ಬರುವ ಎದೆಗಳು, ಕಿಟಕಿಯಿಂದ ತೂರಿ ಬರುವ ತುಂತುರ ಹನಿಗಳ ಪನ್ನೀರಿನಿಂದ ಮಿಂದು ಪರಿಮಳ ಬೀರತೊಡಗಿದ್ದವು.

ಚಂದ್ರು ಎದ್ದು ಅವಳತ್ತ ಸಾಗಿ, ಪೆನ್ನು ಕಸಿದುಕೊಳ್ಳಲು ಯತ್ನಿಸಿದ. ಜೋರಾಗಿ ನಗುತ್ತ ಸುನೀತಾ ಪೆನ್ನನ್ನು ಇನ್ನೂ ಆಚೆ ಸರಿಸಿ ಹಿಡಿದುಕೊಂಡಳು.

ಆಗ ಚಂದ್ರು ಸುನೀತಾಳ ಹಿಂದೆ ಹೋಗಿ ಅವಳನ್ನು ಗಟ್ಟಿಯಾಗಿ ಬಾಹುಗಳಲ್ಲಿ ಹಿಡಿದು ಕಸಿದುಕೊಳ್ಳಲು ಯತ್ನಿಸಿದ. ಆ ಬಂಧನ ಬಿಗಿಯಾಗುತ್ತಿದ್ದಂತೆ ಪೆನ್ನು ಜಾರಿತ್ತು. ಮೆಲ್ಲಗೆ ಕರಗಿದ ನಗು ಮಾದಕತೆಯಲ್ಲಿ ವಿಲೀನವಾಗಿ ಹೋಗಿತ್ತು. ಆ ಕೆಲ ನಿಮಿಷಗಳಲ್ಲಿ ಅವರಿಬ್ಬರಿಗೂ ಅರಿವಿಲ್ಲದಂತೆ ದೈಹಿಕ ಆಕರ್ಷಣೆಯ ಕಟ್ಟೆಯೊಡೆದಿತ್ತು.

ಚಂದ್ರು ಸೋಫಾದಲ್ಲಿ ಕುಸಿದು ಕುಳಿತ. ಸುನೀತಾ ಅಧೀರಳಾಗಿದ್ದಳು; ತತ್ತರಿಸಿದಳು. ಕಣ್ಣಲ್ಲಿ ನೀರು ಒತ್ತರಿಸಿ ಬಂದಿತು. ಕೆದರಿದ ಕೂದಲು, ಮುದುಡಿದ ಉಡುಪನ್ನು ಸರಿಪಡಿಸಿಕೊಳ್ಳುತ್ತ ಧಡಾರನೆ ಬಾಗಿಲು ತೆರೆದುಕೊಂಡು ಮನೆಯತ್ತ ಧಾವಿಸಿದಳು.

ಸುನೀತಾಳ ದಾರಿಯನ್ನೆ ಕಾಯುತ್ತ ಕುಳಿತ ಚಲುವಮ್ಮ ರಂಗಣ್ಣನವರಿಗೆ ಅವಳ ಆಕಾರವನ್ನು ನೋಡಿ ಗಾಬರಿಯಾಯಿತು."ಏನಾಯಿತ್ತು ಸುನೀ...?" ಎನ್ನುತ್ತಾ ಚಲುವಮ್ಮ ಮಗಳತ್ತ ಓಡಿದಳು. ರಂಗಣ್ಣನವರ ಮೈ ನಡುಗಿತು.

ಸುನೀತಾ ಬಿಕ್ಕಳಿಸುತ್ತಾ, ಹಾಗೆ ಧಡಧಡನೆ ಮೆಟ್ಟಲೇರಿ, ತನ್ನ ಕೋಣೆಯೊಳಗೆ ಹೋಗಿ, ಜೋರಾಗಿ ಬಾಗಿಲು ಹಾಕಿಕೊಂಡು ಕಾಟಿನ ಮೇಲೆ ಉರುಳಿದಳು. ಅವಳ ಬಿಕ್ಕಳಿಕೆ ಎಷ್ಟು ಹತ್ತಿಕ್ಕಿಕೊಳ್ಳಲು ಯತ್ನಿಸಿದರೂ ನಿಲ್ಲಲಿಲ್ಲ. ಯಾಕೆ ಹೀಗಾಯಿತು ಎಂದು ಪರಿತಪಿಸ ತೊಡಗಿದಳು. ಕಾಲೇಜಿನಲ್ಲಿ ಎಷ್ಟೊಂದು ಹುಡುಗರ ಜೊತೆ ಸಲುಗೆಯಿಂದ ವರ್ತಿಸುತ್ತಿದ್ದೆ, ಎಂದೂ ಹೀಗಾಗಿರಲಿಲ್ಲ. ಇವತ್ತೇಕೆ ನಾನು ಮೈಮರೆತೆ, ಜಾರಿದೆ ಎಂಬುದೇ ಹೊಳೆಯಲಿಲ್ಲ.

ಚಲುವಮ್ಮ, ರಂಗಣ್ಣ ಬಾಗಿಲು ಬಡೆದರು, ಕೂಗಿದರು. ಅವಳು ಬಾಗಿಲು ತೆಗೆಯಲಿಲ್ಲ. ಮಾತಾಡಲೂ ಇಲ್ಲ...

"ನನಗೇಕೊ ಭಯವಾಗ್ತಾ ಇದೆ. ಏನಾಯ್ತು ಸುನೀಗೆ" ಎಂದು ಚಲುವಮ್ಮ ಚಡಪಡಿಸ ತೊಡಗಿದರು.

ರಂಗಣ್ಣ ಪಕ್ಕದಲ್ಲಿಯ ಕಿಟಕಿ ಬಾಗಿಲು ತೆರೆದು, ಒಳಗೆ ಇಳಿದು, ಕೋಣೆ ಬಾಗಿಲು ತೆರೆದರು. ಸುನೀತಾ ಮುಖ ತಲೆ ದಿಂಬಿಗೆ ಒತ್ತಿಕೊಂಡು ಅಳುತ್ತ ಮಲಗಿದ್ದಳು.

ಬಾಗಿಲು ತೆರೆಯುತ್ತಲೇ ಚಲುವಮ್ಮ ಓಡಿ ಹೋಗಿ ಮಗಳನ್ನು ತಬ್ಬಿಕೊಂಡು "ಏನಾಯಿತು ಸುನೀ... ಹೇಳು..." ಎಂದು ಪ್ರಶ್ನಿಸತೊಡಗಿದರು. ರಂಗಣ್ಣನವರ ಕಡೆ ಮುಖ ತಿರುಗಿಸಿದ ಆಕೆ ಹೊಗಳಿದ್ದನ್ನು ನೋಡಿ, ಚಲುವಮ್ಮ "ನೀವು ಸ್ವಲ್ಪ ಕೆಳಗೆ ಹೋಗಿ" ಎಂದು ಅವರನ್ನು ಕಳುಹಿಸಿದಳು.

ರಂಗಣ್ಣನವರು 'ಮೆಲ್ಲನೆ ಮೆಟ್ಟಿಲಿಳಿದು ಕೆಳಗೆ ಬಂದು ಸೋಫಾದ ಮೇಲೆ ಕುಳಿತು ಕೊಂಡರು. ಮೇಲಿನ ಕೋಣೆಯಲ್ಲಿ ಬಹಳ ಹೊತ್ತಿನವರೆಗೆ, ತಾಯಿ ಮಗಳ ಆ ಮಂಕು ಮಾತುಗಳು, ಸುನೀತಾಳ ಬಿಕ್ಕಳಿಕೆ, ಚಲುವಮ್ಮನ ಹತಾಶಯದ ನುಡಿದಳು ಅವರ ಕಿವಿಯಲ್ಲಿ ಇರಿಯುತ್ತಿದ್ದಂತೆ ಭಾಸವಾಯಿತು. ನಂತರ ಕೆಳಗೆ ಬಂದ ಚಲುವಮ್ಮ, ಮೆಲ್ಲಗೆ ಘಟನೆಯನ್ನು ವಿವರಿಸಿದಾಗ ರಂಗಣ್ಣ ನೆಲದ ಮೇಲೆ ಕುಸಿದು ಬಿದ್ದರು.

ಚಂದ್ರು ನಿದ್ರೆ ಬಾರದೆ ಇಡೀ ರಾತ್ರಿ ಹಾಸಿಗೆಯಲ್ಲಿ ಹೊರಳಾಡಿದ. ಆ ಘಟನೆ ಅವನನ್ನು ರಸಾತಳಕ್ಕೆ ತಳ್ಳಿದಂತಾಗಿತ್ತು. 'ನಾನೇಕೆ ಇಷ್ಟು ದುರ್ಬಲನಾದೆ. ಇನ್ನು ಸರೋಜಾಳಿಗೆ ಹೇಗೆ ಮುಖ ತೋರಿಸಲಿ. ಸುನೀತಾಳಿಗೆ ಅನ್ಯಾಯವೆಸಗಿದೆನಲ್ಲ' ಎಂಬ ಚಿಂತೆ ಅವನ ಮನದ ಕಾಸಾರವನ್ನು ಕದಡಿತ್ತು.

ಬೆಳಗು ಹರಿದಾಗ ಚಂದ್ರು ಮನಸ್ಸನ್ನು ಒತ್ತಾಯದಿಂದ ಸ್ಥಿಮಿತಕ್ಕೆ ತಂದುಕೊಂಡಿದ್ದ. ಉದ್ದೇಶಪೂರ್ವಕವಾಗಿ ನಡೆದ ಘಟನೆ ಇದಲ್ಲ. ಅರಿವಿಲ್ಲದಂತೆ ಕೈ ಜಾರಿ ಹೋದದ್ದು. ಚೆಲ್ಲಿ ಹೋದ ಹಾಲಿಗೆ ಪರಿತಪಿಸುವುದು ವ್ಯರ್ಥ ಎನಿಸಿತು. ಬಾಗಿಲು ಬಡೆದ ಸದ್ದಾಯಿತು. ಸೋತ ಕಾಲುಗಳನ್ನು ಮೆಲ್ಲಗೆ ಎತ್ತಿ ಇಡುತ್ತಾ ಸಾಗಿ ಬಾಗಿಲು ತೆರೆದ.

ಸರೋಜ, ತಂದೆ  ತಾಯಿಯೊಂದಿಗೆ ಮೈಸೂರಿನಿಂದ ವಾಪಸ್ ಬಂದಿದ್ದಳು. ಗಂಡನ ಬಾಡಿದ ಮುಖ, ಕೆದರಿದ ಕೂದಲು, ಕೆಂಪಾಗಿದ ಕಣ್ಣುಗಳನ್ನು ಕಂಡು ಗಾಬರಿಯಾದಳು. "ಏನಾಯಿತು, ನಿಮ್ಮ ಮುಖ ಹೀಗೇಕಾಗಿದೆ? ಮೈಯಲ್ಲಿ ಹುಷಾರಿಲ್ಲವೇ?" ಎಂದು ಚಡಪಡಿಸುತ್ತ ಅವನ ಮೈ, ಕೈ  ಹಣೆ ಹಿಡಿದು ನೋಡಿದಳು. "ಏನಾಯಿತಪ್ಪ  ಏಕೆ ಹೀಗಿದ್ದೀಯಾ...?" ಎಂದು ಅವಳ ತಂದೆ  ತಾಯಿ ಪ್ರಶ್ನೆಗಳ ಮಳೆಗರೆದರು.

"ಏನೂ ಇಲ್ಲ..."  ಏಕೊ ರಾತ್ರಿ ಎಲ್ಲಾ ತಲೆ ನೋವಿತ್ತು, ಈಗ ಕಡಿಮೆಯಾಗಿದೆ, ಹುಷಾರಿಗಿದ್ದೀನಿ. ಬನ್ನಿ...' ಎನ್ನುತ್ತ ಒಳಗೆ ನಡೆದ. ಎಂಟು ದಿನ ಮೊದಲೇ ಅಮೇರಿಕೆಗೆ ಹೊರಡುವ ತಯಾರಿ ಮಾಡಿಕೊಂಡಿದ್ದ ಸರೋಜ ಸಂಜೆ ಹೊತ್ತಿಗೆ ಫ್ಲೈಟಿಗೆ ಹೊರಡುವ ಅಳಿದುಳಿದ ಸಿದ್ಧತೆಯನ್ನೆಲ್ಲ ಸಡಗರದಿಂದ ಪೂರೈಸಿದಳು. ಚಂದ್ರುವಿನಲ್ಲಿ ಮಾತ್ರ ಆ ಉತ್ಸಾಹ ಉಳಿದಿರಲಿಲ್ಲ.

"ಅಮ್ಮ, ಚಲುವಕ್ಕ, ಸುನೀತಮ್ಮ ಭೇಟಿಯಾಗಿ ಬರ್‍ತೇನೆ. ನೀವೆಲ್ಲಾ ರೆಡಿಯಾಗಿ, ನೀವು ಬರ್‍ತೀರೇನು ರಂಗಣ್ಣ ಅಂಕಲ್‌ರವರನ್ನು ಭೇಟಿಯಾಗಬಹುದು. ಇನ್ನು ಯಾವಾಗ ಇಲ್ಲಿಗೆ ಬರ್‍ತೀರ್‍ವೋ?..."ಎಂದು ಸರೋಜ ಚಂದ್ರುವಿನತ್ತ ಮುಖ ತಿರುಗಿಸಿ ಕೇಳಿದಳು. "ಇಲ್ಲ" ಎನ್ನುವಂತೆ ಚಂದ್ರು ಬರೀ ತಲೆ ಅಲ್ಲಾಡಿಸಿದ.

ಸರೋಜ ರಂಗಣ್ಣನವರ ಮನೆಗೆ ಬಂದಾಗ, ಯಾವಾಗಲೂ ಸುನೀತಾಳ ಗಲಾಟೆಯಿಂದ ತುಂಬಿರುವ ಮನೆ ಸ್ಮಶಾನ ಮೌನದಿಂದ ಕೂಡಿತ್ತು.

"ಚಲುವಕ್ಕ, ಏನ್ಮಾಡ್ತಿದ್ದೀರಾ? ಸುನೀತಾ ಎಲ್ಲಿ? ಅವಳ ಗಲಾಟೆನೂ ಇಲ್ಲ..."

ಸರೋಜಳ ಧ್ವನಿ ಕೇಳಿ ಚಲುವಮ್ಮ ತಮ್ಮ ಕೋಣೆಯಿಂದ ಹೊರಬಂದರು.

ಅವರ ಕಂಗೆಟ್ಟ ರೂಪವನ್ನು ನೋಡಿ "ಯಾಕೆ ಮೈಯಲ್ಲಿ ಹುಷಾರಿಲ್ಲವಾ?" ಎಂದು ಆತಂಕದಿಂದ ಕೇಳಿದಳು. ಚಲುವಮ್ಮ ಸಾವರಿಸಿಕೊಂಡು "ಇಲ್ಲಾ ಹುಷಾರಾಗಿದ್ದೀನಿ... ಇವತ್ತು ಅಮೇರಿಕೆಗೆ ಹೊರಟಿರಾ?" ಎಂದು ಕೇಳಿದಳು. "ಹೌದು ಹೇಳಿ ಹೋಗುವಾ ಎಂದು ಬಂದೆ. ಸುನೀತಾ ಎಲ್ಲಿ?"

"ಅವಳು ಮಹಡಿ ಮೇಲೆ ತನ್ನ ಕೋಣೆಯಲ್ಲಿ ಮಲಗಿದ್ದಾಳೆ. ಏಕೋ ಮೈಯಲ್ಲಿ ಹುಷಾರಿಲ್ಲವಂತೆ..."

"ಪರವಾಗಿಲ್ಲ ಮಲಗಲಿ ಬಿಡಿ..." ಎಂದ ಸರೋಜ ಚಲುವಮ್ಮ ತನಗೆ ಕೂಡಲು ಹೇಳದ ಹಾಗೆ ನಿಂತುದನ್ನು ನೋಡಿ "ಇದೇನು ಚಲುವಕ್ಕ ನನಗೆ ಕೂಡಲೂ ಹೇಳುತ್ತಿಲ್ಲವೆ..." ಎನ್ನುತ್ತ ತಾನೇ ಸೋಫಾದ ಮೇಲೆ ಕುಳಿತುಕೊಂಡಳು.

ಚಲುವಮ್ಮ ಸರೋಜಳ ಮುಖವನ್ನೇ ದಿಟ್ಟಿಸಿ ನೋಡಿದಳು. ಸುನೀತಾಳ ನೆನಪಾಯಿತು... ಮರ್ಯಾದೆಯ ಮಹಲು ಕುಸಿಯುತ್ತಿದೆ ಎನ್ನಿಸತೊಡಗಿತು. ಅವಳು ಗರ್ಭಿಣಿಯಾದರೆ?...ಹೊಟ್ಟೆ ಇಳಿಸಿಕೊಂಡರೆ? ಸಮಾಜಕ್ಕೆ ಗೊತ್ತಾದರೆ?... ತನ್ನ ಮರ್ಯಾದೆಗೆ ಪ್ರತಿಷ್ಠೆಗೆ ಮಸಿ ಬಳಿದಂತಾಗುತ್ತಲ್ಲವೆ? ಎಂದು ಏನೇನೋ ಗೊಣಗುಡುತ್ತ... "ಮಗು ಬೇಡಮ್ಮ"... ಎಂದು ತಮ್ಮಷ್ಟಕ್ಕೆ ತಾವೇ ಉತ್ತರಿದರು.

ಸರೋಜಳಿಗೆ ಅರ್ಥವಾಗಲಿಲ್ಲ. ಚಲುವಕ್ಕ ಬೆಳಗ್ಗೆ ಕುಟುಂಬ ಕಲ್ಯಾಣ ಸಭೆಯಲ್ಲಿ ಭಾಷಣ ಮಾಡಿ ಬಂದಿರಬೇಕೆಂದು ಭಾವಿಸಿ ನಸುನಕ್ಕು "ಚಲುವಕ್ಕ, ಇನ್ನೆಲ್ಲಿ ನನಗೆ ಮಕ್ಕಳು... ನಮ್ಮವರು ಆಪರೇಷನ್ ಮಾಡಿಸಿಕೊಂಡು ಎರಡು ವರುಷವಾಯಿತು... ಬಿಡಿ" ಎಂದಾಗ, ಆ ಮಾತು ಅವಳ ಬಾಯಿಂದ ಹೊರಬೀಳುತ್ತಿದ್ದಂತೆ ಚಲುವಮ್ಮನ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಸಂತಸದಿಂದ ಉಬ್ಬಿದಳು. "ಏನು ನಿಮ್ಮ ಯಜಮಾನರು ಆಪರೇಷನ್ ಮಾಡಿಸಿಕೊಂಡು ಎರಡು ವರುಷ ಆಯ್ತೆ? ತುಂಬಾ ಸಂತೋಷವಾಯ್ತು, ಇದನ್ನು ಕೇಳಿ... ಇನ್ನು ಭಯವಿಲ್ಲ. ಏನೂ ಅಂದ್ರೆ... ಕೇಳಿದ್ರ್ಯಾ... ಸರೋಜಳ ಯಜಮಾನ್ರು ಆಪರೇಷನ್ ಮಾಡಿಸಿಕೊಂಡು ಎರಡು ವರುಷ ಆಗಿದೆಯಂತೆ..."

ಎಂದು ರಂಗಣ್ಣನವರ ಕೋಣೆಯತ್ತ ಜೋರಾಗಿ ಕೂಗಿ ಹೇಳಿದಳು ಚಲುವಮ್ಮ.

ಸರೋಜಾಳಿಗೆ ಚಲುವಮ್ಮ ಏನು ಮಾಡುತ್ತಿದ್ದಾರೆ ಎಂಬುದೇ ಅರ್ಥವಾಗಲಿಲ್ಲ.

"ಅಯ್ಯೋ! ಅಯ್ಯೋ! ಚಲುವಕ್ಕ... ಈ ಮಾತನ್ನು ರಂಗಣ್ಣನವರ ಮುಂದೆ ಯಾಕೆ ಹೇಳ್ತಿದ್ದೀರಾ... ನನ್ಗೆ ನಾಚಿಕೆಯಾಗುತ್ತೆ... ಬರುತ್ತೇನೆ .... ಸುನೀತಗೆ ಹೇಳಿ..." ಎಂದವಳೇ ಸರೋಜ ಅಲ್ಲಿಂದ ಓಡಿಯೇಬಿಟ್ಟಳು.

ಚಲುವಮ್ಮನಿಗೆ ಹೊಸ ಜೀವ ಬಂದಂತಾಯಿತು. ಮೈಕೊಡಹಿ ಎದ್ದಳು. ಅವಳ ಅಬ್ಬರದ ದನಿ ಆಲಿಸಿ ರಂಗಣ್ಣ ಕೋಣೆಯಿಂದ ಹೊರಬಂದರು. ಸುನೀತಾ ದಿಗ್ಗನೆ ಎದ್ದು ಹಾಸಿಗೆಯ ಮೇಲೆ ಕುಳಿತುಕೊಂಡಳು.

"ಅಲ್ಲಾರಿ ಎಂಥಾ ಸಂತೋಷಕರ ಸುದ್ದಿ ಇದು. ಸರೋಜಳ ಗಂಡನಿಗೆ ಆಪರೇಷನ್ ಆಗಿದೆ. ಮಕ್ಕಳು ಆಗೋಲ್ಲ .... ನಮ್ಮ ಸುನೀಗೆ ಏನೂ ಭಯವಿಲ್ಲ..."

ರಂಗಣ್ಣ ಚಲುವಮ್ಮನ ಮಾತುಗಳನ್ನು ಕೇಳಿ ದಿಗ್ಭ್ರಮೆಗೊಂಡರು.

"ಏನೇ ಹಾಗಂದರೆ ನಡೆದದ್ದು ಸುಳ್ಳೆ...?"

"ನಿಜವೊ.... ಸುಳ್ಳೊ... ಬನ್ನಿ..." ಎನ್ನುತ್ತ ಗಂಡನ ಕೈ ಹಿಡಿದು ದರದರನೆ ಎಳೆದುಕೊಂಡು ಸುನೀತಾಳ ಕೋಣೆಗೆ ಚಲುವಮ್ಮ ಬಂದಳು.

ಸುನೀತಾ ಮುಖವೆತ್ತಿ ಕಾಂತಿಹೀನವಾದ ಕಣ್ಣುಗಳಿಂದ ಅವರತ್ತ ನೋಡಿದಳು. ಚಲುವಮ್ಮ ಅವಳ ಹತ್ತಿರ ಹೋಗಿ... "ಏಳಮ್ಮಾ ಸುನೀತಾ... ಮುಖಾ ತೊಳೆದುಕೊಂಡು ಮೊದಲಿನಂತೆ ಲವಲವಿಕೆಯಿಂದ ಇರು. ಆದರೆ ಇನ್ನಾದರೂ ಎಚ್ಚರದಿಂದ ಇರು ತಿಳೀತಾ" ಎಂದಾಗ ರಂಗಣ್ಣ ಮುಖ ಕಿವುಚಿ "ಏನು ಹೇಳುತ್ತಿದ್ದೀಯಾ ಚಲುವು..." ಎಂದರು.

"ನೀವು ಸುಮ್ಮನೆ ಇರಿ, ನಾನು ಸರಿಯಾದದ್ದನ್ನೆ ಹೇಳ್ತಾ ಇದ್ದೀನಿ. ಸುನೀ ಅದೊಂದು ಕೆಟ್ಟ ಕನಸು ಅಂತಾ ತಿಳೀರಿ. ಕನಸಿನಲ್ಲಿ ನಾವು ಏನೇನೊ ಕೆಟ್ಟ ಕೆಟ್ಟ ಅಸಹ್ಯ ಅಶ್ಲೀಲ ಕನಸುಗಳನ್ನು ಕಾಣುತ್ತೇವೆ.... ಬೆಳಗ್ಗೆ ಎದ್ದು ಹೇಳಲಿಕ್ಕೂ ನಾಚಿಕೆಯಾಗುತ್ತದೆ. ಹಾಗೆ ಕನಸು ಕಂಡೆವೆಂದಲ್ಲಿ ಬೆಂಕಿಯಲ್ಲಿ ಹಾರಿಕೊಳ್ಳುತ್ತೀವೆಯೆ?.... ಮನದಲ್ಲಿ ಏನೇನೊ ಉನ್ಮಾದ ಸುಳಿದು ಹೋಗುತ್ತದೆ ಅಂತಾ ಎದೆ ಸೀಳಿಕೊಳ್ಳುತ್ತೀವೆಯೇ? ಹಾಗೆಯೇ ಈ ಘಟನೆಯೂ ಆ ವಿಷಗಳಿಗೆಯಲ್ಲಿ ಸುನೀಯಲ್ಲಿ ವಿಷಬೀಜ ಬಿತ್ತಿಯಾಗಿಲ್ಲ, ಅದೇ ಸಮಾಧಾನದ ಸಂಗತಿ... ನಮ್ಮ ಗೌರವ ಪ್ರತಿಷ್ಠೆ ಮಣ್ಣು ಪಾಲಾಗಲಿಲ್ಲ ತಿಳಿಯಿತೆ?"

ಚಲುವಮ್ಮ ಇನ್ನೂ ಏನೇನೋ ತಮ್ಮದೇ ಆದ ವ್ಯಾಖ್ಯಾನದ ಸುರುಳಿಯನ್ನು ಅತ್ಯಂತ ಭಾವುಕವಾದ ಲೇಪದೊಂದಿಗೆ ಬಿಚ್ಚಿ ಹರಡಿದರು.

ರಂಗಣ್ಣ ಮೂಕಪ್ರೇಕ್ಷಕನಂತೆ ಹಾಗೆ ಕೇಳುತ್ತ ಗರಬಡಿದವರಂತೆ ನಿಂತಿದ್ದರು.

ಸುನೀತಾ ತಾಯಿಯ ಮಾತಿಗೆ ತಬ್ಬಿಬ್ಬಾಗಿದ್ದಳು. ಅವಳ ದೇಹ ಮಾಡ್ ಆಗಿದ್ದರೂ ಮನದ ಆಳಕ್ಕೆ ತಾಯಿಯ ಭೌತಿಕ ವಾದ ಇಳಿದಿರಲಿಲ್ಲ. ಅವಳ ವಿವರಣೆಯ ಒಡಲಲ್ಲಿ ಅಸ್ಥಿರ ಕಟ್ಟಡದ ನೆಲಗಟ್ಟನ್ನು ಅರಸತೊಡಗಿದ್ದಳು.

○

## ೨. ಊನ

ಪವಿತ್ರಾ ಅಪವಿತ್ರಳಾದಂತೆ ಕಳೆಹೀನಳಾಗಿದ್ದಳು. ಬಾಣಂತಿಯ ಹಳದಿಯ ಬಣ್ಣ ಬಿಳಿಚಿಕೊಂಡಿತ್ತು. ರಸ ಹೀರಿ ಒಗೆದ ಕಬ್ಬಿನ ಸಿಪ್ಪೆಯಂತೆ ಮಂಚದ ಮೇಲೆ ಉರುಳಿದ್ದಳು. ಕಣ್ಣು ತೆರೆದರೆ ಮೇರೆದಪ್ಪಿ ಹರಿವ ಕಣ್ಣೀರಿನ ಕೋಡಿ, ಮುಚ್ಚಿದರೆ ಅದೇ ಪ್ರಸೂತಿಯಾಗಿ ಮಸಣದ ಸೂನು ಆಗಿ ಊನ ಸಂತಾನ. ಆ ಮಗುವಿನ ಅಕರಾಳ ವಿಕರಾಳ ರೂಪು. ನೆತ್ತಿಯ ಮೇಲೆ ಕಣ್ಣು, ಕೈಕಾಲು ಕಿವಿ ಒಂದೊಂದೇ ಅಂಗ.

'ಈ ಸಂತಾನ ನಂದ, ಈ ಸಂತಾನ ನಂದ. ನಾನು ಹಡೆದದ್ದು ಇದು'

ಮಂಚದ ಮೇಲೆ ಬೋರಲಾಗಿ ಬಿದ್ದ ಅವಳ ಹಸಿ ಮೈಯೊಳಗಿನ ಹಸಿಬಿಸಿ ತಾಯ್ತನದ ಹಸಿವು ಸುಟ್ಟು ಕರಕಾಗಿ ಹೋಗಿತ್ತು. ಊನ ಸಂತಾನವನ್ನು ಹೊರತಂದ ಅವಳ ಗರ್ಭದೊಳಗೆ ಯಾರೋ ಕಾದ ಕಬ್ಬಿಣದ ಸಲಾಕೆಯನ್ನು ತುರುಕಿ ಶುದ್ಧೀಕರಿಸಲು ಬಂದಂತೆ ಭಾಸವಾಯ್ತು. ಪ್ರಸೂತಿಗೃಹದ ವಿಶೇಷ ಕೋಣೆ ದರವು ಹಿಡಿವಂತೆ ಕಿರುಚಿಕೊಂಡಳು.

"ಪವಿತ್ರಾ, ಪವಿತ್ರಾ ಮತ್ತೆ ವಿಚಾರ ಮಾಡಲಿಕ್ಕೆ ಸುರು ಮಾಡ್ತೇನು? ನಿನ್ಗ ಹ್ಯಾಂಗ ಹೇಳಲಿ ನಾನು. ನಿನ್ನ ದೇಹಾ ನನ್ನ ದೇಹಾನ, ನಿನ್ನ ಆರೋಗ್ಯ ನನ್ನ ಆರೋಗ್ಯನ. ನಾನು ಸುಖವಾಗಿ ಇರಬೇಕು ಅಂದ್ರ ನೀನು ನಿನ್ನ ಆರೋಗ್ಯದ ಕಡೆ ಲಕ್ಷ್ಯಕೊಡಬೇಕು. ಈಗ ಆಗಬಾರದ್ದು ಏನು ಆತು. ಪೀಡಾ ಪರಿಹಾರ ಆತು."

ಪವಿತ್ರಾಳ ಪತಿ ಆನಂದ ಇನ್ನೂ ಏನೇನೋ ಸಾಂತ್ವನ ಪರ ನುಡಿಗಳನ್ನು ಹೇಳುತ್ತಿದಾಗಲೇ ಮಲಗಿದವಳು ದಿಗ್ಗನೆ ಎದ್ದು ಕೂತಳು

"ಪೀಡಾ ಪರಿಹಾರ ಆಗಲಿಲ್ಲ, ಪ್ರಾರಂಭ ಆಗೇದ ಅನ್ರಿ. ನಾನು ಹಡದದ್ದು ಪಾಪದ ಪಿಂಡ ಅಲ್ಲದ ಇನ್ನೇನು? ನಮ್ಮ ಪಾಪದ ಸಂಬಂಧದಿಂದ ಹುಟ್ಟಿದ ಕರ್ಮದ ಫಲ ಅಲ್ಲದ ಇನ್ನೇನು. ನನ್ನ ಕಂದ ಊನ ಆಗಿದ್ದು ಯಾಕ ಹೇಳ್ರೀ. ಹೇಳ್ರೀ.."

ಆನಂದನನ್ನು ತಬ್ಬಿಕೊಂಡು ಪವಿತ್ರಾ ಬಿಕ್ಕಿ ಬಿಕ್ಕಿ ಅಳಹತ್ತಿದಳು. ಅಳುವಿನ ಶ್ರುತಿಗಳಂತೆ ಪ್ರಸೂತಿಗೃಹದ ಮಕ್ಕಳೂ ಅಲ್ಲಲ್ಲಿ ಅಳಹತ್ತಿದ್ದವು. ಆನಂದನಿಗೆ ಅವಳನ್ನು ಹೇಗೆ ಸಂತೈಸಬೇಕು ಎಂದು ನಿಮಿಷ ತೋಚಲಿಲ್ಲ. ಅವಳ ಬಿಗಿ ಅಪ್ಪುಗೆಯನ್ನು ಸಡಲಿಸಿಕೊಂಡು ಅವಳ ಬಿಳಿ ಗಲ್ಲಗಳಿಗೆ ಮೆಲ್ಲನೆ ಬಾಯಾರಿದ ತುಟಿಗಳನ್ನು ಒತ್ತಿ ಹೇಳಿದ

"ಪವಿತ್ರಾ, ನನ್ನ ಪ್ರೇಮದ ಮ್ಯಾಲೆ ಪೂರ್ತಿ ವಿಶ್ವಾಸ ಇದ್ರ ಹೇಳ್ತೇನಿ ಕೇಳು. ನಿನ್ನ ಸಂತಾನ ಊನ ಆಗಿದ್ರ ನಮ್ಮ ಅಪವಿತ್ರ ಸಂಬಂಧಕ್ಕ ಅಲ್ಲ. ಸಮಾಜದ ಆಕ್ರೋಶಕ್ಕ

ಸಮಾಜದ ನಿಷ್ಕರುಣೆ ವರ್ತನಕ್ಕ ವಿಷದ ಉರಿಗೆ ಸಿಕ್ಕ ನಿನ್ನ ಸಂತಾನ ಊನ ಆತು. ನಿನ್ನ ಸಂತಾನ ಊನ ಆತು."

ಆನಂದ ಕಣ್ಣು ಕಿಡಿಯಿಂದ ತುಂಬಿತ್ತು. ಕರಿಗುಡ್ಡೆ ಕೆಂಡದ ಉಂಡೆಯಾಗಿತ್ತು. ಪವಿತ್ರಾಳ ಕಡೆಗೆ ನೋಡಿದ. ಬತ್ತಿದ ಕಣ್ಣೊಳಗಿನ ಗೊಂಬೆಗಳು ಛೀಮಾರಿ ಗೊಂಬೆಗಳಂತೆ ಕುಣಿಯತೊಡಗಿದ್ದವು. ಸಮಾಜ ಅವಳ ಕಣ್ಣು ತುಂಬ ಕೊಳ್ಳಿದೆವ್ವಗಳನ್ನು ತುಂಬಿದಂತಿತ್ತು. ಆಸ್ಪತ್ರೆಯ ದೀಪಗಳು ನಂದಿದ್ದವು. ಆ ನೀರವ ವಾತಾವರಣದ ಕತ್ತಲಿನಲ್ಲಿ ಅವರ ಪ್ರಣಯದ ಹೋರಾಟದ ಸುತ್ತ ಪ್ರತಿಮೆಗಳು ಒಂದೊಂದೇ ಆಗಿ ತೇಲಿ ಬರತೊಡಗಿದವು. ಪವಿತ್ರಾ ಆನಂದ ಆನಂದ ಪವಿತ್ರ...

ಹೊಳೆಯೂರು ಹೊಳೆಯ ದಂಡೆಯ ಮೇಲಿನ ಒಂದು ಪುಟ್ಟ ಊರು. ಊರಿನ ಪಶ್ಚಿಮ ಭಾಗವನ್ನು ಹೊರತುಪಡಿಸಿ ಸಿಂಬಿಯಂತೆ ಊರ ಸುತ್ತು ಮುತ್ತು ಸುತ್ತುವರೆದಿತ್ತು. ಅದು ಪ್ರಕೃತಿ ರಮ್ಯ, ಹೊಳೆಯೂರಿನ ಜೀವ ಜೀವಾಳ ಆ ಹೊಳೆಯಾಗಿತ್ತು.

ಪವಿತ್ರಾ ಆನಂದ ಕುಳಿತ ಹೊಳೆಯ ದಂಡೆಯ ಆ ಬಂಡೆಗಲ್ಲು ಅವರ ಬಾಲ್ಯದ ಸವಿನೆನಹಿನ ಸಂಕೇತದಂತಿತ್ತು. ಪವಿತ್ರಾ ಒಂದೊಂದೇ ಹರಳನ್ನು ನೀರಿಗೆಸೆಯುತ್ತ ಮೌನ ಮುರಿದಳು :

'ನಾವು ಸಣ್ಣವರಿದ್ದಾಗ ಈ ಹೊಳ್ಯಾಗ ಹಾಳಿ ಹಡಗಾ ಬಿಡ್ತಿದ್ವಿ. ಆನಂದ ಈಗ ನೋಡು ಖರೇ ದೋಣಿ ಹತ್ತಿಗೊಂಡು ಈ ದಂಡಿಯಿಂದ ಆ ದಂಡಿಗೆ, ಆ ದಂಡಿಯಿಂದ ಈ ದಂಡಿಗೆ ಓಡ್ಯಾಡತೀವಿ.'

'ಆವಾಗ ಹಾಳಿ ಹಡಗು ಮುಳುಗಿದ್ರ ನಕ್ಕು ಮನೀಗೆ ಹೋಗ್ತಿದ್ವಿ ಈಗ ಬಿರುಗಾಳಿಗೆ ನಾವು ಕೂಡೋ ದೋಣಿ ಮುಳುಗಿದ್ರ.'

'ಛೀ ಹಂಗೆಲ್ಲಾ ಮಾತಾಡಬ್ಯಾಡಾ ಆನಂದ, ಈಗ ಯಾಕೋ ನನ್ಗ ಊರಾಗ ಇರಲಿಕ್ಕೆ ಹೆದರಿಕೆ ಬರಲಿಕ್ಕೆ ಹತ್ತೇದ. ಧಾರವಾಡದಾಗ ನೀನು ಕಾಲೇಜ ಕಲ್ತರೇನಾತು, ನಾನೂ ನಿನ್ನ ಜೋಡಿ ಇದ್ದುಬಿಡ್ತೀನಿ.'

'ಗಂಗಜ್ಜಿ ಬಿಡಬೇಕಲ್ಲ ನೀನು ಅಜ್ಜಾದ ಮೊಮ್ಮಗಳು'

'ನೀನು ಅಜ್ಜಾದ ಮೊಮ್ಮಗ'

'ಆದ್ರ ನೀನು ಕಣ್ಣು ಮುಂದ ಇರಬೇಕು ಅಂತ ಸಾಲಿ ಸಹಿತ ಬಿಡಿಸಿ ಕೂಡಿಸಿ ಕೊಂಡಾಳಲ್ಲ ಪವಿತ್ರಾ.'

'ನಾವಿಬ್ಬರೂ ಆಕಿ ಕಣ್ಣು ಆಗೀವಿ ಆನಂದ, ಆದ್ರ ಯಾಕೋ ಇವತ್ತು ನಾವಿಬ್ಬರೂ ಹೀಂಗ ಬಂದಿದ್ದು ಸೇರಲಿಲ್ಲ. ಬಹುಶಃ ಅಪ್ಪಾ ಏನೇನೋ ಚಾಡಿ ಹೇಳಿದಂಗ ಅದ. ನನಗ ಯಾಕೊ ಅಂಜಿಕಿ ಬರಲಿಕ್ಕೆ ಹತ್ತೇದ'

'ಇನ್ನ ಅಂಜಿದ್ರ ನಡಿಯೋ ಹಂಗಿಲ್ಲ ಪವಿತ್ರಾ. ನಮ್ಮ ಮನಸ್ಸು ಗಟ್ಟಿ ಮಾಡಬೇಕು, ನಮ್ಮ ನಿರ್ಧಾರ ಗಟ್ಟಿ ಮಾಡಬೇಕು. ಈಗ ನಮ್ಮ ಮುಂದ ಒಂದು ಗ್ವಾಡಿ ನಿಂತದ, ಅದ್ನ ಕಡದ ಹಾಕಬೇಕು.'

'ಈ ಸಂಬಂಧ ಪಾಪ ಆಗಲಿಕ್ಕಿಲ್ಲ ಹೌದಲ್ಲೋ ಆನಂದ.'

'ಮತ್ತೆ ಅದ ಪ್ರಶ್ನಿ ಕೇಳ್ತೀಯಲ್ಲಾ ಪವಿತ್ರಾ. ನಾವು ಒಂದs ಹೊಟ್ಟಿಯೊಳಗೆ ಹುಟ್ಟಿದ ಅಣ್ಣಾ ತಂಗಿ ಅಲ್ಲ. ಕಕ್ಕನ ಮಕ್ಕಳು ಇನ್ನೊಂದು ಜಾತಿಯೊಳಗ ಇಂಥ ಸಂಬಂಧ ಯೋಗ್ಯ ಅಂತ ಇದ್ದ ಮ್ಯಾಲೆ ಅಮಾನುಷ ಅಮಾನವೀಯ ಏನ ಅಲ್ಲ, ಆ ವಿಷಯದ ಬಗ್ಗೆ ನೀನು ಏನೂ ಯೋಚಿಸಬ್ಯಾಡಾ'

ದೋಣಿಯ ಹೊರ ಮೈ ನೀರು ಭೋರ್ಗರೆಯತೊಡಗಿತ್ತು. ದೋಣಿಯ ಒಳಗಡೆ ಕುಳಿತು ಅವರಿಬ್ಬರ ಎದೆಯ ಹಂಬಲಗಳೂ ಉಕ್ಕೇರತೊಡಗಿದ್ದವು. ಹಂತಹಂತವಾಗಿ ಕುತ್ತಿಗೆಯವರೆಗಿನ ನೀರಿನಲ್ಲಿ ಇಳಿದಂತಿದ್ದರು ಅವರು. ಮೋಡ ಹನಿಯೊಡೆಯಿತು. ಹೊಳೆಯ ತೆರೆಗಳೆಲ್ಲ ಕಣ್ಣು ಬಂದಂತೆ ಪಳಪಳನೆ ಪಿಳಿಕಿಸತೊಡಗಿದವು.

ಆನಂದ ಪವಿತ್ರರ ದೋಣಿ ಇನ್ನೂ ಹೊಳೆಯ ಮಧ್ಯದಲ್ಲೇ ಇತ್ತು. ಆನಂದ ಭರಭರನೆ ಹುಟ್ಟು ಹಾಕತೊಡಗಿದ. ಆಚೆಯ ದಂಡೆಗಿನ ತೆಂಗಿನ ತೋಟವನ್ನು ಅವರು ತಲುಪುವುದರಲ್ಲಿ ಇಬ್ಬರೂ ತೊಯ್ದುಹೋಗಿದ್ದರು. ಪವಿತ್ರಾಳ ಒದ್ದೆಯಾದ ಬಿಳಿಯ ಸೀರೆ ಯೌವ್ವನಾಂಗಗಳನ್ನು ತಬ್ಬಿಕೊಂಡು ಕಾಮನ ತಲುಬಿಗೆ ಪ್ರಚೋದನೆಯನ್ನಿತ್ತಿತ್ತು. ಮುಂಗುರುಳಿನಿಂದ ತೊಟ್ಟಿಕ್ಕುವ ಹನಿಗಳು ಅವಳ ಕಣ್ಣಿನ ಆಸೆ ಒಸರುತ್ತಿದ್ದಂತೆ ಭಾಸವಾಯಿತು.

ಆನಂದ ಪವಿತ್ರಾಳನ್ನು ತೆಂಗಿನ ಪೊದರಿನಲ್ಲಿ ಎಳೆದುಕೊಂಡ, ಅವರು ಅಲ್ಲಿಂದ ಎದ್ದು ಹೊಳೆಯ ದಂಡಿಗೆ ಬಂದಾಗ ಅದೂ ಶಾಂತವಾಗಿತ್ತು. ಮುಳುಗುವ ಸೂರ್ಯನ ಕಾಂತಿಯಿಂದ ನಳನಳಿಸತೊಡಗಿತ್ತು ಹೊಳೆ.

'ನಾವು ದಂಡಿಯಿಂದ ಎಷ್ಟು ದೂರ ಬಂದಬಿಟ್ಟೇವಲ್ಲ' ಪವಿತ್ರ ದೋಣಿಯನ್ನು ಹತ್ತುತ್ತ ನುಡಿದಳು.

'ನಾವು ದಂಡಿಯಿಂದ ದೂರ ಅಷ್ಟೆ ಬಂದಿಲ್ಲ. ಭಾಳಾ ಆಳಕ್ಕೂ ಇಳದೀವಿ. ನಮ್ಮನ್ನ ಇನ್ನು ಯಾರೂ ಆಗಲಿಸಲಿಕ್ಕೆ ಸಾಧ್ಯವೆ ಇಲ್ಲ'

ಆನಂದ ಉದ್ವೇಗದಲ್ಲಿ ಹುಟ್ಟನ್ನು ವೇಗವೇಗವಾಗಿ ಹಾಕುತ್ತ ದಂಡೆಯತ್ತ ಧಾವಿಸಿದ.

* * *

ದೋಣಿಯಿಂದ ಕೆಳಗೆ ಜಿಗಿದು ಪವಿತ್ರಾ ನೋಡುತ್ತಾಳೆ, ಹೆಗಲ ಮೇಲಿದ್ದ ಟವೆಲ್ ಜಾಡಿಸಿ ಅವಳ ಅಪ್ಪ ಶಾಮರಾಯ ದುರುಗುಟ್ಟಿ ನೋಡಿದ. ಅವಳ ಇಡೀ ದೇಹದಲ್ಲಿ ಹೊಗೆಯಾಡಿಸಿದಂತಾಯಿತು. ಬೆಚ್ಚಿಬಿದ್ದಳು. ಒಂದು ಕ್ಷಣ ಅವಳಿಗೆ ಮಾತೇ ಹೊರಡಲಿಲ್ಲ. ಶಾಮಕಕ್ಕನ ಆ ದೈತ್ಯಾಕಾರ ಕಂಡು ಆನಂದನೂ ಕಂಗೆಟ್ಟ.

'ಅಪ್ಪಾ' ಪವಿತ್ರ ಬಿಟ್ಟ ಬಾಯಿಗೆ ಬಿಗಿದು ಶಾಮರಾಯ ದರದರನೆ ಎಳೆದುಕೊಂಡು 'ಮನೀಗೆ ನಡಿ, ನಿನ್ನ ಚರ್ಮಾ ಸುಲೀತೇನಿ' ಎಂದು ಹೊರಟ, 'ಶಾಮಕಕ್ಕ, ಶಾಮಕಕ್ಕ' ಎನ್ನುತ್ತ ಆನಂದನೂ ಅವರನ್ನು ಅನುಸರಿಸಿದ.

ಮನೆ ತಲುಪಿದಾಗ ಯಾರೋ ಸತ್ತಂಥ ಮೌನ ಆವರಿಸಿತ್ತು. ಆನಂದನ ತಂದೆ ಭೀಮರಾಯ ಹಾಗೂ ತಾಯಿ ರಮಾಬಾಯಿ ಒಂದು ಮೂಲೆಗುಂಪಾಗಿದ್ದರು. ಪವಿತ್ರಾಳ ತಾಯಿ ಕಾವೇರಿ ಕೆಣಕಿದ ಸಿಂಹಿಣಿಯಂತೆ ಬಿಸಿಸುಯ್ಯುತ್ತ ವರಾಂಡದ ಬಾಗಿಲಿಗೆ ನಿಂತಿದ್ದಳು. ಪಡಸಾಲಿಗೆ ಹೊಂದಿದ ಕೋಣೆಯಲ್ಲಿ ಗಂಗಜ್ಜಿ ಗುಬ್ಬಚ್ಚಿಯ ಹಾಗೆ ಮುದುಡೆಯಾಗಿ ಬಿದ್ದಿದ್ದಳು.

ಪವಿತ್ರಾ ತಂದೆಯ ಕೈಯನ್ನು ಕೊಸರಿಕೊಂಡು, ಗಂಗಜ್ಜಿ ಗಂಗಜ್ಜಿ ಎಂದು ಅಳುತ್ತ ಅವಳನ್ನು ತಬ್ಬಿಕೊಂಡಳು. ಗಂಗಜ್ಜಿಯ ಬಾಯಿಂದ ಮಾತೇ ಹೊರಡಲಿಲ್ಲ. ಪ್ರಯಾಸದಿಂದ ಅವಳನ್ನು ಹತ್ತಿರ ಕರೆದುಕೊಂಡಳು.

ಶಾಮರಾಯ ಹದ್ದಿನಂತೆ ಎರಗಿ ಪವಿತ್ರಾಳನ್ನು ಎಳೆದು ಕಾವೇರಿ ಬಳಿಗೆ ದಬ್ಬಿದ. ತಬ್ಬಿಬ್ಬಾದ ಪವಿತ್ರಾ ತಾಯಿಯನ್ನು ತಬ್ಬಿಕೊಂಡಳು.

'ಗಂಗಜ್ಜಿ ಹಿಂದೇನು ಅಡಗಿಕೊಂಡು ಕೂಡ್ತಿ. ಆಕಿ ಅಬ್ಬಾಕ್ಕ ನಮ್ಮ ಮನೆತನಕ್ಕ ಕಳಂಕ ಬಂತು. ನಡಿ ಅತ್ಲಾಗ'

ಶಾಮರಾಯ ಕಿಡಿ ಕಾರಿದ.

'ಎಂಥಾ ನಾಚಿಗ್ಗೇಡಿ ಇದ್ದೀದಿ ಪವಿತ್ರಾ ನೀನು. ರಮೇಶ ತೆಂಗಿನ ತೋಪಿನ್ಯಾಗ ಹಾದು ಬರೋ ಮುಂದ ನಿಮ್ಮ ಹೊಲಸ ಕೆಲಸಾ ಎಲ್ಲಾ ನೋಡಿದ್ನಂತ. ಥೂ ನಮಗೆ ಮಾರಿ ತೋರಿಸಬ್ಯಾಡ ಹೋಗು ನೀನು.'

ಕಾವೇರಿ ಪವಿತ್ರಾಳ ಮುಖಕ್ಕೆ ಉಗುಳಿದಳು.

ಅದುವರೆಗೆ ಸುಮ್ಮನಿದ್ದ ಭೀಮರಾಯರು 'ಆನಂದ, ನೀವಿಬ್ಬರು ಅಣ್ಣ ತಂಗಿ ಅನ್ನೋ ಖಬರ ಆದ್ರು ಇರಬಾರದೇನೊ' ಕಳಕಳಿ ಹಾಕಿದ ತಲೆಯನ್ನು ಕೆಳಗೆ ಹಾಕಿಕೊಂಡೇ ಕೇಳಿದರು.

ಸನ್ನಿವೇಶವನ್ನು ಎದುರಿಸಲಿಕ್ಕೆ ಸನ್ನದ್ಧನಾಗಿ ನಿಂತ ಆನಂದ ಪವಿತ್ರಾಳ ಹತ್ತಿರ ಹೋಗಿ ಅವಳ ಕೈ ಹಿಡಿದುಕೊಂಡು 'ನಾನು ಪವಿತ್ರಾಳನ್ನು ಮದುವಿ ಆಗ್ತೀನಿ' ಎಂದ ದೃಢ ನಿರ್ಧಾರದಿಂದ.

'ಥೂ ಹೇಸಿ ಮುಂಡೇದ. ಏನ ಮಾತಾಡ್ತಿ. ನಾಲಿಗಿ ಬಿಗಿ ಹಿಡಿದುಕೊಂಡಾದ್ರು ಸುಮ್ಮನೆ ಕೂಡು' ಗಂಗಜ್ಜಿ ಧ್ವನಿಯಲ್ಲಿ ಶಕ್ತಿಹಾಕಿ ಕಿರುಚಿದಳು.

'ಆನಂದ, ನಮ್ಮ ಮನೆತನಕ್ಕ ಕೀರ್ತಿ ತಂದೇಳು' ಶಾಮರಾಯ ಕೆಣಕಿದ.

'ಅಣ್ಣ ತಂಗಿ ಅನಲಿಕ್ಕೆ ನಾವೇನು ಒಡಹುಟ್ಟಿದವರೇನು?'

'ನಾಳೆ ನೀ ಒಡಹುಟ್ಟಿದವರನ್ನು ಮಾಡಿಕೊಳ್ಳುವನ ಅನ್ನು.'

'ಶಾಮಕಕ್ಕ, ಬಾಯಿ ಬಿಗಿ ಹಿಡಿದ ಮಾತಾಡ್ರೀ'

'ಆನಂದ' ಭೀಮರಾಯ ಮಗನ ಕೆನ್ನೆಗೆ ಛಟಾರನೆ ಬಿಗಿದ. ತತ್ತರಿಸಿದ ಆನಂದ ಅದೇ ನಿರ್ಧಾರದ ಧ್ವನಿಯಲ್ಲಿ 'ಅಪ್ಪಾ, ನಾವು ಮಾಡಿದ್ದು ಅಸಹಜವೇನಲ್ಲ, ಅಪವಿತ್ರವೇನಲ್ಲ'

'ಬಹಳ ಸಹಜ ಆದಪಾ, ಊರಾಗ ಮಾರಿ ಎತ್ತದಂಗ ಮಾಡಿಬಿಟ್ಟೆಲ್ಲ.'

ಹಂಗಿಸುವ ಧ್ವನಿಯಲ್ಲಿ ಕಾವೇರಿ ಹೇಳಿದಳು. ರಮಾಬಾಯಿಗೆ ಏನು ಹೇಳಬೇಕೋ ತೋಚದಾಗಿತ್ತು. ನಾಲಿಗೆ ಹೊಲೆದುಕೊಂಡು ಕೂತಿದ್ದಳು.

'ಊರಿನ ಉಸಾಬರಿ ತೊಗೊಂಡು ನಾವೇನ ಮಾಡಬೇಕು' ಎಂದ ಆನಂದನ ಮಾತಿಗೆ ಕೆರಳಿದ ಭೀಮರಾಯರು, 'ಆನಂದ, ಬಾಯಿ ಮುಚಗೊಂಡು ಇರ್ತೀಯೋ ಇಲ್ಲೋ?' ಎಂದು ಕಿರುಚಿದರು.

'ಇದೇನೋ ಆನಂದ ಇದೇನ ಮಾಡಿಬಿಟ್ಟಿ. ನಾ ಸತ್ತಮ್ಯಾಲೆ ನನಗೆ ಇನ್ಮ್ಯಾಲೆ ಎಲ್ಲಿದೋ ಸದ್ಗತಿ. ನನಗ ನರಕ ತಪ್ಪಿದ್ದಲ್ಲ, ಅವರ್ನ ಕೂಡಕೊಳ್ಳೋ ಭಾಗ್ಯನೂ ಕಳಕೊಂಡಬಿಟ್ಟೆ.'

ಗಂಗಜ್ಜಿ ನರಳುತ್ತ ಎದ್ದು ಹೊರಗೆ ಬಂದಳು.

'ಗಂಗಜ್ಜಿ, ಇವೆಲ್ಲ ನಿಮ್ಮ ಹಳೇ ವಿಚಾರ' ಎಂದ ಆನಂದನ ಮಾತನ್ನು ಕೇಳಿ ಶಾಮರಾಯರು 'ಹೌದಪಾ, ನಾವು ಹಳೆ ವಿಚಾರದವರು, ನೀನು ಮನುಷ್ಯರು ಮಾಡೋ ಕೆಲಸ ಮಾಡೀ ಏನು?' ಎಂದು ಹಲ್ಲು ಕಚ್ಚಿ ನುಡಿದರು.

'ಬರೇ ಜಾತಿ ಅವರು ಅಷ್ಟೆ ಮನುಷ್ಯರಲ್ಲ. ಕೆಲವು ಬ್ಯಾರೆ ಧರ್ಮದವರಿಗೆ ಈ ಸಂಬಂಧ ಒಳ್ಳೇದು ಅಂತ ಅಂದ ಮ್ಯಾಲೆ ಈ ಧರ್ಮದವರಿಗೆ ಏನ ಆಗ್ತದ'

'ಆ ಜಾತಿಯೊಳಗೆ ಸೇರು ಹೋಗು'

'ಸಂದರ್ಭ ಬಂದ್ರ'

'ಆನಂದ ಬಾಯಿಗೆ ಬಂದ ಹಾಗೆ ಬೊಗಳ್ತೀ? ನಡೀ ಒಳಗ' ಆನಂದನನ್ನು ಭೀಮರಾಯರು ಒಳಗೆ ದೂಡಿಕೊಂಡು ನಡೆದರು.

ಶಾಮರಾಯರು ಕಾವೇರಿ ಕಿಡಿಕಿಡಿಯಾಗಿ ಪವಿತ್ರಾಳನ್ನು ಚೆನ್ನಾಗಿ ಥಳಿಸಿ ತಮ್ಮ ರೋಷವನ್ನು ತೀರಿಸಿಕೊಂಡರು. ಆನಂದನನ್ನು ಕೋಣೆಯೊಳಗೆ ನೂಕಿ ಕೀಲಿ ಹಾಕಿದ್ದರು. ಗಂಗಜ್ಜಿಯ ಜೀವ ತಳಮಳಿಸಿತು. ಆದರೆ ಅಂದು ಯಾರೂ ಅವಳ ಮಾತನ್ನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ.

......................

ಕುಲಕರ್ಣಿ ರಂಗರಾಯರು ಹೊಳೆಯೂರಿನ ಸುತ್ತಮುತ್ತಲಿನ ಊರಿಗೆಲ್ಲಾ ಪರಿಚಿತರು. ಎಲ್ಲರ ಕೈಯಿಂದಲೂ ನಾಲ್ಕು ಜನರಿಗೆ ಬೇಕಾದವರಾಗಿ ಬಾಳಿದವರು. ಕಣ್ಣು ಮುಚ್ಚುವಾಗ ಹಿರಿಯ ಮಗ ಭೀಮರಾಯ ಕಿರಿಯ ಮಗ ಶಾಮರಾಯನನ್ನು ಕರೆದು ಕುಟುಂಬದ ಮರ್ಯಾದೆಯನ್ನು ಕಾಪಾಡಿಕೊಂಡು ಹೋಗಬೇಕೆಂದು ಕೇಳಿಕೊಂಡಿದ್ದರು. ಈ ಅವಿಭಕ್ತ ಕುಟುಂಬದ ಸುಖವನ್ನು ಅದರ ಕೊಂಡಿಯಾಗಿದ್ದ ಗಂಗಜ್ಜಿ ಉಳಿಸಿಕೊಂಡು ಹೊರಟಿದ್ದಳು.

ಭೀಮರಾಯ ಹೊಲ ಮನಿ ನೋಡಿಕೊಂಡರೆ, ಶಾಮರಾಯ ವ್ಯಾಪಾರಕ್ಕೆ ಕೈಹಾಕಿದ್ದ. ಆದರೆ ಇಂದು ಆನಂದ ಆ ಸುಖೀ ಕುಟುಂಬದ ಆನಂದವನ್ನೇ ನಂದಿಸಿದಾತಿದ್ದ.

ದಿನಗಳು ಉರುಳಿದವು. ಕಾಲೇಜನ್ನು ಬಿಟ್ಟು ಕೂತ ಆನಂದನನ್ನು ಭೀಮರಾಯರು ಒತ್ತಾಯದಿಂದ ಧಾರವಾಡಕ್ಕೆ ಕರೆದುಕೊಂಡು ಹೋಗಿ ಪುನಃ ಸೇರಿಸಿ ಬಂದರು. ಮನೆಯಲ್ಲಿ ಸದಾ ರಸಕಸಿ. ಶಾಮರಾಯರು ಕಾವೇರಿ ದಿನವಿಡಿ ಆನಂದ, ರಮಾಬಾಯಿ ಭೀಮರಾಯರಿಗೆ ಹಿಡಿ ಶಾಪ ಹಾಕುತ್ತಲೇ ಇದ್ದರು. ಭೀಮರಾಯರಿಗೂ ಇದನ್ನು ಸಹಿಸದಂತಾಯಿತು. ಆದರೆ ಹೊಂದಿಕೊಂಡು ನಡೆವುದೂ ಅಸಾಧ್ಯವೆನಿಸಿತು.

'ಅವ್ವಾ, ಈ ಮನ್ಯಾಗ ನಾನು ಶಾಮೂ ಕೂಡಿ ಇರಲಿಕ್ಕೆ ಸಾಧ್ಯನ ಇಲ್ಲ. ಬ್ಯಾರೆ ಮನೀ ಮಾಡಿಬಿಡೋಣೇನು?' ಎಂದು ಕೇಳಿದರು.

ಗಂಗಜ್ಜಿ ಕಣ್ಣಲ್ಲಿ ನೀರೂರಿತು. ಎಪ್ಪತ್ತು ವರುಷ ವಯಸ್ಸಾಗಿದ್ದರೂ ಹುಡುಗಿಯಂತೆ ಚಟುವಟಿಕೆಯಿಂದ ಇದ್ದ ಗಂಗಜ್ಜಿ ಈಗ ಮುಪ್ಪಿನ್ನಪ್ಪಿದ್ದಳು. ಆ ಅಶಕ್ತ ದನಿಯಲ್ಲೇ 'ಇನ್ನು ಸ್ವಲ್ಪ ದಿವಸ್ಸ ತಡದ ನೋಡು ಭೀಮ, ನೀ ಹಿರೇಂವಾ ಸಮಾಧಾನ ತಂದಕೋಬೇಕು. ಈ ಕುಟುಂಬ ಒಡಿಯೋದಿಲ್ಲ ಅಂತ ನೀನು ಇವರಿಗೆ ವಚನಾ ಕೊಟ್ಟಿ ಅಲ್ಲೊ' ಎಂದು ನೆನಪು ಮಾಡಿಕೊಟ್ಟಳು.

ತಾಯಿ ಮಾತಿಗೆ ಕಟ್ಟುಬಿದ್ದು ಭೀಮರಾಯ ಸಮಾಧಾನ ತಂದುಕೊಂಡು ಮಡದಿ ರಮಾಬಾಯಿಯನ್ನು ಸಂತೈಸಿದ.

ಆನಂದ ಲೈಬ್ರರಿಯ ಪುಸ್ತಕದ ರಾಶಿಯಲ್ಲಿ ಮನಸ್ಸನ್ನು ಸ್ಥಿರೀಕರಿಸಲು ಪ್ರಯತ್ನಿಸಿ ವಿಫಲನಾದ. ಪುಸ್ತಕದ ಪ್ರತಿಯೊಂದು ಪುಟದಲ್ಲಿ ಪವಿತ್ರಾಳ ಅಸಹಾಯಕ ನೋಟ. ಟೇಬಲ ಮೇಲೆ ಪುಸ್ತಕ ಇರಿಸಿ ಅದರಲ್ಲಿ ಮುಖವನ್ನು ಇರಿಸಿ ಮಲಗಿಬಿಟ್ಟ.

'ಆನಂದ ಇದೇನು ಲೈಬ್ರರಿ ಬಂದಾತು? ಇನ್ನೂ...'

ಗೆಳೆಯ ಕೇಶವ ಎಬ್ಬಿಸಿದಾಗಲೇ ಎಚ್ಚರ. ಇಬ್ಬರೂ ಮೆಟ್ಟಿಲು ಇಳಿದು ವಿಶ್ವವಿದ್ಯಾಲಯದ ಬೊಟ್ಯಾನಿಕಲ ಗಾರ್ಡನ್ನಿಗೆ ಬಂದರು. ದಾರಿ ಉದ್ದಕ್ಕೂ ಆನಂದ ತನ್ನ ಮನದ ಮಿಡಿತವನ್ನು ವಿವರಿಸಿದ.

'ಆನಂದ ನಿನ್ನ ಸಹಾಯಕ್ಕ ನಾ ಇದ್ದೀನಿ. ನೀ ಏನೂ ಕಾಳಜೀ ಮಾಡಬ್ಯಾಡಾ. ಪವಿತ್ರಾನ್ನ ಇಲ್ಲಿಗೆ ಕರಕೊಂಡು ಬಂದುಬಿಡು.'

'ಅದ ವಿಚಾರ ಮಾಡಲಿಕ್ಕೆ ಹತ್ತೇನಿ ಕೇಶವಾ. ಈ ಊರಾಗನೂ ನಮ್ಮ ಸಂಬಂಧಿಕರು ಇದ್ದಾರ, ಬೆಳಗಾಂವನ್ಯಾಗ ಇದ್ದಾರ, ಹುಬ್ಬಳ್ಯಾಗ ಇದ್ದಾರ. ಎಲ್ಲ್ಯಾರ ಆಕಿನ್ನ ಬಿಡಲಿಕ್ಕೆ ಬರ್‍ತದ.'

'ಆಮ್ಯಾಲ ಮುಂದಿನ ವಿಚಾರ, ನಡಿ ಏಳು'

ಇಬ್ಬರೂ ಹೊರಟು ಹೋದರು. ಆನಂದ ಪವಿತ್ರಾಳನ್ನ ಕರೆತರುವ ಪ್ಲ್ಯಾನಿನಲ್ಲಿ ಹಲವಾರು ದಿನಗಳನ್ನು ಕಳೆದ.

......

"ಅವ್ವಾ ತಲೀಗೆ ಚಕ್ರ ಬರಲಿಕ್ಕೆ ಹತ್ತೇದ. ಕಣ್ಣ ಕತ್ತಲ ಗುಡಸಲಿಕ್ಕೆ ಹತ್ತೇದ" ಎಂದು ಪವಿತ್ರಾ ಚೀರಿಕೊಂಡಾಗ ಕಾವೇರಿಯ ಎದೆ ಝಲ್ ಎಂದಿತು. ಅವಳು ಓಡಿ ಬರುವಷ್ಟರಲ್ಲಿ ಪವಿತ್ರಾ ಕುಸಿದು ಬಿದ್ದಿದ್ದಳು.

ಪವಿತ್ರಾಗೆ ಎಚ್ಚರವಾದಾಗ ಬಳಿಯಲ್ಲಿ ಯಾರೂ ಇರಲಿಲ್ಲ. ಮಗ್ಗಲು ಕೋಣೆಯಲ್ಲಿ ಕಾವೇರಿಬಾಯಿ ಶಾಮರಾಯರು ಪಿಸುಗುಟ್ಟುತ್ತಿದ್ದುದು ಕೇಳಿಸಿತು.

"ನನ್ನ ಇಕಿ ಕಡಿಗಿ ಮುಂದ ಹೋದಾಗ ಸಂಶೆ ಬಂದಿತ್ತು. ಆದರ್ಹಂಗ ಆತು. ಈ ಮುಂಡಿ ನಮ್ಮ ಮಾನಾ ಎಲ್ಲಾ ಬಜಾರಕ್ಕ ತಂದುಬಿಟ್ಟಳು"

"ಸ್ವಲ್ಪ ಶಾಂತ ಆಗು ಕಾವೇರಿ. ಮುಂದ ಏನ ಮಾಡಬೇಕು ಅನ್ನೋದು ಯೋಚನಿ ಮಾಡಬೇಕು."

"ಮದ್ಲಿಗೆ ಮನಿ ಬ್ಯಾರೆ ಮಾಡ್ರೀ. ಈಗ ಈ ಸದ್ಧ ಇನ್ನು ಒಂದು ಕ್ಷಣ ಇಲ್ಲೆ ಇರೋದು ಬ್ಯಾಡಾ."

"ಹೌದು, ಇವತ್ತ ಮನಿ ಹುಡುಕಿಕೊಂಡು ಬಂದುಬಿಡ್ತೀನಿ. ಪವಿತ್ರಾನ್ನ"

"ಪವಿತ್ರಾನ್ನ ಬೆಂಗಳೂರಿಗೆ ಕರಕೊಂಡು ಹೋಗಿ ಹೊಟ್ಟಿ ತಗಿಸಿಕೊಂಡು ಬಂದಬಿಡ್ರಿ. ಲಗು ಒಂದ ಗಂಡು ನೋಡಿ ಮದ್ವಿ ಮಾಡಿಬಿಡೋಣ."

ಪವಿತ್ರಳ ಎದೆಯೊಡೆದು ಹೋಯಿತು. ಅವಳ ಕರಾಳ ಭವಿಷ್ಯದ ಕಗ್ಗತ್ತಲಿನಲ್ಲಿ ಆನಂದದ ರೇಖೆ ಕೂಡ ಮಿಂಚಲಿಲ್ಲ. ಗಂಟಲಲ್ಲಿ ಉಸಿರುಗಟ್ಟಿತ್ತು. ಕಣ್ಣೀರು ಧಾರಾಕಾರವಾಗಿ ಹರಿಯತೊಡಗಿತ್ತು.

................................

ರಂಗರಾಯರ ಎದೆಯನ್ನೇ ಸೀಳಿದಂತೆ ಆ ಮನೆ ಒಡೆದುಹೋಯಿತು. ಅಣ್ಣ ತಮ್ಮಂದಿರಿಬ್ಬರೂ ಎಲ್ಲವನ್ನು ಎರಡು ಭಾಗ ಮಾಡಿ ಹಂಚಿಕೊಂಡುಬಿಟ್ಟರು.

"ನನ್ನೂ ಎರಡೂ ಭಾಗ ಮಾಡಿ ಹಂಚಿಕೊಂಡುಬಿಡ್ರಪ್ಪಾ ಅಂದ್ರ ಅವರಿಗೂ ಸಮಾಧಾನ ಆಗ್ತದ" ಎಂದು ಗಂಗಜ್ಜಿಯ ಎದೆಗೆ ಚೂರಿ ಬಿದ್ದಂತಿತ್ತು.

ಗಂಗಜ್ಜಿ ಭೀಮರಾಯರ ಜೊತೆಗೆ ಉಳಿದುಕೊಂಡಳು. ಶಾಮರಾಯ ಕಾವೇರಿ ತಮ್ಮ ಜೊತೆಗೆ ಕರೆದುಕೊಂಡು ಹೋಗುವ ಇಚ್ಛೆಯನ್ನೂ ಪ್ರಕಟಪಡಿಸಲಿಲ್ಲ. ಪವಿತ್ರಾ ಗಂಗಜ್ಜಿಯನ್ನು ಅಪ್ಪಿಕೊಂಡು ಭೋರಿಟ್ಟಳು. ಶಾಮರಾಯರು ಅವಳನ್ನು ಎಳೆದುಕೊಂಡು ಹೋದರು.

ಅಂದು ಅಸ್ತಮಾ ಹೆಚ್ಚಾಗಿ ಗಂಗಜ್ಜಿಯನ್ನು ನೆಲಕ್ಕೆ ಹಾಕುವ ಹೊತ್ತು ಬಂದಂತಾಗಿತ್ತು. ಗೂರುತ್ತ ಬಿದ್ದಿದ್ದಳು ಮೂಲೆಯಲ್ಲಿ. ಭೀಮರಾಯ, ರಮಾಬಾಯಿ ಹತ್ತಿರವೇ ಕುಳಿತಿದ್ದರು. ಗಂಗಜ್ಜಿಯನ್ನು ಕಾಣುವ ಹಂಬಲದಲ್ಲಿ ಪವಿತ್ರಾ ತಾಯಿಯ ಮನ ಒಲಿಸಿಕೊಂಡು ಬಂದಿದ್ದಳು. ಆನಂದನೂ ಧಾರವಾಡದಿಂದ ಬಂದಿದ್ದ.

ಸಂಜೆ ಏಳು ಗಂಟೆಯಾಗಿರಬಹುದು. ಮಬ್ಬುಗತ್ತಲೆ ಕವಿದಿತ್ತು. ಆನಂದ ಪವಿತ್ರ ಎಷ್ಟು ಹೊತ್ತು ಕುಳಿತಿದ್ದರೋ ಸಮಸ್ಯೆಗೆ ಪರಿಹಾರ ಕಾಣದೆ. ಆನಂದ ಎಂದ:

"ಪವಿತ್ರಾ, ಈಗ ನಮಗೆ ಉಳಿದಿರೋದು ಒಂದೇ ಹಾದಿ"

"ಏನು?"

"ನಾವು ಇಲ್ಲಿಂದ ಧಾರವಾಡಕ್ಕ ಓಡಿ ಹೋಗಿಬಿಡೋಣ."

"ಅಪ್ಪಾ ಅಮ್ಮಾಗ ಗೊತ್ತ ಆದ್ರ ನನ್ನ ಚರ್ಮ ಸುಲಿದುಬಿಡ್ತಾರ."

"ಈಗ ಅಂಜಿ ಬದುಕಲಿಕ್ಕೆ ಸಾಧ್ಯನ ಇಲ್ಲ. ನೀ ಹಿಂಜರಿದ್ರ ನಿನ್ನ ಹೊಟ್ಯಾನ ನನ್ನ ಸಂತಾನ ಸಾಯ್ತದ, ನಿನ್ನ ಮಾತೃತ್ವ ಸಾಯತದ. ಈ ಊರಿನ ಈ ಎರಡು ಮನೆತನದ ಪರ್ಲ ಹರಕೊಂಡು ಹೋಗಿ ಬಿಡಬೇಕು."

"ಹೌದು ಆನಂದ, ಈಗ ನಮಗ ಅದ ಒಂದು ಹಾದಿ. ಇವತ್ತು ಅಪ್ಪ ಊರಾಗಿಲ್ಲ. ಇವತ್ತಿನಂತೆ ಮತ್ತ ನಾವು ಕೂಡಲಿಕ್ಕೆ ಸಾಧ್ಯನ ಇಲ್ಲ."

"ನೀ ಹೇಳೋದು ಖರೇ ಆದ ಪವಿತ್ರಾ. ನನ್ನ ಗೆಳೆಯನೂ ಸಹಾಯಕ್ಕ ಇದ್ದಾನ "

"ನಡೀ, ಉಟ್ಟ ಸೀರಿ ಮ್ಯಾಲೆ ಬಂದಬಿಡ್ತೀನಿ ಹೀಂಗ ಓಡಿ ಹೋಗಿಬಿಡೋಣ" ಆನಂದ ಪವಿತ್ರ ಹೊಳೆಯ ಪ್ರವಾಹದೊಂದಿಗೆ ತೂರಿಕೊಂಡು ಹೋದರು.

*   *   *

ಒಂದು ವಾರ ಉರುಳಿರಬೇಕು. ಆನಂದ, ಪವಿತ್ರಾ, ಕೇಶವ ಅಜ್ಞಾತವಾಸದ ಜೀವನ ಸಾಗಿಸತೊಡಗಿದ್ದರು. ಊರಿನಿಂದ ಓಡಿ ಬಂದಾಗಿನಿಂದ ಪವಿತ್ರಾ ಹಾಸಿಗೆ ಹಿಡಿದುಬಿಟ್ಟಿದ್ದಳು. ಯೌವ್ವನದಿಂದ ತುಂಬಿದ ಅವಳ ದೇಹ ಕೃಶವಾಗಿ ಹೋಗಿತ್ತು. ಅರ್ಧ ಕರಗಿ ಹೋದಂತಿದ್ದಳು. ಚಲುವು ಕಮರಿಹೋಗಿತ್ತು. ತಂದೆ ತಾಯಿಯ ಹೆಸರನ್ನೆತ್ತಲೂ ಸಹ ಹೇಸಿಕೆ ಎನ್ನಿಸಿತು ಅವಳಿಗೆ.

"ಪವಿತ್ರಾನ್ನ ಹುಡಕ್ಯಾಡಿ ಕರಕೊಂಡು ಬರ್ರಲ್ಲ" ಎಂದು ಕಾವೇರಿ ನುಡಿದಾಗ ಶಾಮರಾಯರು ಸಿಟ್ಟಿನಿಂದ ಅವಳು ನನ್ನ ಪಾಲಿಗೆ ಸತ್ತಾಳ. ಬೇಕಾದ್ರ ತಾನು ಬಾಗಲಿಗೆ ಬಂದು ಬೀಳಲಿ" ಎಂದು ಮಾತು ಮುಗಿಸಿದ್ದರು. ಭೀಮರಾಯರು ಆನಂದ, ಪವಿತ್ರಾರನ್ನು ಶೋಧಿಸಲು ಪ್ರಯತ್ನಿಸಿ ವಿಫಲರಾಗಿದ್ದರು. ಗಂಗಜ್ಜಿ ಇನ್ನೂ ಎಷ್ಟು ದಿವ್ಸ ಜೀವ ಹಿಡಿದುಕೊಂಡು ಇರಲಿಕ್ಕೆ ಸಾಧ್ಯ?

ಪವಿತ್ರಾ ಈಗ ಎಂಟು ತಿಂಗಳ ಬಸುರಿ. ಅಸ್ತವ್ಯಸ್ತ ಮನಸ್ಸು ಅಶಕ್ತ ದೇಹ ಯಾವ ಆಘಾತವನ್ನು ಸಹಿಸದಂತಾಗಿತ್ತು. ಆದರೆ ಅವಳ ಪಾಲಿಗೆ ಆಘಾತಗಳ ಸರಪಳಿಯ ಹೊರತು ಮತ್ತೇನೂ ದೊರೆಯಲಿಲ್ಲ. ಆನಂದ ಕೇಶವ ಗಳಿಸುವ ಗಳಿಕೆ ಅವಳ ಔಷಧಿ, ಟಾನಿಕುಗಳಿಗೆ ವ್ಯಯವಾಗತೊಡಗಿತು. ಗರ್ಭಿಣಿ ಇದ್ದಾಗ ಜಾಂಡೀಸ ಸೇರಿದರೆ ತಾಯಿ ಮಗು ಇಬ್ಬರ ಜೀವಕ್ಕೂ ಅಪಾಯ ಎಂದಿದ್ದರು ಡಾಕ್ಟರರು. ಅದಕ್ಕಾಗಿ ಆನಂದ ಧಾರವಾಡ, ಹುಬ್ಬಳ್ಳಿ, ಬೆಳಗಾವಿಯಲ್ಲಿಯ ಸಂಬಂಧಿಕರ ಮನೆಯಲ್ಲಿ ಕೆಲವು ತಿಂಗಳ ಮಟ್ಟಿಗಾದರೂ ಇರಬೇಕೆಂದು ಪ್ರಯತ್ನಿಸಿದ. ಆದರೆ ಅಲ್ಲೆ ಪವಿತ್ರಾಗೆ ನೆಮ್ಮದಿಯ ಬದಲು ಇಲ್ಲದ ರೋಗಗಳು

ಕಾಣಿಸಿಕೊಂಡು ಉಲ್ಬಣಿಸತೊಡಗಿದವು. ಫುಟಬಾಲಿನಂತೆ ಒಂದು ಮನೆಯಿಂದ ಇನ್ನೊಂದು ಮನೆಗೆ ಹೊಟ್ಟೆ ಹೊತ್ತುಕೊಂಡು ತಿರುಗಿದಳು ಪವಿತ್ರಾ. ಅಲೆದು ಅಲೆದು ಸೋತು ಸುಣ್ಣವಾಗಿ ಹೋಗಿದ್ದಳು.

ಆನಂದ ಮನೆಗೆ ಬಂದ. ಅವಳ ಆಕಾರವನ್ನು ನೋಡಿ ಕರುಳು ಹಿಚುಕಿ ಬಂತು. ಅವಳ ಮುಂಗುರುಳು ನೇವರಿಸುತ್ತಾ ಕೇಳಿದ :

"ಪವಿತ್ರಾ, ನಿನ್ನ ಸುಖಾನ ನನ್ನ ಸುಖಾ ನೀ ಈ ರೀತಿ ಕೊರಕ್ಕೋತ ಹೋದ್ರ ನಾನಾದ್ರು ಹ್ಯಾಂಗ ಬದುಕಬೇಕು?"

"ಆನಂದ, ನನ್ನಿಂದ ನಿನಗೂ ಯಾವ ಸುಖಾ. ಇಲ್ಲಾ. ಗಂಗಜ್ಜಿ ಹೇಳಿದಂಗ ಈ ಸಂಬಂಧ ಪಾಪ ಇರಬೇಕು."

"ಮತ್ತ ಅದ ಮಾತು ಆಡ್ತಿ ಅಲ್ಲ."

"ಹೌದು, ನಂದನದಂಥಾ ನಮ್ಮ ಮನೆತನದ ಒಡದಹೋತು. ಗಂಗಜ್ಜಿ ಸಾಯಲಿಕ್ಕೆ ಆಗ್ಯಾಳ. ಇದು ಪಾಪದ ಸಂಬಂಧನ ಕಾಣಸ್ತದ."

"ಮತ್ತ ಅದೆ ವಿಚಾರನ. ನಾ ಸಾಕಷ್ಟು ವಿಚಾರ ಮಾಡೀನಿ ಪವಿತ್ರಾ."

ನಿನ್ನ ಆರೋಗ್ಯದ ಕಡೆ ಲಕ್ಷ್ಯ ಕೊಡು" ಎಂದು ಉದ್ವೇಗದಿಂದ ಹೇಳಿದ ಆನಂದ.

ಆನಂದ ಕೇಶವ, ಪವಿತ್ರಳ ಮನಸ್ಸನ್ನು ಪ್ರಫುಲ್ಲಗೊಳಿಸಲು ಸಾಕಷ್ಟು ಪ್ರಯತ್ನಿಸಿದರು. ಆದರೆ ಎಲ್ಲವೂ ವ್ಯರ್ಥವಾಯಿತು. ಅವಳು ಕಣ್ಣು ಮುಚ್ಚಿದ ಕೂಡಲೇ ತಂದೆ ತಾಯಿ, ಗಂಗಜ್ಜಿ ಆನಂದ ಜಾತಿ ಧರ್ಮ ಪಾಪ, ಪುಣ್ಯ ಎಲ್ಲಾ ಸುಳಿದು ಹೋಗುತ್ತಿದ್ದವು. ಗಂಗಜ್ಜಿಗೆ ಸದ್ಗತಿ ಇಲ್ಲಾ, ಗಂಗಜ್ಜಿಗೆ ಸದ್ಗತಿ ಇಲ್ಲಾ ಅದೇ ಕನವರಿಕೆ. ಅವೇ ಪ್ರೇತಗಳು ಹತ್ತು ತಿಂಗಳೂ ಅವಳನ್ನು ಮುತ್ತಿ ಹಡೆಯುವಂತೆ ಮಾಡಿದವು.

ಅಂತೂ ಪವಿತ್ರಾ ಸುನೀತಿ ಪ್ರಸೂತಿಗೃಹದಲ್ಲಿ ಹೆತ್ತಳು. ಇದುವರೆಗೆ ಆ ಪ್ರಸೂತಿ ಗೃಹದಲ್ಲಿ ಅಂಥ ಸಂತಾನವನ್ನೇ ಕಂಡಿರಲಿಲ್ಲ. ಊನ ಸಂತಾನ, ಅಕರಾಳ ವಿಕರಾಳ ರೂಪ. ಹುಟ್ಟಿದಾಗಲೇ ಸತ್ತು ಹೊರ ಬಂದಿತ್ತು. ಹುಗಿದು ಬಂದಂತಾಯಿತು.

ಮತ್ತೆ ಆ ನೀರವ ವಾತಾವರಣದ ಕತ್ತಲಲ್ಲಿ ಅವರ ಪ್ರಣಯದ ಹೋರಾಟದ ಸತ್ತ ಪ್ರತಿಮೆಗಳು ನುಸುಳಿ ಹೋದವು. ಪವಿತ್ರಾ ಅಂದದ್ದನ್ನೇ ಅನ್ನತೊಡಗಿದ್ದಳು. ಪಾಪ ಸಂಬಂಧ, ಪಾಪ ಸಂಬಂಧ.....

'ಪವಿತ್ರಾ ಪವಿತ್ರಾ'

'ಆನಂದ ನನ್ಗ ಗಂಗಜ್ಜಿ ನೆನಪು ಭಾಳ ಆಗಲಿಕ್ಕೆ ಹತ್ತೇದ. ಹೋಗೋಣ ನಡಿ.'

'ಈಗ ಇನ್ನೂ ನಿನ್ನ ಈ ಹಸಿ ಮೈ.'

'ನಾನು ಇನ್ನು ಸ್ವಲ್ಪ ಹೊತ್ತು ಬದುಕಬೇಕು ಅಂದ್ರ ನಡಿ ನನ್ನ ಕರಕೊಂಡು ನಡಿ ಗಂಗಜ್ಜಿ ಹತ್ರ.'

ಪವಿತ್ರಳ ಹಟ ಹಿಡಿದಳು. ಡಾಕ್ಟರರು ಅವಳ ಮನಸ್ಸಿನ ವಿರುದ್ಧ ನಡೆದುಕೊಳ್ಳದಿರಲು ಹೇಳಿದರು.

* * *

ಅಂದು ಅಮಾವಾಸ್ಯೆಯ ಭಯಾನಕ ರಾತ್ರಿ. ವಾರವಿಡೀ ಸುರಿದ ಮಳೆ ಅಂದು ತನ್ನ ಶಕ್ತಿಯನ್ನು ಇಮ್ಮಡಿಸಿತ್ತು. ಅದರ ಕಸುವು ಹೆಚ್ಚುತ್ತಲೇ ಸಾಗಿತ್ತು. ಹೊಳೆಯೂರಿನ ಜನ ತಲ್ಲಣಿಸಿ ಹೋಯಿತು.

ಕಿಟಕಿಯ ಬಳಿಯ ಮಂಚದ ಮೇಲೆ ಗೂಡುಗಟ್ಟಿದ ಗುಬ್ಬಚ್ಚಿಯಂತೆ ಗಂಗಜ್ಜಿ ಅರೆ ಪ್ರಜ್ಞೆಯಲ್ಲಿದ್ದಳು. ಅವಳ ಅರ್ಧಮರ್ಧ ಕಣ್ಣು ತೆರೆದಿತ್ತು. ಮಿಂಚಿದ ಬೆಳಕಿನಲ್ಲಿ ಕತ್ತಲಲ್ಲೂ ಏನೇನೋ ಆಕಾರಗಳು, ವಿಕಾರಗಳು ನಾನಾ ರೂಪ ತಾಳಿ ಅವಳ ಕಣ್ಣ ಮುಂದೆ ಕುಣಿಯತೊಡಗಿದವು. ಆನಂದ ಪವಿತ್ರಾಳ ಅಪ್ಪುಗೆಯ ಚಿತ್ರ. ರಂಗರಾಯರನ್ನು ಸ್ವರ್ಗದಿಂದ ನರಕಕ್ಕೆ ದೂಡುವ ಚಿತ್ರ. ಸದ್ಗತಿ ದೊರಕದೆ ತಾನು ಪ್ರೇತವಾದಂತೆ, ಒಂದೇ ಎರಡೇ! ಅನೇಕ ರೂಪುಗಳ ಕೊಳ್ಳಿದೆವ್ವಗಳ ಕುಣಿತ. ಬಿರುಗಾಳಿಯ ಹೊಡೆತಕ್ಕೆ ಕಿಟಕಿ ಬಾಗಿಲು ತೆರೆದುಕೊಂಡಿತು. ಅದರ ಜೊತೆಗೆ ಸಾರಬಸವನ ಧ್ವನಿಯೂ ಅಲಿಸಿ ಬಂತು. ರಮಾಬಾಯಿ ಕಿಟಕಿ ಬಾಗಿಲ ಹಾಕಲು ಹೋದಳು. ಪ್ರಯಾಸದಿಂದ ಗಂಗಜ್ಜಿ 'ಬಾಗಿಲ ಹಾಕಬ್ಯಾಡ ತಡಿ' ಎಂದಳು. ಸಾರ ಬಸವನ ಧ್ವನಿ ಜೋರಾಗಿ ಕೇಳಿಸಿತು. "ಕೇಳ್ರಪ್ಪೊ ಕೇಳ್ರೀ, ಸಾರಬಸವ ಸಾರಲಿಕ್ಕೆ ಹತ್ಯಾನ  ಮನುಷ್ಯಾನ ಪಾಪದ ಕೊಡಾ ತುಂಬಿದಾಗ ಹೊಳೆಯೂರಿನ ಮಳಿ ಮಲ್ಲೇಶ್ವರನ ಗುಡಿ ಗೋಪುರದ ಮ್ಯಾಲ ಕೂತು ಗುಬ್ಬಿ ನೀರು ಕುಡಿತದ. ಊರು ನೀರಾಗಿ ಹೋಗ್ತದ. ನೀರಿನ ಊರಾಗ್ತದ ಹೊಳೆಯೂರು. ಪಾಪದ ಕೊಡ ತುಂಬಲಿಕ್ಕೆ ಹತ್ತ್ಯೇದ."

ಭೀಮರಾಯ ಕಿಟಕಿಯ ಬಳಿ ಹೋಗಿ ನೋಡಿದಾಗ ಕಂದೀಲ ಹಿಡಕೊಂಡು ಸಾರಬಸವ ಹರಿದ ಛತ್ರಿಯ ಅಡಿಯಲ್ಲಿ ನಡೆದಿದ್ದ. ಚಟ ಛಡಲ್ ಎಂದು ಸಿಡಿಲು ಬಡಿದಾಗ, ಊರೇ ನಡುಗಿ ಲೈಟುಗಳೆಲ್ಲಾ ನಂದಿಹೋದವು'. ಗಂಗಜ್ಜಿ ಬಡಬಡಿಸಿದಳು. 'ಪಾಪಾ.... ಪಾಪದ ಕೊಡ ತುಂಬ್ತು. ಇವತ್ತ ಪ್ರಳಯ ಆಗ್ತದ. ನೀವೆಲ್ಲಾ ಈಗಿಂದೀಗ ಊರ ಬಿಟ್ಟು ಹೋಗ್ರಿ.'

ಅವಳ ಭವಿಷ್ಯವಾಣಿಯೇ ಎನ್ನುವಂತೆ ಸ್ವಲ್ಪ ಹೊತ್ತಿನಲ್ಲಿಯೇ ಹೊಳೆಯೂರಿನ ಒಡ್ಡು ಒಡೆದುಹೋಯಿತು. ವೈರಿಯ ಸೈನ್ಯದಂತೆ ಪ್ರವಾಹ ಊರಲ್ಲಿ ನುಗ್ಗಿತು. ಎಲ್ಲೆಡೆ ಕೋಲಾಹಲ, ಚೀರಾಟ ಊರು ಕೊಚ್ಚಿಕೊಂಡುಹೋಯಿತು. ಇದ್ದವರ್ಯಾರೋ ಸತ್ತವರ್ಯಾರೋ ದೇವರಿಗೇ ಗೊತ್ತು.

ದಾರಿ ಕಟ್ಟಾಗಿದ್ದರಿಂದ ಹೊಳೆಯ ಬಳಿಯೇ ಬಸ್ಸು ಆನಂದ ಪವಿತ್ರರನ್ನು ಇಳಿಸಿ ಹೋಗಿಬಿಟ್ಟಿತ್ತು. ಪ್ರವಾಹ ಏರುತ್ತಿದ್ದರೂ ಪವಿತ್ರಾಳ ಒತ್ತಾಯಕ್ಕೆ ಆನಂದ ಅವಳನ್ನು ಕರೆದುಕೊಂಡು ಹೊರಟಿದ್ದ, ಹೇಗೋ ಪಾರಾಗಬೇಕೆಂದಾಗ ಪ್ರವಾಹದ ಸೆಳೆತಕ್ಕೆ ಇಬ್ಬರೂ ಕೊಚ್ಚಿಕೊಂಡು ಹೋದರು. ಎಲ್ಲೆಡೆ ಕತ್ತಲು. ಪವಿತ್ರಾ ಪವಿತ್ರಾ ಎಂದು ಅರಚುತ್ತ ಗಿಡದ

ಟೊಂಗೆಯ ಮೇಲೆ ಇಡೀ ರಾತ್ರಿ ಕಳೆದ ಆನಂದ. ಬೆಳಗು ಹರಿದಾಗ ನೋಡುತ್ತಾನೆ. ಪವಿತ್ರಾಳ ದೇಹ ಅದೇ ಗಿಡದ ಎರಡು ಬೊಡ್ಡೆಗಳ ಮಧ್ಯ ಸಿಕ್ಕುಬಿದ್ದಿತ್ತು. ಸರ‍್ರನೆ ಅತ್ತ ಧಾವಿಸಿದ. ಮೂಗಿನ ಬಳಿ ಕೈಯಿರಿಸಿ ನೋಡಿದ ಉಸಿರು ಹಿಂಗಿಹೋಗಿತ್ತು. ಪ್ರವಾಹ ಇಳಿಯತೊಡಗಿತ್ತು. ದೇಹವನ್ನು ಹೆಗಲ ಮೇಲೆ ಹಾಕಿಕೊಂಡು ಊರ ಕಡೆಗೆ ನಡೆದ. ಕೆಸರಿನಲ್ಲಿ ಕಚ್ಚನೆ ಕಾಲಿರಿಸಿದಾಗ ಯಾವುದೋ ಹೆಣವನ್ನು ತುಳಿದಂತಾಯಿತು. ಅಲ್ಲೆ ಕಲ್ಲಿನ ಮೇಲೆ ಪವಿತ್ರಾಳ ಶವವನ್ನಿರಿಸಿ ಆ ಹೆಣವನ್ನು ಎತ್ತಿದಾಗ ಮೈ ನಡುಗಿತು. ಕಿರುಚಲಿಕ್ಕೂ ಉಸಿರು ಬಾರದಂತಾಯಿತು 'ಗಂಗಜ್ಜಿ' ಬಿಗಿಯಾಗಿ ಹಿಡಿದ ಮುಷ್ಟಿಯನ್ನು ಬಿಡಿಸಿ ನೋಡಿದಾಗ ಆನಂದನಿಗೆ ಎರಡು ತಾಯ್ತಗಳು ಕಾಣಿಸಿದವು. ಊನ ಸಂತಾನದ ಶಾಪದ ವಿಶಾಪಕ್ಕೆ ಪರಿತಪಿಸಿದ ಗಂಗಜ್ಜಿಯ ಎರಡು ಕಣ್ಣುಗಳಂತೆ ಕಂಡವು ಆ ತಾಯ್ತಗಳು.

○

# ೮. ಬಾಳ ನಂಜು ; ಬಯಕೆ ಮಂಜು

## ೧

ಚಳಿಗಾಲದ ಒಂದು ಬೆಳಗು, ಎಲ್ಲೆಡೆ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣಿಸದಂತೆ ಮಂಜು ಮುಸುಕಿಕೊಂಡಿತ್ತು. ಆಗಲೇ ಹಿರೇಪಳ್ಳಿ ಎಚ್ಚೆತ್ತು ತನ್ನ ನಿತ್ಯಕರ್ಮದಲ್ಲಿ ತೊಡಗಿತ್ತು. ಅಲ್ಲಲ್ಲಿ ಓಡಾಡುವ ಜನ ಮಸಕು ಮಸುಕಾಗಿ ಮೋಡಗಳಲ್ಲಿ ಸಂಚರಿಸುತ್ತಿರುವಂತೆ ಭಾಸವಾಗುತ್ತಿತ್ತು.

ಅಂಗಳಕ್ಕೆ ರಂಗವಲ್ಲಿಯನಿಕ್ಕಿ ಲೀಲಕ್ಕ ಒಳಗೆ ಹೋಗಬೇಕೆನ್ನುವಷ್ಟರಲ್ಲಿ ಮನೆಯ ಮುಂದೆ ಎತ್ತಿನ ಬಂಡಿ ಬಂದು ನಿಂತಂತಾಯ್ತು. ಹೊರಳಿ ನೋಡಿದಳು. ಶಂಕರ ಬಂಡಿಯಿಂದ ಇಳಿದು ಬಂದು ಲೀಲಕ್ಕನಿಗೆ ನಮಸ್ಕರಿಸಿ-

'ಹ್ಯಾಗಿದ್ದಿ ಲೀಲಕ್ಕಾ?' ಎಂದು ಕೇಳಿದ. ಅಪರೂಪಕ್ಕೆ ಬಂದ ತಮ್ಮನನ್ನು ನೋಡಿ ಲೀಲಕ್ಕನಿಗಾದ ಸಂತೋಷಕ್ಕೆ ಪಾರವೇ ಇಲ್ಲ. ಅವನ ತಲೆಯ ಮೇಲೆ ಕೈಯಾಡಿಸುತ್ತ,

'ಬಾ ಶಂಕ್ರಣ್ಣಾ, ನೆಟ್ಟಗಿದ್ದೀವಿ, ಅಂತೂ ಅಕ್ಕನ ನೆನಪು ಆಯ್ತಲ್ಲ' ಎಂದಳು. 'ನೆನಪ ಆಗಲಾರದೇನು ಲೀಲಕ್ಕ, ಅಭ್ಯಾಸದ ಗಡಿಬಿಡಿಯೊಳಗೆ ಬರಲಿಕ್ಕೆ ಆಗಿರಲಿಲ್ಲ. ಈಗ ಚಳಿಗಾಲದ ಸೂಟಿ ಬಂತು ಬಂದೆ."

"ಭಲೋ ಆಯ್ತು, ಬಂದದ್ದು. ಎಷ್ಟೋ ದಿವ್ಸದ ಮ್ಯಾಲ ನಿನ್ನ ನೋಡಿದ್ದು. ಬಹಳ ದೊಡ್ಡವನಾಗಿ ಬಿಟ್ಟೀದಿ ಅಪ್ಪಾ ಅವ್ವಾ ಆರಾಮ ಇದ್ದಾರಲ್ಲಽ"

"ಹೂಂ! ಎಲ್ಲಾರೂ ಆರಾಮ ಇದ್ದಾರ, ನಿನ್ನ ಬಹಳ ನೆನಸ್ತಾರ"

"ಹೌದು ನನ್ನ ಜೀವಾನು ಚಡಪಡಸ್ತದ ಅವರನ್ನ ನೋಡಬೇಕೂಂತ. ಅದ್ರ ಎಲ್ಲಿ ಆಗ್ತದ ಬರಲಿಕ್ಕೆ ಈ ಹಾಳು ಸಂಸಾರದಾಗ ಸಿಕ್ಕೊಂಡ ಮೇಲೆ.... ಅದೇ ಇದೇನು ಬಾಗಿಲದೊಳಗ ನಿಂತುಕೊಂಡ ಮಾತಾಡಸಿಲಿಕ್ಕ ಹತ್ತಿನಲ್ಲಽ. ಒಳಗಂತೂ ನಡಿ. ಆಮೇಲೆ ಮಾತಾಡೋಣ" ಎಂದು ಲೀಲಕ್ಕ ತಮ್ಮನನ್ನು ಒಳಗೆ ಕರೆದುಕೊಂಡು ಹೋದಳು. ಚಕ್ಕಡಿಯವನು ಸೂಟ್‌ಕೇಸನ್ನು ಒಳಗೆ ತಂದಿರಿಸಿ ಹೊರಟುಹೋದ.

ಶಂಕರ ಬಟ್ಟೆಯನ್ನು ಬದಲಾಯಿಸಿಕೊಂಡು "ಎಲ್ಲಿ ಮಾವ ಕಾಣಿಸವಲ್ಲನಲ್ಲ" ಎನ್ನುತ್ತ ಅಡುಗೆ ಮನೆಯೊಳಗೆ ನಡೆದ. ಶಂಕರನಿಗಾಗಿ ಉಪಹಾರದ ಸಿದ್ಧತೆ ನಡೆಸಿದ ಲೀಲಕ್ಕ "ಇಷ್ಟೊತ್ತಿನೊರೆಗೆ ಅವರು ಮನೇಲಿ ಇರ್ತಾರ? ಮುಂಜಾನೆ ನಸೀಕಿನಲ್ಲೆ ಹೊಲಕ್ಕೆ ಹೋಗಿ

ಬಿಡ್ತಾರ. ನೀನು ಹೋಗಿ ಸ್ನಾನಾಮಾಡು, ನೀರ ಕಾದಾವ. ಅಷ್ಟರೊಳಗೆ ಉಪ್ಪಿಟ್ಟು, ಚಹ ಮಾಡ್ತೀನಿ" ಎಂದಳು. ಅಕ್ಕನ ಹೇಳಿಕೆಯಂತೆ ಶಂಕರ ಸ್ನಾನ ಮುಗಿಸಿ ಉಪಾಹಾರವನ್ನು ತೆಗೆದುಕೊಂಡು ಕೋಣೆಯೊಳಗೆ ಹೋಗಿ ಸ್ವಲ್ಪ ಪ್ರಯಾಣದ ಆಯಾಸವನ್ನು ಕಳೆದುಕೊಳ್ಳಬೇಕೆಂದು ಮಲಗುವಷ್ಟರಲ್ಲಿ ಯಾವದೋ ಹೆಂಗಸು ಚೀರುತ್ತ ಓಡಿಬರುತ್ತಿದ್ದಂತೆ ಅನ್ನಿಸಿತು. ಯಾರದು? ಲೀಲಕ್ಕ? ಎಂದು ಅವನು ಪ್ರಶ್ನಿಸುವಷ್ಟರಲ್ಲಿ ಲೀಲಕ್ಕ ಅಂಗಳಕ್ಕೆ ಬಂದಿದ್ದಳು. ಅವಳ ಹಿಂದೆಯೇ ಶಂಕರನೂ ನಡೆದ.

ಮುಸುಕಿದ ಮಂಜಿನೊಳಗಿಂದ ತೂರಿಕೊಂಡು ಅಸ್ತವ್ಯಸ್ತವಾದ ಹರಕು ಹೊಲಸು ಬಟ್ಟೆ, ಕೆದರಿದ ಹಿಂಜಿದ ಕೂದಲು, ತಾರುಣ್ಯ ತುಂಬಿದ ಕಣ್ಣಿನವಳೊಬ್ಬಳು ಹುಚ್ಚಿ ಓಡಿಬರತೊಡಗಿದ್ದಳು. ಅವಳನ್ನು ಬೆನ್ನಟ್ಟಿ ಎಂಟುಹತ್ತು ಹುಡುಗರು ಕಲ್ಲುಗಳನ್ನು ಬೀಸುತ್ತ 'ಹುಚ್ಚಿ, ನೀಲುಗೂಲಿ ಹುಚ್ಚಿ ನೀಲಿಗೂಲಿ' ಎಂದು ಕಿರುಚುತ್ತ ಬರಹತ್ತಿದ್ದರು. ನೀಲಿ ಓಡುತ್ತ ಬಂದವಳೆ ಲೀಲಕ್ಕನ ಹಿಂದೆ ಅಡಗಿಕೊಂಡು "ನೋಡಕ್ಕಾ ಆ ಬಾಡಕೋಗಳು ನನ್ನ ಕಲ್ಲೀಲೆ ಹೊಡ್ಯಾಕ ಹತ್ಯಾರ, ನಾ ಹುಚ್ಚೀಂತ... ನೀ ಹುಚ್ಚರಲೇ, ನಿಮ್ಮವ್ವ ಹುಚ್ಚಲೇ ನಿಮಪ್ಪ ಹುಚ್ಚರಲೇ..." ಎಂದು ಹುಡುಗರಿಗೆ ಅಣಕಿಸಿದಳು.

ಆಗ ಲೀಲಕ್ಕ ಸಿಟ್ಟಿನಿಂದ "ಯಾತಕೋ ನಿಮಗೆ ಸೊಕ್ಕು ಬಂದದೇನುs, ಅವಳ್ಯಾಕ ಕಾಡಸ್ತೀರಿ. ಇಲ್ಲಿಂದ ಹೋಗ್ತೀರೊ? ಏಟ ಬೇಕೋ?" ಎಂದು ಕಣ್ಣು ಬಿಟ್ಟಳು. ತತ್‌ಕ್ಷಣವೇ ಹುಡುಗರು ಮಂಜಿನಲ್ಲಿ ನುಸುಳಿ ಹೋದರು.

"ನೀಲಿ, ಹಿತ್ಲಕಡೆ ಬಾ, ಉಣ್ಣಾಕ ನೀಡ್ತೀನಿ" ಎಂದು ಲೀಲಕ್ಕ ನುಡಿದಾಗ, ನೀಲಿ ಬಿರಬಿರನೆ ಶಂಕರನ ಕಡೆಗೇ ನೋಡತೊಡಗಿದ್ದಳು.

"ಇದೇನು ಹೀಗೆ ನುಂಗೋಹಾಂಗ ಅವ್ನ ನೋಡ್ತಿ....?"

"ಎಕ್ಕಾ ಇದಾರು ಸಾಹೇಬಾ" ಎಂದು ಕಿಸಿಕಿಸಿ ನಗುತ್ತ ಕೇಳಿದಳು ನೀಲಿ.

"ಅವನು ನನ್ನ ತಮ್ಮ, ಕಾಲೇಜು ಕಲೀತಾನ..." ಎಂದಳು ಲೀಲಕ್ಕ.

"ಹೌದ ಎಕ್ಕ, ಹಾಂಗಾಂದ್ರ ಈತ ದೊಡ್ಡಸಾಹೇಬ, ಚಂದಾಗಿ ಇದಾನೆs..." ಎಂದು ಹಲ್ಲು ಕಿರಿದಳು. ಲೀಲಕ್ಕ ಒಂದು ಸಾರೆ ಶಂಕರನ ಕಡೆಗೆ ನೋಡಿ ಮುಗುಳ್ನಗೆ ನಕ್ಕು "ಏನ ನೀಲಿ, ಅವನು ಶಹರದಾಗ ಇರ್ತಾನ ಹೋಗ್ತೀ ಏನು ನೀನು ಅವರ ಸರೆ?" ಎಂದು ಕೇಳಿದಳು. ನೀಲಿ ಹಿಹಿs.... ಎಂದು ಹಲ್ಲುಕಿರಿದಳು.

ನೀಲಿ, ಲೀಲಕ್ಕ ನೀಡಿದ ರೊಟ್ಟಿಯನ್ನು ಗಬಗಬನೆ ತಿಂದು ಒಂದು ತಂಬಿಗೆ ನೀರನ್ನು ಎಮ್ಮೆ ಕುಡಿಯುವಂತೆ ಸೊಡರ್ ಸೊಡರ್ ಎಂದು ಕುಡಿದು ಓಡಿಬಿಟ್ಟಳು. "ಲೀಲಕ್ಕ! ಈ ಹುಚ್ಚಿ ಯಾರು? ಯಾರ ಮನೆಯವಳು?" ಎಂದು ಶಂಕರ ಅವಳು ಹೊರಟುಹೋದ ಮೇಲೆ ಕೇಳಿದ. ಅಷ್ಟರಲ್ಲಿ ಲೀಲಕ್ಕನ ಕಣ್ಣಾಲಿ ತುಂಬಿ ಬಂದಿತ್ತು.

"ಹುಚ್ಚಿಗೆ ಮನೆಮಾರು ಎಲ್ಲಿ ಬರಬೇಕು? ಅವಳ ಬಗ್ಗೆ ನನಗೂ ಏನೂ ಗೊತ್ತಿಲ್ಲ ಆದರೆ ಆಕಿನ್ನೂ ನೋಡಿದ್ರ ನನ್ನ ಕರಳು ಚುರ್ ಅಂತದ. ಇನ್ನೂ ಹರೇದ ಹುಡುಗಿ

ಮದಿವೆ ಮಾಡಿಕೊಂಡು ಇರೋ ವಯಸ್ಸು, ಯಾವ ಚಂಡಾಳರು ಹುಚ್ಚಿಯಂತ ಮನೆಯಿಂದ ಹೊರಗ ಹಾಕಿದವರೊ? ಮೂರು ತಿಂಗಳಾಗಲಿಕ್ಕೆ ಬಂದು ಆಕಿ ಈ ಹಳ್ಳಿಗೆ ಬಂದು. ಹಿಂಗ ಊರ ತುಂಬ ಹುಚ್ಚುಚ್ಚಾರ ಕೂಗ್ತಾ ಓಡ್ಯಾಡ್ತಿರ್ತಾಳ. ಒಮ್ಮೊಮ್ಮೆ ಏನಾಗ್ತದೊ ಏನೋ ಓಡಿಬಂದು ನನ್ನ ಕೈಕಾಲು ಹಿಡಿದು ದುಃಖಿಸಿ ದುಃಖಿಸಿ ಅಳುತ್ತಾ ಕುಳಿತುಬಿಡ್ತಾಳಾs. ನಾನು ಎಷ್ಟು ಸಮಾಧಾನ ಮಾಡೀದ್ರು ಸುಮ್ಮನಾಗುವುದಿಲ್ಲ. ಇಡೀ ದಿವ್ಸ ಅಂಗಳದಾಗ ಅತ್ತು ಅತ್ತು ಬಿದ್ದುಬಿಡ್ತಾಳ. ಒಂದೂ ಹೇಳವದಿಲ್ಲ ಏನಾಗಿದೆಂಬುದ. ಆವಳ ಬಗ್ಗೆ ನನ್ಗೂ ಮರುಕ ಬರ್ತದ. ಹಸಿವಿ ಎಂದು ಬಂದುದಕ್ಕ ಊಟಕ್ಕ ಹಾಕಿ ಕಳಿಸ್ತೀನಿ ಹಸಿವಿ ಎನಿಸಿದಾಗ, ಏನೋ ದುಃಖಾ ಆದಾಗ ನನ್ನ ಹತ್ರ ಬರ್ತಾಳೆ. ಆಮೇಲೆ ಎಲ್ಲಿ ಹೋಗ್ತಾಳೊ ಗೊತ್ತೇ ಆಗೋದಿಲ್ಲ" ಎಂದು ಸೆರಗಿನಿಂದ ಕಣ್ಣು ವರೆಸಿಕೊಂಡು ಹೇಳಿದಳು ಲೀಲಕ್ಕ.

ಶಂಕರನಿಗೂ ಅವಳ ಕಥೆ ಕೇಳಿ ಮರುಕ ಬಂತು.

"ಪಾಪ! ನೋಡಲಿಕ್ಕೂ ಲಕ್ಷಣವಾಗಿದ್ದಾಳಾ, ಒಳ್ಳೇ ಮನೆತನದವಳಂತೆಯೂ ಕಾಣಿಸ್ತಾಳೆ" ಎಂದ.

"ಹೌದು, ನನಗೂ ಹಾಗನಸ್ತದ. ಒಂದು ಸಾರೆ 'ನೀಲಿ ನೀಲಿ' ಅಂತ ಹುಡುಕತಾ ಹೋದಾಗ ಹಿತ್ಲದಲ್ಲಿ ಗಿಡದ ಮರೆಯೊಳಗೆ ಅವಿತುಕೊಂಡು ಕೂತಿದ್ಲು. ನಾನು 'ಏ ನೀಲಿ, ಅಲ್ಯಾಕ ಕೂತಿ ಹೊರಗೆ ಬಾ' ಎಂದು ಕರೆದೇ 'ಏಕ್ಕಾ ಹ್ಯಾಗ ಬರ್ಲಿ?' ಎಂದು ಕೇಳಿದಳು. "ಏನಾಗಿದೆ ಎದ್ದು ಬಾ ಅಲ್ಲಿಂದ" 'ಹ್ಯಾಗೆ ಬರ್ಲಿ ಏಕ್ಕಾ ಮೈ ಕಾಣ್ತದೆ' ಎಂದು ನಾಚಿದಳು. ನಾನು ಹತ್ತಿರ ಹೋಗಿ ನೋಡಿದೆ. ಸೀರೆಯನ್ನೆಲ್ಲಾ ಚೂರು ಚೂರು ಮಾಡಿ ಹಾಕಿ ಬಿಟ್ಟಿದ್ದಳು. ಅದನ್ನು ನೋಡಿ ಪಾಪಾ ಹುಚ್ಚಿಯಾದ್ರೇನಾತು ಅವಳೂ ಹೆಣ್ಣಲ್ಲವೇ ಎಂದುಕೊಂಡು ನನ್ನ ಹಳೆಸೀರೆಯನ್ನು ತಂದುಕೊಟ್ಟೆ. ಆಮೇಲೆ ಉಟ್ಟುಕೊಂಡು ಹೊರಬಂದಳು. ಹೀಗೆ ಒಮ್ಮೊಮ್ಮೆ ನಗ್ನ ಮಾನದ ನೆನಪೂ ಆಗುತ್ತದೆ ಇಲ್ಲಿದ್ರ ಹಾಗೇ ಅರೆಬತ್ತಲೆ ತಿರುಗುತ್ತಾಳೆ. ಇಂಥ ಎಷ್ಟು ಹೆಣ್ಣುಗಳು ಪ್ರಪಂಚದಾಗ ಜೀವಾ ಹಿಡಿಕೊಂಡಿದ್ದಾರೊ ಏನೊ! ನನಗೆ ಆಶ್ಚರ್ಯ ಅನಸ್ತದ ಮನುಷ್ಯ ಎಷ್ಟೇ ಕಷ್ಟದೊಳಗೆ ಇದ್ದರೂ ಸಾವಿಗೆ ಅಂಜತಾನೆ'.

"ಬಾಳು ಎಷ್ಟೇ ವಿಷಮಯವಿದ್ದಿದ್ದರೂ ಈ ಜಗತ್ತಿನ ವ್ಯಾಮೋಹ ಬಿಡಲಾರದು ಶಂಕರಣ್ಣ ಇರಲೇಳು ಈ ಕಥೆ. ನೀನು ಸ್ವಲ್ಪ ಆರಾಮ ತಗೊ. ಪ್ರಯಾಣ ಮಾಡಿ ಬಂದೀದಿ. ನನಗೂ ಇನ್ನ ಅಡಿಗೆ ಮಾಡಬೇಕಾಗೇದೆ. ಆಮೇಲೆ ಮಾತಾಡೋಣ" ಎಂದು ಲೀಲಕ್ಕ ಅಡಿಗೆ ಮನೆಗೆ ಹೊರಟುಹೋದಳು.

ಶಂಕರ ಹಾಗೆ ಮಂಚದ ಮೇಲೆ ಒರಗಿಕೊಂಡು ಕಾರಂತರ 'ಸಮೀಕ್ಷೆ'ಯ ಪುಟಗಳನ್ನು ತಿರುವತೊಡಗಿದ್ದ. ಅಷ್ಟರಲ್ಲಿ ಬಾಗಿಲ ಬಳಿ ಕಲ್ಲು ಉರುಳಿದಂತಾಯಿತು. ಯಾರದು ಎಂದು ಹೊರಳಿ ನೋಡಿದಾಗ ಅದನ್ನಿಡವಿದ ನೀಲಿ ಬೆದರಿದ ಜಿಂಕೆಯಂತೆ ಅಲ್ಲಿಯೇ ನಿಂತುಕೊಂಡಿದ್ದಳು. ನೀಲಿಯನ್ನು ನೋಡಿ ಚಟ್ಟನೆ ಎದ್ದು ಕುಳಿತು "ಏನು ನೀಲಿ, ಯಾಕೆ ಬಂದೆ?" ಎಂದು ಪ್ರಶ್ನಿಸಿದ. ಆಗ "ಒಳ್ಯಾಗ ಬರಲ್ಯಾ ಶಂಕ್ರಣ್ಣ" ಎಂದು ನೀಲಿ ಕೇಳಿದಳು.

"ಬ್ಯಾ, ನೀಲಿ ಏನು ಬೇಕಿತ್ತು" ಎಂದು ಶಂಕರ ಹೇಳುವುದೊಂದೇ ತಡ, ಟಣ್ಣನೆ ಅವನ ಮಂಚದ ಬಳಿ ಜಿಗಿದು ಕೆಳಗಡೆ ಕುಳಿತುಬಿಟ್ಟಳು. ಅವಳ ಕಣ್ಣುಗಳಲ್ಲಿ ಅಶ್ರು ಮಿಡಿದಿತ್ತು. ಅದನ್ನು ಕಂಡು ತಬ್ಬಿಬ್ಬಾದ ಶಂಕರ.

"ಇದೇನು ನೀಲಿ ಅಳುತ್ತಿದ್ದಿಯಲ್ಲ!"

"ಏನೋ ನನ್ನ ಹಾಳು ಬಾಳೇವು ನೆಪ್ಪಾಗತ್ತೈತೆ ಶಂಕರಣ್ಣ."

"ಏನು ನೆನಪಾಗಲಿಕ್ಕೆ ಹತ್ತೇದ ನೀಲಿ..." ಎಂದು ಶಂಕರ ಅವಳ ಜೀವನವನ್ನು ತಿಳಿದುಕೊಳ್ಳಬೇಕೆಂದು ಆತುರದಿಂದ ಕೇಳಿದ. ನೀಲಿಗೆ ಯಾವುದೂ ನೆನಪಾಗುತ್ತಿಲ್ಲ. ಬರೀ ತಲೆ ಜಚ್ಚಿಕೊಂಡಳು. ಕೂದಲು ಕೆದರಿಕೊಂಡಳು

"ಹೂಂ! ಒಂದೂ ಹೊಳ್ಯಾಕಿಲ್ಲ. ಆದ್ರ ಶಂಕರಣ್ಣ, ಮೊದ್ಲೀಗೆ ನಾ ಹ್ಯಾಂಗ ಇದ್ದೆ ಗೊತ್ತೈತೇನು. ಚಂದ ಚಂದ ಸೀರಿ ಉಡ್ತಿದ್ದೆ. ಚೆಂದ ಚೆಂದದ ಕುಪ್ಪುಸ ತೊಡ್ತಿದ್ದೆ. ನನ್ನ ಬಾಳೆವು ಹಾಲಿದ್ಹಂಗಿತ್ತು. ಯಾವನೋ ಸಾಹೇಬ ಬಂದು ವಿಸಾ ಹಿಂಡಿದಾ... ನಾ ಹಾಳಾದೆ. ನನ್ನ ಕುತ್ಗಿ ಹಿಡಿದು ಹೊರಾಕ ದಬ್ಬಿದ್ರು" ಎಂದು ದುಃಖಿಸಿ ದುಃಖಿಸಿ ಹೇಳ ಹತ್ತಿದಳು ನೀಲಿ. ಆಗ ಶಂಕರನ ಕಣ್ಣಲ್ಲಿಯೂ ನೀರು ಬಂತು.

"ಇರಲೇಳ್ ನೀಲಿ ಅಳಬ್ಯಾಡ" ಎಂದು ಸಮಾಧಾನಪಡಿಸಿದ. ಆದರೆ ಶಂಕರನಿಗೆ ಮತ್ತೂ ಅವಳ ಜೀವನದ ವಿಷಯ ಸ್ಪಷ್ಟವಾಗಲಿಲ್ಲ (ಅವನಿಗಷ್ಟೇ ಏಕೆ ಈ ಕಥೆ ಬರೆಯುತ್ತಿರುವ ನನಗೂ ಅವಳ ಹಿಂದಿನ ಜೀವನ ಗೊತ್ತಿಲ್ಲ. ಇಷ್ಟು ಮಾತ್ರ ಗೊತ್ತು: ಅವಳೊಬ್ಬಳು ನತದೃಷ್ಟೆ)

ಹೀಗೇ ಹೋದರೆ ಇನ್ನು ನೀಲಿ ಇಡೀ ದಿವ್ಸ ಅಳುತ್ತಾಳೆಂದು ಭಾವಿಸಿ ಶಂಕರ ಮಾತನ್ನು ಬದಲಾಯಿಸಿ "ನೀಲಿ, ಶಹರಾ ನೋಡೀ ಏನು?" ಎಂದು ಕೇಳಿದ. ತತ್‌ಕ್ಷಣವೇ ಅಳುತ್ತಿದ್ದ ನೀಲಿ ಮುಖದಲ್ಲಿ ಮಂದಹಾಸ ತಂದುಕೊಂಡು "ಊಹೂಂ! ಶಂಕರ್ಣ್ಣ ಕರಕೊಂಡು ಹೋಗ್ತೀಯಾ?" ಎಂದು ಪ್ರಶ್ನಿಸಿದಳು.

"ಹೂಂ! ಬರ್ತೀಯಾ ನನ್ನ ಸರಿ!"

"ಹೂಂ!... ಖರೇವ ಬರ್ತೀನಿ ಶಂಕ್ರಣ್ಣ ಗಾಡಿ ಹ್ಯಾಂಗ ಇರ್ತೈತೆ. ಉದೋಕ ಇರ್ತೈತೇನು ಅಲ್ಲಿ ಮುಗಲ್ಯಾಗ ಮನೀ ಇರ್ತಾವೇನು?" ಮುಂತಾಗಿ ವಿಚಿತ್ರ ಪ್ರಶ್ನೆಗಳನ್ನು ಕೇಳತೊಡಗಿದಳು ನೀಲಿ. "ಹೂಂ! ದೊಡ್ಡ ದೊಡ್ಡ ಮನೀ ಇರ್ತಾವ ಮುಗಿಲ ಮ್ಯಾಲ ಅಲ್ಲ. ನೆಲದ ಮ್ಯಾಲೆ ನೀ ಶಹರಕ್ಕೆ ಬಂದು ಅಲ್ಲೆ ಇರ್ತೀಯಾ ನೀಲಿ" ಎಂದ. "ಸಾಲೆ ಕಲೀತೇನೆ. ಕಲಿಸ್ತೀಯಾ? ನನ್ಗೂ ಗಾಡ್ಯಾಗ ಓಡ್ಯಾಡಬೇಕನಿಸ್ತೈತಿ" ಎಂದಳು ನೀಲಿ.

ಅವಳ ಮುಗ್ಧ ಹೃದಯವನ್ನು ಕಂಡ ಶಂಕರನ ಮನಸ್ಸು ಮರುಗಿತು. ಅಷ್ಟರಲ್ಲಿ ಲೀಲಕ್ಕ ಅಲ್ಲಿಗೆ ಬಂದು "ಇದೇನು? ನೀಲಿ ಏನೇನೊ ಕೇಳಲಿಕ್ಕೆ ಹತ್ಯಾಳಲ್ಲ ನಿನ್ನ!" ಎಂದಳು. ಲೀಲಕ್ಕನನ್ನು ನೋಡುತ್ತಲೇ ನೀಲಿ ನಾಚಿಕೆಯಿಂದ ಅಲ್ಲಿ ನಿಲ್ಲದೆ ಓಡಿಯೇ ಬಿಟ್ಟಳು. ಹುಚ್ಚು ಹುಡುಗಿ ಎಂದು ಲೀಲಕ್ಕ ಮುಗುಳ್ನಗೆ ನಕ್ಕಳು.

## ೨

ಹಳ್ಳಿ ನಾಕವೇ ನರಕವೇ? ತಿಳಿದುಕೊಳ್ಳಬೇಕಾದರೆ ಹಿರೇಹಳ್ಳಿಯ ಅಗಸಿ ಬಳಿ ರಾತ್ರಿ ಹೋಗಿ, ತಿಳಿಯುತ್ತದೆ. ಅಂದು ಆಗಲೇ ರಾತ್ರಿ ಒಂಭತ್ತು ಗಂಟೆ ಸುಮಾರು ಆಗಿರಬೇಕು. ಹೆಂಡದಂಗಡಿಯ ಸುತ್ತಲು ಕುಡುಕರು, ಸೋಮಾರಿಗಳು ಕುಡಿದು ಕುಣಿಯತೊಡಗಿದ್ದರು. ಅವರು ಹಗಲಿರುಳು ದುಡಿದು ಉಳಿಸಿದ ಹಣವನ್ನು ಹೆಂಡಕ್ಕಿಟ್ಟು ಹೆಂಡತಿ ಮಕ್ಕಳನ್ನು ಗೋಳುಹೊಯ್ದುಕೊಳ್ಳುತ್ತಿದ್ದರು.

ಅದೊಂದು ಚಿಕ್ಕ ಗುಡಿಸಲು. ಅದರ ಮಧ್ಯದಲ್ಲಿ 'ಪೆಟ್ರೋಮ್ಯಾಕ್ಸ್' ಉರಿಯತೊಡಗಿತ್ತು. ಹೊರಗಡೆ ಗಿರಾಕಿಗಳಿಗೆ ಕುಳಿತುಕೊಳ್ಳಲು ಎರಡೆರಡು ಡಬ್ಬಗಳನ್ನಿರಿಸಿ ಮೇಲೆ ಕಟ್ಟಿಗೆ ಫಳಿಯನ್ನಿಟ್ಟು ಬೆಂಚ್‌ದ ಹಾಗೆ ಮಾಡಲಾಗಿತ್ತು. ಅದರ ಒಡತಿ ನಾಗಿ ಹೆಸರಿಗೆ ತಕ್ಕಂತೆಯೇ ಆವಳಿದ್ದಳು. ಇನ್ನೂ ಇಪ್ಪತ್ತೈದು ವರುಷದ ಹರೆಯ. ಅಂಗಾಂಗಗಳು ನೈಸರ್ಗಿಕವಾಗಿ ಪುಷ್ಟವಾಗಿ ಬೆಳೆದುಕೊಂಡಿದ್ದವು. ಅರ್ಧಮರ್ಧ ಹರಿದ ಸೀರೆ ಮೊಣಕಾಲವರೆಗೂ ಅಂಗಾಂಗಗಳು ಬಿರಿದು ಕಾಣುವಂತೆ ಬಿಗಿಯಾಗಿ ಸುತ್ತಿಕೊಂಡಿತ್ತು. ಬಗ್ಗಿ ಬಗ್ಗಿ ಮಗಿಯಲ್ಲಿಯ ಹೆಂಡ ಕೊಡುವಾಗ ತೂಗಾಡುವ ಅವಳ ತುಂಬಿದ ಎದೆ ಕುಡುಕರಿಗೆ ಮತ್ತಷ್ಟು ಹೆಂಡ ಕುಡಿಸಿದಂತಾಗುತ್ತಿತ್ತು.

ಅಷ್ಟರಲ್ಲಿ ಅಲ್ಲಿಗೆ ಭರಮ ಹಾಗೂ ಅವನ ಶಿಷ್ಯ ಈರನ ಸವಾರಿ ಆಗಮಿಸಿತು. ಕೆಲಸಬೊಗಸೆಯಿಲ್ಲದೆ ಚಾವಡಿಯ ಕಟ್ಟೆಗೆ ಕುಳಿತು ಹರಟೆ ಹೊಡೆಯುವ ಇಲ್ಲವೆ ಹಳ್ಳದ ಬಳಿಗೆ ಹೋಗಿ ನೀರು ತುಂಬುತ್ತಿರುವ ಹೆಂಗಳೆಯರನ್ನು ನೋಡಿ ಬಾಯಿ ಚಪ್ಪರಿಸುವ ಜನ ಹೀರೇಹಳ್ಳಿಯಲ್ಲಿ ಹೇರಳವಾಗಿದ್ದರು. ಅವರಲ್ಲಿ ಈ ಭರಮ ಶಿಕಾಮಣಿ ಒಬ್ಬ ಎನ್ನಬಹುದು.

ಇಂಥ ವೀರ ಶಿಖಾಮಣಿ ಭರಮ ಹಿರೇಹಳ್ಳಿ ಪೈಲವಾನ. ಆದರೆ ಒಂದು ಸಲವೂ ನೆರೆಹಳ್ಳಿಗಳ ಪೈಲವಾನರನ್ನು ಕುಸ್ತಿಯಲ್ಲಿ ಒಗೆದು ಬಂದವನಲ್ಲ. ಮಾತು ಕೇಳಿದರೆ ಗುಡ್ಡದಂತಹವ್ರ. ಎದೆಯುಬ್ಬಿಸಿಕೊಂಡು ತಾನೇ 'ಗುಂಗಾ ಗಾಮೂ' ಎಂದು ಹೇಳಿಕೊಳ್ಳುತ್ತಾನೆ. ನೆಲಕ್ಕೆ ಬಿದ್ದರೂ ಮೀಶೆಗೆ ಮಣ್ಣು ಹತ್ತಿಲ್ಲ ಎನ್ನುವ ಜಟ್ಟಿ ಇವನು.

ಇವನ ಹೊಟ್ಟೆಯನ್ನು ತುಂಬುತ್ತಿದ್ದವನು ರಾಚೇಗೌಡ. ಅವನು ಪುಂಡರ ಮುಖಂಡ. ಇಂಥ ಪುಂಡರನ್ನು ಸಾಕಿದ್ದಾನೆಂತಲೇ ಹಳ್ಳಿಯಲ್ಲಿ ದರ್ಪದಿಂದ ಮೆರೆಯುತ್ತಿದ್ದಾನೆ ಇನ್ನು ಈರನ ವಿಷಯ. ಇವನೋ ಕಡ್ಡಿ ಪೈಲವಾನ, ಬರಿ ಹೊಗಳುವ ಭಟ್ಟ. ಅಷ್ಟು ಹೊಗಳಿ ಭರಮಪ್ಪನ ಮೈ ತಿಕ್ಕುತ್ತಾನಂತಲೇ ಅವನ ಹೊಟ್ಟೆಯೂ ಹೊರೆಯುತ್ತದೆ.

ಈರ ಭರಮಪ್ಪ ಗುಡಿಸಲ ಬಳಿ ತಲುಪಿದಾಗ ಇದ್ದ ಎರಡು ಸಾಲು ಬೆಂಚಿನ ಮೇಲೆ ಆಗಲೇ ಗಿರಾಕಿಗಳು ಕುಡಿದು ಉನ್ಮತ್ತರಾಗಿ ಏನೇನೊ ಬೊಗಳುತ್ತ ಕುಳಿತುಕೊಂಡುಬಿಟ್ಟಿದ್ದರು. ಈರ ಭರಮನಿಗಿಂತ ಮುಂದೆ ಹೋಗಿ "ಲೇ... ಮಲ್ಲ್ಯಾ ಸರೀಲೇ" ಎಂದು ದೂಡಿದ. ಮಲ್ಲನ ಮೈ ಉರಿಯಿತು. "ಯಾಕೋ ಮಳ್ಳ ಹ್ಯಾಂಗ ಕಾಣ್ತೈತಿ" ಎಂದ ಜೋಲೆ ಹೊಡೆಯುತ್ತ,

"ಲೇಲೇ... ಸ್ವಲ್ಪ ಬಾಯಿ ಬಿಗಿಹಿಡಿದು ಮಾತಾಡ್ಲೆ. ಯಾರಿಗೆ ಅನ್ನಾಕ ಹತ್ತಿ ಗೊತ್ತೇನು? ನಾನು ಈರ ಭರಮಪ್ಪನ ಶಿಷ್ಯ."

"ಹೋಗ್ಲೊಗ್ಲೆ ಭರಮಪ್ಪನ ಬಿಟ್ಟು ಅವರಪ್ಪನ ಶಿಷ್ಯ ಆಗು ನಂಗೇನು?" ಎಂದು ಮಲ್ಲ ಇನ್ನೂ ಅಂದಿದ್ದನೊ ಇಲ್ಲೊ ಬರಮ ತನ್ನ ಬಲವಾದ ಮುಷ್ಟಿಯಿಂದ ಅವನ ಸೊಂಟಕ್ಕೆ ಬಿಗಿದು "ಯಾರೂಂತ ತಿಳಿದೀಯಾ ನನ್ನ" ಎಂದು ಕೆಕ್ಕರಿಸಿ ಕೇಳಿದ. ಮಲ್ಲನ ಕೈಯಲ್ಲಿಯ ಹೆಂಡದ ಮಡಿಕೆ ಜಾರಿ ಕೆಳಗೆ ಬಿದ್ದು ಒಡೆದುಹೋಯಿತು ಅಸಹಾಯಕನಾದ ಅವನು ಏನೋ ಗೊಣಗುಟ್ಟುತ್ತ ಹೊರಟುಹೋದ.

ಹತ್ತಿರ ಕುಳಿತ ಇನ್ನಿಬ್ಬರನ್ನು ಆಚೆಗೆ ನುಗಿಸಿ ಭರಮಪ್ಪ ಮೈ ಉಬ್ಬಿಸಿಕೊಂಡು ಕುಳಿತು "ಲೇ ನಾಗಿ, ತತಾ ಒಂದು ಮಗಿ" ಎಂದು ಅಬ್ಬರಿಸಿ ಕೇಳಿದ. ಆಗ ಅವಳು "ಹೋಗ್ಲೋಗು ನಿನ್ನ ಡೌಲು ಮಲ್ಲಗ ತೋರಿಸಿದ್ಹಾಂಗ ನನ್ಗ ತೋರಸಬ್ಯಾಡ. ಮದ್ಲೀಗೆ ಹೇಳು ರೊಕ್ಕ ಐತಲ್ಲೊ?" ಎಂದು ಮೂಗು ಮುರಿದು ಕೇಳಿದಳು.

"ನಿನ್ಗ್ಯಾ ಮದಾ ಬಂದ್ಯೆತೇಳು" ಎಂದು ಮೀಸೆ ಮೇಲೆ ಕೈ ಹಾಕಿ ತಿರುವುತ್ತ ನುಡಿದ.

"ಇಲ್ಲದ್ದೊಂದು ಬೊಗಳಬ್ಯಾಡಾ. ಮೊದ್ಲು ಮುಕ್ಯಾಟಲೇ ರೊಕ್ಕಾ ಒಗಿ ಇತ್ತಾಗ" ಎಂದಳು ಸೆಡವಿನಿಂದ.

'ಲೇ ಈರಾ ಒಗೀ ಅವಳ ಮುಖದ ಮ್ಯಾಲೆ. ನಮ್ಮ ಹಾತ್ಯಾಕ ರೊಕ್ಕ ಇಲ್ಲ ಅಂತ ತಿಳಿದಾಳ' ಅಬ್ಬರಿಸಿದ ಭರಮಪ್ಪ. ಆಗ ಈರ ಇದ್ದು ಬಿದ್ದು ತಂದ ಚಿಲ್ಲರೆ ಹಣವನ್ನೆಲ್ಲ ನಾಗಿಯ ಕೈಯಲ್ಲಿ ಹಾಕಿದ.

ನಾಗಿಯಲ್ಲಿ ಈಗಾಗಲೇ ಭರಮಪ್ಪನ ಉದ್ರಿ ಸಾಕಷ್ಟು ಆಗಿತ್ತು. ಅದಕ್ಕೆಂತಲೇ ಇಂದು ಅವಳು ಹಣದ ವಸೂಲಿಗೆ ನಿಂತಿದ್ದು. ಕೈಯಲ್ಲಿ ಹಣ ಬಂದ ಮೇಲೆಯೇ ಎರಡು ಮಡಿಕೆಯಲ್ಲಿ ಹೆಂಡ ಸುರಿದುಕೊಂಡು ಒಂದು ಈರಪ್ಪಗೆ ಕೊಟ್ಟು ಇನ್ನೊಂದು "ತೊಗೋ" ಎಂದು ಭರಮಪ್ಪನ ಮುಂದೆ ಹಿಡಿದಳು. ಆಗ ಭರಮಪ್ಪ ಮಡಿಕೆಯನ್ನು ತೆಗೆದುಕೊಂಡು ಸರಕ್ಕನೆ ಅವಳ ಕೈ ಹಿಡಿದೆಳೆದು "ಇವತ್ತು ಬರ್ತೀ ಏನೂ" ಎಂದು ಕಣ್ಣು ಹಾರಿಸಿ ಕೇಳಿದ. "ಹೋಗ್ಲೋಗೊ ಮಳ್ಳಾ, ರೊಕ್ಕ ಇಲ್ಲೋನ ಹತ್ರ ಕುರುಡು ಸೂಳೆಯೂ ಬರಾಕಿಲ್ಲ" ಎಂದು ಕೈ ಕೊಸರಿಕೊಂಡಳು ನಾಗಿ. "ಹಂಗ್ಯಾಕ.... ದಿಮಾಕಾ.... ಮಾಡ್ತಿ. ಆಮ್ಯಾಗ ಕೊಡ್ತಿನೇಳು ಎಂದ ಭರಮ. "ಉದ್ರಿಮಾಡಕ ಇದೇನು ರೆಂಡಾ ಅಂತ ತಿಳಿದೀ ಏನು? ರೊಕ್ಕಾ ಬರೋವರೆಗೂ ಪುಗಟೇ ಬೇಕಾದ್ರೆ ಆ ಹುಚ್ಚಿ ನೀಲಿ ಸಿಗ್ತಾಳ ನೋಡ ಬೇಕಾದ್ರ ಹೊ.... ಹೋಗ್" ಎಂದು ಒಳ ಹೋದಳು.

ನಾಗಿಯ ನುಡಿಗಳು ಭರಮನನ್ನು ಬಡಿದೆಬ್ಬಿಸಿತು. ಆ ಕ್ಷಣವೇ ನೀಲಿಯ ಯೌವ್ವನ ತುಂಬಿದ ಹಲವಾರು ಭಂಗಿಗಳು ಕಣ್ಮುಂದೆ ಕುಣಿಯತೊಡಗಿದವು. ಭಲೆ ಎಂದು ಲಟಕಿ ಹೊಡೆದು 'ನಡೀಲೆ ಈರ ಗಡಾಟನ' ಎಂದು ಗಟ ಗಟ ಹೆಂಡ ಕುಡಿದು ಎದ್ದೇಬಿಟ್ಟ.

ಗುಡಿಸಲಿನಿಂದ ಆಚೆ ರಸ್ತೆಗೆ ಬಂದ ಮೇಲೆ ಭರಮ "ಲೇ ಈರ, ಆ ನೀಲಿ ಎಲ್ಲಿ ಮಕ್ಕೊಂಡಿರ್ತಾಳಲೇ" ಎಂದು ಕೇಳಿದ. "ಯಾಕ ಬರಮಣ್ಣಾ ಆ ಹುಚ್ಚಿನ್ನ" ಭರಮಪ್ಪನ ಇಂಗಿತವನ್ನರಿತ ಈರ ಸಂಕೋಚದಿಂದ ಪ್ರಶ್ನಿಸಿದ.

"ಇರಲಿ ಮೊದ್ಲು ಹೇಳಲೇ ಹುಚ್ಚ್ಯಾದ್ರೇನು ಹರಿಕಿಯಾದ್ರೇನು?"

"ಅದು ಹೆಚ್ಚಾಗಿ ಆ ಹಾಳು ಹನುಮಪ್ಪನ ಗುಡಿ ಕಟ್ಟೆ ಮ್ಯಾಗ ಬಿದ್ದಿರ್ತೈತೆ ಒಮ್ಮೊಮ್ಮೆ ಆ ಶಿವರಾಯನ ಮನಿ ಹಿತ್ಲದಾಗೂ ಇರ್ತೈತೆ."

"ಶಿವರಾಯನ ಹಿತ್ಲದಾಗ ಬಿದ್ದಿದ್ರ ಸಿಗಾಕಿಲ್ಲ, ಮೊದ್ಲು ಗುಡ್ಯಾಗ ನೋಡ್‌ಕೊಂಡು ಹೋಗೋಣ ನಡಿ" ಎಂದು ಭರಮ ದಾಪುಗಾಲು ಹಾಕುತ್ತ ನಡೆದ. ಬಸವನ ಹಿಂದೆ ಬಾಲದ ಹಾಗೆ ಈರ ಓಡತೊಡಗಿದ.

ಅವರು ಗುಡಿಯನ್ನು ತಲುಪಿದರು. ಅದರ ಸುತ್ತಲಿನ ವಾತಾವರಣ ಪ್ರಶಾಂತವಾಗಿತ್ತು. ಚಂದ್ರನ ಶೀತಲ ಬೆಳದಿಂಗಳು ಎಲ್ಲೆಡೆ ಹರಡಿಕೊಂಡಿತ್ತು. ಆ ನಿರ್ಜನ ಪ್ರದೇಶದಲ್ಲಿ ಸೊಂಯ್ ಸೊಂಯ್ ಸ್ವರ ಕೇಳಿ ಬರುತ್ತಿತ್ತು.

ಗುಡಿಯ ಕಟ್ಟೆಯ ಮೇಲೆ ನೀಲಿ ಚಿಂದಿಯನ್ನಿಟ್ಟುಕೊಂಡು ಅರೆಬತ್ತಲೆ ಮೈಮರೆತು ಮಲಗಿದ್ದಳು. ಆ ದೃಶ್ಯವನ್ನು ನೋಡಿದಾಗ ಈರ ಭರಮರಿಗಾದ ಆನಂದಕ್ಕೆ ಮೇರೆಯೇ ಇಲ್ಲ. ಭರಮ ಸ್ವಲ್ಪ ಅವಳ ಹತ್ತಿರ ಹೋಗಿ ಕಣ್ಣರಳಿಸಿ ನೋಡಿದ. ಎದೆಯ ಮೇಲಿನ ಸೆರಗು ಜಾರಿತ್ತು. ಬಿರುಡೆಗಳಿಲ್ಲದ ಕುಪ್ಪಸ ಬಿಚ್ಚಿಕೊಂಡಿದ್ದರಿಂದ ಯೌವ್ವನ ತುಂಬಿದ ಸ್ತನಗಳು ಬೆಳದಿಂಗಳ ಕಿರಣಗಳಲ್ಲಿ ಹೊಳೆಯತೊಡಗಿದ್ದವು. ಉಟ್ಟ ತುಂಡು ಸೀರೆ ತೊಡೆಯ ಮೇಲಿನವರೆಗಾವರಿಸಿತ್ತು. ಆ ದೃಶ್ಯ ಕಂಡ ಭರಮನ ಬಾಯಲ್ಲಿ ಜೊಲ್ಲಾವರಿಸಿತು. ಸರಕ್ಕನೆ ಹೊದೆದುಕೊಂಡ ಪಂಚೆಯನ್ನು ಕೈಯ್ಯಲ್ಲಿ ತೆಗೆದುಕೊಂಡು ಮೆಲ್ಲನೆ "ಲೇ ಈರಾ, ಹಗೂರಕೆ ಹೋಗಿ ಬಾಯ್ಗೆ ಇದ್ನ ಬಿಗಿಲೇ" ಎಂದು ಕೊಟ್ಟ.

ಈರ ಅವಳ ಬಳಿ ಹೋಗುವಷ್ಟರಲ್ಲಿ ಅಲ್ಲಿಯ ಬಿದ್ದ ಕಲ್ಲು ಎಡವಿದ. "ಯಾರವಾ" ಎಂದು ತಟಕ್ಕನೆ ನೀಲಿ ಏಳಬೇಕೆನ್ನುವಷ್ಟರಲ್ಲಿ ಈರ ಬಾಯಿಗೆ ಗಟ್ಟಿಯಾಗಿ ಬಿಗಿದ. ಅವನಿಗೆ ನೆರವಾಗಿ ಭರಮಪ್ಪ ತನ್ನ ಅಜಾನುಬಾಹುಗಳಿಂದ ಅವಳನ್ನು ಹಿಡಿದುಕೊಂಡ. ಎಷ್ಟು ಒದ್ದಾಡಿದರೂ ನೀಲಿಗೆ ಭರಮನಿಂದ ಬಿಡಿಸಿಕೊಳ್ಳಲಾಗಲಿಲ್ಲ. ಬರಿ ಕಾಲುಗಳನ್ನು ಹೊಡೆಯುತ್ತ ಹುಳದಂತೆ ವಿಲಿವಿಲಿ ಒದ್ದಾಡತೊಡಗಿದಳು. ನಿಸ್ಸಹಾಯಕಳಾದ ಅವಳು ಮನದಲ್ಲಿಯೇ ಶಪಿಸಿದಳು. ಕ್ರೋಧದಿಂದ ಅವಳ ಮೈ ಬೆವತುಹೋಗಿತ್ತು.

ಅವರ ಮುಖಕ್ಕೆ ಉಗುಳಬೇಕೆಂದರೆ ಬಾಯಿಯೂ ಬಂದಾಗಿ ಹೋಗಿತ್ತು.

ನೀಲಿಯ ಬಾಯಿಯನ್ನು ಬಿಗಿದ ಮೇಲೆ "ಲೇ ಈರಾ, ಅತ್ತಾಗ ಹೋಗ್ಲೇ" ಎಂದ ಭರಮ.

ಭರಮ ನೀಲಿಯ ಮೈ ಮೇಲೆ ಹೋರಿಯಂತೆ ಏರಿ ಹೋದ. ಅವನು ಮೈ ಮೇಲೆ ಬಂದಾಗ ನೀಲಿಗೆ ದೊಡ್ಡ ಗುಂಡುಕಲ್ಲನ್ನು ಹೇರಿದಂತೆ ಆಯಿತು. ಕೆಲಕ್ಷಣದಲ್ಲಿ ಅವಳ

ತೊಡೆಯ ಎಲುವುಗಳು ಲಟಲಟ ಮುರಿಯುತ್ತಿರುವಂತೆ ಭಾಸವಾಯಿತು. ಕಣ್ಣು ಕತ್ತಲು ಗವಿಸಿದವು. ಯಾವದೋ ಹುಳು ಮೈಯನ್ನು ಹೀರುತ್ತಿರುವಂತೆ ಎನ್ನಿಸಿತು. ಆ ನರಕ ಯಾತನೆಯನ್ನು ತಾಳಲಾರದೆ ನೀಲಿ ನರಳತೊಡಗಿದಳು.

ನೀಲಿ ನಿಶ್ಶಕ್ತಳಾಗಿ ಬತ್ತಲೆ ಕಣ್ ಕಣ್ ಬಿಡುತ್ತ ಬಿದ್ದಿದ್ದಳು. ಕೈ ಕಾಲುಗಳು ಅಲ್ಲಾಡಿಸಲಿಕ್ಕೂ ಬಾರದಂತಾಗಿದ್ದವು. ಗಲ್ಲಗಳಿಂದ ರಕ್ತ ಬರತೊಡಗಿತ್ತು. ಇದ್ದ ತುಂಡು ಕುಪ್ಪಸವೂ ಕಿತ್ತುಹೋಗಿತ್ತು. ಸ್ತನಗಳ ಮೇಲೆ ಉಗುರುಗಳು ಗೀಚಿಕೊಂಡಿದ್ದರಿಂದ ಅಲ್ಲಲ್ಲಿ ರಕ್ತವೂ ಚಿಮ್ಮಿತ್ತು.

ನೀಲಿಯ ಕಣ್ಣುಗಳಲ್ಲಿ ಧಳಧಳನೆ ನೀರು ಇಳಿಯತೊಡಗಿತು. ಗರ್ಭಗುಡಿಯ ಕಡೆ ಕಣ್ಣು ಹೊರಳಿಸಿ ನೋಡಿದಳು. ಒಂದು ವಿಷಾದ ನಗೆ ಅವಳ ತುಟಿಯ ಮೇಲೆ ಮಿನುಗಿತು. ಆ ನಗೆಯ ಅರ್ಥ ಈ ದೇವರೆಲ್ಲ ದುರ್ಬಲರು, ನಿಶ್ಶಕ್ತರು ಬರಿ ಕಲ್ಲು ಎಂದಾಗಿರಬೇಕು. ಆ ಘಟನೆಯ ಅನಂತರ ನೀಲಿ ಲೀಲಕ್ಕನ ಮನೆ ಕಡೆಗೆ ಸುಳಿಯಲೇ ಇಲ್ಲ.

## ೩

ಕಾಲಚಕ್ರ ಉರುಳಿತು. ಕಳೆದ ಸಲ ಚಳಿಗಾಲದ ರಜೆಯನ್ನು ಹಿರೇಹಳ್ಳಿಯಲ್ಲಿ ಕಳೆದು ಹೋದ ಶಂಕರ ಮತ್ತೆ ಹತ್ತು ಹನ್ನೆರಡು ತಿಂಗಳಾದ ಮೇಲೆ ಯಾವದೋ ನಿಮಿತ್ತದಿಂದ ಅಕ್ಕನ ಬಳಿ ಬಂದಿದ್ದ.

ಆಗ ಮಧ್ಯಾಹ್ನ ಒಂದು ಗಂಟೆಯಾಗಿರಬಹುದು. ಶಂಕರ ಊಟಕ್ಕೆ ಕುಳಿತುಕೊಂಡಿದ್ದ. ಲೀಲಕ್ಕ ಬಡಿಸತೊಡಗಿದ್ದಳು.

"ಲೀಲಕ್ಕ ಆಮೇಲೇನಾದ್ರೂ ನೀಲಿ ಮನೆಕಡೆಗೆ ಬಂದಿದ್ಳೇನು?" ಉಪ್ಪಿನಕಾಯನ್ನು ಬಡಿಸಿಕೊಳ್ಳುತ್ತ ಕೇಳಿದ ಶಂಕರ.

"ಇನ್ನೂ ನಿನ್ಗೆ ನೀಲಿ ನೆನಪು ಅದ ಏನು?" ಏನೋ ಜ್ಞಾಪಿಸಿಕೊಳ್ಳುತ್ತ ಕೇಳಿದಳು ಲೀಲಕ್ಕ.

"ಹೂಂ! ಅವಳ್ನ ನಾನು ಮರಿಯೊ ಹಾಂಗಿಲ್ಲ ಅನಸ್ತದ."

"ನನ್ಗೂ ಹಾಗೇ ಆಗಿದೆ ಶಂಕ್ರಣ್ಣಾ. ಅವತ್ತು ನೀನು ಬಂದ ದಿವ್ಸ ಬಂದವಳು ಮತ್ತೆ ಮನೇ ಕಡೆಗೇ ಬಂದಿಲ್ಲ. ನನ್ನ ಜೀವ ಏಕೊ ಭಾಳ ಚಡಿಪಡಿಸಲಿಕ್ಕೆ ಹತ್ತೇದ."

"ನಿನ್ಗ ಅನ್ಸೋದು ಸ್ವಾಭಾವಿಕ ಲೀಲಕ್ಕ. ನಿನ್ನ ಅವಳು ಭಾಳ ಹಚ್ಚಿಕೊಂಡಾಳ. ನೀನೇ ಅವಳಿಗೆ ತಂದೆ ತಾಯಿ ದೇವರು ಎಂದು ಹೇಳ್ತಿದ್ದಳು."

"ಅದೇನೋ ನಾ ಕಾಣೆ! ನಾ ಮಾಡುತ್ತಿದ್ದುದಾರೂ ಏನು? ಅವಳು ಹಸಿವೆ ಎಂದು ಬಂದಾಗ ಒಂದಿಷ್ಟು ಹೊಟ್ಟೆಗೆ ಹಾಕ್ತೇನೆ ದುಃಖ ಬಂದಾಗ ಸಮಾಧಾನಪಡಿಸ್ತೇನೆ!"

"ನಿನ್ನಂತೆ ಇಷ್ಟೊಂದು ಅನುಕಂಪ ತೋರಿಸೋರು ಈ ಜಗತ್ತಿನೊಳಗೆ ಭಾಳ ಕಡಿಮೆ ಲೀಲಕ್ಕ."

"ಅದೇನಪ್ಪಾ ನನ್ಗ ಇನ್ನೂ ಜಗತ್ತಿನ ಅರಿವಿಲ್ಲ. ಏನೋ ಈ ದೇಹ ಬಿದ್ದು ಹೋಗುವುದರೊಳಗಾಗಿ ನಾಲ್ಕು ಜನರಿಗೆ ಉಪಕಾರ ಮಾಡಿ ಹೋದ್ರಾಯಿತು ಎಂಬ ಉದ್ದೇಶ ನಂದು."

"ನೀಲಿ ಈ ಊರೊಳಗಾದ್ರೂ ಇದ್ದಾಳೆ?" ಶಂಕರ ಕೇಳಿದ.

"ಅದೇನಪ್ಪ ನಂಗಂತೂ ಗೊತ್ತಿಲ್ಲ ಪಾಪ, ಅವಳಿಗೇನು ಆಗಿದೆಯೋ ಏನೊ ನನ್ನ ಜೀವ ಚಡಪಡಿಸುತ್ತಿದೆ" ಎಂದು ಉತ್ತರಿಸಿದಳು ಲೀಲಕ್ಕ.

ಆಮೇಲೆ ಅವರು ಏನೇನೊ ಚರ್ಚಿಸಿದರು. ಶಂಕರ ಊಟ ಮುಗಿಸಿ ಕೈ ತೊಳೆದುಕೊಂಡು ಹೋಗಿ ಮತ್ತೆ ಕೋಣೆಯಲ್ಲಿ ಮಲಗಿಬಿಟ್ಟ. ಐದುಗಂಟೆ ಸುಮಾರಿಗೆ ಎದ್ದು ಚಹ ಕುಡಿದು ಹೊಲಗಳಲ್ಲಿ ಸುತ್ತಾಡಿಕೊಂಡು ಬರಲು ಹೊರಟ. ಅಲ್ಲಿ ಎಲ್ಲಿಯಾದರೂ ನೀಲಿ ಕಾಣಬಹುದೊ ಎಂದು ಆಸೆಯಿಂದ ಸುತ್ತಾಡಿದ.

ಅವನು ಮನೆಗೆ ಮರಳಿದಾಗ ಆಗಲೆ ಎಂಟು ಗಂಟೆಯಾಗಿತ್ತು. ಶಿವರಾಯರೂ ಲೀಲಕ್ಕನೂ ಅವನಿಗಾಗಿ ಕಾಯುತ್ತ ಕುಳಿತಿದ್ದರು. ಅವನು ಬಂದ ಮೇಲೆ ಮೂವರೂ ಊಟ ಮುಗಿಸಿ ಮಲಗಿಕೊಂಡರು. ಶಂಕರನಿಗೆ ಹೊರಗಿನ ಕೋಣೆಯಲ್ಲಿ ಹಾಸಿಕೊಡಲಾಗಿತ್ತು. ಶಂಕರ ಏನೇನೋ ಯೋಚಿಸುತ್ತ ಮಲಗಿಕೊಂಡಿದ್ದ.

ಒಳಗೆ ಮಲಗಿದ್ದ ಲೀಲಕ್ಕನಿಗೂ ನಿದ್ರೆ ಹತ್ತಿರಲಿಲ್ಲ. ದುಡಿದು ದಣಿದ ಶಿವರಾಯರು ಮಾತ್ರ ಗೊರಕೆ ಹೊಡೆಯತೊಡಗಿದ್ದರು. ಸುಮಾರು ಹತ್ತು ಹನ್ನೊಂದು ಗಂಟೆಯಾಗಿರಬಹುದು ಯಾರೋ ಹೆಂಗಸು ಹಿತ್ತಲದಲ್ಲಿ ಜೋರಿನಿಂದ ನರಳುತ್ತಿರುವಂತೆ ಕೇಳಿಸಿತು ಲೀಲಕ್ಕನಿಗೆ. ಚಟ್ಟನೆ ಎದ್ದು ಕಂದೀಲನ್ನು ಹಚ್ಚಿ ಈ ಸರಿರಾತ್ರಿಯಲ್ಲಿ ಯಾರು ನರಳುತ್ತಿರಬಹುದು? ಎಂದುಕೊಂಡು ಲೀಲಕ್ಕ "ಏನ್ರಿ, ಸ್ವಲ್ಪ ಏಳ್ರಿ" ಎಂದು ಪತಿಯನ್ನು ಎಬ್ಬಿಸಿದಳು. ಶಿವರಾಯರು ಥಟ್ಟನೆ ಎದ್ದು ಕುಳಿತು ಏನಾಯಿತು ಎಂದು ಕೇಳಿದರು. "ಯಾರೋ ಹೆಂಗಸು ಹಿತ್ಲದೊಳಗ ನರಳುತ್ತಿದ್ದಾಳ, ನೋಡೋಣ ಬನ್ನಿ" ಎಂದು ಕಂದೀಲನ್ನು ತೆಗೆದುಕೊಂಡಳು. ಶಿವರಾಯರು ಪಂಚೆಯನ್ನು ಹೆಗಲ ಮೇಲೆ ಹಾಕಿಕೊಂಡು ಎದ್ದರು. ಲೀಲಕ್ಕ ಬಾಗಿಲು ತೆರೆದು ಹೊರಗೆ ಬರುವಷ್ಟರಲ್ಲಿ ಶಂಕರನೂ ಅಲ್ಲಿಗೆ ಧಾವಿಸಿ "ಯಾರದು ನರಳೋರು ಲೀಲಕ್ಕ?" ಎಂದು ಕೇಳಿದ. "ನೋಡೋಣ ಬಾ!" ಎಂದು ಅವನನ್ನೂ ಕರೆದುಕೊಂಡು ಹೊರಟಳು.

ಲೀಲಕ್ಕನಿಗೆ ಆ ದೃಶ್ಯವನ್ನು ನೋಡಿದಾಗ ಎದೆಗೆ ಗುಂಡು ಬಡೆದಂತಾಯಿತು. ಗಂಡಸಿನ ಪಶುವೃತ್ತಿಯನ್ನು ಕಂಡು ಮೈ ಉರಿಯಿತು. 'ಈ ಕಾಮಪಶುಗಳಿಗೆ ಹುಚ್ಚಿ ಎಂಬ ಕನಿಕರವು ಬರಲಿಲ್ಲವೆ' ಎಂದು ಹೀಗಳೆದಳು. ಅಷ್ಟರಲ್ಲಿ ತಂತಾನೆ ಕಣ್ಣಾಲಿ ತುಂಬಿ ಬಂದಿತು. ನೀಲಿ ಕೆಸರಿನಲ್ಲಿ ಬಿದ್ದು ಪ್ರಸವ ವೇದನೆಯಿಂದ ಒದ್ದಾಡತೊಡಗಿದ್ದಳು. ತುಂಬಿಕೊಂಡ ದೇಹ ಸೊರಗಿ ಕಡ್ಡಿಯಂತಾಗಿತ್ತು. ಪಾಪದ ಬುಟ್ಟಿಯಂತೆ ಹೊಟ್ಟೆ ಮಾತ್ರ ಉಬ್ಬಿಕೊಂಡಿತ್ತು. ಕಣ್ಣುಗಳು ಗುಳಿಬಿದ್ದು ಹೋಗಿದ್ದವು; ಮುಖ ಕಾಂತಿಹೀನವಾಗಿತ್ತು.

ವೇದನೆಯನ್ನು ತಾಳಲಾರದೆ ನೀಲಿ ಕೆಸರನ್ನು, ಮುಷ್ಟಿಯಿಂದ ಹಿಚುಕಿ ಒಗೆಯುತ್ತ "ಅಯ್ಯೋ ಆ ಬಾಡಕೋಗಳು ಅವರ್ನ ಕೊಂದಹಾಕ್ರೊ, ನಾ ಸಾಯಾಕ ಹತ್ತೀನಿ. ಈಗ ನೀನೆ ನಂಗ ಗತಿ ಏಕ್ಕಾ..." ಎಂದು ಹಲುಬತೊಡಗಿದಳು.

ಲೀಲಕ್ಕ ಅವಳ ಬಳಿ ಹೋಗಿ "ನೀಲಿ... ನೀಲಿ... ಒಳಗ ನಡಿ" ಎಂದು ಎಬ್ಬಿಸಲು ಹೋದಾಗ "ಅಯ್ಯೊ ಬಿಡಕ್ಕಾ" ಎಂದು ಜೋರಿನಿಂದ ಕೊಸರಿಕೊಂಡು ದೊಪ್ಪನೆ ಮತ್ತೆ ಕೆಸರಿನಲ್ಲಿ ಬಿದ್ದುಬಿಟ್ಟಳು. ಆ ಕ್ಷಣವೇ ಕೂಸು ಗರ್ಭದಿಂದ ಹೊರಬಿತ್ತು. ಆದರೆ ಸದ್ದೇ ಇಲ್ಲ. ಜೀವವಿಲ್ಲದ ಬರಿ ಮಾಂಸದ ಪಿಂಡ ಹೊರಬಂದಿತ್ತು. ಅದನ್ನು ನೋಡಿ ಲೀಲಕ್ಕ "ಶಂಕರಣ್ಣ ದೇವರು ಹುಚ್ಚಿಯ ಮೇಲೆ ಇಷ್ಟಾದ್ರೂ ಕೃಪೆ ಮಾಡಿದನಲ್ಲಾ ಇಲ್ದಿದ್ರೆ ಅದೊಂದು ಜೀವ ಈ ಪ್ರಪಂಚದೊಳಗೆ ಅನಾಥವಾಗಿ ತಿರುಗುತ್ತಿತ್ತು" ಎಂದು ಮುಂದಿನ ಕಾರ್ಯಕ್ಕೆ ಅನುವಾದಳು. ಶಂಕರ ಹಾಗೂ ಶಿವರಾಯರು ಅವಳ ನೆರವಿಗೆ ಬಂದರು.

ನೀಲಿಗೆ ಎಚ್ಚರವಾದಾಗ ವರಾಂಡದಲ್ಲಿ ಹೊರಸಿನ ಮೇಲೆ ಮಲಗಿದ್ದಳು. ಅವಳ ಬಳಿ ಶಂಕರ, ಶಿವರಾಯರು ಲೀಲಕ್ಕ ನಿಂತುಕೊಂಡಿದ್ದರು.

ಲೀಲಕ್ಕನನ್ನು ನೋಡಿ ನೀಲಿ ಕ್ಷೀಣ ಸ್ವರದಲ್ಲಿ.... "ಏಕ್ಕಾ.... ನನ್ನ ಕೂಸು ಎಲ್ಲಯ್ತಿ...?" ಎಂದು ಕೇಳಿದಳು. ಆ ಧ್ವನಿಯಲ್ಲಿ ತಾಯ್ತನದ ಕಾತರ ಅಂತಃಕರಣದ ಮಿಡಿತವಿತ್ತು. ಆ ನೋಟದಲ್ಲಿ ಆ ಸ್ಪಷ್ಟ ಆಶೆಯ ಕುಡಿಯಿತ್ತು.

"ನೀಲಿ ಕೊಟ್ಟ ದೇವ್ರು ಕೊಂಡು ಹೋದ. ಒಳ್ಳೇದ ಆತ ಬಿಡು, ಇಲ್ದಿದ್ರ ಅದೊಂದು ಜೀವ ಹಲಬುತ್ತಿತ್ತು" ಎಂದುಬಿಟ್ಟಳು ಲೀಲಕ್ಕ.

ಆ ನುಡಿಗಳನ್ನು ಕೇಳುತ್ತಲೇ ನೀಲಿ ಚಟ್ಟನೆ ಮೇಲಕ್ಕೆ ಪುಟಿದು "ಅಯ್ಯೊ! ಏನಂತಿ ಏಕ್ಕಾ.... ನನ್ನ ಕಂದ ಹೋತ... ಸತ್ತುಹೋತ? ಖರೆ ಹೇಳ್ ನಂಗ ನನ್ನ ಕಂದನಾ ಬೇಕು... ಕೊಡ್ರಿ... ಇಲ್ದಿದ್ರ ನಾನೂ ಸಾಯ್ತೇನಿ ಬಿಡ್ರಿ.... ನನ್ನ ಕೂಸಿನ ಹತ್ರ ಹೋಗ್ತೀನಿ..." ಎಂದು ಜೋರಾಗಿ ಅಳತೊಡಗಿದಳು. ಶಂಕರ, ಶಿವರಾಯರು ಅವಳನ್ನು ಗಟ್ಟಿಯಾಗಿ ಹಿಡಿದು ಮಲಗಿಸಿದ್ರು.

"ಹುಚ್ಚಿಯಾದ್ರೇನಾಯಿತು. ಅವಳಿಗೂ ತಾಯ್ತನವಿಲ್ಲವೆ? ಆದರೇನು ಅವಳ ಬಾಳು ನಂಜು ಬಯಕೆಯು ಮಂಜು " ಎಂದು ಲೀಲಕ್ಕ ಮನಸ್ಸಿನಲ್ಲಿಯೇ ಗುಣುಗುಟ್ಟಿದಳು. ನೀಲಿಗೆ ನಿದ್ರೆ ಹತ್ತಿದ ಮೇಲೆ ಮೂವರು ಹೋಗಿ ಮಲಗಿಕೊಂಡರು. ಬೆಳಿಗ್ಗೆ ಲೀಲಕ್ಕ ಹೊರಗೆ ಬಂದು ನೋಡುತ್ತಾಳೆ ಹೊರಸು ಬರಿದಾಗಿತ್ತು. ನೀಲಿ ಮಾಯವಾಗಿದ್ದಳು.

○

# ೯. ಗಾಳದ ಹುಳ

"ಏ! ರಾಮಾಚಾರಿ ಸರಿಯಾಗಿ ಸಿದಗಿ ಹೊತಗೊಳ್ಳೋ ಹಿಂಗ್ಯಾಕ ಮಾಡಲಿಕ್ಕೆ ಹತ್ತೀದಿ?"

ಸಿದಗಿಯ ಮುಂದುಗಡೆಯ ಬಲಭಾಗಕ್ಕಿದ್ದ ಕೃಷ್ಣಪ್ಪ, ಕಾಲು ಎಳೆಯುತ್ತಾ ಹಿಂದೆ ಮುಂದೆ ಉಳಿಯುತ್ತಿದ್ದ ರಾಮಾಚಾರಿಗೆ ಹೇಳಿದ. ಕೃಷ್ಣಪ್ಪನ ಎಡಗಡೆ ಇದ್ದ ಬಿಂದಾ,

"ಕೃಷ್ಣಪ್ಪಾ! ಹೆಣಾ ಹೊರದ್ರಾಗ ರಾಮಾಚಾರಿ ಹಿಕ್ಕಿ ಹಾಕಲಿಕ್ಕೆ ಹತ್ತ್ಯಾನ ನೋಡು"

ಎಂದು ಅಣಕ ನಗೆ ಬೀರಿ ಸಿದಗಿ ಗಳಾ ಎಡಭುಜದಿಂದ ಬಲ ಭುಜಕ್ಕೆ ತೆಗೆದುಕೊಂಡ.

"ಭಡಾ ಭಡಾ ಕಾಲ ಹಾಕರಲೇ, ಕತ್ತಲಡಗ ಆಗಲಿಕ್ಕೆ ಹತ್ತೇದ. ಇನ್ನೂ ಹೆಣಾ ಸುಟ್ಟು ತಲಿ ಒಡೆದದ್ದು ನೋಡಿ ಮನಿ ಕಾಣಬೇಕಾಗೇದ."

ರಾಮಾಚಾರಿಯ ಬಲಗಡೆ ಇದ್ದ ಭೀಮರಾಯ ದಾಪುಗಾಲು ಹಾಕುತ್ತ ಹೇಳಿದ.

ಅವಸರ ಅವಸರವಾಗಿ ಸಿದಗೆಗೆ ಬಿಗಿದ ಲಚ್ಚಪ್ಪನ ಶವ ಹೊತ್ತವರ ಓಟದ ಸ್ಥಿತ್ಯಂತರದಲ್ಲಿ ಆ ಕಡೆಗೊಮ್ಮೆ ಈ ಕಡೆಗೊಮ್ಮೆ ಹೊಯ್ದಾಡತೊಡಗಿತ್ತು. ಮುಂಭಾಗದಲ್ಲಿ ಹೆಣದ ಕಾಲುಗಳ ಕಡೆಗೆ ಕೃಷ್ಣಪ್ಪ ಬಿಂದ ಇದ್ದರೆ ಹಿಂಭಾಗದಲ್ಲಿ ಮುಖದ ಹತ್ತಿರ ರಾಮಾಚಾರಿ, ಭೀಮರಾಯ ಇದ್ದರು.

ಕೃಶ ಶರೀರಿ ರಾಮಾಚಾರಿ ಒಮ್ಮೆ ಎಡಕ್ಕೆ ಒಮ್ಮೆ ಬಲಕ್ಕೆ ಸಿದಗಿ ಗಳವನ್ನು ಸರಿಸಿಕೊಳ್ಳುತ್ತ, ಧೋತರ ಚುಂಗಿನಿಂದ ಭಯದಿಂದ ಬೆವರಿಟ್ಟ ನಿಟಿಲವನ್ನು ನೇವರಿಸಿಕೊಳ್ಳುತ್ತ ಕಂಪಿಸುವ ಸ್ವರದಲ್ಲಿ,

"ಹೀಗ ಓಡಲಿಕ್ಕೆ ಹತ್ತಿದ್ರ ನನ್ನ ಕಡಿಂದಾ ಸಾಧ್ಯನ ಇಲ್ಲಾ. ಸಾವಕಾಶ ನಡೀರೋ ಹೊಲದಾಗಿನ ಬೆದ್ರ ಇದ್ದ ಹಂಗ ಇದ್ದ ಈ ಮುದುಕ ಲಚ್ಚಪ್ಪಾ ಸತ್ತ ಮ್ಯಾಲೆ ಇಷ್ಟ ವಜ್ಜಾ ಆಗ್ತಾನ ಅಂತ ತಿಳಿದಿರಲಿಲ್ಲಾ" ಎಂದ.

"ಐದ ಮಲ್ಲಿಗಿ ತೂಕಾ ಇರ್ತಾನಂತ ಮಾಡಿದ್ದೇನು?" ಬಿಂದಾ ಬಾಯಿಬಿಟ್ಟಾ.

"ಹೆಣಾ ಹೊತ್ತಿಲ್ಲ ಸುಡಗಾಡ ಕಂಡಿಲ್ಲರೊ ಈ ರಾಮಾಚಾರಿ ಯಾಕೆ ಗೋಳಹೊಯ್ಕೋತೀರಿ ಅವ್ನ."

ಕೃಷ್ಣಪ್ಪ ಕೀಟಲೆ ಧ್ವನಿಯಿಂದ ಬಿಂದನ ಬೆನ್ನು ಚಿವುಟಿದ.

"ಮಧ್ಯರಾತ್ರಿ ಆಗೋದ್ರಾಗ ಮನಿ ಕಾಣಬೇಕ್ರೋ. ಇಲ್ಲಿದ್ರ ಸ್ಮಶಾನದ ಹತ್ತರದ ಬೇವಿನಗಿಡದ ಮ್ಯಾಲಿನ ಬ್ರಹ್ಮರಾಕ್ಷಸಾ 'ಹಸ್ನಾತ' ಅಂತ ಬಂದಬಿಡ್ತದಂತ."

ಬಿಂದನ ಈ ನಗೆನುಡಿ ಕತ್ತಲೆಯನ್ನು ಭೇದಿಸಿದಂತೆ, ರಾಮಾಚಾರಿಯ ಎದೆಯನ್ನೂ ನಡುಗಿಸಿತು. ಕೃಷ್ಣಪ್ಪ ಭೀಮರಾಯ ಕೂಡ ಭೂತಪ್ರೇತಗಳ ಕಥೆಗಳನ್ನು ಹೊಸೆಯತೊಡಗಿದರು.
"ಎಲ್ಲಾ ಬಿಟ್ಟು ಸ್ಮಶಾನಕ್ಕ ಹೊಂಟಾಗ ಭೂತದ ಹೆಸರು ಯಾಕ ಎತ್ತತೀರಿ ಆಂಜನೇಯನ ಮಂತ್ರ ಆದ್ರೂ ಜಪಿಸಿರಿ"

ಎಂದ ರಾಮಾಚಾರಿಯ ಮಾತಿಗೆ ಕೃಷ್ಣಪ್ಪನ ಕಡೆಗೆ ಹೊರಳಿದ ಬಿಂದಾ, ಬೊಕ್ಕನೆ ಉಗುಳ ಪ್ರೋಕ್ಷಣೆಯೊಂದಿಗೆ ನಕ್ಕು "ದೆವ್ವದ ಮಾತು ಎತ್ತಿದ ಕೂಡಲೇ ಅವ್ನ ಎದಿ ಒಡೀತು ನೋಡ್ರಿ. ಲಚ್ಚಪ್ಪ ಎಲ್ಲೆ ಭೂತ ಆಗಿ ಬಡಕೋತಾನೋ ಅನ್ನೋ ಅಂಜಿಕಿ ಅಂವಗ" ಎಂದ.

ನುಡಿಗೆ ನಗೆ ಸೇರಿ, ನಗೆಗೆ ನುಡಿ ಸೇರಿ, ಆ ಕಾಳರಾತ್ರಿಯ ನಿಶ್ಶಬ್ದದಲ್ಲಿ ಲೀನವಾದರೂ ರಾಮಾಚಾರಿಯ ಕರ್ಣಪಟಲುಗಳಿಗೆ ಆ ನಗೆ ಆ ನುಡಿ ಅಪ್ಪಳಿಸಿ ಅಂತರಂಗದ ದರಿಯಲ್ಲಿ ಪ್ರತಿಧ್ವನಿಸಿದಂತೆ ಅನ್ನಿಸಿತು.

"ಸುಡಗಾಡ ಈ ಮುದುಕ ನನ್ನ ಪಾಲಿಗೆ ಎಲ್ಲಿ ಕೂತಿದ್ನೋ, ಅವ್ನ ಸುಟ್ಟು ಸ್ಮಶಾನ ದಾಟಿ ಮನಿ ಮುಟ್ಟೋತನಕಾ ನನಗ ಜೀವದಾಗ ಜೀವ ಇಲ್ಲಾ' ಬಿಂದಾ ಹೇಳಿದ ಮಾತಿನ್ಹಂಗ ಆದ್ರ! ಎದಿ ಎಷ್ಟು ಜೋರಾಗಿ ಡಬಾ ಡಬಾ ಬಡಕೊಳ್ಳಲಿಕ್ಕ ಹತ್ತೇದಲ್ಲಾ ಥೂ ಇದು ಹತ್ತಿದ್ನಲ್ಲಾ ಬಿಟ್ಟಿದ್ನಲ್ಲಾ. ಹಾಳ ಆಶ್ಯಾಕ್ಕ ಹಾದ್ಯಾಗ ಹೋಗೋ ದೆವ್ವಾ ಮನ್ಯಾಗ ಹೊಕ್ಕಿಸಿಕೊಂಡ ಹಂಗ ಆತು"

ಎಂದು ತನ್ನೊಳಗೇ ಬಡಬಡಿಸಿಕೊಂಡ ರಾಮಾಚಾರಿ.

ಲಚ್ಚಪ್ಪ ಹತ್ತಿದವನಲ್ಲ! ಹೊಂದಿದವನಲ್ಲ! ಅಂದ ಮೇಲೆ ರಾಮಾಚಾರಿಯ ಮನೆ ಹೊಕ್ಕುದು ಹೇಗೆ.....?

ಈಗ ನಾಲ್ಕು ತಿಂಗಳ ಹಿಂದೆ, ಮಟ ಮಟ ಮಧ್ಯಾಹ್ನ ಏಕಾಯೇಕ್ ಲಚ್ಚಪ್ಪನ ಸವಾರಿ ರಾಮಾಚಾರಿಯ ಮನೆಯ ಮುಂದೆ ಬಂದು ಇಳಿಯಿತು. ಮೇಲೆ ಬಿಸಿಲಿನ ತಾಪ, ಒಳಗೆ ಹಸಿವೆ ತಾಪ, ಲಚ್ಚಪ್ಪ ತಳಮಳಿಸುತ್ತ, ಉಶ್‌ಗುಟ್ಟುತ್ತಾ ಕ್ಷೀಣ ಸ್ವರದಲ್ಲಿ ಕೂಗಿದ:

ವಾಯುಸ್ತುತಿ ಮಂತ್ರಗಳನ್ನು ಅರ್ಧಕ್ಕೆ ನುಂಗಿ, ಬಾಗಿಲಿಗೆ ಬಂದು, ಹಸಿವೆ ಸಮೇತ ನಿಂತ ಮುದಿ ಆಗಂತುಕನನ್ನು ಕಂಡು "ಕೂಳಿಗೆ ಒಕ್ಕರಿಸಿತು ಈ ಹಾಳು ಮುದುಕ' ಎಂದುಕೊಳ್ಳುವಂತೆ ಮೋರೆ ಕಿವುಚಿದ, ರಾಮಾಚಾರಿ...

"ರಾಮಾಚಾರಿ, ನೀನ ಏನಪಾ ರಾಮಾ ರಾಮಾ" ಗಂಟನ್ನು ಕಟ್ಟೆಯ ಮೇಲೆ ಎಸೆದು ಆಸೀನನಾಗಿಯೇ ಬಿಟ್ಟ, ಆ ಮುದುಕ,

"ಹೌದು ನಾನ ರಾಮಾಚಾರಿ, ನೀವು ಯಾರು?"

"ನಾನು ದೂರದಿಂದಾ ಬಂದೀನಿ. ಒಂದು ದೃಷ್ಟಿಯಿಂದ ನಾ ನಿನ್ನ ದೂರದ ಸಂಬಂಧಿನ ಅನ್ನು"

"ಅಂದ್ರ ನೀವ್ಯಾರು? ನನ್ಗ ಸರಿಯಾಗಿ..."

"ಅದ್ನೆಲ್ಲಾ ಹೇಳ್ತೀನಿ ಬಿಡು. ಅದಕ್ಕ ಯಾಕ ಒದ್ದಾಡ್ತಿ. ನನ್ನ ಹೆಸರು ಲಚ್ಚಪ್ಪ, ನಿನ್ಗೆ ನೆನಪ ಅದನೋ ಇಲ್ಲೋ. ಹಿಂದಕ ಹಿಂದಕ ಭಾಳಾ ದಿವ್ಸ ಆತು. ಇನ್ನೂ ಚೆನ್ನಾಗಿ ಹಕ್ಕೊತ್ತಿದ್ದಿಲ್ಲ. ನಿಮ್ಮ ಅಪ್ಪನ ಸೆರೆ ಬರ್ತಿದ್ದಿ."

ಮುದುಕ ನಿಲುವಂಗಿ ಚುಂಗಿನಿಂದ ಗಾಳಿ ಹಾಕಿಕೊಳ್ಳತೊಡಗಿದ. ರಾಮಾಚಾರಿಗೆ ಏನೂ ಹೊಳೆಯಲಿಲ್ಲ.

"ಏನ್ರೀ" ಒಳಗಿನಿಂದ ಸನ್ನೆ ಕರೆ ಬಂತು

"ಅಲ್ರೀ ಇಲ್ಲದ್ದೊಂದು ಯಾರ್ಯಾರ್ನೋ ಮನ್ಯಾಗ ಹೊಗಿಸಿಕೊಳ್ಳಬ್ಯಾಡ್ರೀ."

"ಅಲ್ಲ. ಯಾರೊ ಏನೂ ತಾನು ದೂರದ ಸಂಬಂಧ ಹಚ್ಚಲಿಕ್ಕೆ ಹತ್ಯಾನ"

"ಹೌದು, ಈಗ ನನ್ಗ ಏನು ಮಾಡಂತಿ?"

"ಏನು ಅನ್ನೋದು. ನಮಗೆಲ್ಲ ನೀನು ಯಾರೂ ಅನ್ನೋದು ಗೊತ್ತಿಲ್ಲ. ಅಂತಾ ಮುಖದ ಮ್ಯಾಲೆ ಹೇಳಿ ಕಳಿಸಿಬಿಡ್ರಿ. ಮತ್ತ ಈ ಸುಡಗಾಡ ಮುದುಕನು ಸೇವಾ ಮಾಡೋ ಕೆಲಸ ಬಿದ್ದೀತು."

ಪತ್ನಿ ವಚನ ಪರಿಪಾಲಕ ರಾಮಾಚಾರಿ, ಅಜ್ಞಾನ ಶಿರಸಾವಹಿಸಿ ನೇರವಾಗಿ ಮುದುಕನ ಬಳಿಗೆ ಬಂದು,

"ಇಲ್ನೋಡ್ರಿ, ನೀವ್ಯಾರು ನನಗೆ ಗೊತ್ತಿಲ್ಲ, ಬಿಸಲಾಗ ಮನೀತನಕಾ ಬಂದೀರಿ. ಬೇಕಿದ್ರೆ ಬೆಲ್ಲ ಒಂದು ತಾಲಿ ನೀರು ಕೊಡ್ತೀನಿ. ಕುಡುದು ಹೋಗಿಬಿಡ್ರಿ," ಎಂದು ಖಡಾಖಂಡಿತ ಹೇಳಿಬಿಟ್ಟ. ಮುದುಕ ಏನೇನೊ ಗೊಣಗುಟ್ಟುತ್ತ ಕೊಟ್ಟಿದ್ದನ್ನೆ ಗಿಟ್ಟಿಸಿ 'ಆಗಲೆಪ್ಪ' ಎಂದು ಗಂಟು ಹೊತಗೊಂಡು ಕೃಷ್ಣಪ್ಪನ ಮನೆಯತ್ತ ನಡೆದ. ಆಗಲೇ ಇದನ್ನೆಲ್ಲ ಮೂಸಿಸಿದ ಕೃಷ್ಣಪ್ಪ ರಾಮಾಚಾರಿಯ ಉತ್ತರವನ್ನೇ ಪುನಃ ಉಚ್ಚರಿಸಿದ. ಭೀಮರಾಯ ಕಟ್ಟೆಯ ಮೇಲೆ ನಿಂತುಕೊಂಡೇ ಮುಂದೆ ಹೋಗಲು ಸನ್ನೆ ಮಾಡಿದ. ಬಿಂದ ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಬಾಗಿಲನ್ನು ದಬಕ್ಕನೆ ಹಾಕಿಕೊಂಡುಬಿಟ್ಟ.

ತಿದಿಯಂತೆ ತೇಕುತ್ತ ಮುಸ್ಗುಡುತ್ತ ಮುದುಕ ಆ ಓಣಿಯ ನಾಲ್ಕು ಮನೆಗಳ ಮಧ್ಯೆಯಿದ್ದ ಆಂಜನೇಯನ ಮಂದಿರದೊಳಗೆ ಹೋಗಿ, ಮೂಟೆಗೆ ತಲೆ ಆನಿಸಿಕೊಂಡು ಕ್ಷಣ ಹೊತ್ತು ಒರಗಿದ.

ಗುಡಿಯ ದ್ವಾರಕ್ಕೆ ಅಭಿಮುಖವಾಗಿದ್ದ ತನ್ನ ಮನೆಯ ಕಿಟಕಿಯಲ್ಲಿ ಹೆಂಡತಿಯೊಡನೆ ನಿಂತಿದ್ದ ರಾಮಾಚಾರಿ ಮುದುಕನ ಹಾವಭಾವಗಳನ್ನು ಕುತೂಹಲದಿಂದ ಈಕ್ಷಿಸತೊಡಗಿದ್ದ.

ಬಹುಶಃ ಲಚ್ಚಪ್ಪನಿಗೂ ಅವರ ಚಲನವಲನದ ಅರಿವಾಗಿರಬೇಕು. ಮೆಲ್ಲನೆದ್ದು ಗಂಟಿನೊಳಗಿನ ಒಂದು ಸಣ್ಣ ಸಂದೂಕದಂಥ ಪೆಟ್ಟಿಗೆಯನ್ನು ಹೊರತೆಗೆದು ಅದರೊಳಗಿನ ಹಣವನ್ನು ಧೋತರದಲ್ಲಿ ಸುರುವಿಕೊಂಡು ಎಣಿಸತೊಡಗಿದ. ಐದು, ಹತ್ತು, ನೂರು ರೂಪಾಯಿಗಳ ದೊಡ್ಡ ದೊಡ್ಡ ಕಂತೆಗಳನ್ನೇ ಎತ್ತಿ ಎತ್ತಿ ಎಣಿಸಹತ್ತಿದ.

"ಅಯ್ಯೋ ಅಲ್ಲೇ ನೋಡ್ರಿ, ಅದು ಮುದುಕನ ರೊಕ್ಕದ ಪೆಟ್ಟಿಗಿ ಅಂತ ಕಾಣಿಸ್ತದ."

"ಹೌದಲ್ಲಾ, ನೋಟಿನ ಕಟ್ಟು ಹ್ಯಾಂಗ ಹೊರಗ ತಗೀಲಿಕ್ಕೆ ಹತ್ತ್ಯಾನ ನೋಡು."

"ಸಾವಿರಗಟ್ಟಲೆ ಇದ್ದ ಹಂಗ ಅದ ಅಲ್ಲರಿ"

"ಅಲ್ನೋಡು ಅಂವಂದು ಎಣಿಸೋದು ಇನ್ನೂ ಮುಗೀವಲ್ದು."

"ಏನ್ರಿ?"

"ಏನು?"

"ಆ ಮುದುಕನ್ನ ರಮಿಸಿ ಮನೀಗೆ ಕರಕೊಂಡು ಬರ್ರೀ"

"ಇದ ಹ್ಯಾಂಗ ಸಾಧ್ಯ?"

"ನಿಮಗಂತೂ ವ್ಯವಹಾರಜ್ಞಾನ ಎಷ್ಟೂ ಇಲ್ಲ. ಏನಾದ್ರೂ ನಟನಾ ಮಾಡಿ ಕರಕೊಂಡು ಬರ್ರಿ."

"ಹಂ! ಕರಕೊಂಡೇನು ಬಂದೇ ಅನ್ನು. ನೀ ಹ್ಯಾಂಗ ಈ ರೋಗಿಷ್ಟ ಮುದುಕನ್ನ ಸೇವಾ ಮಾಡಕೊಂಡ ಇರ್ತೀದಿ."

"ಅದೆಲ್ಲಾ ನಾ ನೋಡಕೋತೀನಿ ನಿಮಗ್ಯಾಕ"

"ಹತ್ತಿದ್ದೆಲ್ಲಾ ಹೊಂದಿದ್ದಲ್ಲ. ಎಷ್ಟು ಅಂತ ನೋಡಕೋತಿ?"

"ಅದೆಷ್ಟು ದಿವ್ಸ ಉಳೀತದೇಳ್ರಿ ಗೂರಿಂದು. ಭಾಳಾ ಅಂದ್ರ ಮೂರು ನಾಲ್ಕು ತಿಂಗಳ ಉಳೀಬಹುದು. ಆಮ್ಯಾಲೆ ಅದೆಲ್ಲ ನಮಗೆ ಆಗ್ತದೆ."

ಗಂಡನ ಜನಿವಾರದ ಕೀಲಿಕೈಯನ್ನು ಅವನ ಟೊಂಕದಲ್ಲಿ ಸಿಕ್ಕಿಸುತ್ತ ನುಡಿದಳು ಶ್ರೀಮತಿ ರಾಮಾಚಾರಿ. ಅವನಿಗೂ ಹೆಂಡತಿಯ ಯೋಜನೆ ಪಟಾಯಿಸಿತು. ಅಷ್ಟೇ ಅವಳ ಪ್ರಸಂಗಾವಧಾನತೆಗೆ ಮೆಚ್ಚಿ 'ಭೇಷ್' ಎಂದ.

ರಾಮಾಚಾರಿ ಮೆಲ್ಲಗೆ ಗುಡಿಯತ್ತ ನುಸುಳಿದ್ದನ್ನು ಕಂಡು ಕೆರಳಿದ ಕೃಷ್ಣಪ್ಪ ಕುತೂಹಲದಿಂದ ಕಟ್ಟೆ ಇಳಿದ. ಬಂದ ಬಾಗಿಲು ತೆರೆದು, ಭೀಮರಾಯ ಬಾಗಿಲನ್ನೇ ದಾಟಿದ್ದ.

"ಏನಪ್ಪಾ" ರಾಮಾಚಾರಿಯ ಮಷಿನ್ ಮಾತು ಮಷಿನ್ ನಗೆ ಆಲಿಸಿದ ಲಚ್ಚಪ್ಪ ಗಬಕ್ಕನೆ ಪೆಟ್ಟಿಗೆಯನ್ನು ಗಂಟಿನೊಳಗೆ ತುರುಕಿ,

"ಏನಪ್ಪ ರಾಮಾಚಾರಿ..." ಎಂದು ಸಾವರಿಸಿಕೊಂಡು ಎದ್ದು ಕುಳಿತ.

"ಲಚ್ಚಪ್ಪಪ್ಪಾ ನಾವು ಅಂದದ್ದಕ್ಕ ಬೇಜಾರ ಆತೇನು! ಸುಮ್ಮನೆ ಪರೀಕ್ಷಾ ಮಾಡಿದ್ವಿ. ನಮಗೂ ನೀ ಯಾರು ಅನ್ನೋದು ಒಮ್ಮೆಲೆ ಹೊಳೀಲಿಲ್ಲ."

"ಯಾಕಪ್ಪ ನನ್ನ ಪರೀಕ್ಷೆ ಮಾಡ್ದಿ?" ಕೆಮ್ಮುತ್ತ ಲಚ್ಚಪ್ಪ ಕೇಳಿದ.

"ನಾನಾ ತರಹದ ಮಂದಿ ನಾನಾ ವೇಷದಾಗ ಬರ್ತಿರ್ತಾರ. ನಡೀ ಮನಿಗೆ ಹೋಗೋಣ."

ರಾಮಚಾರಿಯ ಮನದ ಇಂಗಿತವನ್ನರಿತ ಲಚ್ಚಪ್ಪ "ಜಗತ್ತs ಹೀಂಗಿದ ನೋಡು" ಎಂದು ಮುಳ್ಳಿನಿಂದ ಮುಳ್ಳಿಗೆ ಚುಚ್ಚಿ,

"ಬೇರೆಯವರಿಗೆ ಉಗುರಿನಲ್ಲಿಯ ಉಪ್ಪು ಸಿಡಿಸದ ರಾಮಾಚಾರಿ; ಅದೂ ಮನೆಯಿಂದ ಹೊರಗೆ ಅಟ್ಟಿದವರನ್ನು ರಮಿಸಿ ಮತ್ತೆ ಮರಳಿ ಕರೆದುಕೊಂಡು ಬರುತ್ತಿರುವುದರಲ್ಲಿ ಏನೋ ಬಾರಿ ಆದಾಯ ಗುರುತಿಸಿರಲೇಬೇಕು ಅವನು. ಏನೇ ಇರಲಿ, ನಾವೂ ಒಂದು ಚಾನ್ಸ್ ಯಾಕೆ ನೋಡಬಾರದು. ಬಂದಷ್ಟು ಬರಲಿ" ಸ್ವಾರ್ಥದ ಬೇಳೆ ಬೇಯಿಸಿಕೊಳ್ಳಲು ಉಳಿದ ನೆರೆಹೊರೆಯ ಆ ಮೂವರೂ ಲಚ್ಚಪ್ಪನ ಮುಖದ ಮೇಲೆ ಕೈ ಎಳೆಯಲು ಬಂದರು.

"ಅಜ್ಜಾ! ನಿನಗೆ ನಮ್ಮ ಮನ್ಯಾಗ ಬಂದು ಇರಬೇಕು ಅನ್ನಿಸಿದ್ರ ಬಂದು ಇರು" ಬಿಂದ ಎಂದ.

"ನಮ್ಮ ಮನೀಗೆ ನಡೀ ಅಜ್ಜಾ" ಕೃಷ್ಣಪ್ಪ ಬಾಯ್ಬಿಟ್ಟ.

"ನನ್ನ ಮನ್ಯಾಗ ನೀ ಸುಖವಾಗಿ ಇರಬಹುದು, ನಾವೆಲ್ಲ ಮೊದ್ಲು ಬಂದವರಿಗೆ ಹಿಂಗ ಪರೀಕ್ಷಾ ಮಾಡ್ತೀವಿ ನಡಿ" ಎಂದ ಭೀಮರಾಯ ಗಂಟನ್ನೆತ್ತಲು ಅನುವಾಗಿಯೇಬಿಟ್ಟ.

ರಾಮಾಚಾರಿ ಎದೆ 'ಧಸ್' ಎಂದಿತು. ಎಲ್ಲಿ ಈ ಮುಂಡೇಮಕ್ಕಳು ಕೈಗೆ ಬಂದ ತುತ್ತನ್ನು ಕಸಿದುಕೊಳ್ಳುತ್ತಾರೋ ಎಂಬ ಭಯದಿಂದ "ಇರಲಿ ಹೋಗ್ರೊ.... ಈಗ ಬಂದಾರ ನನ್ನ ದೂರದ ಸಂಬಂಧಿಕ ನಡೀ ಲಚ್ಚಪ್ಪಜ್ಜ" ಎನ್ನುತ್ತ ರಾಮಚಾರಿ ಭೀಮರಾಯನ ಕೈಯಲ್ಲಿಯ ಗಂಟನ್ನು ಕಸಿದುಕೊಂಡು ಲಚ್ಚಪ್ಪನ ರಟ್ಟೆಗೆ ಕೈ ಹಾಕಿ ಎಬ್ಬಿಸಿಕೊಂಡು ಹೊರಟೇಬಿಟ್ಟ. ಆಗ ಆ ಮೂವರ ಮುಖ ಕಾಯ್ದು ಹಂಚಿನಂತಾಗಿತ್ತು. ಅವರ ಹಲ್ಲಲ್ಲಿ ಕಬ್ಬಿಣವಿದ್ದಿದ್ದರೆ ಪುಡಿಪುಡಿಯಾಗುತ್ತಿತ್ತೊ ಏನೊ?

ಒಂದು ವಾರ ಆ ಮನೆಯಲ್ಲಿ ಲಚ್ಚಪ್ಪನಿಗೆ ರಾಜವೈಭವ ದೊರೆಯಿತು. ಈ ಅವಧಿಯಲ್ಲಿ ಶ್ರೀಮತಿ ರಾಮಾಚಾರಿ ಮುದುಕನ ಗತ ವೃತ್ತಾಂತ ಸಂಗ್ರಹಿಸಿದ್ದಲ್ಲದೇ ಅವನ ಹತ್ತಿರ ಸುಮಾರು ಆರೇಳು ಸಾವಿರ ಇರಬಹುದೆಂಬ ತನ್ನ ಊಹೆಯನ್ನೂ ಸ್ಥಿರಪಡಿಸಿಕೊಂಡಿದ್ದಳು.

ತಿಂಗಳುರುಳಿದರೂ ಕಲ್ಲುಗುಂಡಿನಂತೆ ಲಚ್ಚಪ್ಪ ಇನ್ನೂ ಹಾಗೇ ಉಳಿದುದನ್ನು ಕಂಡು ಅವಳು ರೋಸಿಹೋದಳು.

"ಏನ್ರೀ ಇದು ಈ ಶನಿ ಯಾವಾಗ ನೀಗ್ತದ?"

ರಾಮಾಚಾರಿಯ ಶ್ರೀಮತಿಯ ದಿನದ ಪ್ರಶ್ನೆಯಾಯಿತು. ಒಂದು ದಿನ ಹೇಳಿದ :

"ಅದಕ ಹೇಳಿದೆ ಮಹಾರಾಯ್ತಿ ಇದ್ನ ಒಳಗ ಹೊಗಿಸಿಕೊಳ್ಳೋದು ಬ್ಯಾಡ ಅಂತ. ನೀ ಕೇಳಿದ್ಯಾ?"

"ಇದ್ರ ಸಿಂಬಳಾ, ಹೊಲಸು ಎಷ್ಟಂತ ತಗೀಲಿ. ಏನರ ಯೋಚ್ನೆ ಮಾಡ್ರಲ್ಲಾ."

"ಮಾಡೋಹಂಗಿಲ್ಲ ಮಟ್ಟೊಹಂಗ ಇಲ್ಲಾ. ಬೆಂಕ್ಯಾಗ ಇಟ್ಟ ಬರೋತನಕ ಹೀಂಗ ಇದು" ಇದು ರಾಮಾಚಾರಿಯ ಉತ್ತರ.

ದಿನಾ ಅವರು ಹಾಕೊ ಹಿಡಿ ಶಾಪ ಹುಡಿಯಾಗುತ್ತಿತ್ತು.

ಅವರ ಕನಸು ನನಸ ಆದ ಹಂಗ ಒಂದು ದಿನ ಲಚ್ಚಪ್ಪನ ಗೂರು ಹೆಚ್ಚಾಯಿತು.

"ಏನ್ರೀ ಲಗೂ ಬರ್ರೀ ಮುದುಕನ ಗೂರು ಹೆಚ್ಚು ಆಗೇದ, ಈಗೊ ಇನ್ನೊಂದ ಘಳಿಗ್ಗೋ ಅನ್ನೋ ಹಂಗ ಅದ."

ಹೊನ್ನಿನ ಕೊಪ್ಪರಿಗೆಯನ್ನೇ ಕಂಡವಳಂತೆ ಶ್ರೀಮತಿ ರಾಮಾಚಾರಿ ಕೂಗಿದಳು. "ಹಿಂಗೆ ನಡಿ ಲಗೂ" ಎಂದು ಚಟ್ಟನೆ ಎದ್ದು, ದೇವರಿಗೆ ಏರಿಸಬೇಕೆಂದಿದ್ದ ಹೂಮಾಲೆಯನ್ನು ಅಲ್ಲಿಯೇ ಎಸೆದು ನಡೆದ.

ಲಚ್ಚಪ್ಪನ ಎದೆಯೊಳಗಿನ ಉಸಿರು ಗೊರ್ ಗೊರ್ ಎನ್ನುತ್ತಿತ್ತು. ಇಂಗಿದ ಕಣ್ಣುಗಳು ಏನನ್ನೊ ಅರಸುವಂತಿತ್ತು.

"ಅಜ್ಜ ಡಾಕ್ಟರ್‍ನ ಕರಕೊಂಡು ಬರ್ತೀನಿ ತಡೀ" ಎಂದ ರಾಮಾಚಾರಿ.

ಲಚ್ಚಪ್ಪ ಬೇಡ ಎನ್ನುವುದಕ್ಕಿಂತ ಪೂರ್ವದಲ್ಲೇ ಅವನ ಶ್ರೀಮತಿಯೇ ತೊಡೆಯನ್ನು ಚಿವುಟಿ 'ಮಂಕೇ ಸುಮ್ಮನೆ ಕೂಡು' ಎನ್ನುವಂತೆ ಸಂಜ್ಞೆ ಮಾಡಿದಳು.

ನಿಜವಾಗಲೂ ಶ್ರೀಮತಿ ರಾಮಾಚಾರಿ ದೊಡ್ಡ ಕಲಾವಿದೆ. ಅರೆ ಚಣದಲ್ಲಿ ಕಂಗಳಲ್ಲಿ ನೀರಿನ ಧಾರೆಯನ್ನೇ ಹರಿಸಿದಳು. ಅದು ನಿಜಾ ಎಂದು ಭಾವಿಸಿ ಆ ಮುದುಕ ಚೇತರಿಸಿಕೊಂಡು ಬಿಟ್ಟನೋ ಏನೊ!

"ಥೂ ನೀನ ಹಾಳು ಮಾಡಿಬಿಟ್ಟೆ. ನೀ ಅತ್ತದ್ದಕ್ಕ ಆ ಮುದುಕ ಬದುಕಿಬಿಟ್ನೋ ಏನೊ."

ರಾಮಾಚಾರಿ ಹೆಂಡತಿಯ ಮೇಲೆ ಗೊಣಗಾಡಿದ.

ಮತ್ತೆ ಲಚ್ಚಪ್ಪ, ಅವಲಕ್ಕಿ, ಮೊಸರು, ಬಾಳೆಹಣ್ಣು ಹೊಡೆದು ಮೂರು ತಿಂಗಳ ನೂಕಿದ. ಈಗ ಹಿಡಿ ಶಾಪ ಹೊರಿ ಆಗಿರಬೇಕು...

ಲಚ್ಚಪ್ಪ ಪೂರ್ತಿ ನಿಶ್ಶಕ್ತನಾಗಿ ಮರಣ ಶಯ್ಯೆಯಲ್ಲಿ ಒರಗಿದಂತಿದ್ದ.

"ಇಲ್ನೋಡ್ರಿ ನಾಡಿ ನಿಂತ ಹಂಗ ಅದ, ಎದಿ ಬಡಕೊಳ್ಳೋದು ಬಂದ ಆಗೇದ. ಲಗೂ ಮಂದಿನ ಕರೆಸಿ ತಯಾರಿ ನಡಿಸಿಬಿಡ್ರಿ ಮತ್ತೆ" ಶ್ರೀಮತಿ ರಾಮಾಚಾರಿ ಪತಿಯ ಕಿವಿಯಲ್ಲಿ ಪಿಸುಗುಟ್ಟಳು. ಆ ಪಿಸುಪಿಕೆಯಲ್ಲಿ ಸಾಮಾನ್ಯರ ಬುದ್ಧಿಗೆ ಎಟಕದಂಥ ಗೂಢಾರ್ಥ ಅಡಗಿದೆ ಎನ್ನುವುದು ಅವನಿಗರಿವಾಗದಿರಲಿಲ್ಲ.

ರಾತ್ರಿ ಎಂಟು ಗಂಟೆಯಾಗಿತ್ತು. ಅಧೈರ್ಯದಿಂದ ಅಸ್ಥಿರನಾಗಿದ್ದ ರಾಮಾಚಾರಿ, ಲಚ್ಚಪ್ಪ ಸತ್ತದ್ದಕ್ಕಲ್ಲ ಕತ್ತಲಲ್ಲಿ ಸ್ಮಶಾನಕ್ಕೆ ಹೋಗಿ ಸುಟ್ಟು ಬರೋದು ಹ್ಯಾಗ ಅನ್ನೋದು ಕಾಡಲಿಕ್ಕ ಹತ್ತಿತ್ತು. ಭೂತಪ್ರೇತದ ಬಗ್ಗೆ ಬಾಯಲ್ಲಿ ಹತ್ ಹುತ್ ಎನ್ನುತ್ತಿದ್ದರೂ ಒಳಗೊಳಗೆ ಅಳುಕು.

"ಈ ಹಾಳು ಮುದುಕ ಪಿಶಾಚಿಯಾಗಿ ಬಡಿದುಕೊಂಡರೆ ಹ್ಯಾಂಗ?"

"ನೀವೆಂಥ ಗಂಡಸರ್ರೀ ಆಂಜನೇಯನ ಮಂತ್ರಾ ಜಪಿಸ್ತಾ ಹೋಗ್ರಿ ಪಿಶಾಚಿ ಯಾಕ ಬ್ರಹ್ಮರಾಕ್ಷಸಾ ಸಹಿತ ನಿಮ್ಮ ಹತ್ತಿರ ಬರೋದಿಲ್ಲಾ. ಹುಂ! ಏನ ಆಗಲಿ ಶುಭಸ್ಯ ಶೀಘ್ರಂ ಆಗಲಿ" ಎಂದು ಉತ್ತರಿಸುತ್ತ ಉತ್ತರ ಕ್ರಿಯೆಗೆ ಎದ್ದ.

ಈ ಸಮಯಕ್ಕಾಗಿಯೇ ಕಾದಿದ್ದ ಬಿಂದಾ, ಭೀಮರಾಯಾ, ಕೃಷ್ಣಪ್ಪ, ರಾಮಚಾರಿಯ ಬೇಡಿಕೆಯನ್ನು ಶರ್ತಿನ ಮೇಲೆ ಮನ್ನಿಸುತ್ತಾ,

"ನೋಡಪ್ಪಾ ರಾಮಾಚಾರಿ, ನಾವಂತು ಜೀವಸ್ಯ, ಕಂಠಸ್ಯ ಅಂತ ಇದ್ವಿ. ಲಚ್ಚಪ್ಪನ್ನ ಮನ್ಯಾಗ ಕರಕೊಂಡು ಹೋದಾಗಿನಿಂದ ನಮ್ಮನ್ನ ಮರ್ತಬಿಟ್ಟೀದಿ. ಈಗರ ನೀನು ನಿನಗ ಸಿಕ್ಕಿದ್ದರೊಳಗ ಸ್ವಲ್ಪ ನಮಗೂ ಮುಟ್ಟಸಿದ್ರ ತಯಾರ ಇದ್ದೀವಿ ಇಂಥಾ ಅಮಾಸಿ ರಾತ್ರಿ ಒಳಗ ಸ್ಮಶಾನಕ್ಕೆ ಹೆಣಾ ಹೊತಗೊಂಡ ಹೋಗಲಿಕ್ಕೆ ಏನಂತಿ?"

ಮನದ ಇಂಗಿತವನ್ನು ಸ್ಪಷ್ಟೀಕರಿಸಿದರು.

ರಾಮಾಚಾರಿ ಶ್ರೀಮತಿಯೊಂದಿಗೆ ಸಮಾಲೋಚನೆ ನಡೆಸಿ ಸಂಧಾನಕ್ಕೊಪ್ಪಿ, ಲಚ್ಚಪ್ಪನ ಅಂತಿಮಯಾತ್ರೆಯ ಸಿದ್ಧತೆಯನ್ನು ಅರೆ ಕ್ಷಣದಲ್ಲೆ ಮುಗಿಸಿದ.

ಅನಪೇಕ್ಷಿತ ಆಗಂತುಕ ಲಚ್ಚಪ್ಪನ ಸಿಡಗಿ ಏರಿದ ಶವ ಆಗಲೇ ಸ್ಮಶಾನದ ಅರ್ಧ ದಾರಿಯನ್ನು ಕ್ರಮಿಸಿತ್ತು. ಹೊಳೆ ಉಕ್ಕೇರುವಂತೆ ರಾಮಾಚಾರಿಯ ಎದೆಯಲ್ಲಿಯೂ ಭಯ ಎಲ್ಲೆ ಮೀರತೊಡಗಿತ್ತು. ಅದಕ್ಕೆ ಇನ್ನಷ್ಟು ಮಸಾಲೆ ಬೆರೆಸುವಂತೆ ಬಿಂದ ಹೇಳಿದ.

"ರಾಮಾಚಾರಿ ಮೊನ್ನೆ ಹೊಸಳ್ಳಾಗ ಒಂದು ವಿಚಿತ್ರ ಘಟನೆ ನಡೀತಂತ ಕೇಳೀ ಇಲ್ಲೊ."

"ಏ ಇರಲಿ ಬಿಡೋ ಏನ ಹಚ್ಚೀದಿ."

"ಕೇಳೋ ಇಲ್ಲೆ ಶಾನಭೋಗರ ಮನ್ಯಾಗ ಹಣ ಹಣ ಮುದುಕಿ ಇತ್ತಂತ. ಏನೋ ಜಡ್ಡಾಗಿ ಸತ್ತಂತ ಯಥಾಪ್ರಕಾರ ಸ್ಮಶಾನದಾಗ ಸುಟ್ಟು ಮನಿಗೆ ಬಂದ ನೋಡಿದ್ರ. ಜಗಲಿಮ್ಯಾಲೆ ಹಿಂಗಿದ ಕಣ್ಣು ಅಕರಾಳವಿಕರಾಳ ಮಾರಿ ಮುದುಕಿ, ಅವರಿಗಿಂತ ಮೊದ್ಲ ಬಂದ ಕೂತಿತ್ತಂತ."

ಬಿಂದ ಮೈ ನಡುಕ ಬರುವಂತೆ ಬಣ್ಣಿಸಿದ. ಅದನ್ನು ಕೇಳಿ ಕಂಗೆಟ್ಟು ರಾಮಾಚಾರಿ "ಅಂ ಏನು..." ತಡವರಿಸಿದ. ಈ ಕಥೆ ಕೇಳಿ ಕೃಷ್ಣಪ್ಪ, ಭೀಮರಾಯನ ಮೈ ಕೂಡ ನಡುಗಿತು.

"ಸಾಕು ಮುಗುಸೋ ಮಾರಾಯ ನಿನ್ನ ಕಥಿ" ಎಂದರು.

"ಕಥಿ ಅಲ್ರೊ್ಕ ಆಗಿದ್ದು" ಎಂದು ಸಮರ್ಥಿಸಿಕೊಂಡ ಬಿಂದ.

ಒಮ್ಮೆಂದೊಮ್ಮೆಲೆ ಮಳೆಗಾಳಿಯ ವಾತಾವರಣ ಆವರಿಸಿಬಿಟ್ಟಿತು. ನಾಲ್ಕು ಹೆಜ್ಜೆ ಮುಂದೆ ಹೋಗಿದ್ದರೋ ಇಲ್ಲೋ ಜೋರಾಗಿ ಗಾಳಿಬೀಸಿ ಗಳಕ್ಕೆ ಕಟ್ಟಿದ ಕಂದೀಲನ್ನು ನಂದಿಸಿ ಬಿಟ್ಟಿತು. ಮಳೆಹನಿಯುದುರಿ ಕೆಂಡವು ಆರಿಹೋಯಿತು. ಎತ್ತ ನೋಡಿದರತ್ತ. ಕತ್ತಲೆ, ಬರಿ ಕತ್ತಲೆ. ಕಗ್ಗತ್ತಲೆಯ ಭಯದಿಂದ ಕೂಗಿಕೊಂಡಂತೆ ಅಪಶಕುನ ಗೂಬೆ ಕೆಟ್ಟ ದನಿಯಲ್ಲಿ ಕಿರುಚಿಕೊಂಡಿತು. ಗದಗದ ನಡುಗುತ್ತ ರಾಮಾಚಾರಿ,

"ಹಾದಿ ಕಾಣವಲ್ಲತಲ್ಲೊ" ಎಂದರಚಿದ.

"ಸೀದಾ ಹಂಗ ನಡಿಯೋ ಅಲ್ಲೇ ಉರಿ ಕಾಣಸ್ತದ ನೋಡು, ಅದ ಸುಡಗಾಡಗಟ್ಟಿ."

ಭೀಮರಾಯ ಧೈರ್ಯತಂದುಕೊಂಡು ನುಡಿದ.

ಬಿಂದಾ, ಕೃಷ್ಣಪ್ಪರ ಕಥೆಯೂ ಹಾಗೆಯೇ ಆಗಿತ್ತು.

ಲಚ್ಚಪ್ಪನ ಉಸಿರು ಕ್ರಮೇಣ ತಿರುಗತೊಡಗಿತು. ಕಣ್ಣರೆಪ್ಪೆಗಳನ್ನು ಪ್ರಯಾಸದಿಂದ ಬಿಡಿಸಿ ನೋಡಿದ ಕಣ್ಣುಗಳೇ ಹಿಂಗಿದಂತೆನ್ನಿಸಿತು. "ಆದರೆ ಇದೇನು ಹೊಯ್ದಾಟ ತೊಟ್ಟಿಲಲ್ಲಿ

ಮಲಗಿಸಿ ತೂಗುತ್ತಿರುವಂತಿದೆ. ತನ್ನನ್ನು ಸಿದಿಗಿಗೆ ಬಿಗಿದು ಸ್ಮಶಾನಕ್ಕೆ ಹೊತ್ತುಕೊಂಡು ಹೊರಟಿದ್ದಾರೆ" ಎಂದು ಲಚ್ಚಪ್ಪನಿಗೆ ಮನವರಿಕೆಯಾಯಿತು. "ಆದಷ್ಟು ಬೇಗ ನನ್ನನ್ನು ಕೊಲೆ ಮಾಡಿ ಸುಟ್ಟು ರೊಕ್ಕಾ ಗಿಟ್ಟಿಸಬೇಕಂತಾರಲ್ಲಾ ಈ ಮಕ್ಕಳು" ಎಂದು ಉರಿದೆದ್ದ. ಅವಸರದಲ್ಲಿ ಬಿಗಿಯಲ್ಪಟ್ಟ ಸಿದಿಗಿ ಅಷ್ಟೊಂದು ಭದ್ರವಾಗಿರಲಿಲ್ಲ. ಆದರೂ ಗೋಣು ಕಾಲುಗಳು ಮಿಸುಕಾಡಿಸಲೂ ಬಾರದಂತಿದ್ದವು. ಅದೇನೊ ಸುದ್ದೆವ ಕೈಗಳನ್ನು ಅಲುಗಾಡಿಸಿದಾಗ ಸರಳವಾಗಿ ಹೊರಬಂದವು. 'ಒಳ್ಳೇದು, ಈ ಮಕ್ಕಳಿಗೆ ಬುದ್ಧೀ ಕಲಿಸ್ತೀನಿ' ಎಂದು ಸಾವಕಾಶವಾಗಿ ತನ್ನ ನೀಳವಾದ ಉಬ್ಬಿದ ನರಗಳ ಕರಗಳನ್ನು ರಾಮಾಚಾರಿಯ ಕತ್ತಿನತ್ತಲೂ ಭೀಮಾಚಾರಿಯ ಕತ್ತಿನತ್ತಲೂ ಚಾಚಿದ.

'ಬಿಂದಾ, ನನ್ನ ಕುತ್ತಿಗ್ಗೆ ಯಾರು ಕೈ ಹಾಕಿದ್ರೋ' ಭೀಮರಾಯ ಕಿರುಚಿ ಮೂರ್ಛೆಯಿಂದ ನೆಲಕ್ಕುರಳಿದ್ದ. 'ಅಯ್ಯೋ ಸತ್ತೆವೋ' ಕೃಷ್ಣಪ್ಪ ಬಿಂದ ಬೊಬ್ಬೆ ಹಾಕುತ್ತ ದಿಕ್ಪಾಪಾಲಾದರು. ನರಿ, ಗೂಬೆಗಳ ಕರ್ಕಶ ಕೂಗಿನೊಂದಿಗೆ ರಾಮಾಚಾರಿಯ ಎದೆ ಸೀಳಿ ಬಂದ ಚೀತ್ಕಾರ ಕತ್ತಲೆಯನ್ನು ಭಯಾನಕಗೊಳಿಸಿತು.

ಆರು ತಿಂಗಳ ಶುಶ್ರೂಷೆ, ಸಾವಿರಗಟ್ಟಲೆ ಹಣ ಸುರಿದ ನಂತರ, ಮತಿವಿಕಲರಾದ ಭೀಮರಾಯ, ಕೃಷ್ಣಪ್ಪ ಬಿಂದ ಗುಣಮುಖರಾದರು. ಆದರೆ ಲಚ್ಚಪ್ಪ ಮಾತ್ರ ರಾಮಚಾರಿಯ ವಾರ್ಷಿಕ ಶ್ರಾದ್ಧವನ್ನು ಮುಗಿಸಿಕೊಂಡೇ ಇಹಲೋಕ ತ್ಯಜಿಸಿದ.

# ೧೦. ಗ್ಯಾಸ ಸ್ಟೋವ್

ಅಸ್ತವ್ಯಸ್ತವಾದ ಗಾದಿ ,ತಲೆದಿಂಬು, ಚಲ್ಲಾಪಿಲ್ಲಿಯಾದ ಚಾದರ ದುಪ್ಪಟ್ಟಿಯೊಳಗೆ ಮಡಚಿದ ಮೊಣಕಾಲುಗಳ ಮಧ್ಯೆ ಕತ್ತು ತುರುಕಿ ಏದುಸಿರು ಬಿಡುತ್ತ, ಚಿಕನ್ನ ನಳಿಕೆಯೊಳಗಿನ ರಸ ಹೀರಿ, ರಕ್ತ ಹೀರಿ ಕಚ್ಚಿ ಕಚ್ಚಿ ಎಸೆದ ಎಲುಬಿನ ತುಕುಡಿಯಂತೆ ಬಿದ್ದಿದ್ದೆ.

ಕಿಟಕಿ ಗವಾಕ್ಷಿಯೊಳಗಿಂದ, ಬಾಗಿಲ ಸಂದಿಯೊಳಗಿಂದ ಸಹ ಬೆಳಕು ಬಾರದಂತೆ ಬಟ್ಟೆ ತುರುಕಿದ್ದೆ.

ನನ್ನ ಹೀನ ಸ್ಥಿತಿಯನ್ನು ಕಂಡು ಮರುಕದಿಂದ ಶೋಕ ಮೌನವನ್ನಾಚರಿಸುತ್ತ 'ಬಿಕೊ' ಎನ್ನುತ್ತಿದ್ದ ಬರಿದಾದ ಕುರ್ಚಿಯ ಮೇಲೆ ಕುಸಿದು, 'ಥೂ ನನ್ನ ರೀತಿಗಿಷ್ಟು ಬೆಂಕಿ ಹಾಕ' ಎಂದು ಮುಖ ಮುಚ್ಚಿಕೊಂಡೆ.

ಮುಚ್ಚಿದ ಕಣ್ಣ ಮುಂದಿನ ಕತ್ತಲೆಯೊಳಗೆ ಆದೇ ಆಗ ಬಂದು ಹೋದ ಹೇಮಾಳ ಚಿತ್ರ ನನ್ನ ಗುಡ್ಡಿಯೊಳಗಿಂದ ಪ್ರತಿಫಲನಗೊಂಡು ಅಚ್ಚೊತ್ತಿದಂತೆ ಮೂಡಿ ನಿಂತಿತು. ಅದರ ಹಿಂದೆ ಅವಳ ನಗು ಚಲನಚಿತ್ರದ ಹಿಂದಿನ ಧ್ವನಿಯಂತೆ ಬಂದು ನನ್ನನ್ನು ಅಣಕಿಸತೊಡಗಿತು.

"ಯಾರು... ಯಾರು?"

"ನಾನೇ... ನಾನೇ..."

"ಓ ಹೇಮಾ... ಹೊರಟುಹೋಗು... ಹೋಗು"

ನಾನು... ಮುಂಗುರುಳನ್ನು ಜಗ್ಗಿಕೊಂಡು ಕಿಟಕಿ ಹತ್ತಿರ ಬಂದು ನಿಂತೆ.

ಬಿಸಿಯೇರಿದ ಭೂಮಿ, ಅದೇ ಆಗ ಸುರಿದ ಆರಂಭದ ಮಳೆಯಿಂದ ತಣಿದು ತೃಪ್ತಿಯಿಂದ ಮೈ ಚೆಲ್ಲಿ ಮಲಗಿತ್ತು.

ಆ ಸುಖಾ ನನ್ನ ಸಿಗಲಿಲ್ಲ.

ಆ ಶಾಂತಿ ನನ್ನ ಸಿಗಲಿಲ್ಲ.

ಆ ತೃಪ್ತಿ ನನ್ನ ಸಿಗಲಿಲ್ಲ.

ಬಾಟಲಿಯಿಂದ ಉಕ್ಕಿ ಚೆಲ್ಲುವ ಬುರುಗನ್ನು ಹತ್ತಿಕ್ಕಿ ಕಾರ್ಕಿನಿಂದ ನೂಕಿದ್ದೆ "ಯಾಕೆ... ಯಾಕೆ?"

"ನಾ ಹೇಳಲೆ?... ನಾ ಹೇಳಲೆ?"

ಶೂನ್ಯಾಕಾಶದಲ್ಲಿ ಪಸರಿಸಿದ ಹೇಮಾಳ ಧ್ವನಿ ತರಂಗಗಳು ನನ್ನೆಡೆಗೆ ಬಂದು ಅಪ್ಪಳಿಸತೊಡಗಿದ್ದವು.

"ರವಿ, ನೀನು ಹೇಡಿ. ಥೂ ಈ ಮುಖಾ ಯಾಕ ಇಟಕೊಂಡಿದ್ದೀಯಾ?"

"ಓ! ಮತ್ತ ಯಾಕ ಬಂದಿ ಹೇಮಾ, ಹೋಗು ಹೋಗು... ಹೌದು ನಾನು ಹೇಡಿ... ನಾ... ಹೇಡಿ..."

ಕತ್ತಲೆಯ ಮುಖ ಪರಿಚಿದಂತೆ ಆಗಸದಲ್ಲಿ ಅರೆ ಕ್ಷಣ ಮಿಂಚು ಮೂಡಿ ಮಾಯೂವಾಯಿತು.

ಹೇಮಾ... ನನ್ನ (?) ಹೇಮಾ ನನ್ನ (?)... ಇದೀಗ ಬಂದು ಹೋದ್ಲು... ಬಂದು ಅಷ್ಟೇ ಹೋಗಲಿಲ್ಲ. ಈಗೂ ಈ ದೇಹಾ ನಿಂದು ಅಂದು ಹೋದ್ಲು.

ಥೂ ನಾನೆಂತು ಮೀಸೆ ಹೊತ್ತ ಗಂಡಸು! ಬೆಂಗಳೂರಿಗೆ ಬಂದು ಎರಡು ವರ್ಷದೊಳಗೆ ಹೇಮಾ ಹ್ಯಾಂಗ ಆಗಿಬಿಟ್ಟಳಲ್ಲಾ. ಛೆ! ಛೇ!... ಅವಳ ಈ ನಡವಳಿಕೆ.

ನಾ ಅಂಜುಬುರುಕನೋ... ಹೇಮಾ ನಿರ್ಲಜ್ಜಳೋ? ಆಕಿ ಅಬಲೆ ಅಲ್ಲ ... ಸಬಲೆ. ನಾ ದುರ್ಬಲ... ದುರ್ಬಲಾ... ನಾ... ಆಕಿ....

ಆಗ ಬಂದ ಹೇಮಾ, ವ್ಯಾನಿಟಿಬ್ಯಾಗ ಟೇಬಲ್ ಮ್ಯಾಲೆ ಒಗದು ಮುಖದ ಮೇಲೆ ಬಿದ್ದ ಅಸ್ತವ್ಯಸ್ತ ಕೂದಲನ್ನು ಹಿಂದೆ ಸರಿಸಿ ನನ್ನ ಬಳಿ ಕೂತ ರೀತಿ?...

"ಇದೇನು ಹೇಮಾ ನಿನ್ಗ ಲಜ್ಜಾ ಮರ್ಯಾದಿ, ಅನ್ನೋದು ಇಲ್ಲೇನು?"

ನನ್ನ ಈ ಪ್ರಶ್ನೆಗೆ ಉತ್ತರ;

ತುಯ್ತು... ತುಡಿತ... ನಗು

"ಯಾಕ ನಗತಿ ಹೇಮಾ?"

ಮತ್ತ ಒಂದು... ಎರಡು... ಮೂರು...

"ಹೇಮಾ" ಅವಳ ಭುಜ ಅಲುಗಿಸಿ ಕೇಳಿದೆ.

"ಅಲ್ಲೋ ಎಂಥ ಸಿಲ್ಲಿ ನೀನು? ನನ್ನ ಇಲ್ಲಿವರೆಗೂ ಈ ಸ್ಥಿತಿಗೆ ತಂದಾವ ನೀನ ಅಲ್ಲೇನು?"

ನನ್ನನ್ನು ಎತ್ತಿ ಕುಕ್ಕರಿಸಿದಂತೆ ಆಯಿತು.

"ಹೇಮಾ"

"ಹೌದು ರವಿ, ಸಾವಿರ ಸಾರೆ ಹೇಳ್ತೇನಿ. ಇದಕ್ಕೆ ನೀನ ಕಾರಣ."

"ನೀ ಬ್ರೇಕ್ ಇಲ್ಲದ್ಹಂಗ ಆಗಿ ಬಿಚ್ ಆದ್ರ ನಾ ಏನ ಮಾಡ್ಲಿ?"

"ಏನಂದಿ ರವಿ, ಇನ್ನೊಮ್ಮೆ ಹೇಳು"

"ಹೌದು, ನೀನು ಬಿಚ್..."

"ಬಿಚ್... ಬಿಚ್... ಅದ್ಕೂ ಹೆಚ್ಚು ಏನಾದರೂ ಇದ್ದರೆ ಹೇಳು"

ಹೇಮಾ ಕ್ಯಾಬರೆ ನರ್ತಕಿಯಂತೆ ನಗತೊಡಗಿದ್ದಳು. ಆ ನಗು ನನ್ನ ಮೈ ತುಂಬಾ ಇಂಜಕ್ಷನ್ ಮಾಡುತ್ತಿರುವಂತೆ ಭಾಸವಾಗತೊಡಗಿತು. ಬೆವತುಹೋದೆ. ಹೌದು ಹೇಮಾಳನ್ನು ಈ ಸ್ಥಿತಿಗೆ ತಂದವನು ನಾನೇ ಗ್ಯಾಸ ಸ್ಟೋವ್ ಹೊತ್ತಿಸಿ ಅದನ್ನು ಆರಿಸಲು ಅಶಕ್ತನಾದೆ.

ನಿಜ ಹೇಮಾ ನನ್ನ ಸೋದರ ಮಾವನ ಮಗಳು ನಾವಿಬ್ಬರೂ ಕೂಡಿ, ಆಡಿ ಬೆಳೆದವರು. ಶಾಲೆಯನ್ನು ತಪ್ಪಿಸಿ ನಾನು ಆಕೆಯನ್ನು ಎಳೆದುಕೊಂಡು ಹೋಗುತ್ತಿದ್ದೆ.

"ಎಲ್ಲಿಗೆ ಎಳಕೊಂಡ ಹೊಂಟಿ ರವಿ?..."

"ನಾ ಎಲ್ಲಿಗೆ ಕರಕೊಂಡು ಹೋಗ್ತೀನಿ ಅಲ್ಲಿಗೆ ನಡಿ."

"ಊಹೂಂ... ಮೊದಲು ನೀ ಹೇಳು."

"ಹಳ್ಳಕ್ಕೆ ಹೋಗೋಣ ನಡಿ. ನಿನ್ನೆ ಮಳಿ ಹೊಡದದ್ದಕ್ಕ ಹಳ್ಳ ತುಂಬಿ ಬಂದದಂತ..."

"ಹೌದ... ನಡಿ. ಪಾಟೀಚೀಲದಾಗ ಪುಟಾಣಿ, ಬೆಲ್ಲ ಹಕ್ಕೊಂಡು ಬಂದೀನಿ".

ಇದು ನಮ್ಮಿಬ್ಬರ ಸಂವಾದ. ನಾನು ದಂಡೆಯ ಮೇಲಿನ ಕಲ್ಲಿನ ಮೇಲೆ ಅವಳನ್ನು ಪಕ್ಕದಲ್ಲಿ ಕೂಡಿಸಿಕೊಂಡು ಕೊಚ್ಚಿಕೊಂಡು ಹೋಗುವ ಪ್ರವಾಹವನ್ನು ನೋಡಿದ್ದೇನೆ.

ನನಗರಿಯದಂತೆ ನನ್ನೊಳಗೂ ನನ್ನ ದೇಹದೊಳಗೂ ಕಿರುಅಲೆಯಿಂದ ಭೋರ್ಗರೆವ ಪ್ರವಾಹ ಪ್ರವಹಿಸಲಾರಂಭಿಸಿದಾಗ ಇದೇನು! ಅರಮನೆಯೊಳಗೆ ರಂಗುರಂಗಿನ ಕಾರಂಜಿಯೊಳಗೆ ಬಿಸಿನೀರಿನ ಬುಗ್ಗೆ ಚಿಮ್ಮಿದಂತೆ ಅನ್ನಿಸಿತು. ಸುಮಧುರ ಸನಿಹ ಬಯಸಿತು ಮನ. ಆಗಿನ್ನೂ ನನಗೆ ಹತ್ತು ಹನ್ನೆರಡು ವರುಷ ಇರಬಹುದು. ಇದೇನು ಅಸಹ್ಯ ಅಂದುಕೊಂಡೆ. ಇದು ಪಾಪ ಎಂದು ಪರಿತಪಿಸಿದೆ.

ಇನ್ನೊಂದು ಘಟನೆ ನೆನಪಿದೆ. ಹೇಮಾಳನ್ನು ನಾನು ಊರ ಹೊರಗಿನ ಹನುಮಂತ ದೇವರ ಗುಡಿಗೆ ಕರೆದುಕೊಂಡು ಹೋದುದು.

"ಇಲ್ಲಿಗೆ ಯಾಕ ಕರಕೊಂಡು ಬಂದಿ?"

ಹೇಮಾ ಕೇಳಿದ್ದಳು.

"ಹನುಮಂತ ದೇವರ ಮುಂದಿನ ಕಲ್ಲು ಎತ್ತಿದ್ರ ನಮ್ಮ ಮನಸಿನ್ಯಾಗ ಅನ್ಕೊಂಡಿದ್ದು ಆಗ್ತದಂತ" ನಾನು ಹೇಳಿದ್ದೆ. ಹೇಮಾ ಏನ ಅನಕೊಂಡಿದ್ದಳೋ ಏನೋ ನಾನಾದರೂ ಅನಕೊಂಡಿದ್ದು ನನ್ಗ ಸಿಕ್ತು. ಕಲ್ಲು ಎತ್ತಿದಳು... ಕಲ್ಲು ಬಿಟ್ಟಳು....

ನನಗರಿವಿಲ್ಲದೆ ಹೊಮ್ಮುವ ಅವ್ಯಕ್ತ ಆಸೆಗೆ ಬಲಿಯಾದೆ. ಹಳಹಳಿಸಿದೆ.

ಆದರೂ ಅನಾಯಾಸ ದೊರೆತ ಪ್ರಯೋಗಶಾಲೆಯಲ್ಲಿ ಪ್ರಯೋಗಶೀಲನಾದೆ. ವಿಜ್ಞಾನಿಯಲ್ಲ ಅಜ್ಞಾನಿ, ಏನೇನೋ ತಯಾರಿಸಲೆತ್ನಿಸಿದೆ.

ವರುಷಗಳುರುಳಿದವು. ನಾನು ನಾನಾಗಿಯೆ ಉಳಿದಿರಲಿಲ್ಲ. ಹೇಮಾ ಹೇಮಾಳಾಗಿಯೇ ಇರಲಿಲ್ಲ. ನಿಸರ್ಗದ ಏರಕದಲ್ಲಿ ಅದ್ದಿ ತೆಗೆದಿದ್ದವು. ಇದಕ್ಕೂ ಹೆಚ್ಚಿಗೆ ನಾನು ಹೇಳಲಾರೆ.

ನಿಗಿ ನಿಗಿ ಅರಳಿದ ಅಗ್ಗಿಷ್ಟಿಕೆಯೊಳಗೆ ಹೇಮಾಳನ್ನು ತಳ್ಳಿದ್ದೆ. ಎತ್ತಿಕೊಳ್ಳುವ ಸಾಹಸ ನನಗಾಗಲಿಲ್ಲ. ಅವಳು ಹಂಬಲಿಸಿದಳು ನಾನು ಬರಿ ಕನವರಿಸಿದೆ; ಕನಿಕರಪಟ್ಟೆ. ಅಸಹ್ಯ ಅಸಹಾಯಕನಂತೆ ಅನ್ನಿ. ಒಂದೆಡೆ ಮನೆತನದ ಮರ್ಯಾದೆಯ ಭಯ ಏನಾದರೂ ಅನಾಹುತವಾದರೆ? ಆದರೆ ಎಲ್ಲಿಂದ ಬಂತು ಆಗಿಯೇಬಿಟ್ಟಿತು. 'ಥೇರಿ ಕಲಿಸಿ ಪ್ರಾಕ್ಟಿಕಲ್

ಕಲಿಸದ ಗುರು ನೀನು ಗುರೂನೆ? ಥೂ... ನನ್ನ ಅರಿವಿನ ದಾರಿ ನಾ ಹಿಡಿಯುತ್ತೇನೆ' ಎಂದು ಹಂಗಿಸಿ ಹೋಗಿದ್ದಳು.

ಮರುದಿನ ಹೇಮಾ ಮನೆಯಲ್ಲಿ ಕಾಣಲಿಲ್ಲ. ಎಲ್ಲರೂ ಗಾಬರಿಗೊಂಡರು. ಯಾರಿಗೂ ಕಾರಣ ಗೊತ್ತಾಗಲಿಲ್ಲ. ನನಗೊಬ್ಬನಿಗೇ ಅದು ಗೊತ್ತಾದುದು, ಅಸಹ್ಯ ಬಂತು. ಹೌದು ಅವಳು ನನ್ನ ಕೆಲಸಕ್ಕೆ ಅಸಹ್ಯಪಟ್ಟು ಈ ಕೃತ್ಯಕ್ಕೆ ಇಳಿದಿದ್ದಳು.

ಮತ್ತೆ ಎಲ್ಲಾ ನೆನಪು...

ಹೇಮಾ ಮಾತು ಮುಂದುವರೆಸಿದಳು:

"ರವಿ, ನಾ ಮಾಡಿದ ಪಾಪಕ್ಕೆ ಪಶ್ಚಾತ್ತಾಪಪಟ್ಟು ನಿನ್ನ ಹತ್ತಿರ ಬಂದಿದ್ದೆ. ಆದ್ರ ಅವತ್ತು ನೀನು ನಾಯಿ ಮುಟ್ಟಿದ ಎಂಜಲು ಗಡಿಗೆ ಎಂದು ಎಲ್ಲಿ ನಾನು ಗಂಟುಬೀಳುತ್ತೇನೋ ಅನ್ನೋ ಭಯದಿಂದ ಪಲಾಯನ ಮಾಡ್ದಿ. ನನ್ಗ ಉಳಿದ ಮಾರ್ಗ ಇದೊಂದsa ಆಗಿತ್ತು. ಆಮ್ಯಾಲೆ ನಾನು ಬೆಂಗಳೂರಿಗೆ ಬಂದೆ, ನೌಕರಿ ಹಿಡ್ದೀನಿ."

"ಆದರೆ...."

"ಆದರೇನು ನೀನು ಆಗಲೆ ಹೇಳಿದೆಲ್ಲ. ಅದಕ್ಯಾಕ ಹೆದರಲಿ, ಬಿಚ್ ಸಹಿತ ಆಗೇನಿ ತಿಳೀತ?"

"ಹೇಮಾ!"

ನನಗೆ ಏನು ಹೇಳಬೇಕು ತಿಳಿಯದೆ ಬರೀ ಕಿರುಚಿದೆ.

"ರವಿ, ನೀನು ಕರಲಮೊಗ್ಗಿ ಹೀಚಿ ಹಿಚುಕಿ ಅರಳಿಸಿದ್ದಿಲ್ಲಾ ಅಂದ್ರ ನಾನೂ ಹೆಣ್ಣುತನ ಉಳಿಸಿಕೋತಿದ್ದೆ. ನಾನು ಗೃಹಿಣಿ ಆಗಿ ಬಾಳೋ ಯೋಗ್ಯತಾ ಪಡೀತಿದ್ದೆ."

"ಹೇಮಾ ಬಾಯಿ ಮುಚ್ಚು."

"ನಾನೇನೋ ಬಾಯಿ ಮುಚ್ಚಿಕೋತೀನಿ. ಆದ್ರ ನಿನ್ನ ಮನಸಿನ ಬಾಗಿಲಾ ತಗದ ನೋಡು ಎಷ್ಟು ಹೊಲಸ ತುಂಬೇದ"

"ಇರಲಿ, ನಿನ್ನ ಉಪದೇಶ ನನ್ಗ ಬೇಕಾಗಿಲ್ಲ ನಿನ್ನ ದೇಹ ಎಷ್ಟು ಮಲಿನ ಆಗೇದ ಅನ್ನೋದನ್ನ ನೋಡಕೋ, ಇಲ್ಲಿಗೆ ಯಾಕ ಬಂದಿ?"

ಹೇಮಾ ನಗಹತ್ತಿದಳು. ಅಂಥ ನಗುವನ್ನು ನಾನು ಯಾವ ಹೆಂಗಸಿನ ಮುಖದಲ್ಲಿಯೂ ನೋಡಿಯೇ ಇರಲಿಲ್ಲ.

"ಹೇಮಾ..."

"ಎಂಥಾ ಪುಕ್ಕಲು ಪ್ರಾಣಿ ನೀನು, ನನ್ನ ಮದಿವಿ ಆಗು ಅಂತ ಕೇಳಲಿಕ್ಕೆ ಬಂದಿಲ್ಲ."

"ಮತ್ಯಾಕ ಬಂದಿ?"

"ನೀ ಕಲಿಸಿದ ಪಾಠ ಒಪ್ಪಿಸಲಿಕ್ಕೆ ಬಂದೀನಿ ರವಿ. ಈಗ ನನ್ನ ಹತ್ತರ ದುಡ್ಡ ಅದ ನಾ ಘುಳಿಸ್ತೀನಿ."

"ಅದಕ್ಕ ನಾ ಏನ ಮಾಡಲಿ ಬೇಕಾದ್ರ ತೂರಿಕೋ."

"ಹಂಗ ತೂರ ನಾನು ಹೊಸಾ ಹೊಸಾ ಗ್ಯಾಸ್ ಸ್ಟೋವ್ ಖರೀದಿ ಮಾಡ್ತೀನಿ. ನಾ ಯಾವಾಗ ಬೇಕು ಅವಾಗ ಅವನ್ನ ಹೊತ್ತಿಸಬಹುದು. ಬ್ಯಾಡಾ ಆದಾಗ ಆರಿಸಬಹುದು."

"ಹೇಮಾ..."

"ರವಿ".

ನನ್ನ ಕಿವಿ ಹತ್ತಿರ ಬಂದು ಉಸುರಿದಳು

"ಸ್ಥಾನೀಗ ಪ್ರಬುದ್ಧ ಪ್ರಯೋಗಶಾಲೆ, ನೆನಪಿರಲಿ."

ಆಗ ನಾನು ಅಶಕ್ತನಾದೆ. ತುಡಿವ ಮನಸ್ಸನ್ನು ಹಿಡಿದು ಲಗಾಮು ಹಾಕಿದೆ. ಆಗಲೂ ಒತ್ತಾಯದ ಮಾಘ ಸ್ನಾನ....

ಹೇಮಾ ವ್ಯಾನಿಟಿ ಬ್ಯಾಗ ಎತ್ತಿಕೊಂಡು

"ಆಲ್‌ರೈಟ್ ಬರ್ತೇನಿ, ಬಾಯ್ ನಿನ್ನಿಷ್ಟ. ಬೆಂಗಳೂರಾಗ ಬೀಚ್ ಇಲ್ಲ, ಬಿಚ್ ಅದ ಗೊತ್ತದ ಅಲ್ಲ..."

ಹೊರಗಿನಿಂದ ಬಾಗಿಲು ಹಾಕಿಕೊಂಡು ಹೋದಳು.

ಆಲ್ಬಮ್ಮಿನ ಪುಟ ತಿರುವಿದಂತೆ ಹೇಮಾ ಮಾಯವಾಗಿ ಹೋದಳು. ಆದರೆ ಅವಳ ಕೊನೆಯ ನುಡಿಗಳು ನನ್ನ ತಲೆಯಲ್ಲಿ ದರವು ಹಿಡಿಸಿದವು. ಸಂದಿಗೊಂದಿ, ಹಂಚಿನೊಳಗಿಂದ ಸೋರತೊಡಗಿದವು. ಹರಿವ ಲಂಗರದ ನಾವೆಯಾಗಿತ್ತು ನನ್ನ ದೇಹ, ಸಾವರಿಸಿಕೊಂಡು ಕಿಟಕಿಯವರೆಗೆ ಬಂದೆ.

ಮತ್ತೆ ಮಳೆಹನಿಯೊಡದಿತ್ತು.

ದಾರಿ ತುಂಬ ಕೆಸರು,

ದೇಹ ತುಂಬ ಕೆಸರು,

ಮನಸ್ಸಿನ ತುಂಬ ಕೆಸರು, ಸರ‍್ರನೆ ಹಾದು ಹೋದ ಕಾರು ನನ್ನ ಮುಖದ ಮೇಲೆ ರಜ್ಜಿನ ಪಿಚಕಾರಿ ಹೊಡೆಯಿತು.

○

## ೧೧. ಒಂದು ವರದಿ

ಆನಂದ ಪತ್ರಿಕಾ ವರದಿಗಾರನಾಗಿದ್ದು ಅವನ ತಾಯಿಗೆ ಸುತಾರಾಂ ಇಷ್ಟವಿಲ್ಲ. "ಹಾಳಾತು, ಎಲ್ಲಾ ಬಿಟ್ಟು ಈ ಕೆಲಸಕ್ಕೆ ಯಾಕ ಸೇರಕೊಂಡಿ! ಅಲ್ಲೊ ಆನಂದ, ಮೊನ್ನೆ ಬೆಳಗಾಂವಿ ಕನ್ಯಾ ನೋಡಿದೆಲ್ಲಾ ಅವರು ನಿನ್ನ ನಪಾಸ ಮಾಡಿದ್ದು ಯಾಕ ಗೊತ್ತ ಅದ ಏನು?"

ತಾಯಿಯ ಈ ಮಾತಿಗೆ ಬರೀ ಕಣ್ಣಿನಲ್ಲೇ 'ಯಾಕೆ?' ಅಂತ ಪ್ರಶ್ನಿಸಿದ ಆನಂದ.

"ಆ ಪೇಪರ ವರದಿಗಾರಗ ಯಾರು ಹೆಣ್ಣು ಕೊಡ್ತಾರ ಹೋಗ್ರೀ ಅಂದ್ರಂತೆ. ಹಿಂಗೆ ಆದ್ರ ನಿನ್ನ ಲಗ್ನ ಆದ ಹಂಗ..."

ಆನಂದ ತಾಯಿ ಕಡೆಗೆ ಬಾಗಿ "ನನಗ ಹೆಣ್ಣು ಕೊಡೋದು ಬ್ಯಾಡಾ, ನಾನು ಲಗ್ನ ಆಗೋದು ಬ್ಯಾಡ" ಎಂದು ಮತ್ತೆ ಪೇಪರ್ ಓದುವುದರಲ್ಲಿ ಮಗ್ನನಾದ.

"ನಿನ್ನ ಲಗ್ನ ಆಗೋದು ಬ್ಯಾಡ ಆದ್ರೇನು, ನನ್ನ ಸೊಸಿ ಬರೋದು ಬೇಕಾಗೇದ. ಆಕೀ ಕೈಗೆ ನಿನ್ನ ಒಪ್ಪಿಸಿ ನಾನು ಹಾಯಾಗಿ ಕಣ್ಣು ಮುಚ್ಚತೀನಿ" ಎನ್ನುತ್ತ ಸೆರಗಿನಿಂದ ಕಣ್ಣೊರಿಸಿಕೊಂಡ ತಾಯಿಯತ್ತ ನೋಡಿದ. ಅವಳ ಕಣ್ಣಾಲಿಯಲ್ಲಿ ತುಂಬಿದ ಹನಿಗಳು ಟ್ಯೂಬ್‌ಲೈಟ್ ಬೆಳಕಿನಲ್ಲಿ ಮಿಣಗಿದವು.

ಆನಂದ ಪೇಪರ ಆಚೆ ಟೇಬಲ್ ಮೇಲೆ ಎಸೆದು, ಅವಳ ಬಳಿ ಸರಿದು "ಇಶಾ, ಮತ್ಯಾಕ ಕಣ್ಣೀರು? ನಾನು ನಿನ್ನ ಮಾತಿಗೆ ಎಂದೂ 'ಊಹೂಂ' ಅಂದಿಲ್ಲ. ಹೇಳ್ದಹಂಗ ಕೇಳತೀನಿ... ಆತ..." ಎಂದು ತಾಯಿಯನ್ನು ಸಂತೈಸಿ ಮಲಗಿಕೊಳ್ಳಲು 'ಬೆಡ್‌ರೂಂ'ಗೆ ಹೊರಟ. ಆಗಲೆ ರಾತ್ರಿ ಹನ್ನೆರಡು ಗಂಟೆಯಾಗಲಿಕ್ಕೆ ಬಂದಿತ್ತು.

ಬಾಗಿಲು ಪಕ್ಕದಲ್ಲಿ ಮುದುಡಿಕೊಂಡು ಕುಳಿತಿದ್ದ ಟೆಲಿಫೋನ್ ಕಿರುಚಿಕೊಂಡಿತು. ಅವನ ಮುಂದಿಟ್ಟ ಕಾಲು ಮತ್ತೆ ಹಿಂದೆ ಸರಿಯಿತು. ಲೈಟ್ ಆರಿಸಲು ಹೋಗಿದ್ದ ಅವನ ತಾಯಿ ಅಲ್ಲೇ ನಿಂತುಬಿಟ್ಟಳು. ಸ್ವಿಚ್ ಮೇಲಿನ ಕೈ ಹಾಗೆ ಉಳಿದುಕೊಂಡಿತ್ತು.

ಆನಂದ ರಿಸೀವರ್ ಎತ್ತಿಕೊಂಡು "ಹಲೋ ಯಾರು ಮಾತಾಡೋದು ರಾಮರಾಯರs... ಏನು ಸಾಹೇಬ್ರ... ಏನಂದ್ರಿ... ರಾಮಪುರದಾಗ ದಂಗೆ ಆಗೇದ? ಏನಂದ್ರೀ ಈಗ ಹೋಗಬೇಕು! ಹುಂ! ಹೋಗ್ತೇನ್ರಿ... ರಿಪೋರ್ಟ್ ಮಾಡ್ತೇನಿ. ಹೂನ್ರಿ... "ಆಗದಿ ಖರೋಖರ್ ಸುದ್ದೀ ಹೊರಗ ತಗೀತೀನಿ... ಈಗ ಸಧ್ಯ ಹೊಂಟೆ. ಹೂಂನ್ರೀ... ಹುಷಾರಾಗಿರ್ತೇನಿ."

ಎಂದು ರಿಸೀವರ್ ಕೆಳಗಿಟ್ಟು, ಭರಭರನೆ ಪ್ಯಾಂಟು, ಶರ್ಟು ಧರಿಸಿ, ಹೆಗಲಿಗೆ ತೂಗುವ ಚೀಲದಲ್ಲಿ ಅಗತ್ಯದ ಬಟ್ಟೆ ಬರಿ, ವಸ್ತುಗಳನ್ನು ತುಂಬಿಕೊಂಡು ಹೊರಟೇಬಿಟ್ಟ. ಎಲ್ಲ

ಕೇಳಿಸಿಕೊಂಡ ಅವನ ತಾಯಿ ಸುಮ್ಮನೆ ಇದ್ದಳು. ಇದೆಲ್ಲ ಅವಳಿಗೆ ಅಭ್ಯಾಸವಾಗಿ ಹೋಗಿತ್ತು. ಅವಳ ಕಡೆಗೆ ಮೆಲ್ಲಗೆ ಮುಖ ತಿರುಗಿಸಿ, "ಅಮ್ಮಾ, ಏನೂ ಕಾಳಜೀ ಮಾಡಬ್ಯಾಡ. ನಾ ಹೋಗಿ ಬರ್ತೀನಿ ಬಾಗಿಲ ಹಾಕ್ಕೋ.."ಎನ್ನುತ್ತ ಮನೆಯಿಂದ ಹೊರಬಿದ್ದ. ಅವನು ಬೀದಿಯ ಬೆಳಕಿನಲ್ಲಿ ಕಾಣುವವರೆಗೂ ತಾಯಿ ಬಾಗಿಲಲ್ಲೇ ನಿಂತದ್ದು ಅವರ ದೃಷ್ಟಿಗೆ ಬಾರದೆ ಹೋಗಲಿಲ್ಲ.

ಅಪರಾತ್ರಿ ರಸ್ತೆಯ ಮೇಲೆ ಒಂದು ನರಪಿಳ್ಳೆಯ ಸುಳಿವೂ ಇರಲಿಲ್ಲ. ದೂರದಿಂದ ಗುರಖಾನ ಲಾಠಿಯ ಖಟ್‌ಖಟ್ ಸದ್ದು ಮಾತ್ರ ಕೇಳಿಬರುತ್ತಿತ್ತು. ದಾಪುಗಾಲು ಹಾಕುತ್ತ ಬಸ್‌ಸ್ಟ್ಯಾಂಡು ಬಳಿ ಬಂದ ರಾಮಪುರದ ಕೊನೆಯ ಬಸ್ಸು ಹೊರಟುಹೋಗಿತ್ತು. ಅಲ್ಲಿ ನಿಂತಿದ್ದ ಒಂದೆರಡು ಬಸ್ಸುಗಳು ನಿದ್ದೆ ಹೊಡೆಯುತ್ತಿದ್ದವು.

ದಾರಿಯಲ್ಲಿ ಲಾರಿ, ಟ್ರಕ್ ಸಿಕ್ಕಬಹುದೆಂದು ಯೋಚಿಸಿ ರಾಮಪುರದತ್ತ ಹೊರಟುದುದು ಕಾಣಿಸಿದರೆ ಮಾರ್ಗದ ಮಧ್ಯ ಬಂದು ಕೈ ಮಾಡಿ ನಿಲ್ಲಿಸಲು ಯತ್ನಿಸಿದ. ಅವುಗಳು ನಿಲ್ಲದೆ ಸಾಗುವ ವೇಗಕ್ಕೆ ದಿಗಿಲು ಬಿದ್ದು ಹಿಂಜರಿಯುತ್ತಿದ್ದ.

ಕೊನೆಗೆ ಒಬ್ಬ ಲಾರಿ ಚಾಲಕನಿಗೆ ಕರುಣೆ ಬಂದು ಲಾರಿ ನಿಲ್ಲಿಸಿ ಎಲ್ಲಿಗೆ ಹೋಗಬೇಕು ಎಂದು ಕೇಳಿದ. ಆ ಒರಟುಮುಖಕ್ಕೆ ತಕ್ಕಂತಿತ್ತು ಆ ಧ್ವನಿ.

"ರಾಮಪುರಕ್ಕs..."

ಅದನ್ನು ಕೇಳಿದ ತಕ್ಷಣ ಆ ವ್ಯಕ್ತಿ ಎಂಜಿನ್ ಆಫ್ ಮಾಡಿ ಕೆಳಕ್ಕೆ ಹಾರಿಬಂದು "ನಿಮ್ಮವರೀ ಸಮಾತ್ಯಾಗ ಇಲ್ಲೇನು?..." ಎಂದ.

"ಯಾಕ ಏನಾತು?"

"ಅಲ್ಲೆ ಏನಾಗೇದ ಗೊತ್ತ ಅದ ಏನು ನಿಮಗ. ಭಾರಿ ಗದ್ಲ ಆಗೇದ. ಪೊಲೀಸರು ಗುಂಡು ಹಾರಿಸ್ಯಾರಂತ. ಇಬ್ಬರು ಸತ್ತಾರಂತ..."

"ಹೌದು ಅದಕ್ಕs ನಾನು ಅಲ್ಲೇ ಹೊರಟಿದ್ದು..."

"ಅಂದ್ರ ನಿಮಗ ಜೀವಾ ಬ್ಯಾಡ ಆಗ್ಯೆತೇನು...?"

ಅವನು ಇನ್ನೂ ಏನೇನೂ ಹೇಳಲು ಹೊರಟಿದ್ದ. ಆನಂದ ಅಷ್ಟಕ್ಕೆ ಅವನ ಮಾತು ನಿಲ್ಲಿಸಿ, "ಇತ್ನೋಡು ನಿನಗ ಕರಕೊಂಡು ಹೋಗಲಿಕ್ಕೆ ಆಗದಿದ್ದರ ಹೇಳು. ಬ್ಯಾರೆ ಲಾರಿ ಹಿಡಿದು ಹೋಗ್ತೀನಿ. ನಾನು ಪೇಪರ್ ರಿಪೋರ್ಟರ್ ನನ್ಗ ಅಲ್ಲಿಗೆ ಹೋಗಲಿಕ್ಕೆ ಬೇಕು." ಬಂದ ಡ್ರೈವರ್ ಜೋರಾಗಿ ನಗುತ್ತ ಹೇಳಿದ.

"ಓಹೊ, ನೀವು ಪೇಪರಿನವರಾs... ಸರಿ ಹೋತು ಬಿಡ್ರಿ. ಯಮಲೋಕಕ್ಕೂ ಹೋಗಿ ನೀವು ವರದಿ ಕಳಸೋರು... ಬರ್ರಿ... ಬರ್ರಿ... ಕೂಡ್ರಿ... ನಾನು ಹೊಸೂರಿಗೆ ಹೋಗಲಿಕ್ಕ ಹತ್ತೀನಿ. ಬೇಕಾದ್ರ ರಾಮಪುರದ ಕತ್ರಿಗೆ ಇಳಸ್ತೀನಿ. ಅಲ್ಲಿಂದ ಎರಡು ಮೈಲು ನಡಕೊಂಡು ಹೋಗಬೇಕಾಗ್ತೈತಿ...."

ಆನಂದ ಒಪ್ಪಿ ಲಾರಿ ಏರಿ ಅವನ ಪಕ್ಕದಲ್ಲಿ ಕುಳಿತುಕೊಂಡ. ಭಾರೀ ಮಾಲು ತುಂಬಿಕೊಂಡ ಲಾರಿ, ಭಾರವನ್ನು ತಾಳದೆ 'ರೊಂಯ್ ರೊಂಯ್' ಎಂದು ಅಲ್ಲೇ ಹೊರಳಾಡತೊಡಗಿತ್ತು.

ಡ್ರೈವರ್ ಏನೇನೂ ಕಸರತ್ತು ಮಾಡಿದ. ಗೇರ್ ಬದಲಿಸಿದ. ಎಕ್ಸಲೇಟರ್ ಒತ್ತಿದ. ತಗ್ಗು ದಿನ್ನೆಯ ಹಾಳಿದ ರಸ್ತೆಯ ಮೇಲೆ ಲಾರಿ ಕುದುಕನಂತೆ ಜೋಲಿ ಹೊಡೆಯುತ್ತ, ಹೊಯ್ದಾಡುತ್ತ ಓಡತೊಡಗಿತು.

ದಾರಿಯುದ್ದಕ್ಕೂ ಡ್ರೈವರ್ ರಾಮಪುರದ ಹಿಂಸಾತ್ಮಕ ಘಟನೆಯ ಹಿನ್ನೆಲೆಯ ಅತಿರಂಜಿತ ನಾನಾ ಕತೆಗಳನ್ನು ಹೇಳತೊಡಗಿದ.

"ಇಂಥ ಭಯಂಕರ ದಂಗೆ ಈ ಭಾಗದಾಗ ಆಗಿರಲಿಲ್ಲ ಬಿಡ್ರಿ... ಎರಡು ಕೋಮಿನವರ ಒಳ ಜಗಳ ಅಂತರೀ... ಎಷ್ಟು ಖರೇನೊ ಸುಳ್ಳೊ... ಯಾರಿಗೆ ಗೊತ್ತು...!"

"ರಾಮಪುರ ದೊಡ್ಡ ಊರೇನು...?"

"ಇಲ್ಲಾರಿ, ಇಲ್ಲಾ ಹಳ್ಳಿನೂ ಅಲ್ಲ ಪಟ್ಣಾನೂ ಅಲ್ಲಾ... ಹಂಗ ಅದ. ತಾಲೂಕಾನೂ ಅಲ್ರಿ. ಅಲ್ಲೇ ಏನೂ ಬೆಳವಣಿಗೆ ಇಲ್ಲ ನೋಡ್ರಿ. ಹಿಂದ ಉಳಿದದ್ದು ಇನ್ನೂ ಹಿಂಗ ಹಿಂದ ಉಳದದ."

ಡ್ರೈವರ್ ಊರಿನ ವ್ಯಾಖ್ಯಾನ ಮುಗಿಸಿ ಮತ್ತೆ ಹಿಂಸಾತ್ಮಕ ಘಟನೆಯತ್ತ ಬಂದ. ಲಾರಿ ಓಡತೊಡಗಿತ್ತು. ಅವನು ಕಣ್ಣರಳಿಸಿ, ಹುಬ್ಬು ಹಿಗ್ಗಿಸಿ, ಕುಗ್ಗಿಸಿ, ಆನಂದನತ್ತ ಹೊರಳಿ ಹೊರಳಿ ಅದನ್ನು ಹೇಳುವಾಗ, ಬಣ್ಣಿಸುವಾಗ ಆಗಾಗ ಸ್ಟೇರಿಂಗಿನ ಮೇಲಿನ ಕೈ ಬಿಡುತ್ತಿದ್ದ. ಆನಂದನಿಗೆ ಜೀವದಲ್ಲಿ ಜೀವ ಇರುತ್ತಿರಲಿಲ್ಲ. ಅವನು ಮತ್ತೆ ಹೇಳತೊಡಗಿದ:

"ಅಂದ ಹಂಗ ಇನ್ನೂ ಒಂದು ಸುದ್ದಿ ಕೇಳೀರೇನು? ಹೆಂಗಸರನಂತೂ ಕಾಣಾ ಕಾಣಾ ರಸ್ತೆದಾಗ ಎಳದಾಡಿ ಕೆಡಸ್ಯಾರಂತ... ಏನು ಬೇವರ್ಸಿನ ಮಕ್ಕಳು ಇವರು ಅಂತೀನಿ..."

ಡ್ರೈವರ್ ಗಕ್ಕನೆ ಬ್ರೆಕ್ ಹಾಕಿದ. ಆನಂದ ಪುಟದು ಕುಪ್ಪಳಿಸಿ ಕುಳಿತ. ಲಾರಿ ಎದುರಿಗೆ ಒಬ್ಬ ಕಂದೀಲು ಮೇಲೆತ್ತಿ ಹಿಡಿದುಕೊಂಡು ನಿಂತಿದ್ದ. ಪಕ್ಕದಲ್ಲೊಂದು ಕಂಗಾಲದ ಮುದುಕಿ ಬಿಕ್ಕಳಿಸತೊಡಗಿತ್ತು.

ಡ್ರೈವರ್ ಎಡಗೈಯಲ್ಲಿ ಸ್ಟೇರಿಂಗ ಹಿಡಿದು, ಬಲಗೈಯಿಂದ ಬಾಗಿಲ ನೂಕಿ ಇಣಕಿ ಕೇಳಿದ.

"ಯಾರು ನೀವು... ಏನ ಬೇಕಾಗಿತ್ತು...?"

ಆ ವ್ಯಕ್ತಿ ದೈನ್ಯದಿಂದ ಡ್ರೈವರನತ್ತ ಬಂದು "ಡ್ರೈವರ್ ಸಾಹೇಬ್ರ, ದಯಮಾಡಿ ಈ ಮುದುಕಿನ್ನ ಹೊಸೂರಿಗೆ ಮುಟ್ಟಸರಿ. ಇಕಿ ಮೊಮ್ಮಗಳ್ನ ಸೂಳೇ ಮಕ್ಕಳು ಎಳಕೊಂಡು ಹೋಗ್ಯಾರರಿ... ನಾ ಹುಡಕೊಂಡು ಬರ್ತೀನಿ... ಈ ಮುದಕ್ಕಿನ್ನ ಹ್ಯಾಂಗರ ಮಾಡಿ ಕರಕೊಂಡು ಹೋಗ್ರಿ..." ಎಂದು ಗೋಗರೆದ.

ಡ್ರೈವರನಿಗೂ ಕರುಣೆ ಬಂತು. ಮುದುಕಿಯನ್ನು ಲಾರಿಯಲ್ಲಿ ಹತ್ತಿಸಿಕೊಂಡ. ರಾಮಪುರ ಸಮೀಪಿಸಿದ್ದರಿಂದ ಆನಂದ ಅಲ್ಲಿಯೇ ಇಳಿದುಬಿಟ್ಟು, ಆ ಮುದುಕನಿಗೆ ತಾನೂ ರಾಮಪುರಕ್ಕೆ ಹೊರಟಿದ್ದು ಹೇಳಿದ.

ಲಾರಿ ಹೊಗೆಯುಗುಳುತ್ತ ತಗ್ಗಿನಲ್ಲಿಳಿದು ಕಣ್ಮರೆಯಾದ ಮೇಲೆ ಆನಂದ ಆ ವ್ಯಕ್ತಿಯ ಹಿಂದೆ ಹೊರಟ. ಸ್ವಲ್ಪ ದೂರ ಬಂದ ಮೇಲೆ ಆತ ಹತ್ತಿರದ ಮರದ ಕೆಳಗೆ ನಿಂತು ಕಂದೀಲಿನ ಬತ್ತಿಯನ್ನು ದೊಡ್ಡದು ಮಾಡಿ, ಆನಂದನ ಮುಖದ ಮೇಲೆ ಬೆಳಕು ಕೆಡವಿ ದಿಟ್ಟಿಸಿ ಹೇಳಿದ:

"ಸಾಹೇಬ್ರ, ನೀವು ಇಲ್ಲಿಗೆ ಬರಬಾರದಾಗಿತ್ತು. ಪರಿಸ್ಥಿತಿ ಇನ್ನೂ ಗಂಭೀರ್ಯತಿ."

"ನನಗ ಗೊತ್ತ ಅದ. ಅದ್ನ ತಿಳಕೊಳ್ಳಲಿಕ್ಕೇ ಇಲ್ಲಿಗೆ ಬಂದಿದ್ದು."

ನನ್ನ ವೃತ್ತಾಂತವನ್ನೆಲ್ಲ ಅವನ ಮುಂದೆ ಒಪ್ಪಿಸಿದೆ. ಗಲಭೆ ಸ್ಥಳದಲ್ಲಿ ನಡೆದ ಹೇಯ ಘಟನೆಯನ್ನು ಕಣ್ಣಾರೆ ಕಂಡ, ಆ ವ್ಯಕ್ತಿಯ ನುಡಿಗಳನ್ನೇ ತನ್ನ ಪೇಪರಿಗೆ ಫ್ಲ್ಯಾಷ್ ಮಾಡಬೇಕೆಂಬ ಕುತೂಹಲ ಅವನದು.

"ನೋಡ್ರಿ ಸಾಹೇಬ್ರ ಆಗ ರಾತ್ರಿ ಸುಮಾರು ಹತ್ತು ಗಂಟೆ ಆಗಿರಬೇಕು. ಊಟಕ್ಕೆ ಕುಂತಿದ್ದೆ. ಹೊರಗೇನೊ ಗದ್ದಲ ಕೇಳಿಸಿದ್ಹಂಗ ಆತು. ಹಂಗ ಊಟಾ ಬಿಟ್ಟು ಹೊರಗ ಬಂದು ನೋಡಿದೆ. ಬಲಗಡೆ ಓಣ್ಯಾಗಿಂದ ಮೂವತ್ತು ನಲ್ವತ್ತು ದಾಂಡಿಗ್ಯಾರು ಕೈಯಾಗ ಹಿಲಾಲು, ಚಾಕು ಚೂರಿ ಹಿಡಕೊಂಡು ಕ್ಯಾಕಿ ಹೊಡಕೊಂತ ಬರಾಕ ಹತ್ತಿದ್ರು. ಎಡಕ್ಕ ನೋಡಿದೆ! ಅತ್ಲಾಗೂ ಒಂದು ಹಿಂಡು, ಕುಡುಗೋಲು, ಕತ್ತಿ, ಲಾಠಿ ಹಿಡಕೊಂಡು ಓಡ್ಯೋಡಿ ಬರಾಕ ಹತ್ತಿತ್ತು. ಅದ್ನ ನೋಡಿ ನನ್ನ ಎದಿ ಧಸ್ ಅಂತು. ಭಡಕ್ಕನ ಬಾಗಿಲ ಹಕ್ಕೊಂಡೆ. ಜೀವಾ ತಡೀಲಾರದ ಕಿಟಕಿ ಮರ್‍ಯಾಗ ನಿಂತುಕೊಂಡು ನೋಡ್ದೆ. ಶಿವಶಿವಾ ಅದ್ನ ನೆನಸಿಕೊಂಡ್ರ ಮೈ ಮುಳ್ಳ ಬರ್ತದ. ಸಿಕ್ಕವರ್‍ನ ಹೊಡೆದರು. ಕಡಿದರು. ಮನಿ ಹೊಕ್ಕು... ಹೊಕ್ಕು ಹೆಣ್ಣ ಮಕ್ಕಳ್ನ ರಸ್ತೇದಾಗ ಎಳೆದು ಎಳೇದು ಕೆಡಿಸೀದ್ರು ಶಿವ ಶಿವಾ... ಇವರು ಮನುಷ್ಯರಲ್ಲ... ರಾಕ್ಷಸರು... ಅನ್ರಿ... ತಮ್ಮ ಹೆಂಡಂದಿರು, ತಂಗೆದರ ಗತಿ ಹಿಂಗ ಆದ್ರ ಹೆಂಗ ಹೇಳ್ರಿ...?"

ಅದನ್ನೆಲ್ಲ ಹೇಳುತ್ತಿದ್ದಂತೆ ಅವನಿಗೆ ರೌಸ್ ತುಂಬಿತು. ಸಂಕಟದಿಂದ ತಳಮಳಿಸಿದ. ಅವನ ಮಾತು ಮುಂದುವರೆಯಿತು. ಬಿಡಕ್ಯಾಗಿಂದ ನೋಡತ್ತಿದ್ದಾಂವ ಮೆಲ್ಲಗೆ ಹೊರಗ ಹೋಗಿದ್ದ ತೆಪ್ಪ ಆತು. ಅದ್ನೆಲ್ಲ ನೋಡಿ ಸಂಕಟಪಟ್ಟೆ. ಬವಳಿ ಬಂದ ಹಂಗ ಆತು. ಒಳಗ ಬಂದು ಹಾಸಿಗಿ ಮ್ಯಾಗ ಬಿದ್ದೆ. ಸ್ವಲ್ಪ ಹೊತ್ತಿನ ಮ್ಯಾಗೆ ಎಚ್ಚರ ಆತು. ಯಾರೋ ಹಿತ್ತಲದಾಗ ಹಾಡಾಡಿಕೊಂಡು ಅಳೋದು ಕೇಳಿಸ್ತು. ಕಂದೀಲ ತೊಗೊಂಡು ಅತ್ಲಾಗ ಬಂದೆ. ಒಂದು ಮುದುಕಿ ಎದುರಿ ಬಡಕೊಂಡು ಅಳಾಕ ಹತ್ತಿದ್ಳು. "ಅಯ್ಯೋ ನನ್ನ ಮೊಮ್ಮಗಳ ಬಾಳೇನು ಹಾಳಾತು. ಇವರ ಬಾಯಾಗ ಮಣ್ಣ ಬೀಳಾ..."

... ನಡದ ಪರಿಸ್ಥಿತಿ ಆ ಮುದುಕಿ ಬಾಯಿಂದ ಕೇಳಿ ತಿಳಕೊಂಡೆ. ರಾಮಪುರದ ಸಂತೆಗೆ ಮೊಮ್ಮಗಳ್ನ ಕರಕೊಂಡು ಬರುತ್ತಂತ, ಬಸ್ಸು ತಪ್ಪಿ ಸ್ಟ್ಯಾಂಡನ್ಯಾಗ ಉಳಕೊಂಡಿದ್ಲಂತೆ... ಅದಕ್ಕ ಈ ಪಿಶಾಚಿಗಳ ಬಾಯ್ಯಾಗ ಬಿದ್ದಳಂತ... ಆ ಮುದಕ್ಕಿನ್ನ ಕರಕೊಂಡು ಆಕೆ ಮೊಮ್ಮಗಳ್ನ ಹುಡಕೊಂಡ ಹೊರಟೆ. ಎಲ್ಲೂ ಸಿಕ್ಕಾಲಿಲ್ಲ. ಈ ಮುದುಕಿ ಜೀವಕ್ಕೂ ಏನಾದ್ರು ಆದೀತು ಅಂತ ಹೊಸೂರ ಕಡೆ ಹೋಗೋ ಗಾಡ್ಯಾಗ ಹತ್ತಿಸಿಬಿಡೋಣ ಅಂತ ಇಲ್ಲೆ ಕರಕೊಂಡು ಬಂದೆ."

"ಒಪ್ಪಿದ್ನೇನು ಹೊಸೂರಿಗೆ ಹೋಗಲಿಕ್ಕೆ ಆ ಮುದುಕಿ..." ಆನಂದ ಅವನ ಮನಸ್ಸಿನ ಜೀವಕ್ಕೆ ಸ್ವಲ್ಪ 'ಬ್ರೇಕ್' ಹಾಕಿದ. "ಹೌದು ಸಾಹೇಬ್ರ, ಆಕೆ ಒಪ್ಪಲಿಲ್ಲ. ನಾ ಹ್ಯಾಂಗರ ಮಾಡಿ ನಿನ್ನ ಮೊಮ್ಮಗಳ್ನ ಹುಡಕಿಕೊಂಡು ಬರ್ತೀನಿ ಹೋಗು ಅಂತ ವಚನಾ ಕೊಟ್ಟ ಮ್ಯಾಗ ಒಪ್ಪಿದ್ಲರೀ..."

ಇನ್ನೂ ಆತ ಏನೇನೊ ಹೇಳುತ್ತಿದ್ದ. ದೂರದಲ್ಲಿ ಮತ್ತೆ ಗದ್ದಲು, ಕೂಗಾಟ ಕೇಳಿಸಿತು. ಒಂದು ಗುಂಪು ಅವರ ಕಡೆಗೇ ಓಡಿ ಬರತೊಡಗಿತ್ತು. ಆ ವ್ಯಕ್ತಿ ಕಂದೀಲನ್ನು ಆಚೆ ಎಸೆದು ಕತ್ತಲಲ್ಲಿ ಕರಗಿಬಿಟ್ಟ. ಆನಂದ ಕಂಗೆಟ್ಟು ಎಲ್ಲೆಲ್ಲೊ ಓಡಿ ಪೊದೆಯೊಳಗೆ ಬಚ್ಚಿಟ್ಟುಕೊಂಡು ನೋಡತೊಡಗಿದ.

ಹಿಲಾಲಿನಲ್ಲಿ ಪ್ರತೀಕಾರದ ನಿಗಿನಿಗಿ ಉರಿಯನ್ನು ಉಗಳುತ್ತಿದ್ದ ಆ ಮುಖಗಳು ಕಾಣಿಸಿದವು. "ಆಚೆ ಹೊಲದಾಗಿಂದ ಹೊರಗ ಬಂದ್ರು ಆ ಮಕ್ಕಳು ಆ ಗುಂಪಿನವರ ಇರಬೇಕು. ಹುಡುಕರಿ ಬಿಡಬ್ಯಾಡ್ರಿ ಚರ್ಮಾ ಸುಲದಬಿಡೋಣ..."

ಕಾಲುವೆಯ ಆಚೆ ಮರೆಯಿಂದ ಕೇಳಿ ಬಂದ ಧ್ವನಿಗಳು ಆನಂದನ ಮೈ ನಡುಗಿಸಿದವು. ಆ ಗುಂಪು ಅಲ್ಲಿಂದ ಕಾಲ್ಕಿತ್ತುವವರೆಗೆ ಅವನಿಗೆ ಉಸಿರು ಕಟ್ಟಿದಂತಾಗಿತ್ತು. ಅವರು ಹೊರಟು ಹೋದರು. ಜೀವ ಬಂದಂತಾಯಿತು. ಧಡ ಬಡಿಸಿಕೊಂಡು ಎದ್ದು ಹೊರಟ. ಆಚೆ ಪೊದೆಯಲ್ಲಿ ಯಾವುದೋ ಹೆಣ್ಣಿನ ನರಳುವ ಧ್ವನಿ ಕೇಳಿಸಿದಂತಾಯಿತು. ಮೆಲ್ಲಗೆ ಆಚೆ ನಡೆದ. ಗುತ್ತು ಗುತ್ತಾಗಿದ್ದ ಪೊದೆ ಸರಿಸಿದ. ಮಂಕು ಬಡೆದ ಚಂದ್ರನ ನಿಶ್ಯಕ್ತ ಕಿರಣಗಳು, ಅವಳ ಮೇಲೆ ಬಿದ್ದಿದ್ದವು. 'ಓ! ಆ ದೃಶ್ಯ!' ಅವನ ಕಣ್ಣಿನಿಂದ ನೋಡಲಿಕ್ಕಾಗಲಿಲ್ಲ. ಇನ್ನೂ ಹದಿಹರೆಯದ ಹುಡುಗಿ. ಈ ಪಿಶಾಚಿಗಳ ಬಲಾತ್ಕಾರದ ಸಂಭೋಗದಿಂದ ಪ್ರಜ್ಞೆ ತಪ್ಪಿ ಬಿದ್ದಿದ್ದಳು. ಮೈಮೇಲೆ ಒಂದು ಚೂರು ಅರಿವೆ ಇರಲಿಲ್ಲ. ದೇಹದ ತುಂಬ ಚೂರಿದ ಕಚ್ಚಿದ ಗಾಯಗಳು. ರಕ್ತ ಸೋರತೊಡಗಿತ್ತು. ಅಂಥ ಭೀಭತ್ಸ್ಯ ದೃಶ್ಯ ಅವನು ಕಂಡೇ ಇರಲಿಲ್ಲ. ಆನಂದ ಕೂಡಲೇ ಚೀಲದಲ್ಲಿದ್ದ ಲುಂಗಿಯನ್ನು ತೆಗೆದು ಅವಳ ಮೈ ಮುಚ್ಚುವಂತೆ ಹೊದಿಸಿದ. ಕಾಲುವೆ ನೀರನ್ನು ತಂದು ಮುಖಕ್ಕೆ ಸಿಂಪಡಿಸಿದ. ಕತ್ತನ್ನು ಹೊರಳಾಡಿಸಿ, ಕ್ಷೀಣಸ್ವರದಲ್ಲಿ ನರಳುತ್ತ ಕಣ್ಣು ಬಿಟ್ಟಳು ಆ ಹುಡುಗಿ. ಆನಂದನನ್ನು ಕಂಡ ಕೂಡಲೇ ಭಯ ಭೀತಳಾಗಿ ಕಿರುಚಿ ಅವನನ್ನು ಆಚೆ ತಳ್ಳಿದಳು. ನೋವು ತಾಳಲಾರದೆ ಮತ್ತೆ ನೆಲಕ್ಕುರುಳಿದಳು.

ಆನಂದ ಮತ್ತೆ ಅವಳತ್ತ ಸರಿದು 'ನಾನು ಪುಂಡರ ಗುಂಪಿನವನಲ್ಲ. ನಿನಗ ನಾ ಏನೂ ಮಾಡೋದಿಲ್ಲ. ಗಾಬರಿ ಆಗಬ್ಯಾಡಾ... ಮೆಲ್ಲಗ ಏಳು. ಅಲ್ಲೆ ದೀಪ ಕಾಣಸ್ತದ, ಮನಿ ಇರಬೇಕು ನಡಿ... ಕರಕೊಂಡು ಹೋಗ್ತೀನಿ...' ಎಂದ.

ಆ ಸಮಯದಲ್ಲಿ ಅವಳಿಗೆ ಆನಂದನನ್ನು ನಂಬದ ಹೊರತು ಬೇರೆ ಗತಿಯೇ ಇರಲಿಲ್ಲ. ಸಾವಕಾಶವಾಗಿ ಎದ್ದು ಅವನ ನೆರವಿನೊಂದಿಗೆ ನಡೆದಳು. ತಾನೇ ಎದ್ದು ನಿಲ್ಲುವಷ್ಟು ತ್ರಾಣ ಅವಳಲ್ಲಿರಲಿಲ್ಲ.

ಏಳುತ್ತ, ಬೀಳುತ್ತ, ಸಾವರಿಸಿಕೊಂಡು ಬರುತ್ತಿದ್ದ ಅವಳನ್ನು ಆನಂದ, ಗಚ್ಚಿನ ಮನೆಯವರೆಗೂ ಕರೆದುಕೊಂಡು ಹೋದ. "ಯಾರಿದ್ದೀರಿ ಒಳಗ... ದಯಮಾಡಿ ಬಾಗಿಲ ತಗೀರಿ" ಎಂದು ಮೆಲ್ಲಗೆ ಬಾಗಿಲ ತಟ್ಟುತ್ತ ಮೆಲುದನಿಯಲ್ಲಿ ಕೇಳಿದ.

ಮೂರು ನಾಲ್ಕು ಸಲ ಕೂಗಿದ ಮೇಲೆ ವರಾಂಡದಲ್ಲಿ ಬೆಳಕು ಬಿದ್ದಂತಾಯಿತು. ಸ್ವಲ್ಪ ಹೊತ್ತಿನ ಮೇಲೆ ಕಿಟಕಿ ತೆರೆಯಿತು. ಒಬ್ಬ ಮುದುಕ ಇಣಕಿ ಇಣಕಿ ಅವರನ್ನು ನೋಡಿ, ಏನೇನೊ ಯೋಚಿಸಿದ. ನಂತರ ಬಾಗಿಲು ತೆರೆದ. ಆನಂದ ಆ ಹುಡುಗಿಯನ್ನು ಕರೆದುಕೊಂಡು, ಒಳಗೆ ನಡೆದ.

"ನೋಡ್ರಿ, ದಯಮಾಡಿ ಈ ಹುಡುಗೀಗೆ ಇವತ್ತೊಂದು ರಾತ್ರಿ ಆಶ್ರಯ ಕೊಡ್ರಿ. ಯಾರೊ ಪುಂಡರು ಈಕೆನ್ನ ಈ ಸ್ಥಿತಿಗೆ ತಂದು ಪೊದ್ರ್ಯಾಗ ಒಗದು ಹೋಗಿದ್ದರು."

ಆನಂದ ಇನ್ನೂ ಮಾತು ಮುಗಿಸುವಷ್ಟರಲ್ಲಿ ಮಲಗುವ ಕೋಣೆಯಿಂದ ಎದ್ದು ಬಂದ ವೃದ್ಧೆ ಅವಳನ್ನು ಒಳಗೆ ಕರೆದುಕೊಂಡು ಹೋದಳು. ಆ ವೃದ್ಧ ಕತ್ತನ್ನು ಅಲ್ಲಾಡಿಸುತ್ತ "ನೀವು ಸರಿಯಾದ ಜಾಗಕ್ಕೆ ಬಂದೀರಿ..." ಎಂದ. ಆನಂದನಿಗೆ ಅವನ ಮಾತಿನ ಅರ್ಥವಾಗಲಿಲ್ಲ. "ಅಂದ್ರ..." ಅವನು ತಡವರಿಸಿದ. ಆ ವ್ಯಕ್ತಿ ಆಚೆ ಬೆರಳು ತೋರಿಸಿದ. ಬೋರ್ಡ್ ಕಾಣಿಸಿತು... "ಡಾ. ಪಾಟೀಲ... ಎಂ.ಬಿ.ಬಿ.ಎಸ್." ಆತ ಚಿಕಿತ್ಸೆ ನೀಡಲು ಒಳಗೆ ನಡೆದ.

ಆನಂತ ನಿಟ್ಟುಸಿರು ಬಿಟ್ಟು ಅಲ್ಲಿಯೇ ಇದ್ದ ಖುರ್ಚಿಯ ಮೇಲೆ ಕುಳಿತುಕೊಂಡು ಎದೆಯ ಮೇಲಿನ ಭಾರ ಇಳಿದಂತಾಗಿತ್ತು. ಕಣ್ಣುಗಳು ಸೆಳೆಯುತೊಡಗಿದ್ದವು. ನಿದ್ದೆ ಆವರಿಸತೊಡಗಿತ್ತು. ಚಿಕಿತ್ಸಾ ಕೊಠಡಿಯಲ್ಲಿಯ ಆ ಹುಡುಗಿಯ ನರಳುವಿಕೆ ಆಗಾಗ ಎಚ್ಚರಿಸುತ್ತಿತ್ತು. ಆನಂದ ಕಣ್ಣು ಬಿಟ್ಟಾಗ ಬೆಳಕು ಹರಿದಿತ್ತು. ದುಗುಡ ತುಂಬಿದ ಗಂಟಲಲ್ಲಿ ಅವಳ ಮಾತುಗಳು ಯಾಚನೆಯಿಂದ ಹೊರಬರತೊಡಗಿದ್ದವು. ಆ ವೃದ್ಧ ದಂಪತಿಗಳ ಮುಂದೆ ಎಲ್ಲವನ್ನೂ ತೋಡಿಕೊಳ್ಳತೊಡಗಿದ್ದಳು. ತಾನು ಅಜ್ಜಿಯಿಂದ ಅಗಲಿದ್ದು. ಪುಂಡರ ಗುಂಪು ತನ್ನನ್ನು ಬಸ್‌ಸ್ಟಾಂಡಿನಿಂದ ಎಳೆದೊಯ್ದು... ಬಿಕ್ಕಳಿಸತೊಡಗಿದ್ದಳು. ಆ ಮಾತುಗಳು ಎಲ್ಲೋ ಕನಸಿನಲ್ಲಿ ಕೇಳುತ್ತಿದ್ದಂತೆ ಎನ್ನಿಸಿತು ಆನಂದನಿಗೆ. ಚಂಗನೇ ಜಿಗಿದೆದ್ದು ಒಳಗೆ ಧುಮುಕಿದ. ಅವರೆಲ್ಲ ಅವನತ್ತ ನೋಡತೊಡಗಿದರು. ಆನಂದ ತಡವಾಗಿ ಕೇಳಿದ:

"ನಿಂದು ಹೊಸೂರೇನು? ನೀನು ಅಜ್ಜಿ ಜೋಡಿ ಸಂತೆಗೆ ಬಂದಿದ್ದೆಲ್ಲ" ಅವನ ಬಾಯಿಂದ ಈ ಮಾತುಗಳನ್ನು ಕೇಳಿ ಆ ಹುಡುಗಿಯ ಮನದಲ್ಲಿ ಆಸೆ ಅಂಕುರಿಸಿತು.

"ಹೌದು! ಎಲ್ಲಿದ್ದಾಳೆ ನನ್ನ ಅಜ್ಜಿ, ಹ್ಯಾಂಗಿದ್ದಾಳೆ. ನೀವು ನೋಡೀರೇನು?" ಅವಳು ಹಲುಬಿದಳು.

"ಆಕೀಗೆ ಏನೂ ಆಗಿಲ್ಲ. ನಿನ್ನೆ ರಾತ್ರೀನೆ ನಾವು ಹೊಸೂರಿಗೆ ಆಕಿನ್ನ ಲಾರಿ ಒಳಗ ಕಳಿಸೀವಿ. ಏನೂ ಕಾಳಜಿ ಮಾಡಬ್ಯಾಡಾ... ನಾನ ನಿನ್ನ ಅಜ್ಜಿ ಹತ್ತಿರ ಬಿಟ್ಟು ಬರ್ತೀನಿ." ಸ್ವಲ್ಪ ಗದ್ದಲ ಕಡಿಮೆಯಾಗಲಿ ಎಂದು ಸಂತೈಸಿದ ಅವಳ ತಲೆ ಮೇಲೆ ಕೈಯಾಡಿಸಿ.

– ರಾಮಪುರ ದಂಗೆಯಿಂದ ತತ್ತರಿಸಿ ಸ್ಮಶಾನ ಸದೃಶ್ಯವಾಗಿತ್ತು. ನಿರ್ಜನ ಬೀದಿಗಳು ಬಿಕೊ ಎನ್ನುತ್ತಿದ್ದವು. ಎಲ್ಲ ಮುಗಿದಾದ ಮೇಲೆ ಹೆಚ್ಚಿನ ಪೊಲೀಸ್ ಪಡೆ ಬಂದಿತ್ತು. ಎಲ್ಲಿ ನೋಡಿದರಲ್ಲಿ ಸಮವಸ್ತ್ರದ ಬಂದೂಕುಧಾರಿಗಳ ಓಡಾಟ. ಅವರ ಖಟ್‌ಖಟ್ ಬೂಟಿನ ಸದ್ದು. ಅಂತೂ ಭೀತಿಯ ಶಾಂತಿ ಅಲ್ಲಿ ನೆಲೆಸಿತು.

ಸಂಜೆ ಕರ್ಫ್ಯೂ ಕಂಡಲ್ಲಿ ಗುಂಡಿಕ್ಕುವ ಆಜ್ಞೆ. ಎರಡು ದಿನಗಳಲ್ಲಿ ಪರಿಸ್ಥಿತಿ ಹತೋಟಿಗೆ ಬಂತು. ಆನಂದ ವಿವರವಾಗಿ ಇವನ ಅನುಭವವನ್ನು ತನ್ನ ಪತ್ರಿಕೆಗೆ ಫ್ಲ್ಯಾಷ್ ಮಾಡಿದ. ಸಂಪಾದಕರಿಗೆ ಸಂತೋಷವಾಯಿತು. ಉಳಿದ ಪತ್ರಿಕೆಗಳು ವರದಿ ಮಾಡಿದವು. ರಾಮಪುರದಲ್ಲಿ ದಂಗೆ, ಭಾರಿ ಅತ್ಯಾಚಾರ ಗಲಭೆ. ಕಂಡಲ್ಲಿ ಗುಂಡಿಕ್ಕುವ ಆಜ್ಞೆ. 'ಭುಗಿಲೆದ್ದ ಕೋಮು ದ್ವೇಷ. ನ್ಯಾಯಾಂಗ ತನಿಖೆಗೆ ಆಜ್ಞೆ.'

ರಾಮಪುರದತ್ತ ಎಲ್ಲ ಜಾತಿಗಳ ಧರ್ಮ ಗುರುಗಳು ಮುಖಂಡರು, ಮಂತ್ರಿಗಳು ಧಾವಿಸಿದರು. ಶಾಂತಿ ಕೋರಿದರು.

ಇಷ್ಟಾಗಿಯೂ ಯಾರಿಗೂ ಗಲಭೆಯ ಮೂಲ ಕಾರಣ ಗೊತ್ತಾಗಲಿಲ್ಲ. ಯಾವ ಪತ್ರಿಕೆಯೂ ಪ್ರಕಟಿಸಲಿಲ್ಲ. ಆನಂದನಿಗೆ ಅದನ್ನು ಹೊರಗೆಡುಹಬೇಕೆಂಬ ಹಠ. ಆ ನಿರ್ಭಾಗ್ಯೆಯನ್ನು ಹೊಸೂರಿನಲ್ಲಿಯ ಅವಳ ಅಜ್ಜಿಯ ಹತ್ತಿರ ಬಿಟ್ಟು ಮತ್ತೆ ರಾಮಪುರಕ್ಕೆ ಬಂದು ಒಂದೆರಡು ದಿನ ಅಲ್ಲಿಯೇ ಉಳಿದ.

ಕರ್ಫ್ಯೂ ತೆಗೆಯಲಾಗಿತ್ತು. ಸಂಜೆ ಆರು ಗಂಟೆ ಸುಮಾರು ಕಾಲುವೆ ದಂಡೆಯ ಮೇಲೆ ಕುಳಿತು ನೀರಲ್ಲಿ ಹರಳುಗಳನ್ನು ಒಂದೊಂದಾಗಿ ಎಸೆಯತೊಡಗಿದ್ದ. ಅವನ ವರ್ತುಲಗಳನ್ನು ನಿರ್ಮಿಸಿ ಕಣ್ಮರೆಯಾಗುತ್ತಿದ್ದವು. ಅಷ್ಟರಲ್ಲಿ ಅತ್ತ ಯಾರೋ ಕುಡಿದ ಉನ್ಮಾದದಲ್ಲಿ ಚಿತ್ರಗೀತೆ ಹಾಡುತ್ತಿದ್ದಂತೆ ಕೇಳಿಸಿತು. ಹೊರಳಿದ. ಆಚೆ ಹೊಲದ ಬದುವಿನ ಮೇಲೆ ಧಾಂಡಿಗ ಕಾಣಿಸಿದ. ಈ ಗಂಭೀರ ವಾತಾವರಣದಲ್ಲಿಯೂ ಆತ ನಿಶ್ಚಿಂತನಂತೆ ಕಾಣಿಸಿತು. ಅವನತ್ತ ನಡೆದ. ಆತನ ಅಮಲು ಇನ್ನು ಹೆಚ್ಚಾಯಿತು. ಅವನೊಂದಿಗೆ ಮಾತಾಡಲು ಆನಂದನಿಗೆ ಕೊಂಚ ಭಯವಾಯಿತು. ಧೈರ್ಯ ತಂದುಕೊಂಡು ತನ್ನ ಪರಿಚಯ ಹೇಳಿದ.

ಆ ಧಾಂಡಿಗ ನಗುತ್ತ "ನೀವು ಪತ್ರಿಕೆ ಅವರಾ. ಬೇಸ್ಯಾತುಂಬಿದ್ರೆ ಇರೋದ್ದು ಇಲ್ಲದ್ದು ಎಲ್ಲ ಹೊಡಿತೀರಿ. ಅಲ್ಲಾರಿ ಇಲ್ಲೆ ಈ ಗದ್ಲಾ ಆತಲ್ಲ ಇದಕ್ಕೆ ಕಾರಣ ನಿಮಗೆ ಗೊತ್ತು ಅದು ಏನು?" ಎಂದ ಅವನ ಮಾತು ಆನಂದನನ್ನು ಬಡಿದೆಬ್ಬಿಸಿತು. "ಅದ ಎರಡು ಕೋಮಿನವರ ದ್ವೇಷ. ಅಲ್ಲೇನು?.." ಎಂದ. ಅವನ ಮಾತು ಕೇಳಿ, ಆ ಧಾಂಡಿಗ ಮತ್ತಷ್ಟು ಜೋರಾಗಿ ನಗ ತೊಡಗಿದ. "ಯಾಕ ನಗತೀರಿ....?"

"ಹೊಗ್ಲೊ ನಿಮ, ಇಲ್ಕೋಳ್ರಿ ಆದದ್ದು ಇಷ್ಟುಽ...'

ಅವನು ಘಟನೆ ಹಿನ್ನೆಲೆ ಹೇಳಿದ. ಆ ಕಾರಣ ಕೇಳಿ ಆನಂದನಿಗೆ ನಗಬೇಕೊ ಅಳಬೇಕೊ ತಿಳಿಯಲಿಲ್ಲ. ಆದರೆ ನಾಳಿನ ಬೆಳಗಿನ ಪತ್ರಿಕೆಯಲ್ಲಿ ಈ ವರದಿ ಪ್ರಕಟವಾಗಬೇಕೆಂಬ ಹಠ ಮೂಡಿತು. ಹಾಗೆಯೇ ಎದ್ದುಬಿಟ್ಟ. ಹೊಲದಿಂದ ಹೊಲಕ್ಕೆ ಜಿಗಿಯುತ್ತ ಬಸ್ ದಾರಿಗೆ

ಬಂದ. ಆಗಲೇ ರಾತ್ರಿ ಎಂಟು ಗಂಟೆ ಪೇಜ್ ಕಟ್ಟುವುದರೊಳಗೆ ಊರು ಮುಟ್ಟಬೇಕು. ಲಾರಿ ಹಿಡಿದು ಊರು ತಲುಪಿದ. ನೇರವಾಗಿ ಪ್ರೆಸ್ಸಿಗೆ ಬಂದ. ಇನ್ನೂ ಮುಖಪುಟ ಪ್ರಿಂಟ್ ಆಗಿರಲಿಲ್ಲ. ತನ್ನ ವರದಿ ಸಿದ್ಧಮಾಡಿಕೊಟ್ಟ....

ಬೆಳಗಾಯಿತೇಳಿ ಎಂದು ತಲೆ ಚಿಟ್ಟು ಹಿಡಿಸಿದ ಆಲಾರ್ಮ ಗಡಿಯಾರದ ತಲೆ ಕುಕ್ಕಿದ. ತಾಯಿ ಚಹ ತಂದು ಕೊಟ್ಟಳು. ಬಾಗಿಲ ಬಳಿ ಬಿದ್ದ ಪೇಪರ ಎತ್ತಿಕೊಂಡು ನೋಡಿದ. ಮುಖ ಪುಟದಲ್ಲಿ ಅವನ ವರದಿ ಪ್ರಕಟವಾಗಿತ್ತು. ಕೋಣ ಸಂಕರ!

ರಾಮಪುರ ೫ : ರಾಮಪುರದಲ್ಲಿ ನಡೆದ ಗಲಭೆ, ಹತ್ಯೆ, ಅತ್ಯಾಚಾರಕ್ಕೆ ಕೋಣ ಸಂಕರವೇ ಕಾರಣವೆಂದು ತಿಳಿದುಬಂದಿದೆ. ಇಲ್ಲಿಯ 'ಅ' ಕೋಮಿನ ಮುಖಂಡ ಹಾಗು 'ಬ' ಕೋಮಿನ ಮುಖಂಡರ ಮನೆಗಳು ಬೇರೆ ಬೇರೆ ಬೀದಿಗಳಲ್ಲಿದ್ದರೂ ಅವರ ಹೊಲಗಳು ಅಕ್ಕಪಕ್ಕದಲ್ಲಿವೆ. ಹೀಗಾಗಿ ಬಹಳ ದಿನಗಳಿಂದ ಹೊಲದ ತಗಾದೆ ಇದ್ದೇ ಇತ್ತು. ಹೊಲಗಳ ಆಚೆ ಬದಿಯಲ್ಲಿದ್ದ ಕಾಲುವೆ ನೀರನ್ನು ಕುಡಿಯಲು 'ಅ' ಕೋಮಿನ ಮುಖಂಡ ಕೋಣ ಮತ್ತು 'ಬ' ಕೋಮಿನ ಮುಖಂಡನ ಎಮ್ಮೆಯೂ ಬರುತ್ತಿದ್ದಂತೆ ಯಾರೋ ಆಗದವರು ಎಮ್ಮೆ ಮೇಲೆ ಕೋಣ ಬಿಟ್ಟು ಕಟ್ಟಿಸಿದರಂತೆ. ಇದನ್ನು ತಿಳಿದು ಕೃದ್ಧನಾದ ಎಮ್ಮೆಯ ಒಡೆಯ ಇದು ನಮ್ಮ ಜಾತಿಗೇ ಅವಮಾನ, ಇದರ ಪ್ರತೀಕಾರ ತೀರಿಸಿಕೊಳ್ಳಲೇಬೇಕು. ಕೋಣದ ಒಡೆಯನ ಕೋಮಿನ ಹೆಂಗಸರ ಮೇಲೆ ಸೇಡು ತೀರಿಸಿಕೊಂಡಾಗಲೇ ನಮ್ಮ ಕೋಮಿನವರಿಗೆ ಸಮಾಧಾನ. ಈ ಹಿನ್ನೆಲೆಯಲ್ಲಿ ಗಲಭೆಯ ಕಿಡಿ ಹೊತ್ತಿಕೊಂಡಿತಂತೆ. ಈ ಕೋಣ ಸಂಕರ ಹೇಯ ಕೃತ್ಯ, ಅತ್ಯಾಚಾರಕ್ಕೆ ಕಾರಣವಾಯಿತು! ಇಂಥ ಕ್ಷುಲ್ಲಕ ಕಾರಣಕ್ಕೆ ಅಮಾಯಕರು ಬಲಿಯಾದರು. ಏನೂ ಅರಿಯದ ಪ್ರಾಣಿಗಳು ತಮ್ಮ ಪಾಡಿಗೆ ತಾವು ಕೂಡಿ ಇವೆ. ಆದರೆ ಮನುಷ್ಯ ಪಶುವಿಗಿಂತ ಪಶುವಾಗಬೇಕಾಯಿತೆ!

* * *

ಆನಂದ ದೀರ್ಘ ಉಸಿರನ್ನೆಳೆದು, ಚಹ ಕುಡಿದು ಕಪ್ಪು ಕೆಳಗಿರಿಸಿದ. ಅವನ ತಾಯಿ ಅದನ್ನು ಎತ್ತಿಕೊಂಡು ಹೋಗುವಾಗ ಆ ಬಾರಿ ಕಪ್ಪಿನಲ್ಲಿ ಅವನಿಗೆ ಆ ಮುದುಕಿಯ ಮೊಮ್ಮಗಳ ಅಸಹಾಯಕ, ಕರುಣಾಜನಕ ಮುಖ ಬಂದು ನಿಂತಂತಾಯಿತು. 'ಇದನ್ನು ನೋಡಲಾರೆ' ಎಂದು ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡ.

○

## ೧೨. ಮದುವೆಗಿಂತ ಮುಂಚೆ

ಪ್ರತಿಯೊಬ್ಬನ ಜೀವನದಲ್ಲಿ ವಿವಾಹದ ಅನಂತರ ಒಂದು ಕತೆ, ಮದುವೆಯ ಮುಂಚೆ ಒಂದು ಕತೆಯಿರುತ್ತದೆ. ಇಲ್ಲಿ ನಾನು ಹೇಳುತ್ತಿರುವುದು ಮದುವೆ ಮುಂಚೆ ಅದು ಮದುವೆ ನಿಶ್ಚಯವಾಗಿ ಅರ್ಧಮರ್ಧ ಬ್ರಹ್ಮಚಾರಿಗಳಾಗಿ ಉಳಿದವರ ಕತೆ. ಅಂಥವರಲ್ಲಿ ನಾನೂ ಒಬ್ಬ.

ನನ್ನ ಮದುವೆ ನಿಶ್ಚಯವಾಗಿ ಇಂದಿಗೆ ಎರಡು ವರುಷಗಳು ಕಳೆಯುತ್ತ ಬಂದವು. ಇನ್ನೂ ನನ್ನ ಶ್ರೀಮತಿ ಭಾವಿಯಾಗಿಯೇ ಉಳಿದಿದ್ದಾಳೆ. ಮನೆಯ ಹೆಣ್ಣಿನ ಹಣಬರಹವೇ ಇಷ್ಟಲ್ಲವೆ? ಅನ್ನಲಿಕ್ಕೂ ಬಾರದು, ಆಡಲಿಕ್ಕೂ ಬಾರದು. ಮೊದಲೇನೊ ಇನ್ನೂ ವಯಸ್ಸಾಗಿಲ್ಲವೆಂತಲೂ ನಂತರ ಇನ್ನೊಂದು ವರುಷಕ್ಕೆ ಡಿಗ್ರಿ ಸಿಗುತ್ತದೆ, ಯಾಕೆ ಕಾಲೇಜು ಬಿಡಿಸಬೇಕೆಂತಲೂ ನನ್ನ ಮಾವ ಎರಡು ವರುಷಗಳವರೆಗೆ ಮುಂದಕ್ಕೆ ಎಳೆದು ಹಾಕಿಬಿಟ್ಟ. ಆದಕ್ಕೆ ನನ್ನ ತಂದೆಯವರೂ 'ಸೊ' ಹಾಕಿದರು. ಇನ್ನಾರ ಕೇಳಬೇಕು ಈ ನನ್ನ ಆಲಾಪವನ್ನು.

ನನ್ನ ಭಾವಿ ಶ್ರೀಮತಿಯ ಅಭಿಪ್ರಾಯವೇನೆಂದು ಕೇಳುತ್ತೀರಾ? ಅವಳೂ ಅಪ್ಪನಿಗಿಂತ ಬೆರಕಿ. "ನಾನೇನು ಹೇಳಲಿ; ನೀವು ಹೇಳಿದಂತೆ ಕೇಳ್ತೇನೆ ಆದರೆ ಇನ್ನು ಒಂದು ವರುಷ ತಡೆದುಬಿಟ್ಟರೆ ಡಿಗ್ರಿ ಸಿಗುತ್ತದೆ" ಎಂದು ಎರಡೂ ಮಾತನ್ನು ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ ಆಡುತ್ತಾಳೆ. ಪಾಪ ಅವಳಾದರೂ ಏನು ಮಾಡಬೇಕು? ಎಲ್ಲ ಅವಳಪ್ಪನಿಗೆ ತಿಳಿಯಬೇಕು ಅನ್ನಿ. ಇದು ಸದ್ಯ ನನ್ನ ಅರ್ಧಮರ್ಧ ಬ್ರಹ್ಮಚಾರಿಯ ಜೀವನದ ಕಥೆ ಹೀಗಿದೆ ಕೇಳಿ.

ನಾನು ನನ್ನ ಭಾವೀ ಶ್ರೀಮತಿಯನ್ನು ಮೊದಲು ನೋಡಿದ್ದು ನನ್ನ ಅಣ್ಣ ಅವಳ ಅಕ್ಕನನ್ನು ನೋಡಲಿಕ್ಕೆ ಹೋದಾಗ. ಏಕೆಂದರೆ ಅಕ್ಕನಿಗಿಂತ ಇವಳದೇ ಅಂದು ಓಡಾಟ ಹೆಚ್ಚಾಗಿತ್ತು. ಬಹುಶಃ ಇದು ನನ್ನ ಮಾವನ ಪ್ಲ್ಯಾನ್ ಆಗಿರಬೇಕು. ಹಿರಿಮಗಳನ್ನು ಅಣ್ಣನಿಗೆ ತೋರಿಸಿ ಇವಳನ್ನು ನಾನು ನೋಡುವಂತೆ ಏರ್ಪಾಡು ಮಾಡಿದ್ದನೋ ಏನೋ? ಅಂತೂ ನಾನು ಅಂದೇ ಬಲೆಗೆ ಬಿದ್ದೆ ಅನ್ನಿ. ನಾವು ಮನೆಗೆ ಮರಳಿದ ಮೇಲೆ "ಏನೋ ಅತ್ತಿಗೆ ಚೆನ್ನಾಗಿದ್ದಾಳೊ" ಎಂದು ಅಣ್ಣ ಕೇಳಿದ. ಆಗ ನಾನು "ಅತ್ತಿಗೆಯೂ ಚೆನ್ನಾಗಿದ್ದಾಳೆ. ಅತ್ತಿಗೆ ತಂಗಿಯೂ ಚೆನ್ನಾಗಿದ್ದಾಳೆ ಎಂದು ಹೇಳ ಹೊರಟವನು ನಾಲಿಗೆ ಕಚ್ಚಿಕೊಂಡೆ. 'ಏನೋ ಈಗಲೇ ಅವಳ ತಂಗಿಯ ಮೇಲೆ ದೃಷ್ಟಿ ಹರಿಯಿತೇನು? ಕನ್ಯೆ ನೋಡಲಿಕ್ಕೆ ಹೋದವನು ನಾನು, ನೀನಲ್ಲ" ಎಂದು ಅಣ್ಣ ಬಿದ್ದು ಬಿದ್ದು ನಗಹತ್ತಿದ.

ನನ್ನ ಅಣ್ಣನ ಮದ್ವೆಯಲ್ಲಿ ಮದುಮಗಳಿಗಿಂತ 'ಇವಳದೇ' ಶೃಂಗಾರ ಹೆಚ್ಚಾಗಿತ್ತು. ಅತ್ತಿಂದ ಇತ್ತ, ಇತ್ತಿಂದ ಅತ್ತ ಕೆಲಸವಿಲ್ಲದ ಬರಿ ಓಡಾಡುತ್ತಿದ್ದಳು. ನನ್ನ ಅಣ್ಣನ ಮದ್ವೆ ನಿಶ್ಚಯವಾಗಿ ಮೂರು ತಿಂಗಳ ಮೇಲೆ ನಡೆದುದರಿಂದ ಆಗಲೇ ಎರಡೂ ಮನೆತನಗಳಲ್ಲಿ ಸಾಕಷ್ಟು ಸಂಬಂಧ ಬೆಳೆದುಹೋಗಿತ್ತು. ಇದ್ದ ಊರಲ್ಲಿಯೇ ಮಾವನ ಮನೆ ಇದ್ದುದರಿಂದ ಆಗಾಗ ಅಣ್ಣನೂ ಹೋಗಿ ಬರುತ್ತಿದ್ದ ನಾನೂ ಹಲವಾರು ನೆಪಗಳಿಂದ ಅವರ ಮನೆಯಲ್ಲಿ ಸುತ್ತಾಡಿ ಬಂದುದು ಇದೆ. ನಮ್ಮ ಮನೆಗೂ ಅವರ ಮನೆಗೂ ಒಂದೇ ಮೈಲು ಅಂತರವಷ್ಟೆ!

ಮದುವೆ ನಡೆದದ್ದು ಹೆಣ್ಣಿನವರ ಮನೆಯಲ್ಲಿಯೇ ಆದರೆ ಎರಡೂ ಮನೆಗಳಲ್ಲಿಗಾಢ ಪರಿಚಯವಾಗಿದ್ದರಿಂದ ಹೆಣ್ಣಿನವರು ಗಂಡಿನವರು ಎಂಬ ವ್ಯತ್ಯಾಸವಿಲ್ಲದೆ ಮದುವೆ ಒಂದಾಗಿ ಸಾಗಿತ್ತು. ಮದುವೆ ಗದ್ದಲದಲ್ಲಿ ದುಡಿದು ಹಣ್ಣಾಗಿದ್ದರಿಂದ ಸ್ವಲ್ಪ ಆರಾಮ ತೆಗೆದುಕೊಳ್ಳಲಿಕ್ಕೆಂದು ಖಾಲಿಯಿದ್ದ ಕೋಣೆಯೊಂದನ್ನು ಹೊಕ್ಕೆ. ಸುದೈವದಿಂದ ಅದು ಫಲಹಾರದ ಕೋಣೆಯೇ ಆಗಿರಬೇಕೊ! ಹೊಟ್ಟೆಯು ಹಸಿದಿತ್ತು. ಉಂಡೆಯ ಡಬ್ಬಿಯನ್ನು ನೋಡಿ ಬಾಯಿ ನೀರೂರಿತು. ಮೆಲ್ಲಗೆ ಎದ್ದು ಡಬ್ಬಿಯಲ್ಲಿಯ ಒಂದು ಉಂಡೆಯನ್ನು ಎತ್ತಿಕೊಂಡು ಇನ್ನು ಮುರಿದು ಬಾಯಲ್ಲಿ ಹಾಕಿಕೊಳ್ಳಬೇಕೆನ್ನುವಷ್ಟರಲ್ಲಿ "ನೀವು ಇಲ್ಲಿದ್ದೀರಾ, ಊರು ತುಂಬ ಹುಡುಕಾಡಿದೆ" ಎನ್ನುತ್ತ ಬಂದೇ ಬಿಟ್ಟಳು ನನ್ನ ಭಾವಿ ಶ್ರೀಮತಿ. "ನನ್ನ ಉಂಡಿ ಹಾಳಾಯ್ತು" ಎಂದುಕೊಂಡು ಹೊರಳಿ ನೋಡಿದೆ. "ಉಂಡಿ ಕಳವು ಮಾಡುತ್ತಿದ್ದೀರಾ?" ಎಂದು ನಗುತ್ತ ಕೇಳಿದಳು ಅವಳು. "ಯಾಕೆ ನೀವು ಅದ್ಕೇ ಬಂದಿದ್ರಾ?" ಎಂದು ನಾನು ಪ್ರಶ್ನಿಸಿದೆ. "ಅದ್ಕೇನು ಬಂದಿಲ್ಲ. ಹೇಗೂ ಕಳವು ಮಾಡುತ್ತಿದ್ದೀರಿ, ನನಗೂ ಅರ್ಧ ಕೊಡಿ" ಎನ್ನುತ್ತ ನನ್ನ ಬಳಿ ಬಂದಳು. ನನಗೂ ಅಷ್ಟೇ ಬೇಕಿತ್ತು. "ಬನ್ನಿ ಇಬ್ಬರೂ ಆ ಡಬ್ಬೆ ಮುಗಿಸಿಬಿಡೋಣ" ಎಂದು ಕರೆದಳು ನಗುತ್ತ. ಆಗ ಅವಳೇ ಮುಂದೆ ಹೋಗಿ ಒಂದು ಡಬ್ಬೆಯಲ್ಲಿ ಅವಲಕ್ಕಿ ಉಂಡೆಯನ್ನು ತೆಗೆದುಕೊಂಡು ಬಂದಳು. ಇನ್ನು ನಾವು ಉಂಡೆಯನ್ನು ಕಡಿಯಬೇಕೆನ್ನುವಷ್ಟರಲ್ಲಿ "ನೀವು ಇಲ್ಲಿದ್ದೀರಾ? ಉಮಾ? ನಾನು ಊರು ತುಂಬ ಹುಡುಕಾಡಿದೆ" ಎನ್ನುತ್ತ ಬಂದೇ ಬಿಟ್ಟಳು ನನ್ನನ್ನು ಹುಡುಕುತ್ತ, ನನ್ನ ಬೆನ್ನಟ್ಟಿ ಬಂದ ನನ್ನ ತಂಗಿ ಸುಶೀಲಾ ಅವಳ ದನಿ ಕೇಳಿದಾಗಲೇ ನನ್ನ ಕನಸೆಲ್ಲ ನುಚ್ಚು ನೂರಾಗಿ ಹೋಯಿತು.

ನಾನು ಸ್ವಲ್ಪ ಮರೆಯಲ್ಲಿ ಕುಳಿತುದರಿಂದ ಮೊದಲು ಅವಳಿಗೆ ಕಾಣಿಸಲಿಲ್ಲ. ನನ್ನನ್ನು ನೋಡುತ್ತಲೇ "ನೀನು ಇಲ್ಲಿದ್ದೀಯಾ? ಇಬ್ಬರೂ ಕಳ್ಳರು" ಎಂದು ಜೋರಿನಿಂದ ನಗುತ್ತ ಒಮ್ಮೆ ಅವಳನ್ನು ಒಮ್ಮೆ ನನ್ನನ್ನು ನೋಡಿ "ಇಲ್ಲೇನು ಮಾಡುತ್ತಿದ್ದೀರಿ ಮದ್ವೆ ಗದ್ದಲದಲ್ಲಿ?" ಎಂದು ಕೇಳಿದಳು. ನಾನು ನಸುಕೋಪದಿಂದ "ಕತ್ತೆ ಕಾಯುತ್ತಿದ್ದೇವೆ" ಎಂದೆ. "ಎಲ್ಲಿದೆ ಕತ್ತೆ?" ಎಂದು ಅವಳು ಕೇಳಿದಾಗ ಅವಳ ಬಳಿ ನಡೆದು "ಇದೇ ಕತ್ತೆ" ಎಂದು ಅವಳ ಬಾಯಲ್ಲಿ ಉಂಡೆಯನ್ನು ತುರುಕಿದೆ. "ಹಾಂ! ಚೆನ್ನಾಗಿದೆ" ಎಂದು ತಿನ್ನುತ್ತ ಉಮಾಳ ಕಡೆಗೆ ನೋಡಿ "ಅರೆ ಇದೇನು? ಉಮಾ ಹಾಗೇ ನಿಂತಿದ್ದಾಳೆ ಅವಳ ಬಾಯಿಗೆ

ಸ್ವಲ್ಪ ಸಿಹಿ ಮಾಡಬಾರದೆ?" ಎಂದು ಅರ್ಥಪೂರ್ಣವಾಗಿ ಕೇಳಿದಳೋ ಏನೊ? ಅಷ್ಟಕ್ಕೆ ಉಮಾಳ ಮುಖ ಕೆಂಪೇರಿತು. ಲಜ್ಜೆಯಿಂದ "ಹೋಗಿ ನಿಮ್ದೊಂದು" ಎಂದವಳೆ ಓಡಿಯೇ ಬಿಟ್ಟಳು. ಆಗ ನಾನು ಹತಾಶನಾಗಿ "ಈಗಾದರೂ ನಿನ್ನ ಹೊಟ್ಟೆ ತಣ್ಣಗಾಯಿತೆ? ಅವಳನ್ನು ಓಡಿಸಿ ಬಿಟ್ಟೆ" ಎಂದು ಕೇಳಿದೆ ಸೂಶಿಯನ್ನು. ಅವಳು ನಗುತ್ತ "ಅಳಬೇಡ ಅವರನ್ನು ಕರೆದುಕೊಂಡು ಬರ್‍ತೇನೆ" ಎಂದು ಓಡಿದಳು. ಸೂಶಿ ಮತ್ತು ನಾನು ಅತಿ ಸಲುಗೆಯಿಂದ ಬೆಳೆದವರು. ಸದಾ ಜಗಳಾಡುತ್ತಿರುತ್ತೇವೆ. ನನ್ನ ಭಾವಿ ಶ್ರೀಮತಿ ಹಾಗೂ ಸೂಶಿ ಒಂದೇ ವಯಸ್ಸಿನವರು.

ಇಲ್ಲಿಂದಲೇ ಪ್ರಾರಂಭವಾಗುತ್ತಿದೆ ಅನ್ನಿ ನನ್ನ ಪ್ರಣಯದ ಕತೆ. ಆಮೇಲೆ ಹಲವಾರು ಸಲ ನಾವು ಕೂಡುವ ಸಂದರ್ಭಗಳು ಒದಗಿ ಬಂದವು. ಆದರೆ ಆಗೇನು ನಮ್ಮಲ್ಲಿ ಪ್ರಣಯದ ಸರಸ ಸಲ್ಲಾಪಗಳು ನಡೆಯಲಿಲ್ಲ. ಬರಿ ಆಫೀಸು, ಕಾಲೇಜಿನ ವಿಷಯವೇ ಆಯಿತು.

ನನ್ನ ಅತ್ತಿಗೆಗೆ ಆಗಲೇ ನಮ್ಮ ಗುಪ್ತಪ್ರಣಯದ ಸುಳಿವು ಹತ್ತಿತ್ತು. ಒಂದು ದಿನ ನಾನು ಆಫೀಸಿನಿಂದ ಮನೆಗೆ ಮರಳಿದಾಗ ಅವರು ಮನೆತುಂಬ ಗಲಾಟೆ ನಡಿಸಿದ್ದರು. "ಏನಾಯಿತು" ಎಂದು ಕೇಳಿದೆ. ನನ್ನದಷ್ಟು ಬಿಟ್ಟು ಉಮಾಳ ಫೋಟೋ ಯಾರೋ ಕತ್ತರಿಸಿಕೊಂಡಿದ್ದಾರೆ... ಎಂದು ಕೂಗಾಡ ಹತ್ತಿದರು. "ಸ್ವಲ್ಪ ಮೆಲ್ಲಗೆ ಮಾತಾಡಿ ಅತ್ತಿಗೆ. ನಿಮ್ಮ ದೇಹದಂತೆ ನಿಮ್ಮ ದನಿಯೂ ಹಗುರವಾಗಿದೆ" ಎಂದೆ. "ಹಾಗಾದರೆ ಕಳವು..." ಎನ್ನುವಷ್ಟರಲ್ಲಿ ನನ್ನ ತಂದೆ "ಏನು ಕಳವಾಗಿದೆ" ಎನ್ನುತ್ತ ಒಳಗೆ ಬಂದೇಬಿಟ್ಟರು. ನಾನು ಸರಕ್ಕನೆ ಮರೆಯಲ್ಲಿ ಸರಿದು ಎರಡು ಕೈಜೋಡಿಸಿ 'ಪ್ಲೀಜ್' ಎನ್ನುತ್ತ ನಮಸ್ಕರಿಸಿದೆ ಅತ್ತಿಗೆಗೆ. ಆಗಂತೂ ಅವರಿಗೆ ಹಿಡಿಸಲಾರದಷ್ಟು ನಗೆ ಬಂತು. ಅದನ್ನು ತಡೆಹಿಡಿದುಕೊಂಡು ಒಂದು ಸಲ ನನ್ನ ಕಡೆಗೆ ನೋಡಿ "ಶಾಮಣ್ಣ" ಎಂದಾಗ "ಏನು ಮಾಡಿದ ಶಾಮಣ್ಣ" ಎಂದರು ನನ್ನ ತಂದೆ. ಆಗ ಅತ್ತಿಗೆ ಮತ್ತೆ ನನ್ನ ಕಡೆಗೆ ನೋಡಿ ನಕ್ಕು "ಏನಿಲ್ಲ ಕಪಾಟಿನಲ್ಲಿದ್ದ ಬಾಳೆಹಣ್ಣುಗಳನ್ನು ಕಳವಿನಿಂದ ತಿಂದಿದ್ದಾರೆ ಎಂದರು". "ಹೇಗೂ ಅವನ ಹೊಟ್ಟೆಗಂತೂ ಸಾಲದು" ಎಂದು ಹೊರಗೆ ಹೊರಟುಹೋದರು.

ಅವರು ಹೋದ ಮೇಲೆ "ಇವತ್ತು ಎಲ್ಲಾ ಬಯಲಿಗೆ ಬಿತ್ತು, ಉಮಾ ಬರಲಿ ಕೇಳ್ತೇನೆ" ಎಂದರು ನಗುತ್ತ ಅತ್ತಿಗೆ. ಆಗಂತೂ ನನಗಾದ ಆನಂದಕ್ಕೆ ಮೇರೆಯೇ ಇರಲಿಲ್ಲ. "ಅತ್ತಿಗೆ ಅತ್ತಿಗೆ... ಇವತ್ತು ಸಿನೆಮಾಕ್ಕೆ ಹೋಗೋಣವೇ" ಎಂದುದೇ ದೇಶಾವರ ನಗು ಬೀರಿದೆ. "ಇದೇನು ಈಗಲೇ ಶುರುಮಾಡಿ ಬಿಟ್ರಲ್ಲ ಲಂಚ ಕೊಡಲಿಕ್ಕೆ. ಇರಲಿ ಮೊದಲು ಚಹ ಕೊಡ್ತೇನೆ ಬನ್ನಿ..." ಎಂದು ಕರೆದರು. ನಾನು ನಿಧಾನವಾಗಿಯೇ ಅವರನ್ನು ಹಿಂಬಾಲಿಸಿದೆ.

ಅಂತೂ ಇಂಥ ಹಲವಾರು ಸುದ್ದಿಗಳು ನನ್ನ ತಂಗಿ ಹಾಗೂ ನನ್ನ ಭಾವೀ ಶ್ರೀಮತಿಯ ತಂದೆಯ ಕಿವಿಯವರೆಗೂ ತಲುಪಿದವು. ನನ್ನ ಅತ್ತಿಗೆಯೂ ನಮ್ಮ ತಂದೆಗೆ 'ರೆಕಮೆಂಡ್' ಮಾಡಿದರು. ಒಂದು ದಿನ ನನ್ನ ಮಾವ ಆ ಮಾತು ಈ ಮಾತು ಆಡುತ್ತ ನನ್ನ ತಂದೆಯವರ ಮುಂದೆ ಈ ಮಾತನ್ನು ಉರುಳಿಸಿಬಿಟ್ಟರು. "ಇಬ್ಬರೂ ಒಪ್ಪಿದ್ರೆ ಮಾಡಿಕೊಳ್ಳಲಿ, ನಂದೇನು

ಅಭ್ಯಂತರವಿಲ್ಲ" ಎಂದರು ನನ್ನ ತಂದೆ. ಕೋಣೆಯಲ್ಲಿ ಓದುವವನಂತೆ ನಟಿಸುತ್ತ ಮಲಗಿದ ನಾನು ಆ ಮಾತುಗಳನ್ನು ಕೇಳಿ ಮುಗಿಲಿಗೆ ನೆಗೆದೆ.

ಮದುವೆ ನಿಶ್ಚಯವಾದ ಮೇಲೆ ಅವಳು ಮತ್ತಷ್ಟೂ ಗಂಭೀರಳಾದಳು. ಮಾತಿಲ್ಲ, ಕಥೆಯಿಲ್ಲ. ಬರಿ ಗಂಟು ಮುಖ ಹಾಕಿಕೊಂಡು ಸುಳಿದಾಡುತ್ತಿದ್ದಳು. ಏನಾಗಿದೆ ಇವಳಿಗೆ ಹೀಗೇಕೆ ಇರುತ್ತಾಳೆ? ಈ ಹುಡುಗಿಯರ ಅಂತರಂಗ ತಿಳಿಯೋದೇ ಕಷ್ಟ. ಎಂದುಕೊಂಡು ಮೆಲ್ಲಗೆ ಅತ್ತಿಗೆಯ ಮುಂದೆ ಈ ವಿಷಯವನ್ನು ಜಾರಿಸಿದೆ. ಅವರು ನಗುತ್ತ "ಇಲ್ನೋಡಿ ನೀವು ಗಂಡಸರು ನಿಮಗೆ ಏನೂ ತಿಳಿಯೊಲ್ಲ. ಬರಿ ನೀವು ಹೇಳಿದ ಹಾಗೆ ಕುಣಿಯಬೇಕು ಅಂತೀರಿ. ಅದು ಹೇಗೆ ಸಾಧ್ಯ? ಹೆಣ್ಣಿಗೆ ನಾಚಿಕೆ ನಯ ಎಂಬುದಿರುತ್ತದೆ ತಿಳಿಯಿತೆ?" ಎಂದರು. ಇದೆಂಥ ನಾಚಿಕೆ? ಅಂದರೆ ಗಂಡಸರು ನಾಚಿಕೆಗೇಡಿಗಳೋ! ಇದ್ದರೂ ಇರಬಹುದು.

ನನಗೊಂದು ದಿನ ಒಳ್ಳೆಯ ಸಂದರ್ಭ ದೊರೆಯಿತು. ನನ್ನ ಜೀವನದಲ್ಲಿಯೇ ಸುವರ್ಣಾಕ್ಷರದಲ್ಲಿ ಬರೆದಿಡಬೇಕೆಂದರೂ ನಡೆಯುತ್ತದೆ. ಅಂದು ಸಾಯಂಕಾಲ ಆಫೀಸಿನಿಂದ ಮನೆಗೆ ಬಂದು ಚಾ ಕುಡಿದು ಹಾಸಿಗೆ ಮೇಲೆ ಉರುಳಿದ್ದೆ. ಮನೆಯಲ್ಲಿ ನನ್ನ ಹೊರತು ಯಾರೂ ಇರಲಿಲ್ಲ. ನನ್ನ ಅತ್ತಿಗೆಯೂ ಸಹ ಎಲ್ಲಿಯೋ ನೆರೆಹೊರೆಯವರ ಮನೆಗೆ ಹೋಗಿದ್ದರು.

ಅಷ್ಟರಲ್ಲಿ ಅಟ್ಟದ ಮೆಟ್ಟಿಲುಗಳನ್ನೇರಿ ಯಾರೋ ಬರುತ್ತಿರುವ ಸದ್ದಾಯಿತು. ಆ ಸದ್ದಿನೊಂದಿಗೆ ಬಳೆಗಳ ಝುಣತ್ಕಾರವೂ ಕೇಳಿಸಿತು. ಆಗಂತೂ ನನ್ನ ಹೃದಯವೀಣೆಯನ್ನು ಮೀಟಿದಂತಾಯಿತು. ಕಿವಿ ಕಣ್ಣು ಮನ ಎಲ್ಲವೂ ಎಚ್ಚತ್ತವು. ಬಾಗಿಲು ಕಿರ್ರನೆ ತೆರೆದಾಗ ಮುಡಿದ ಮಲ್ಲಿಗೆ ಹೂವಿನ ಸುಗಂಧ ಮನೆತುಂಬ ತುಂಬಿಸಿತು. ನನ್ನ ಊಹೆ ನಿಜವಾಗಿತ್ತು ಬಂದವಳು ನನ್ನ ಭಾವಿ ಶ್ರೀಮತಿ. ಆಗ ನಾನು ಬೇಕಂತಲೇ ಕಣ್ಣು ಮುಚ್ಚಿಕೊಂಡು ಮಲಗಿದೆ. ಅವಳು ಮೊದಲು ನನ್ನನ್ನು ನೋಡಿಯೂ ನೋಡದಂತೆ ನಟಿಸಿ ಅಡುಗೆಮನೆಯೊಳಗೆ ಹೋದಳು. ಅಲ್ಲಿ ಅಕ್ಕ ಇರಲಿಲ್ಲ. ಅವಳು ಏನು ಮಾಡುತ್ತಾಳೆ ನೋಡಬೇಕೆಂದು ಒಳಗಿನಿಂದ ವೀಕ್ಷಿಸತೊಡಗಿದ್ದೆ.

ಮನೆಯಲ್ಲಿ ಯಾರೂ ಇಲ್ಲದ್ದನ್ನು ನೋಡಿ ನನ್ನ ಹತ್ತಿರ ಬಂದು "ಏಳ್ರಿ... ಏಳ್ರಿ..." ಎರಡು ಸಲ ಮೆಲ್ಲಗೆ ಕೂಗಿದಳು. ಆಗಲೂ ನಾನು ಸುಮ್ಮನೆ ನಿದ್ರೆ ಹತ್ತಿದವರ ಹಾಗೆ ಮಲಗಿದ್ದೆ. "ಸಾಕು ಏಳಿ... ನಿಮ್ಮ ಡೋಂಗಿ ನಿದ್ರೆ, ನನಗೆಲ್ಲ ಗೊತ್ತಿದೆ. ಅಕ್ಕ ಎಲ್ಲಿದ್ದಾಳೆ ಹೇಳಿ?" ಎಂದು ಅಲ್ಲಿಯೇ ಬಿದ್ದ ಕಟ್ಟಿಗೆಯಿಂದ ನನಗೆ ತಿವಿದು ಎಬ್ಬಿಸಿದಳು. ಆಗಲೂ ನಾನು ಸುಮ್ಮನಿದ್ದೆ. "ನೀವು ಹೇಳದಿದ್ದರೆ ಬಿಡಿ, ನಾನು ಹೋಗ್ತೇನೆ" ಎಂದು ತುಸು ಕೋಪದಿಂದ ಹೊರಡಲನುವಾದಳು. ಇನ್ನು ಹೀಗೆಯೇ ಬಿಟ್ಟರೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಕ್ಕಿಲ್ಲವೆಂದು ಚಟ್ಟನೆ ಎದ್ದು ಅವಳ ಕೈ ಹಿಡಿದೆಳೆದೆ. ಅವಳು ಕೈ ಕೊಸರಿಕೊಳ್ಳುವಂತೆ ನಟಿಸುತ್ತ "ಬಿಡಿ ಅಂದ್ರೆ" ಎಂದು ಹೊರಳಿ ನಿಂತಳು. "ಊಹುಂ!" ಎಂದೆ. ನಾನು "ಇದೇನು ಮಕ್ಕಳ ಹಾಗೆ ಮಾಡ್ತೀರಾ ಕೈ ಬಿಡಿ. ಅಕ್ಕ ಇಲ್ವೆ?" ಎಂದಳು. "ಅಕ್ಕ ಬೇಕೋ ಅಕ್ಕನ

ಮೈದುನ ಬೇಕ ನಿನಗೆ?" ಎಂದೆ. ಅವಳ ಮುಖದಲ್ಲಿ ನಗೆ ಮೂಡಿತು. ಕೈ ಬಿಡಿಸಿಕೊಳ್ಳಲು ಯತ್ನಿಸದೆ ಸುಮ್ಮನೆ ನಿಂತಿದ್ದಳು.

"ಯಾಕೆ ನನ್ನೊಂದಿಗೆ ಮಾತಾಡಬಾರದೆಂದು ಪ್ರತಿಜ್ಞೆ ಮಾಡಿದ್ದೀಯಾ?"

"ಊಹುಂ ಪಾಪ, ನೀವು ನಿದ್ರೆ ಮಾಡ್ತಿದ್ರಿ."

"ಕಟ್ಟೆಗೆಯಿಂದ ತಿವಿದು ಎಬ್ಬಿಸಿ ಈಗ ಹೀಗೆ ಮಾತಾಡ್ತೀಯಾ?"

"ಮತ್ತೇನು?"

"ಬಾ ಇಲ್ಲಿ ಕುಳಿತುಕೊ" ಎಂದು ಕರೆದೆ. ಅವಳು ಮೆಲ್ಲನೆ ನನ್ನ ಬಳಿ ಮಂಚದ ಮೇಲೆ ಕುಳಿತುಕೊಂಡಳು. ನನಗರಿವಿಲ್ಲದೆ ನನ್ನ ಕೈಗಳು ಅವಳ ಕಂಕುಳನ್ನು ಬಳಸಿ ಇನ್ನಷ್ಟು ಹತ್ತಿರ ಎಳೆದುಕೊಂಡರೂ ಅವಳು ಪ್ರತಿಭಟಿಸಲಿಲ್ಲ. ಇದು ನನ್ನ ಪ್ರಥಮ ಅನುಭವ. ಪ್ರಥಮ ಜಯ.

"ಉಮಾ... ನನ್ನನ್ನು ಪ್ರೀತಿಸ್ತೀಯಾ?" ಎಂದು ಕೇಳಿದೆ.

"ಅದನ್ನು ನೀವು ಕೇಳಬೇಕೆ? ನನ್ನ ಜನ್ಮಜನ್ಮದ ಭಾಗ್ಯ ದೇವರು ನೀವು" ಎಂದು ನುಡಿದಳು.

ನಾನು ಎರಡೂ ಕರಗಳಿಂದ ಅವಳ ಗಲ್ಲವನ್ನು ಹಿಡಿದು ಮುಖವನ್ನು ನನ್ನ ಕಡೆಗೆ ತಿರುಗಿಸಿಕೊಂಡು ನೋಡಿದೆ. ಅವಳ ಕಣ್ಣುಗಳು ಹೊಳೆಯುತ್ತಿದ್ದವು. ಅವಳಲ್ಲಿ ಪ್ರೇಮದ ಸಮುದ್ರವೇ ಅಡಗಿದಂತಿತ್ತು. ಗಲ್ಲ ಕೆಂಪೇರಿತ್ತು. ಕೆಂದುಟಿಗಳು ನನ್ನ ತುಟಿಗಳನ್ನು ಆಹ್ವಾನಿಸುತ್ತಿರುವಂತೆ ಭಾಸವಾಯಿತು. ಒಮ್ಮೆಲೆ ಚುಂಬಿಸಬೇಕೆಂದು ಹಾತೊರೆಯಿತು. ಆದರೆ ಪ್ರಣಯಪಥದಲ್ಲಿ ಅನನುಭವಿಯಾಗಿದ್ದುದರಿಂದ ಹೇಗೆ ಮುಂದುವರಿಯಬೇಕು ತಿಳಿಯಲಿಲ್ಲ. ಅವಳ ಅಭಿಪ್ರಾಯವನ್ನು ತಿಳಿದುಕೊಳ್ಳದೆ, ಒಮ್ಮೆಲೆ ಚುಂಬಿಸಿಬಿಟ್ಟರೆ ತಪ್ಪಲ್ಲವೆ? ಹಾಗಾದರೆ ಅವಳನ್ನು ಕೇಳಲೆ? ಏನೆಂದು ಕೇಳಬೇಕು? ಛೇ ಅದೇನು ಕೇಳುವ ಮಾತೆ? ಮತ್ತೆ ಹ್ಯಾಗೆ ? ಪ್ರಣಯಿಗಳು ಏನು ಮಾಡುತ್ತಾರೆ ಹಾಗಾದರೆ?

ಒಂದೂ ಹೊಳೆಯಲಿಲ್ಲ. ನಾನೇ ಗಟ್ಟಿ ಧೈರ್ಯಮಾಡಿ "ಉಮಾ...." ಎಂದೆ ಉದ್ವೇಗದಿಂದ.

"ಆಂ"

"ಉಮಾ"

"ಏನು?"

"ಉಮಾ?...."

"ಏನು ಹೇಳಿ"

"ಉಮಾ ನಿನ್ನ ತು....ಟಿ...ಗಳನ್ನು.... ಚುಂಬಿಸಲೆ?" ಎಂದು ನುಡಿದರು. ಸರಕ್ಕನೆ ಕ್ಷಣಹೊತ್ತು ಕಣ್ಣು ಮುಚ್ಚಿ ಕಣ್ಣು ತೆರೆದೆ. ಅವಳ ಮುಖ ಲಜ್ಜೆಯಿಂದ ಕೆಂಪಾಗಿತ್ತು. ಕಣ್ಣುಗಳು ಇಂಗಿತವನ್ನು ಹೇಳುತ್ತಿದ್ದವು. ತುಟಿಗಳು ಗುಲಾಬಿ ದಳಗಳಂತೆ ಅರಳಿದ್ದವು.

"ಏಕೆ ಉಮಾ ನಿನಗೆ.... ಇಷ್ಟ....ವಿಲ್ಲವೇ?"

"ಮದ್ವೆಯಾದ ಮೇಲೆ..." ಅವಳು ಲಜ್ಜೆಯಿಂದ ಮೆಲ್ಲಗೆ ನುಡಿದಳು. ಆಗ ನಾನು ಏನು ಹಿಂದುಮುಂದು ನೋಡಿದೆ.

"ಆದರಲ್ಲೇನಿದೆ ಉಮಾ ಬರಿ.... ಚು.... ಅದೇನು ನಿಷೇಧವೆ?" ಎಂದು ಕೇಳಿದೆ. "ಕಾಯಿಲೆ ಬಿದ್ದವರಿಗೆ ಕೆಲವೊಂದು ವಸ್ತುಗಳು ನಿಷೇಧವಿರುವುದಿಲ್ಲವೆ, ಹಾಗೆ ಚುಂಬನವೂ ಮದುವೆಯಾಗದವರಿಗೆ ನಿಷೇಧವೇ?"

ಆಗಂತೂ ಅವಳ ಮುಖ ಇನ್ನಷ್ಟೂ ಕೆಂಪಗಾಯಿತು. ಏನೂ ಮಾತಾಡದೇ ಮುಖ ಕೆಳಗೆ ಮಾಡಿ ಕುಳಿತಳು. ಅವಳ ಗದ್ದ ಹಿಡಿದೆತ್ತಿ "ಏನು ಉಮಾ" ಎಂದೆ. ಅವಳ ತುಟಿ ಏನೋ ಹೇಳಬೇಕೆಂದಿದ್ದವು. ನಾಚಿಕೆ ಬಂತೋ ಏನೊ? ಸರಕ್ಕನೆ ತನ್ನ ಕರಗಳಿಂದ ಮುಖ ಮುಚ್ಚಿಕೊಂಡಳು. ಆಗ ನನಗರಿವಾಯಿತು. ಯಾವ ಹೆಣ್ಣಾದರೂ ತನ್ನ ಪ್ರಿಯಕರನ ಮುಂದೆ 'ಹೂಂ' ಎನ್ನುತ್ತಾಳೆಯೇ?

ಅಂತೂ ಜಯಶಾಲಿಯಾದೆ. ಮೂಗುಗಳ ಕಾದಾಟದಲ್ಲಿ ಸ್ವಲ್ಪ ಗಾಸಿಯಾಗಬೇಕಾಯಿತು. ಆದರೆ ಎಂಥ ಅವರ್ಣನೀಯ ಆನಂದ. ನೀಲಮಯ ಆಗಸದಲ್ಲಿ ತಾರೆಗಳ ನಾವೆಯನ್ನೇರಿ ಓಡಾಡುತ್ತಿರುವಂತೆ ಭಾಸವಾಯಿತು. ಏನೋ ನಿಶೆ ತರುವಂಥ ಸುಗಂಧ ಮನದಲ್ಲಿ ಮುಸುಕಿಕೊಂಡಿತು.

ವಾರದಲ್ಲಿ ಒಂದೆರಡು ಸಲ ಇಂಥ ಸುಸಂದರ್ಭಗಳು ದೊರೆಯುತ್ತವೆನ್ನಿ. ಅವುಗಳನ್ನು ಪಡೆಯಬೇಕಾದರೆ ಒಂದು ಯಜ್ಞವನ್ನೇ ಮಾಡಬೇಕಾಗುತ್ತದೆ. ನನ್ನ ಮನೆ ಕೇಳ್ತೀರಾ ನಂದಗೋಕುಲ. ಸದಾ ಮಕ್ಕಳು ಮರಿಗಳಿಂದ ತುಂಬಿರುತ್ತದೆ. ಇದ್ದ ನಾಲ್ಕೈದು ಕೋಣೆಗಳಲ್ಲಿ ಮನೆ ತುಂಬ ಜನ ತುಂಬಿರುವಾಗ ಗೌಪ್ಯವೆಲ್ಲಿಂದ ಬರಬೇಕು? ಅದರಲ್ಲಿಯೇ ಉತ್ತಮವೆಂದರೆ ನನ್ನ ಕೋಣೆ. ಆದರೆ ಅವಳು ಅಲ್ಲಿಗೆ ಬರಬೇಕಾದರೆ ನನ್ನ ಅತ್ತಿಗೆ, ಅಣ್ಣ, ತಾಯಿ ತಂದೆ ಎಲ್ಲರ ಕಣ್ಣನ್ನು ತಪ್ಪಿಸಿ ಬರಬೇಕು. ಹಾಗೆ ತಪ್ಪಿಸಿ ಬಂದಳೆನ್ನುವಷ್ಟರಲ್ಲಿ 'ಉಮ್ಮಾಮಾಯಿ ಉಮ್ಮಾಮಾಮಿ' ಎಂದು ಧಾಳಿಯಿಡುತ್ತದೆ ಗಿಳಿವಿಂಡು. ಅದರಲ್ಲಿಯೂ ನನ್ನ ಅಕ್ಕನ ಮಕ್ಕಳು ಒಂದರಕಿಂತ ಒಂದು ತುಂಟತನದಲ್ಲಿ ಶ್ರೇಷ್ಠ. ಸುದೈವದಿಂದ ನನ್ನ ಅಣ್ಣನ ಮಗ ಒಂದು ವರುಷದ ಕೂಸು. ಇದರೊಂದಿಗೆ ನಮ್ಮ ನೆರೆಹೊರೆಯವರ ಮಕ್ಕಳಿಗೂ ನಮ್ಮ ಮನೆಯೇ ಆಶ್ರಯ. ಹೀಗಾಗಿ ಕೇಳಬೇಕೆ, ಗದ್ದಲಕ್ಕೆ?

ಒಂದು ದಿನ ಸ್ವಾರಸ್ಯವಾದ ಪ್ರಸಂಗ ನಡೆಯಿತು. ನನಗೆ ಏನೊ ಒಮ್ಮೊಮ್ಮೆ ಮನಸ್ಸು ಬಂದರೆ ಆಫೀಸಿನಿಂದ ಬಂದ ಮೇಲೆ ಮಕ್ಕಳನ್ನೆಲ್ಲ ಕೂಡಿಸಿಕೊಂಡು ಓದು ಹೇಳುತ್ತೇನೆ. ಅಂದು ಎಲ್ಲರನ್ನು ಕೂಡಿಸಿಕೊಂಡಿದ್ದೆ. ಇನ್ನು ಪಾಠವನ್ನು ಆರಂಭಿಸಬೇಕೆನ್ನುವಷ್ಟರಲ್ಲಿ ಅಕಸ್ಮಾತ್ತಾಗಿ ನನ್ನ ಭಾವಿ ಶ್ರೀಮತಿ ಚಿತ್ತೈಸಿಬಿಟ್ಟಳು. ಬಿಡಿದಿನದಲ್ಲಿ ಚಾನ್ಸ್ ಸಿಕ್ಕಿತೆಂದು ಸಂತೋಷಗೊಂಡೆ. ಆದರೆ ಮಕ್ಕಳೆಲ್ಲ "ಮಾಮಾ ಓದು ಹೇಳು, ಮಾಮಾ ಓದು ಹೇಳು" ಎಂದು ಆರಂಭಿಸಿಯೇ ಬಿಟ್ಟರು. ಆಗ ನಾನು ಅವರನ್ನು ರಮಿಸುತ್ತ "ಇಲ್ನೋಡಿ ಇವತ್ತು

ನಿಮಗೆಲ್ಲ ರಜೆ. ಆಡಲಿಕ್ಕೆ ಹೋಗಿ ನಾಳೆ ಓದು ಹೇಳ್ತೇನೆ" ಎಂದೆ. "ಇವತ್ತೇಕೆ ರಜೆ ಮಾಮ, ಈಗ ಓದು ಹೇಳ್ತೀನಿ ಅಂದಿದ್ದೆ" ಎಂದು ಸುರೇಶ ತಗಾದೆ ತೆಗೆದೇಬಿಟ್ಟ.

"ಏನೂ ಇಲ್ಲ, ಇವತ್ತು ರಜೆ ಅಂದ್ರೆ ಆಯ್ತಾ?"

"ಊಹುಂ! ಇವತ್ತು ನಮಗೆ ಓದು ಹೇಳಲೇಬೇಕು" ಹುಡುಗರು ಸಂಪು ಹೂಡಿಯೇ ಬಿಟ್ಟರು. ನನಗೆ ಏನು ಹೇಳಬೇಕೊ ತಿಳಿಯದಾಯಿತು. ನಿಮಿಷ ನಿಮಿಷಕ್ಕೂ ಅವಳನ್ನು ನೋಡಬೇಕು ಕೂಡಬೇಕು ಎನ್ನುವ ಆಶೆ ಆವರಿಸತೊಡಗಿತ್ತು.

ಹೀಗಾದರೆ ಈ ಹುಡುಗರು ಕೇಳುವುದಿಲ್ಲವೆಂದು "ನನಗೆ ತಲೆಶೂಲೆ ಎದ್ದಿದೆ, ಹೋಗಿ ಆದೀತೆ" ಎಂದು ಬೆದರಿಸಿದೆ. ಒಬ್ಬೊಬ್ಬರೇ ಸ್ಥಳಕಿತ್ತರು. ಎಲ್ಲರೂ ಹೋದಮೇಲೆ ಸುರೇಶ ಬಂದು "ಉಮಾಮಾಮಿ ಬಂದಾಳ ಅದ್ಕಾನ?" ಎಂದು ಕೇಳಬೇಕೆ? "ಇರಲಿ ನೀ ಹೋಗೋ" ಎಂದು ರೇಗಿದೆ.

ಅಷ್ಟರಲ್ಲಿ ಅವಳು ಅಡುಗೆ ಮನೆಯಲ್ಲಿ ಎಲ್ಲರ ಮಧ್ಯ ಹರಟುತ್ತ ಕುಳಿತುಬಿಟ್ಟಳು. ಇನ್ನು ಹ್ಯಾಗೆ ಅವಳನ್ನು ಕರೆಯುವುದು. ತತ್‌ಕ್ಷಣವೇ ಒಂದು ಪ್ಲ್ಯಾನ್ ಹೊಳೆಯಿತು. ನೇರವಾಗಿ ಬಚ್ಚಲ ಮನೆಗೆ ಹೋದೆ. ಅದು ಅಡುಗೆಮನೆಗೆ ಹೊಂದಿದೆ. ಅದರ ಬಾಗಿಲ ಬಳಿ ನಿಂತು "ನನ್ನ ಎರಡೂ ಕೈ ಹೊಲಸಾಗಿದೆ ಯಾರಾದರೂ ನೀರು ಹಾಕಬನ್ನಿ" ಎಂದು ಕರೆದೆ. ಎಲ್ಲರೂ ಮುಗುಳ್ನಗೆ ನಗುತ್ತ ತಮ್ಮ ತಮ್ಮ ಕೆಲಸದಲ್ಲಿ ತೊಡಗಿಬಿಟ್ಟರು. ಅವರ ಮುಖವಂತೂ ಅರಳಿದ ಹೂವಿನಂತಾಗಿತ್ತು. "ಯಾಕೆ ಯಾರಿಗೂ ಕೇಳಿಸಲಿಲ್ಲವೆ?" ಎಂದು ಮತ್ತೆ ನಾನು ಕೇಳಿದೆ. ಆಗ ನನ್ನ ತುಂಟ ತಂಗಿ "ನಾನು ಹಾಕಲೇ ಶಾಮಣ್ಣ" ಎಂದು ಕೇಳಿದಳು. "ನೀನು ಸುಮ್ಮನೆ ನಿನ್ನ ಕೆಲಸ ಮಾಡು ಸಾಕು" ಎಂದೆ. ನನ್ನ ಇಂಗಿತವನ್ನರಿತು ನನ್ನ ತಾಯಿ "ಹೋಗು ಉಮಾ, ನೀರು ಬೇಕಂತೆ ಹಾಕು ಹೋಗು" ಎಂದಳು. ಅವಳು ಲಜ್ಜೆಯಿಂದ ಹಾಗೆಯೇ ಕುಳಿತಿದ್ದಳು. ನನ್ನ ತಾಯಿ ಅತ್ತಿಗೆ ಎರಡು ಮೂರು ಸಲ ಹೇಳಿದ ಮೇಲೆ ಎದ್ದು ಬಂದಳು. ನಾನು ಒಳಗೆ ಸರಿದು ನಿಂತುಕೊಂಡೆ.

ಅವಳು ತಂಬಿಗೆಯಲ್ಲಿ ನೀರನ್ನು ತುಂಬಿಕೊಂಡು "ಕೈ ಮುಂದೆ ಮಾಡಿರಿ ನೀರು ಹಾಕ್ತೀನಿ" ಎಂದಳು ಮೆಲ್ಲಗೆ. ನಾನು ಸರಕ್ಕನೆ ಕೈ ಹಿಡಿದು ಆಚೆಗೆ ಎಳೆದುಕೊಂಡೆ.

"ಬಿಡಿ ಅಂದ್ರೆ. ಹೊರಗೆ ಎಲ್ಲರೂ ಕುಳಿತುಕೊಂಡಿದ್ದಾರೆ"

"ಇರಲಿ ಬಿಡೆ, ಇದ್ದರೇನಾಯಿತು"

"ನಿಮಗೇನು ನನಗೆ ಚೇಷ್ಟೆ ಮಾಡ್ತಾರೆ ಬೇಗ ಕೈ ನೀಡಿರಿ ನೀರು ಹಾಕ್ತೀನಿ" ನಾನು ಕೈ ಮುಂದೆ ಮಾಡಿದೆ.

"ಇದೇನು ಕೈಗೆ ಏನೂ ಆಗಿಲ್ಲ ಬೇಕಂತಲೇ"

"ಮತ್ತೆ ಇಲ್ಲದಿದ್ದರೆ ನಿನ್ನ ದರುಶನ ಹೇಗೆ....?"

"ಸಾಕು ಹೋಗಿ ನಿಮ್ದೊಂದು...."

"ಒಂದೇ ಸಲ.... ಪ್ಲೀಜ...."

"ಶೀ.... ಬಿಡೀ ಅಂದ್ರೆ...." ಎಂದು ಕೊಸರಿಕೊಂಡು ಓಡಿ ಹೋದಳು. ಅಷ್ಟರಲ್ಲಿಯೇ ನಾನು ಒಂದು ಚಾನ್ಸ ಗಿಟ್ಟಿಸಿಕೊಂಡಿದ್ದೆ..."

ಕಾಶಿಗೆ ಹೋದರೂ ಶನೀಶ್ವರ ಕಾಟ ತಪ್ಪಲಿಲ್ಲ ಎನ್ನುವಂತೆ ನಾವು ಹೊರಗಡೆಯಾದ್ರು 'ಮೀಟ್' ಮಾಡೋಣ ಅಂದ್ರೆ ತೊಂದರೆ ತಪ್ಪುತ್ತಿಲ್ಲ. ಆಫೀಸಿನಲ್ಲಿ ಆವತ್ತು ಬಹಳ ಬೇಸರಬಂದು ಹೋಗಿತ್ತು. ಅರ್ಧ ದಿನ ರಜ ಹಾಕಿ ಭಾವಿ ಶ್ರೀಮತಿಯನ್ನು ಕರೆದುಕೊಂಡು ಮ್ಯಾಟ್ನಿಗಾದ್ರೂ ಹೋಗೋಣವೆಂದು ಅವಳ ಕಾಲೇಜಿಗೆ ಹೋದೆ.

ನನ್ನನ್ನು ನೋಡುತ್ತಲೇ ಹೊರಗೆ ಬಂದು "ಏನು ಕೆಲಸವಿತ್ತೆ?" ಎಂದು ಕೇಳಿದಳು.

"ಹೌದು, ಆ ಕಡೆ ಬಾ ಹೇಳ್ತೇನೆ"

"ಏನು ಇಲ್ಲಿಯೇ ಹೇಳಿ ಲೆಕ್ಚರರ್ ಬರ್‍ತಾರೆ?"

"ಹಾಗಾದರೆ ಪುಸ್ತಕ ತೆಗೆದುಕೊಂಡು ಬಾ ಹೊರಗೆ"

"ಬೇಡಿ ಅಂದ್ರೆ ಕ್ಲಾಸು ತಪ್ಪುತ್ತದೆ."

"ಇರಲಿ ಹೋಗೆ, ನನಗೆ ಕಲಿಸಬೇಡ. ನಾನೇನು ಕಾಲೇಜಿಗೆ ಹೋಗೆ ಇಲ್ಲವೆ? ನಿನ್ನ ಹಾಗೆ ಒಂದು ದಿನ ರೆಗ್ಯುಲರ್ ಆಗಿ ಹೋಗಿದ್ದರೆ ಫಸ್ಟ್ ಬರ್‍ತಿದ್ದೆ" ಎಂದು ಚೇಷ್ಟೆ ಮಾಡಿ ಕಳಿಸಿದೆ.

ಅವಳು ಒಳಗೆ ಹೋಗಿ ಗೆಳತಿಯರಿಗೆ ಏನೊ ನೆಪ ಹೇಳಿ ಪುಸ್ತಕ ತೆಗೆದುಕೊಂಡು ಹೊರಗೆ ಬಂದಳು.

"ಎಲ್ಲಿಗೆ ಹೋಗೋದು?"

"ಸಿನೇಮಾಕ್ಕೆ, ಬೇಸರ ಬಂದಿದೆ"

"ಹಾಗಾದ್ರೆ ನೀವು ಸ್ವಲ್ಪ ಮುಂದೆ ಹೋಗಿ ನಿಲ್ಲಿ. ಇಲ್ಲಿ ಎಲ್ಲಾ ಹುಡುಗರಿದ್ದಾರೆ ಲೈಬ್ರರಿಗೆ ಹೋದಂತೆ ಮಾಡಿ ತಪ್ಪಿಸಿಬರ್‍ತೇನೆ."

ಅವಳು ಏನು ಹೇಳಿದಳೊ ನಾನು ಏನು ಕೇಳಿದೆನೊ ಬರಕ್ಕನೆ ಹೊರಟುಬಿಟ್ಟೆ. ಕಾಲೇಜಿನ ಆವರಣವನ್ನು ದಾಟಿ ಹೊರಗೆ ಬಂದಿದ್ದರೂ ಇನ್ನೂ ಹಾಗೆ ಓಡತೊಡಗಿದ್ದೆ. ಅವಳು ನನ್ನ ಬೆನ್ನಟ್ಟಿ ವೇಗವಾಗಿಯೇ ಬರತೊಡಗಿದ್ದಳು. ಅವಳು ಬೇಗ ಬೇಗ ಬರುತಿದ್ದಾಳೆಂದು ನನ್ನ ಹೆಜ್ಜೆಗಳನ್ನು ತೀವ್ರಗೊಳಿಸಿದೆ. ಇಬ್ಬರೂ ಸ್ಪರ್ಧೆಯಲ್ಲಿ ಇದ್ದಂತಿತ್ತು. ಮೈನ್ ರೋಡಿಗೆ ಬಂದಾಗ ಟ್ರಾಫಿಕ್ ಪೊಲೀಸ್ ನಿಲ್ಲಿಸಿಯೇಬಿಟ್ಟ ನನ್ನನ್ನು. ಅಷ್ಟರಲ್ಲಿ ಅವಳೂ ಬಂದು ನನ್ನನ್ನು ಕೂಡಿಕೊಂಡಳು. ಓಡಿ ಓಡಿ ಅವಳು ದಣಿದ ಹಾಗಿತ್ತು. ಮುಖ ಬೆವತಿತ್ತು. ಹತ್ತಿರ ಬಂದವಳೆ "ನಿಮಗಂತೂ ಎಷ್ಟು ಬುದ್ಧಿಯೇ ಇಲ್ಲ" ಎಂದಳು.

"ಯಾಕೆ?"

"ನಿಮ್ಮ ತಲೆ, ಬೇಗ ಬೇಗ ಸ್ವಲ್ಪ ಮುಂದೆ ಹೋಗಿ ನಿಲ್ರಿ, ಅಂದ್ರೆ ಹಾಗೆ ಓಡುತ್ತ ಹೋಗಬೇಕೇನು? ನೀವು ಬೇಗಬೇಗನೆ ಹೊರಟರೆಂದು ನಾನು ಓಡಿಬರಬೇಕಾಯಿತು.

ಆಗ ನಾನು "ನೀನು ಬೇಗ ಬೇಗ ಬರುತ್ತಿದ್ದುದನ್ನು ನೋಡಿ ನಾನು ಓಡತೊಡಗಿದೆ" ಎಂದೆ. ಇಬ್ಬರಿಗೂ ನಗು ಬಂತು.

ಆಗಲೇ ಥಿಯೇಟರ್ ಸಮೀಪಿಸಿತ್ತು. ಏನು ಸಿನಿಮಾಕ್ಕೆ ಹೊರಟಿರಾ? ಹಿಂದಿನಿಂದ ಪರಿಚಿತ ಧ್ವನಿ ಕೇಳಿದಂತಾಯಿತು. ನಾವು ಹೊರಳಿ ನೋಡಿದೆವು ನನ್ನ ಮಾವ ಯಮನಂತೆ ನಿಂತಿದ್ದ. ನಾವಿಬ್ಬರೂ ತಬ್ಬಿಬ್ಬಾಗಿ ಹೋದೆವು. 'ಅಯ್ಯೋ ದೇವರೆ, ಶನಿಪೂಜೆಯಲ್ಲಿ ಕರಡಿಯನ್ನು ಬಿಟ್ಟಂತೆ ಈ ಪ್ರಾಣಿಯನ್ನು ಏಕೆ ಕಳಿಸಿದೆ' ಎಂದು ದೇವರನ್ನು ಹಳಿದೆ. ನಿರ್ವಾಹವಿಲ್ಲ. ಮುಖ ಹುಳ್ಳಹುಳ್ಳಗೆ ಮಾಡಿಕೊಂಡು.

"ಏನೋ ಬೇಸರಬಂದಿತ್ತು ಬಂದೆವು. ಉಮಾಗು ಕ್ಲಾಸು ಇರಲಿಲ್ಲ. ಬನ್ನಿ ಹೋಗುವ" ಎಂದು ಮನಸ್ಸಿಲ್ಲದೆಯೇ ವ್ಯವಹಾರಕ್ಕಾಗಿ ಹೇಳಿದೆ.

"ಓಹೋ ನಡಿಯಿರಿ. ನನಗೂ ಬೇಸರ ಬಂದಿದೆ" ಎಂದು ಮಾವ ಮಹರಾಯರು ನಮಗಿಂತ ಮುಂದೆ ನಡೆದೇ ಬಿಟ್ಟರು. ಗತ್ಯಂತರವಿಲ್ಲದೆ ಮೂರು ಟಿಕೆಟ್ ತೆಗೆದುಕೊಂಡು ಒಳಗೆ ಹೋದೆವು. ಸಿನೇಮಾ ಸುಖಾಂತವಾಗಿದ್ದರೂ ನನ್ನ ಪಾಲಿಗೆ ದುಃಖಾಂತವಾಗಿತ್ತು.

* * *

ಈ ಅರ್ಧಮರ್ಧ ಬ್ರಹ್ಮಚಾರಿಯ ಪುರಾಣವನ್ನು ಮುಗಿಸುವ ಪೂರ್ವದಲ್ಲಿ ಇನ್ನೊಂದು ಪೇಜಿನ ಘಟನೆಯನ್ನು ವಿವರಿಸುತ್ತೇನೆ ಕೇಳಿ. ಅವತ್ತು ಮನೆಯಲ್ಲಿ ಇನ್ನೂ ಸಾಯಂಕಾಲ ಆರುಘಂಟೆ ಸುಮಾರಿಗೆ ಅಡುಗೆ ಸಿದ್ಧತೆ ನಡೆದಿತ್ತು. ನಾನು ಅತ್ತಿಗೆ ಹತ್ತಿರ ಹೋಗಿ "ಇದೇನು ಅತ್ತಿಗೆ, ಇಷ್ಟು ಬೇಗ ಅಡುಗೆ?" ಎಂದು ಕೇಳಿದೆ.

"ನಿಮಗೆ ಗೊತ್ತೇ ಇಲ್ಲವೆ? ಇವತ್ತು ನಾವೆಲ್ಲ 'ಸೆಕೆಂಡ್ ಷೋ' ಜಂಗ್ಲಿ ನೋಡಲಿಕ್ಕೆ ಹೋಗ್ತೇವೆ ನೀವು ಬರುವುದಿಲ್ಲವೆ?"

"ಯಾರ್‍ಯಾರು ಹೋಗ್ತೀರಿ?"

"ಮನೆಯಲ್ಲಿದ್ದ ನಾವೆಲ್ಲರೂ"

"ಅಷ್ಟೆ! ಮತ್ತೆ ಯಾರು ಬರುವುದಿಲ್ಲವೆ?"

"ಮತ್ತಾರು ಬರಬೇಕು?"

"ಹೊರಗಿನಿಂದ ಅಂದ್ರೆ ನೆರೆಹೊರೆಯವರು" ನನ್ನ ಮಾತಿನ ಅರ್ಥವನ್ನರಿತ ಅತ್ತಿಗೆ ಮುಗುಳ್ನಗೆ ನಕ್ಕು "ಊಹುಂ!" ಎಂದು ಗೋಣು ಹಾಕಿ "ನೀವು ಬರುವುದಿಲ್ಲವೆ?" ಎಂದು ಕೇಳಿದರು.

ನನ್ನ ಭಾವಿ ಶ್ರೀಮತಿಯೇ ಬರುವುದಿಲ್ಲವೆಂದಾದ ಮೇಲೆ ನಾನೇಕೆ ಹೋಗಬೇಕೆಂದು ನಿಶ್ಚಯಿಸಿ "ನಾನು ಮನೆಯಲ್ಲಿಯೇ ಇರ್ತೇನೆ, ನೀವೆಲ್ಲರೂ ಹೋಗಿ" ಎಂದವನೆ ಕೋಣೆಗೆ ಹೊರಟುಹೋದೆ.

ಎಂಟೂವರೆ ಸುಮಾರಿಗೆ ನಾವಿನ್ನೂ ಊಟಕ್ಕೆ ಕುಳಿತಿದ್ದೆವು. ಸಿನೇಮಾಕ್ಕೆ ಹೋಗುವುದಿಲ್ಲವೆಂದಾದ ಮೇಲೆ ಅವಸರವೇಕೆಂದರು. ನಾನು ಮೆಲ್ಲಗೆ ಉಣ್ಣತೊಡಗಿದ್ದೆ.

ಅಷ್ಟರಲ್ಲಿ ನೀಲಿ ಸೀರೆಯನ್ನುಟ್ಟುಕೊಂಡು ನನ್ನ ಭಾವಿ ಶ್ರೀಮತಿಯ ಸವಾರಿ ಆಗಮಿಸಿಯೇ ಬಿಟ್ಟಿತು. 'ಅವಳ ಕಡೆಗೊಮ್ಮೆ ನೋಡಿ' ಬೇಕಂತಲೇ ಬರುವುದಿಲ್ಲವೆಂದು ಹೇಳಿದ ನನ್ನ ಅತ್ತಿಗೆಯ ಕಡೆ ನೋಡಿದೆ. ಅವರು ಮುಗುಳ್ನಗೆಯಿಂದ "ಏನು ಶಾಮಣ್ಣಾ, ನೀನು ಸಿನೇಮಾಕ್ಕೆ ಬರೋದಿಲ್ಲವಷ್ಟೇ!" ಎಂದು ಕೆಣಕಿ ಕೇಳಿದರು. ಆಗ ನಾನು ನುಸುಕೋಪದಿಂದ "ನಿಮಗ್ಯಾರು ಹೇಳಿದರು ಬರುವುದಿಲ್ಲವೆಂದು, ನಾನೂ ಬರ್ತೇನೆ. ಮನೆಯಲ್ಲಿ ನಾನೊಬ್ಬನೆ ಕತ್ತೆ ಕಾಯಲೆ?" ಎಂದೆ. ಎಲ್ಲರೂ ಖೊಳ್ಳನೆ ನಕ್ಕರು.

ಅಂತೂ ಸಿನೇಮ ಥಿಯೇಟರ್ ತಲುಪಿದೆವು. ನಾವೇನು ಕಡಿಮೆ ಜನರೆ, ಒಂದು ದಂಡೇ ಹೊರಟಿತ್ತು. ಇಡೀ ಒಂದು ಸಾಲನ್ನು ನಾವೇ ಆಕ್ರಮಿಸಿಕೊಂಡಿದ್ದೆವು. ಮೊದಲು ನನ್ನ ತಂದೆ, ಅನಂತರ ಸೋದರ ಮಾವ, ಅಣ್ಣಾ, ತಾಯಿ, ಅಕ್ಕ, ಅತ್ತಿಗೆ ಹಾಗೂ ಅಲ್ಲಲ್ಲಿ ಮಕ್ಕಳು ಕುಳಿತುಕೊಂಡರು. ಅನಂತರ ಜಗಳ ಬಂದದ್ದು ನನ್ನ ಭಾವಿ ಶ್ರೀಮತಿ ಹಾಗೂ ಕೊನೆಗೆ ಕೂಡುವ ಸ್ಥಳಕ್ಕಾಗಿ. ನಾನಂತೂ ಕೊನೆಗೆ ಕೂಡುವುದಾಗಿ ನಿಶ್ಚಯವಾಗಿತ್ತು. ನನ್ನ ಹತ್ತಿರವೇ ನನ್ನ ಬಾವಿ ಶ್ರೀಮತಿ ಕೂಡಬೇಕೆಂಬ ಆಶೆ ನನ್ನದು. ಆದರೆ ನನ್ನ ತಂಗಿ ನನ್ನವಳಂತಹದೇ ನೀಲಿ ಸೀರೆಯುಟ್ಟುಕೊಂಡು ಡ್ರೆಸ್ ಮಾಡಿಕೊಂಡು ಬಂದಿದ್ದಳು.

"ಶಾಮಣ್ಣಾ, ನಾನು ನಿನ್ನ ಹತ್ತಿರ ಕೂರಲೇ" ಎಂದು ಕೇಳಿದಳು "ಬೇಡ, ನೀನು ಸರ್ವಥಾ ನನ್ನ ಹತ್ತಿರ ಬರಬೇಡ. ಜಗಳಗಂಟಿ" ಎಂದೆ. ಆಗ ಅತ್ತಿಗೆ "ಸುಶೀಲಾ, ನೀವು ನನ್ನ ಹತ್ತಿರ ಕುಳಿತುಕೊಳ್ಳಿ, ಉಮಾ ನೀನು ಆಚೆ ಕುಳಿತುಕೊ" ಎಂದರು. ಅಷ್ಟರಲ್ಲಿ ದೀಪಗಳೂ ನಂದಿದವು. ಚಿತ್ರ ಪ್ರಾರಂಭವಾಯಿತು. ತತ್‌ಕ್ಷಣವೇ ಅವಳು ನನ್ನ ಹತ್ತಿರ ಬಂದು ಕುಳಿತುಕೊಂಡಳು.

ನನಗೆ ಚಿತ್ರದ ಕಡೆಗೆ ಲಕ್ಷ್ಯವೇ ಇರಲಿಲ್ಲ. ಅಲ್ಲಿ ಅವಳ ಕಡೆಗೇ ಆಗಾಗ ಬೆರಳಾಗಲಿ ಹೆರಳಾಗಲಿ ಸೆರಗಾಗಲಿ ಜಗ್ಗಿ ಅವಳ ಲಕ್ಷ್ಯ ಹರಿಸಿಕೊಳ್ಳುತ್ತಿದ್ದೆ. ಅವಳೂ ಬೇಕುಬೇಕೆಂತಲೇ ಹಾಗೆ ಮಾಡುತ್ತಿದ್ದಳು. ನಾನು ಹೆರಳು ಬಗ್ಗಿದಾಗ "ಸುಮ್ಮನೆ ಇರ್ರಿ ಚಿತ್ರ ನೋಡೋದು ಬಿಟ್ಟು ಇದೇನು ನೀವು ಹಾಗೆ ಇದ್ದೀರಿ ನೋಡಿ" ಎಂದಳು ಮೆಲ್ಲನೆ "ಹಾಗೆಂದರೆ ಹ್ಯಾಗೆ" "ಆ ಜಂಗ್ಲಿ" ಎಂದು ಮೆಲ್ಲನೆ ನನ್ನ ಕೈಗಳನ್ನು ಅದುಮಿದಳು. ಆ ಕೋಮಲ ಕರಗಳು 'ಜಂಗ್ಲಿ' ಅಂದುದನ್ನು ಮರೆಯಿಸಿಬಿಟ್ಟವು.

ಇಂಟರ್‌ವಲ್ ಆಯಿತು. ನಾನೂ ಅಣ್ಣನೂ ಹೊರಗೆ ಹೋದೆವು. ಶೇಂಗಾಪುಡಿಕೆಗಳನ್ನು ತೆಗೆದು ಅಣ್ಣಾ ನನಗೊಂದು ಕೊಟ್ಟು ಉಳಿದವುಗಳನ್ನು ಒಳಗೆ ಕೊಡಲು ತೆಗೆದುಕೊಂಡು ಹೊರಟ. ನಾನು ಒಳಗೆ ಬರುವುದರೊಳಗೆ ದೀಪಗಳು ನಂದಿದ್ದವು. ಕತ್ತಲಲ್ಲಿ ಎಡವುತ್ತ ನನ್ನ ಸ್ಥಳದಲ್ಲಿ ಹೋಗಿ ಕುಳಿತುಕೊಂಡೆ.

ನನ್ನ ಭಾವೀ ಶ್ರೀಮತಿಯ ಮೇಲೆ ಅನುರಾಗ ಉಕ್ಕಿ ಹರಿಯತೊಡಗಿತ್ತು. ಏನೋ ನನ್ನ ಪಾಲಿನ ಶೇಂಗಾಗಳನ್ನು ಕೂಡ ಅವಳಿಗೆ ಸುಲಿದು ಸುಲಿದು ಕೊಡತೊಡಗಿದೆ. ಕತ್ತಲಲ್ಲಿ ಅವಳ ಕೈ ಎಳೆದುಕೊಂಡು ಸಿಪ್ಪೆ ಸುಲಿದು ಸುಲಿದು ಕಾಳು ಕೊಡತೊಡಗಿದ್ದೆ. ನಾನು ಕೊಟ್ಟಂತೆಲ್ಲ

ಆ ವ್ಯಕ್ತಿ 'ಗುಳುಂ ಗುಳುಂ' ಎಂದು ನುಂಗಿ ಬಿಡುತ್ತಿತ್ತು.' ನನ್ನ ಎಲ್ಲಾ ಶೇಂಗಾ ಮುಗಿದುಹೋದರೂ ಅವಳಿಂದ ಸ್ವಲ್ಪೂ ರೆಸ್ಪಾನ್ಸ್ ಬರಲಿಲ್ಲ. ನನ್ನ ಭಾವಿ ಶ್ರೀಮತಿಗೆ ರೋಮಾನ್ಸ್ ಎಂಬುದೇ ಗೊತ್ತಿಲ್ಲ ಎಂದುಕೊಂಡು ಹುಸಿ ಮುನಿಸಿನಿಂದ ಅವಳ ತೊಡೆಯನ್ನು ತಟ್ಟನೆ ಚಿವುಟಿದೆ. "ಹಾಂ! ಏನೊ ಕಚ್ಚಿತು" ಎಂದು ಕೂಗಿದ ದನಿಯನ್ನು ಕೇಳಿದಾಗಲೇ ನನಗೆ ಆ ಕತ್ತಲಲ್ಲಿ ಇನ್ನಷ್ಟು ಕಣ್ಣು ಕತ್ತಲುಗಡಿಸಿತು. ಹೊರಳಿ ನೋಡಿದೆ ನನ್ನ ತಂಗಿ ಸುಶೀ ಕುರ್ಚಿಯಿಂದ ಎದ್ದು ನಿಂತಿದ್ದಳು. ನನ್ನ ಬಳಿ ನನ್ನ ಭಾವಿ ಶ್ರೀಮತಿ ಇರಲಿಲ್ಲ. ಸುಶಿ ಇದ್ದಳು. ಮೊದಲೇ ಅವಳು ಅಬ್ಬರದ ಹೆಣ್ಣು ಗಲಾಟೆ ಎಬ್ಬಿಸಿದಳು. ನನ್ನ ತಂದೆ ಅಣ್ಣ ತಾಯಿ ಅಕ್ಕ ಅತ್ತಿಗೆ ಎಲ್ಲರೂ 'ಏನು ಏನಾಯಿತು?' ಎಂದು ಎದ್ದು ಅವಳ ಕಡೆ ಬಾಗಿ ಕೇಳಿದರು. ಏನೊ ಕಚ್ಚಿದಂತಾಯಿತು ಎಂದು ಮತ್ತೆ ರಾಗ ಎಳೆದಳು ಸುಶಿ.

ಅಷ್ಟರಲ್ಲಿ ನಮ್ಮ ಹಿಂದಿನ ಸಾಲಿನಲ್ಲಿದ್ದ ಹೆಣ್ಣು ಮಕ್ಕಳ ತಂಡದಲ್ಲಿ 'ಚೇಳು' ಎಂಬ ಸುದ್ದಿ ಹರಡಿಬಿಟ್ಟಿತು. ಯಾವ ಪುಣ್ಯಾತ್ಮ ಅವರಿಗೆ ಹಾಗೆ ಹೇಳಿದನೊ? ಒಬ್ಬರಿಂದ ಇನ್ನೊಬ್ಬರಿಗೆ ಹರಡಿ ಇಡೀ ಥಿಯೇಟರಿನಲ್ಲಿ ತುಂಬ ಗದ್ದಲವೇ ಗದ್ದಲ ಎದ್ದುಬಿಟ್ಟಿತು. ಮುಂದೆ ಕುಳಿತ ಮೂವತ್ತು ನಯ ಪೈಸೆ ಮಹಾಪ್ರಭುಗಳು ಸಂಭಾಷಣೆ ಕೇಳದೇ ಹೋದಾಗ "ಸುಮ್ಮನೆ ಕೂತುಕೊಳ್ರೋ" ಎಂದು ಕಿಣಿಕಿಕೊಳ್ಳುತ್ತ ಸಿಳ್ಳು ಹೊಡೆಯತೊಡಗಿದರು. ತತ್‌ಕ್ಷಣವೇ ಚಿತ್ರ ನಿಂತು ಎಲ್ಲ ಕಡೆಗೆ ಲೈಟ್ ಹತ್ತಿಕೊಂಡವು. ಆಗ ನಮ್ಮ ಸಾಲು ಸುಮ್ಮನೆ ಕುಳಿತಿತ್ತು. ನಿಜಸ್ಥಿತಿ ಏನಾಗಿರಬಹುದೆಂದು ಊಹಿಸಿದ ನನ್ನ ಭಾವಿ ಶ್ರೀಮತಿ ಅತ್ತಿಗೆ ಕಿವಿಯಲ್ಲಿ ಏನೊ ಉಸುರಿದಳು. ಒಬ್ಬರಿಂದ ಒಬ್ಬರಿಗೆ ನನ್ನ ತಂದೆಯವರೆಗೂ ಆ ಸುದ್ದಿ ಮುಟ್ಟಿತು.

ಮತ್ತೆ ಸಿನೇಮಾ ಪ್ರಾರಂಭವಾಯಿತು. ಈ ಸಲ 'ಚೈನಾವಾಲ್', ಆದ ಹಾಗೆ ಅತ್ತಿಗೆ ನನ್ನ ಬಳಿ ಕುಳಿತು ನಗುತ್ತ "ಶಾಮಣ್ಣ ನೆನಪಿರಲಿ, ಈ ಸಲ ನಾನು ನಿಮ್ಮ ಹತ್ತಿರ ಕುಳಿತಿದ್ದೇನೆ" ಎಂದರು. "ಅಷ್ಟೂ ಗೊತ್ತಾಗಲ್ವೆ, ನೀವು ಗೋಡೆಯ ಹಾಗೆ ಕುಳಿತಿದ್ದೀರಿ?" ಎಂದು ನಾನು ಚೇಷ್ಟೆ ಮಾಡಿದೆ.

"ಹೌದು, ನಾನು ಗೋಡೆ ನಿಮ್ಮ ಶ್ರೀಮತಿ ನಾಜೂಕನಾರಿ ಆಯಿತೆ? ಚಿತ್ರ ನೋಡಿ" ಎಂದು ಮೆದುವಾಗಿ ನಕ್ಕರು.

ಅಷ್ಟರಲ್ಲಿಯೇ ಮೆಲ್ಲಗೆ ಬಾಗಿ ಅತ್ತಿಗೆಯ ಆಚೆ ಕಡೆಗೆ ಕುಳಿತಿದ್ದ ನನ್ನ ಭಾವಿ ಶ್ರೀಮತಿಯ ಬೆನ್ನಿಗೆ ಚಿವುಟಿದ್ದೆ. ಅವಳು ಕರವಸ್ತ್ರದಿಂದ ಬಾಯಿ ಮುಚ್ಚಿಕೊಂಡು ನಗಹತ್ತಿದಳು.

# ೧೩. ಕರಿಯನ ಕನಸು

ಈ ಸೈನಿಕರ ಧಕ್ಕಡಿಗೆ ಕಣ್ಣು ಆಗೀನಿ. ಇವರಿಗೆ ಕೂಳು ಕುಟ್ಟಿಹಾಕೋದು ಅಂದ್ರ ಸಾಕಾತು... ಆ! ತೋಳ ನೋಯ್ತದ. ನನ್ನ ಚನ್ನಿ... ಆಕಿ.... ನೆನಪ ಶಾವಗಿಪಾಯಸಾ ಉಂಡಷ್ಟು ಸಂಪಿ"....

ಎಂದು ಏನೇನೋ ಕನಸ ಕಾಣ್ತಾ ಸೈನಿಕರ ಕ್ಯಾಂಪಿನಿಂದ ದೂರದೂರ ಸರಿದು ತನ್ನೂರ ಸಮೀಪಿಸಿದ್ದ ಕರಿಯ.

ಕರಿಯ ದಾಂಡಿಗ. ಹೆಸರಿಗೆ ತಕ್ಕಂಥ ಬಣ್ಣ. ಕ್ಯಾಂಪಿನ ಮೇಲೆ ಬಾಂಬ ಬಿದ್ದಾಗ ಸಹಿತ ಅಡಗಿ ಅಂಬಲಿ ಸಮೇತ ಓಡಿ ಹೋದ ಧೀರ. ಅಂತಲೆ ಅವನಿಗೆ ಯುದ್ಧ ಘೋಷಣೆ ಆದಾಗೊಮ್ಮೆ ಕರೆ ಹೋಗುತ್ತಲೇ ಇತ್ತು.

ಕರಿಯನ ದೇಹ ಬುದ್ಧಿ ಸಾಕಷ್ಟು ಪ್ರಮಾಣದಲ್ಲಿ ಸರಿದೊರೆಯಾಗಿ ಬೆಳೆದಿರಲಿಲ್ಲ. ದೇಹ ಮಾತ್ರ ಸಣ್ಣ ಬೆಟ್ಟದಷ್ಟು ದಷ್ಟಪುಷ್ಟವಾಗಿತ್ತು. ಆ ಅಜಾನುಬಾಹು ದೇಹದ ತಲೆಯಲ್ಲಿ ಮೆದಳು ಎಲ್ಲಿಯೋ ಅಡಗಿಹೋಗಿತ್ತು. ಮನಸ್ಸ ಮೃದು ಮುಗ್ಧ. ದಾರಿಲಿ ಹೋಗುವ ಮಕ್ಕಳು ಅವನ ಆಕಾರ ಕಂಡು ನಕ್ಕರೆ ಬಾಯಿ ಹಿಗ್ಗಿಸಿ ಪ್ರತಿಯಾಗಿ ತಾನೂ ನಗುತ್ತಿದ್ದ. ತುಂಟ ಹುಡುಗರು ಕತ್ತೆ ಎಂದು ಅಂದರೂ ಕತ್ತು ಕೂಡ ಅಲ್ಲಾಡಿಸದೆ ಕತ್ತೆಯಂತೆ ತಲೆ ಕೆಳಗೆ ಮಾಡಿಕೊಡು ಹೋಗುವ ಸ್ವಭಾವ ಅವನದು. ಎಷ್ಟು ಸಲ ಸೈನಿಕರಿಂದ ಒದಿಕೆ ತಿಂಧಾನೋ ದೇವರೇ ಬಲ್ಲ. ಆಗಲೂ ಅವನ ಪ್ರತಿಕ್ರಿಯೆ ನಗು.

ಹೀಗೆ ಯುದ್ಧ ಮುಗಿದ ಮೇಲೆ ಎಷ್ಟು ಸಲ ಊರಿಗೆ ಹೋಗಿ ಬಂದಿದ್ದಾನೋ ಕರಿಯ. ಆದರೆ ಈ ಸಾರಿ ಅವನ ಪ್ರಯಾಣದ ಗತಿಯೇ ಬೇರೆ, ಅವನ ಮನದ ಶ್ರುತಿಯೇ ಬೇರೆ.

ಅವನ ಕಣ್ತುಂಬ ಚನ್ನಿ... ಚನ್ನಿ...

ಥೂ ಈ ಹಾಳು ಯುದ್ಧ ಯಾವಾಗ ಮುಗಿಯುತ್ತದೋ! ಅವನ ಶಾಪ ತಟ್ಟಿದ್ದಕ್ಕೋ ಏನೋ ಅಂತು ಯುದ್ಧ ಮುಗಿಯಿತು. ಯುದ್ಧ ವಿರಾಮ ಘೋಷಣೆಯಿಂದ ವಿಶ್ವಕ್ಕೆ ಆದ ಆನಂದಕ್ಕಿಂತ ತೀರ ಭಿನ್ನ ಅವನ ಆನಂದ. ಅವನಿಗೆ ತನ್ನ ಚೆನ್ನಿಯನ್ನು ಕೂಡುವ ಹಂಬಲ.

ಕರಿಯ ಸೈನಿಕರ ಕ್ಯಾಂಪಿನಿಂದ ಹೊರಡಲಿಕ್ಕೆ ಅನುವಾದಾಗ ಕ್ಯಾಪ್ಟನ್ನ ಕೇಳಿದ್ದ:

"ಕರಿಯ, ನೀನು ಊರಿಗೆ ಹೋಗಿ ಏನು ಮಾಡ್ತಿಯಾ? ಇಲ್ಲಿಯೇ ಇದ್ದು ಅಡಗಿ ಮಾಡಿ ಹಾಕು."

ಕರಿಯನಿಗೆ ಏನು ಹೇಳಬೇಕು ಹೊಳೆಯಲಿಲ್ಲ.

"ಇಲ್ಲ ಸಾಹೇಬ್ರ, ನಂಗ ಹೋಗಲಿಕ್ಕೇಬೇಕು" ಎಂದ.

"ಅಲ್ಲೋ ಅಲ್ಲಾದ್ರು ಹೋಗಿ ಏನ ಮಾಡ್ತಿ, ಹೆಂಡ್ತಿ ಇಲ್ಲಾ ಮಕ್ಕಳ ಇಲ್ಲಾ..."

ಕ್ಯಾಪ್ಟನ್ ಸಿಗರೇಟಿನ ಝುಂ ಎಳೆದು ಹೇಳಿದ.

ತನ್ನ ಮನದ ಇಂಗಿತವನ್ನು ಹೇಳ ಹೊರಟ. ಕರಿಯನ ಕರಿಮುಖ ಕೂಡಾ ಕೆಂಪಗಾಯಿತು.

"ಸಾಹೇಬ್ರ..."

"ಏನು ಹೇಳೊ ಹಂಗ್ಯಾಕ ಹೆಣ್ಣಿನ ಹಂಗ ನಾಚಕೋತಿ."

"ಸಾಹೇಬ್ರ ಈ ಸರೆ ಬರೋ ಮುಂದ ಮದವಿ ಮಾಡಕೊಂಡ ಬಂದೀನಿ, ಹೆಣ್ತಿ ಇದ್ದಾಳ..."

ಅಂತೂ ಅವನು ಬಾಯಿಬಿಟ್ಟ. ಕರಿಯನ ಹಲ್ಲುಗಳಾದರೂ ಬಿಳಿಯಾಗಿವೆಯಲ್ಲ ಎನ್ನಿಸಿರಬೇಕು ಆ ಕ್ಯಾಪ್ಟನಿಗೆ, ನಕ್ಕು

"ಓ! ಹಿಂಗ... ಹಾಗಿದ್ರ ಹೋಗು..." ಎಂದ.

"ಅದಕ್ಕ ಸಾಹೇಬ್ರ ಯುದ್ಧ ಯಾವಾಗ ನಿಂದ್ರತದೋ ಅಂತ ಹಾದಿ ನೋಡಲಿಕ್ಕ ಹತ್ತಿದ್ದೆ"

"ನಿನ್ನ ಹೆಣ್ತಿ ಪ್ರಾರ್ಥನಾ ಯುದ್ಧ ನಿಂದ್ರಿಸಿರಬೇಕು ಏನಂತಿ?"

ಭುಜ ಅಲುಗಾಡಿಸಿ ಕೇಳಿದ.

"ಹೌದು ಸಾಹೇಬ್ರ, ಹಂಗ ಇರಬೇಕು."

ಕೈ ತಿಕ್ಕುತ್ತ ಕರಿಯ ಹೇಳಿದ.

"ಹೋಗಿ ಬಾ ನಿನಗೆ ಒಳ್ಳೆಯದಾಗಲಿ"

ಕ್ಯಾಪ್ಟನ್ ಬೀಳ್ಕೊಟ್ಟ.

ಕರಿಯ ಹೊರಟ ಅದೇ ಸವಿನೆನಪಿನಲ್ಲಿ.

ಹೌದು ಕರಿಯನಿಗೆ ಮದುವೆಯಾಯಿತು ಎಂದರೆ ಯಾರು ನಂಬುತ್ತಾರೆ. ಇಂಥ ಪರದೇಶಿಗೆ ಯಾರು ಹೆಣ್ಣು ಕೊಡಬೇಕು. ಕೆಲವರು 'ಅಂವಗ ಬಾಳವೀ ಆರ ಮಾಡಲಿಕ್ಕ ಬರ್ತದೇನು?' ಎಂದು ಲೇವಡಿ ಮಾಡಿದ್ದುಂಟು.

ಕರಿಯ ಶಹರ ಸೇರಿದ್ದು, ಸೈನ್ಯ ಸೇರಿದ್ದು ಮದುವೆಯಾದದ್ದು ಒಂದು ಮೋಜು.

ಬೀದಿಯ ಗೋಳಿಯಂತೆ ಇವನು ಅಲೆದಾಡುತ್ತಿರುವಾಗ, ಒಮ್ಮೆ ಸೈನ್ಯದ ತುಕಡಿಗಳು ಇವನ ಹಳ್ಳಿಯ ಮುಖಾಂತರ ಹಾದು ಹೊರಟಿದ್ದವು.

ಆಗ ಅವಕ್ಕೆ ತನ್ನ ಅಡುಗೆಯ ರುಚಿ ತೋರಿಸಿ ಅದರಲ್ಲಿಯೇ ಧುಮುಕಿಬಿಟ್ಟ. ಆಗಿನ್ನೂ ಅವನಿಗೆ ಹದಿನೆಂಟು ವಯಸ್ಸಿರಬೇಕು.

ನಂತರ ಹತ್ತು ವರುಷಗಳು ಉರುಳಿರಬೇಕು ರಣರಂಗದ ಶೂರ ಸೈನಿಕರು ಶಾಂತಿ ಸೈನಿಕರಾದ ಮೇಲೆ ಹಳ್ಳಿಗೇ ಮರುಳದೇ ಶಹರ ಸೇರಿದ. ಅಲ್ಲಿ ಬ್ಯಾಂಕು ಒಂದರಲ್ಲಿ ಪ್ಯೂನ್ ಜಾಗೆ ಕೂಡ ಸಿಕ್ಕಿತು. ಸಿಕ್ಕಿತು ಅನ್ನುವುದಕ್ಕಿಂತ ಗಿಟ್ಟಿಸಿಕೊಂಡ ಅನ್ನಿ.

ಕರಿಯ ಕೆಲಸದಲ್ಲಿಯೂ ಅಷ್ಟೇ ಥಾಡಸಿ. ಲೆಜ್ಜರುಗಳನ್ನು ಆ ಟೇಬಲ್ಲಿನಿಂದ ಈ ಟೇಬಲ್ಲಿಗೆ ಈ ಟೇಬಲ್ಲಿನಿಂದ ಆ ಕಡೆಗೆ ಎತ್ತಿ ಹಾಕುವುದೆಂದರೆ ಚೆಲ್ಲಾಟ. ಕ್ಯಾಷಿಯರನ ಹಿಂದೆ ಅಂಗರಕ್ಷಕನಂತೆ ನಿಂತರೆ ಯಾವ ಕಳ್ಳನ ಎದೆಗಾರಿಕೆ ಅಲ್ಲಿಯ ಒಂದು ಕವಡೆಯನ್ನ ಸಹ ಎತ್ತಲಿಕ್ಕೆ!

ಇಂಥ ಕರಿಯ ಒಂದು ಅದ್ಭುತ ಸಾಹಸವನ್ನು ಮಾಡಿದ. ವೈರಿಯ ಮೇಲೆ ಏರಿ ಹೋಗಿ ಗುಂಡಿಕ್ಕಿ ಕೊಂದುದಲ್ಲ, ಪ್ರೇಮದ ಕಣದಲ್ಲಿ ಧುಮುಕಿದ. ಸಂದಿಗೊಂದಿಯಲ್ಲಿ ಸುತ್ತಾಡುವಾಗ ಹೇಗೋ ಕೆಲಸಗಿತ್ತಿ ಚನ್ನಿಯ ಸಹವಾಸ ಬೆಳೆಸಿದ.

ಇದೂ ಆಶ್ಚರ್ಯವೇ ಸೈ... ಬಹುಶಃ ಜೀವನದ ಹಂಗು ತೊರೆದು ಹೋರಾಡುವ ಶೂರ ಸೈನಿಕರನ್ನು ನೋಡಿ ನೋಡಿ ಇವನಿಗೂ ಕೊನೆಯ ಪಕ್ಷ ಚೆನ್ನಿಯ ಸಹವಾಸ ಮಾಡುವ ಎದೆಗಾರಿಕೆಯಾದರೂ ಬಂದಿರಬೇಕು.

ಚನ್ನಿಯೂ ಚೆಲುವೆ ಬಣ್ಣದಿಂದ ಅಲ್ಲ... ಯವ್ವನದ ಸೊಬಗಿನಿಂದ ಸೊಕ್ಕಿನಿಂದ ಹರಿದ ಕುಪ್ಪಸದಿಂದ ಬಿರಿದು ಕಾಣುವ ಎದೆ ಕಣ್ಣು ಕೋರೈಸುತ್ತಿತ್ತು. ದುಂಡುದುಂಡಾದ ದೇಹ ಬಾಹುಗಳಿಗೆ ಈಡಾಗಿತ್ತು.

ಬ್ಯಾಂಕು ಮ್ಯಾನೇಜರ ಮನೆಯ ಕಾಯಿಪಲ್ಲೆ ಆ ಕೆಲಸ, ಈ ಕೆಲಸ ಕೈದೋಟದ ಕೆಲಸದ ಜೊತೆಗೆ ಕೆಲಸಗಿತ್ತಿ ಚನ್ನಿಯ ಕಸಮುಸುರೆಯ ಮೇಲೂ ನಿಘರಾಣಿ ಇತ್ತು ಕರಿಯನದು.

"ಏ ಚನ್ನಿ ಸರಿಯಾಗಿ ಕಸಾ ಉಡುಗ, ಮುಸರಿ ಛಲೋತ್ನಾಗ ತಿಕ್ಕು."

ಎಂದು ಆದೇಶ ನೀಡುತ್ತಿದ್ದ ಅಧಿಕಾರವಾಣಿಯಿಂದ.

ಆಗ ಚನ್ನಿ ಮೂಗು ಮುರಿದು,

"ಇರಲೇಳೋ ಮಳ್ಳ, ನನಗೆಲ್ಲಾ ಗೊತ್ತೈತಿ ನನ್ಗ ಕಲ್ಸಾಕ ಬರ್‍ತೀ ಏನು?"

ಎಂದು ಅವನ ಹುಂಬತನಕ್ಕೆ ಕಿಸಿಕಿಸಿ ನಗುತ್ತಿದ್ದಳು.

ಬರಬರುತ್ತ ಆ ನಗು ಹೂವಾಯಿತು.

ಚನ್ನಿ ಕರಿಯನ ರೋಮಾನ್ಸ್ ಓಣಿ ಜನರ ಕಣ್ಣಿಗೆ ಬೀಳದೇ ಇರಲಿಲ್ಲ.

ಒಂದು ಸಲ ಅವರ ಈ ರೋಮಾನ್ಸ್ ಕ್ಲೈಮ್ಯಾಕ್ಸ್ ಮುಟ್ಟಿತು.

ಮ್ಯಾನೇಜರ್ ಇಡೀ ಮನೆಯನ್ನು ಕರಿಯನಿಗೆ ಒಪ್ಪಿಸಿ ಪರಿವಾರದೊಂದಿಗೆ ಊರಿಗೆ ಹೋಗಿದ್ದರು. ಕರಿಯ ಮನೆಯ ತುಂಬ ಒಡೆಯನಂತೆ ಓಡಾಡಿದ. ಚನ್ನಿಗೆ ಅಂದು ಸಂಭ್ರಮವೇ ಸಂಭ್ರಮ. ಕರಿಯನನ್ನು ಬಚ್ಚಲ ಮನೆಗೆ ದಬ್ಬಿ ಶ್ಯಾಂಪು ಸುರುವಿ ಸುವಾಸನೆಯ ಸೋಪಿನಿಂದ ಎಮ್ಮೆಯನ್ನು ತಿಕ್ಕುವಂತೆ ತಿಕ್ಕಿ, ತಿಕ್ಕಿ ಷವರ್ ಸ್ನಾನ ಮಾಡಿಸಿದಳು. ಎಂಥಾ ಅನುಭವ... ಎಂಥಾ ಸುಖ.... ಆ ಸುವಾಸನೆ... ಆ ಪರಿಮಳ. ಕರಿಯನ ಸ್ಮೃತಿಯೊಳಗೆ ಊದಿನ ಕಡ್ಡಿಯ ಹೊಗೆಯಂತೆ ಸುರಳಿ ಸುರಳಿಯಾಗಿ ಸುತ್ತತೊಡಗಿತ್ತು..

ಆ ನೆನಪು... ಯುದ್ಧ ಪ್ರಾರಂಭವಾಗುವುದಕ್ಕಿಂತ ಮುಂಚೆ... ಅಂದರೆ ಬರೀ ಒಂದು ವಾರ ಮುಂಚೆ ತನ್ನ ಕುಲದೇವರಾದ ಕಾಳಿಕಾ ಗುಡಿಯೊಳಗೆ ಚೆನ್ನಿಯ ಕೈ ಹಿಡಿದಿದ್ದ. ಹನಿಮೂನ್ ರಜಾ ಮಂಜುರಾತಿ ಮಾಡಿಸಿಕೊಂಡಿದ್ದ.

ಆದರೇನು? ಸೌಂದರ್ಯವನ್ನು ಸವಿಯಲಿಕ್ಕೆ ಕಣ್ಣು ತೆರೆದಾಗ ಮಣ್ಣು ಬೀಳಬೇಕೆ?

ದೇಶದ ಮೇಲೆ ವೈರಿಗಳು ಏರಿ ಬಂದುದಕ್ಕೆ ಸೈನ್ಯ ಪಡೆ ಅಧಿಕಾರಿಗಳು, ಪರಿಚಾರಕರು ಕೂಡಲೇ ಗಡಿ ಎಡೆಗೆ ಸಾಗಬೇಕೆಂಬ ಆಜ್ಞೆ ಬಂತು. ಆರಾಮಿಗಾಗಿ ತಮ್ಮ ತಮ್ಮ ಊರು ಸೇರಿದ್ದ ಯೋಧರು ನಿವೃತ್ತ ಯೋಧರೂ ಸನ್ನದ್ಧರಾದರು. ಬೇರೆ ಬೇರೆ ಕೆಲಸಗಳಲ್ಲಿ ತೊಡಗಿದರು ಹೊರಡಲು ಅನುವಾದರು. ದೇಶದ ಕಹಳೆಯ ಕರೆಗೆ ಧಾವಿಸಿದರು.

ಕರಿಯನೂ ಕರೆಗೆ ತಯಾರಾದ.

ಬ್ಯಾಂಕಿನ ಜನರೆಲ್ಲ ಸೇರಿ ಅವನಿಗೆ ಹಾರ ಹಾಕಿ ಭಾಷಣ ಬಿಗಿದು ರಾಷ್ಟ್ರಸೇವೆಗೆ ಸಾಗುತ್ತಿರುವ ಈ ಯೋಧನಿಗೆ ಯಶ ಸಿಗಲೆಂದು ಹಾರೈಸಿದರು. ದೇಶಭಕ್ತಿ ಗೀತೆಗಳು ನಾಯಿಕೊಡೆಯಂತೆ ಮೊಳಕೆಯೊಡೆದವು. ಕಡಿವಷ್ಟು ತೂರಿಸಿಕೊಳ್ಳುವ ಜನರಲ್ಲಿ ರಾಷ್ಟ್ರಭಕ್ತಿ ಉಕ್ಕೇರತೊಡಗಿತು.

ಭಾಷಣದ ಆವೇಶದಲ್ಲಿ ಮ್ಯಾನೇಜರ್ ಎಂದರು:

"ನಮ್ಮ ಕರಿಯನ ಎದೆಗಾರಿಕೆಯೇ ಎದೆಗಾರಿಕೆ ಎಷ್ಟು ಅಂಜದೆ ಅಳುಕದೆ ಪುನಃ ಸಂತೋಷದಿಂದ ಗಡಿ ಪ್ರದೇಶಕ್ಕೆ ತೆರಳುತ್ತಿದ್ದಾನೆ."

ಸಭಾಂಗಣ ಕರತಾಡತನದಿಂದ ಕಿವಿ ಗಡುಚಿಕ್ಕಿತು.

ಕರಿಯ ಕಣ್ಣು ಕಣ್ಣು ಬಿಡುತ್ತ ನಿಂತಿದ್ದ. ಹೊಟ್ಟೆಯಲ್ಲಿ ಕೈ ಹಾಕಿ ಕಲಕಿದಂತಾಯಿತು. ಅವನ ಎದೆಯ ಬೇಗುದಿ ಅವನೇ ಬಲ್ಲ. ಬೆಂಕಿಯಲ್ಲಿ ಬಿದ್ದ ಹುಳುವಿನಂತೆ ವಿಲಿವಿಲಿ ಒದ್ದಾಡಿದ...

ಈ ಹಾರ, ಈ ಮಾತು ಯಾರಿಗೆ ಬೇಕು? ಹಾಳಾಗಿ ಹೋಗಲಿ.

-ಎಂದು ಶಾಪ ಹಾಕಿದ.

ಈ ನರ ಸತ್ತ ಶಾಪಕ್ಕೆ ಎಲ್ಲಿಯ ಬೆಲೆ? ಕಾಲುಗಳನ್ನು ಎಳೆದು ಹಾಕುತ್ತ ಹೊರಟ.

ಚೆನ್ನಿಯ ಹತ್ತಿರ ಹೋಗಿ ಕಣ್ಣು ತುಂಬ ನೀರು ತಂದುಕೊಂಡು ಹೇಳಿದ:

"ಚೆನ್ನಿ ನಾ ಬಂದೇ ಬರ್ತೀನಿ... ನಾ ಬರೋ ತನಕ ಜ್ವಾಕಿಯಿಂದ ಇರು"

ಹೌದು ಚೆನ್ನಿಯ ಕಿವಿಯಲ್ಲಿ ಈ ನಲ್ನುಡಿಯನ್ನು ಉಸುರಿ ಎರಡು ವರುಷ ಕಳೆದಿರಬೇಕು.

"ಚೆನ್ನಿ ಹ್ಯಾಂಗಿದ್ದಾಳೋ ಏನೋ? ವೈರಿ ಸೈನ್ಯದ ಮ್ಯಾಲೆ ನಾ ನುಗ್ಗಿರೋದನ್ನ ನೆನೆದು ಹೆಮ್ಮೆಪಡಲೇಬೇಕು. ಎಲ್ಲರ ಮುಂದ ತಲೀ ಎತ್ತಿ ನಮ್ಮ ಕರಿಯಾ ಯುದ್ಧ ಮಾಡಾಕೆ ಹೋಗ್ಯಾನ ಏನಂತ ತಿಳಿದೀರಿ (ಇರಲಿ ಇಲ್ಲೆ ನಾ ಅಡಗಿ ಮಾಡಾಂವಾ ಆಗಿದ್ರ ಏನಾತು ಆಕಿ ಹೆಂಗ ಹೇಳೇ ಹೇಳ್ತಾಳು ಅಂತ ಮರೆತೀರಬಹುದು. ನನ್ನ ನೋಡಿದ ಕೂಡಲೇ ನನ್ನ ಕರಿಯಾ ಬಂದಾ ಅಂತ ಓಣೆ ತುಂಬ ಹರದಾಡಬಹುದು..."

ಹೀಗೆಲ್ಲಾ ಕನವರಿಸ್ತಾ ಸಾಗಿದ್ದ ಕರಿಯಾ.

ಚೆನ್ನಿಯ ನೆನಪಿನ ಗಾಳಿಯ ಸವಾರನಾಗಿ ಊರನ್ನು ಸೇರಿದ.

ಕರಿಯ ಅಗಸಿ ಬಳಿ ಬಂದಾಗ ಕತ್ತಲಾಗಿತ್ತು. ಆ ಕಡೆ ಈ ಕಡೆ ಕೊರಳು ಹೊರಳಿಸುತ್ತ ಊರೊಳಗೆ ನಡೆದ. ರಣರಂಗಕ್ಕೆ ತನ್ನನ್ನು ಕಳುಹಿಸಿದ ಜನ ಸಂಭ್ರಮದಿಂದ ಸತ್ಕರಿಸಿ ಸ್ವಾಗತಿಸುತ್ತಾರೆ ಎಂದು ಬಗೆದ ಕರಿಯನ ಸ್ವಪ್ನದ ಮೊದಲನೇ ಮೆಟ್ಟಿಲೆ ಕಳಚಿ ಬಿದ್ದಂತಾಯಿತು. ದೇಶಭಕ್ತಿಯ ಬಲೂನು ಒಡೆದುಹೋಗಿತ್ತು. ನೋಡಿಯೂ ನೋಡದಂತೆ ಕೆಲವರು ಹೋದರೆ ಮತ್ತೆ ಕೆಲವರು ಕುಹಕನಗೆ ಇವನತ್ತ ಬೀರಿದರು. ಆಗಂತೂ ಕರಿಯ ಸಹಿಸದಾದ.

ಇನ್ನು ಚನ್ನಿ... ಚನ್ನಿ...

ಸಂದಿಗೊಂದಿಯಲ್ಲಿ ಹಾದು ಚನ್ನಿಯ ಮುರುಕಲು ಮನೆಗೆ ಬಂದು ತಲುಪಿದ ಕರಿಯ. ಬಾಗಿಲು ಮುಂದೂಡಿತ್ತು.

"ಬಾಗಿಲ ಮುಂದೆ ನಿಂತು ಸ್ವಾಗತ ಮಾಡೋದು ಬಿಟ್ಟು ಎಲ್ಲಿ ಹಾಳಾಗಿ ಹೋಗ್ಯಾಳೋ ಈ ಚನ್ನಿ"

ಎಂದು ಅವನ ಒಳ ಮನ ಶಪಿಸಿತು.

ಮತ್ತೆ ತಾನೇ ಸಮಾಧಾನ ತಂದುಕೊಂಡ

"ಪಾಪ ಅವಳದೇನು ತಪ್ಪು. ನಾ ಬರೋದು ಅವಳಿಗೆಲ್ಲಿ ಗೊತ್ತಿತ್ತು"

ಮತ್ತೆ ಚನ್ನಿ ಎಲ್ಲಿ?

"ಮಲಗಿರಬೇಕು ನನ್ನ ದಾರಿ ನೋಡಿ ನೋಡಿ ಬ್ಯಾಸತ್ತ ಜೀವಾ ನೊಂದು ದಣದಿರಬೇಕು"

ಇನಿಯಳ ಬಗ್ಗೆ ಕನಿಕರಗೊಂಡು ಮೆಲ್ಲನೆ ಬಾಗಿಲು ದೂಡಿದ. ತೆರೆಯಲಿಲ್ಲ. ಒಳಗಿನಿಂದ ಚಿಲಕ ಹಾಕಿತ್ತು.

"ಚನ್ನಿ..." ಧ್ವನಿ ಕೊರಳಿನಿಂದ ಹಾದು ಹೊರ ಬರಲಿಲ್ಲ.

ಒಂದು ಕೈ ಹಾಯುವಷ್ಟು ಬಾಗಿಲು ಪಳು ಬಿಟ್ಟಿತ್ತು. ಹೊರಗಿನಿಂದಲೇ ಕೈ ಹಾಕಿ ಚಿಲಕ ತೆಗೆದುಕೊಂಡು ಒಳಗೆ ಹೋಗುವ ರೂಢಿ ಕರಿಯನಿಗೆ.

ನೆನಪು ಮರುಕಳಿಸಿತು.

ಮೆಲ್ಲಗೆ ಕೈ ಒಳಗೆ ನೂಕಿ ಚಿಲಕ ತೆರೆದ. ಎದುರುಗಡೆಯ ಮಾಡದಲ್ಲಿರಿಸಿದ ಗುಬ್ಬಿ ಸಣ್ಣ ಕೈ ದೀಪ "ಮಿಣಕ್ ಮಿಣಕ್" ಎಂದು ರೆಪ್ಪೆ ಬಡೆಯುತ್ತಿದ್ದಂತಿತ್ತು. ಕರಿಯ ಸುಣ್ಣ ಹಚ್ಚಿ ಹೋಗಿದ್ದ ಆ ಮಾಡ ಮಸಿ ಬಳೆದುಕೊಂಡು ಕಪ್ಪಾಗಿತ್ತು. ನಂದಿಹೋಗುತ್ತಿರುವ ಗುಬ್ಬಿಯನ್ನು ದೊಡ್ಡದು ಮಾಡಿದಾಗ ಧಿಗ್ಗನೆ ಉರಿ ಎದ್ದಿತು. ಕ್ಷಣ ಹೊತ್ತು ಮುಂಚೆ ಶಮನಗೊಂಡ ಉರಿಯನ್ನು ಕಂಡ ಉರಿ ಅದು.

'ಇದೇನು ಬೆಳಕು?' ಎಂದವಳೇ ಚನ್ನಿ ತನ್ನನ್ನು ಬಳಸಿದ ಬಾಹುಗಳನ್ನು ಬಿಡಿಸಿಕೊಂಡು ಹಾಸಿಗೆಯಿಂದ ಚಂಗನೆ ಜಿಗಿದೆದ್ದು ನೋಡಿದಳು.

ಕರಿಯ ಧಗಧನೆ ಉರಿಯುತ್ತಿರುವ ದೀಪವನ್ನು ಮುಖದ ಬಳಿ ಹಾಗೆಯೇ ಹಿಡಿದುಕೊಂಡು ನಿಂತಿದ್ದ. ಕಣ್ಣುಜ್ಜಿಕೊಂಡು ನೋಡಿದಳು ಚನ್ನಿ.

ಅದೇ ಕರಿಯ ಅದೇ ಉರಿ.

ಅವಸರವಸರವಾಗಿ ಸೀರೆ ಸುತ್ತಿಕೊಂಡರೂ ಕಾಣಿಸುವಂಥವು ಕಂಡೇ ಕಂಡವು. ಕರಿಯನಿಗೆ ಕಂಡದಂತೆ.

ಚೆನ್ನಿಗೆ ಏನು ಹೇಳಬೇಕು ತಿಳಿಯಲಿಲ್ಲ. ಅವಳ ಬಾಳಿನಾಕಾಶದಲ್ಲಿ ಧೂಮಕೇತು ಮೂಡಿದಂತಾಯಿತು. ಈ ಹಾಳು ಅಪಶಕುನ ಮತ್ತ್ಯಾಕೆ ತಿರುಗಿ ಬಂತೋ. ಮನದೊಳಗೆ ಶಪಿಸಿದಳು.

ಮನಸ್ಸು ಗಟ್ಟಿ ಮಾಡಿಕೊಂಡು,

"ಏನು ನೀನು ತಿರುಗಿ ಬಂದ್ಯಾ?" ಎಂದಳು. ಕಾದ ಕರಿಯನ ಮೈ ಚುರ್ರೆಂದಿತು.

"ಚೆನ್ನಿ ನಿನ್ನ ಕುತಗಿ ಹಿಚುಗಿಬಿಡ್ತೀನಿ. ಇನ್ನು ಸ್ವಲ್ಪ ದಿವ್ಸ ತಡೀದ ಇಂಥ ಹಾದರಾ ಯಾಕು ಮಾಡಿದಿ?"

ಎಂದು ಕೂಗಿಕೊಂಡ ಶಕ್ತಿಯನ್ನೆಲ್ಲ ಕೇಂದ್ರೀಕರಿಸಿ.

ಚೆನ್ನಿಗೂ ಕೋಪ ಬಂತು.

"ಕರಿಯ, ನಾಲಿಗಿ ಬಿಗಿ ಹಿಡಿದು ಮಾತಾಡು"

ಅವಳ ಗರ್ಜನೆಗೆ ಕರಿಯನ ಧ್ವನಿ ತಗ್ಗಿತು.

"ನಾ ಬಂದ ಬರ್ತೀನಿ ಅಂತು ಹೇಳಿದ್ನೆಲ್ಲ ಚೆನ್ನಿ"

ಅವನ ಅಸಹಾಯಕ ಹೃದಯ ಹೇಯದ ಉಸಿರನ್ನು ಉಗುಳಿತು.

"ಇನ್ನೆಷ್ಟು ದಿನ ಹಾದಿ ನೋಡಾಕ ಆಗ್ತದ. ನನ್ನ ಹಾದಿ ನಾ ನೋಡಕೊಂಡೆ."

ನಿರ್ಧಾರದ ನುಡಿಯಲ್ಲಿ ಹೇಳಿದಳು ಚೆನ್ನಿ.

ಇವರ ಚೀರಾಟಕ್ಕೆ ಕುಡಿದು ಬಿದ್ದ ಭೀಮನೂ ಎಚ್ಚೆತ್ತ. ಕರಿಯನ ಆಕಾರವನ್ನು ಕಂಡು ತತ್ತರಿಸಿದ. ಧೋತರ ಸಿಕ್ಕದೇ ಚಾದರವನ್ನೇ ಸುತ್ತಿಕೊಂಡು ನಿಂತ.

"ಏನು ಮಾಡಿದರೇನು ಹಾಳಾಗಿ ಹೋಗಲಿ. ಕ್ಯಾಪ್ಟನ್ನ ಹೋಗಬೇಡ ಅಂದ್ರೂ ಓಡಕೋತ ಬಂದೆ. ಯಾಕ ಬಂದೆ ಇಂಥ ಅಸಹ್ಯ ಚೆನ್ನಿ ಅವತಾರ ನೋಡಲಿಕ್ಕೆ. ಥೂ ಹಾಳು ಬಾಳು ಎಂದು ಚೆನ್ನಿಯ ಮುಖದ ಮೇಲೆ ಉಗುಳಿ ಬಿರುಗಾಳಿಯಂತೆ ಮನೆಯಿಂದ ಹೊರಬಿದ್ದ ಕರಿಯ. ಆಗ ಅವನನ್ನು ಸತ್ಕರಿಸಿದ್ದು ಬರಿಯ ಕತ್ತಲೆ ಮಾತ್ರ.

○

# ೧೪. ಚುನಾವಣೆ ಮತ್ತು ಬ್ರಹ್ಮರಾಕ್ಷಸ

"ಜನನಾಯಕ ಮಲ್ಲಪ್ಪನವರಿಗೆ"

ಜಯವಾಗಲಿ

"ಜನನಾಯಕ ಮಲ್ಲಪ್ಪನವರಿಗೆ"

ಜಯವಾಗಲಿ.

"ಮುಂದಿನ ಚುನಾವಣೆ"

ಇಂದೇ ಬರಲಿ.

"ಜನನಾಯಕ ಮಲ್ಲಪ್ಪನವರೇ"

ಆರಿಸಿ ಬರಲಿ.

ಗಂಟಲು ಬಿರಿಯುವಂತೆ ಕಿರುಚುವ ಅಬ್ಬರದ ಮೆರವಣಿಗೆ ಮಲ್ಲಪ್ಪ ಗೌಡರನ್ನು ಹೊತ್ತುಕೊಂಡು ಊರ ಹೊರಗಿನ 'ಒಡಕರಾಯನ' ಗುಡಿಯ ಮೈದಾನದತ್ತ ಸಾಗಿತ್ತು. ಎಲ್ಲಿ ನೋಡಿದರಲ್ಲಿ ಬಿಳಿಯ ಟೊಪ್ಪಿಗೆಗಳು, ಬಣ್ಣ ಬಣ್ಣದ ರೂಮಾಲಗಳು

ಕರಡಿ ಮಜಲಿರವರ ಮುಂದೆ, ಡೊಳ್ಳಿನವರ ಹಿಂದೆ ಕುಣಿದು ಕುಪ್ಪಳಿಸುವ ಮಲ್ಲಪ್ಪನವರ ಅನುಯಾಯಿಗಳು ಲಾಗ ಹಾಕಿದ್ದೇ ಹಾಕಿದ್ದು.

ಮೆರವಣಿಗೆಯಿಂದ ದೂರ ಸಿಡಿದು ನಿಂತಿದ್ದ ಶಂಕರಪ್ಪ, 'ಹುಂ! ಜನನಾಯಕನಂತೆ, ಜನನಾಯಕ, ಇಂವಾ ಏನ ಇದ್ದಾನ ಅನ್ನೋದು ಅಷ್ಟರಲ್ಲೇ ಇರಲಿ ಇವರಪ್ಪನ ಸಹಿತ ಬಲ್ಲೆ' ಎಂದು ಹೆಗಲ ಮೇಲಿನ ಶಾಲನ್ನು ಜೋರಾಗಿ ಕೊಡಹಿ, ಹತ್ತಿರದ ಬೇವಿನ ಮರದ ಕಟ್ಟೆಯ ಮೇಲೆ ಕುಳಿತುಕೊಂಡ. ತನ್ನ ಸಂಕಟವನ್ನು ಯಾರ ಮುಂದೆಯೂ ತೋಡಿಕೊಳ್ಳದಂತಾಗಿ ತಳಮಳಿಸಿಕೊಳ್ಳುತ್ತಿದ್ದ. ಮೆರವಣಿಗೆಯ ಮೇಲೆ ಹಲ್ಲೆ ನಡೆಸಿ ಕೈಗೆ ಸಿಕ್ಕವರನ್ನು ಥಳಿಸಿ, ಚೆಲ್ಲಾಪಿಲ್ಲಿ ಮಾಡಿಬಿಡಬೇಕೆನ್ನುವಷ್ಟು ಕೋಪ. ಏದುಸಿರು ಬಿಡುತ್ತ ಹಾಗೇ ಕುಳಿತ....

ಶಂಕರಪ್ಪ, ಮಲ್ಲಪ್ಪಗೌಡನ ಆಪ್ತ ಕಾರ್ಯದರ್ಶಿಯಾಗಿ ಹಲವಾರು ವರುಷಗಳವರೆಗೆ ಸೇವೆ ಸಲ್ಲಿಸಿದ್ದಲ್ಲದೆ, ಮೂರುನಾಲ್ಕು ಚುನಾವಣೆಯ ಸಂದರ್ಭದಲ್ಲಿ ಗೌಡನಿಗೆ ಚುಕ್ಕಾಣಿಯಾಗಿದ್ದ. ಯಾವಾಗಲೂ ಗೌಡನ ಕಾಲು ಕೆಳಗಡೆ ಸುತ್ತಾಡುವ ಈ ಮಾರ್ಜಾಲನಿಗೆ ಏನಾಯಿತು? ಇವರ ಸಂಬಂಧ ಹಳಸುವುದಕ್ಕೆ ಅದೇನು ಚಿತಾಮಣಿಯಾಯಿತೋ?

ಒಂದು ದಿನ ಅಚಾನಕ್ ಮಲ್ಲಪ್ಪಗೌಡ ಇವನನ್ನು ತನ್ನ ಆಪ್ತಕಾರ್ಯದರ್ಶಿತ್ವದಿಂದ ಕಿತ್ತುಹಾಕಿ, ಆ ಜಾಗಕ್ಕೆ ಶಹರದಿಂದ ಒಲಸೆಬಂದ ಶೇಖರನನ್ನು ನೇಮಿಸಿಕೊಂಡ. ಬಹುಶಃ ಗೌಡನಿಗೆ ಶಹರದ ರಾಜಕೀಯ, ಶಂಕರಪ್ಪನಿಗಿಂತ ಶೇಖರನಿಗೆ ಹೆಚ್ಚು ಗೊತ್ತಿರಬೇಕು ಎಂದುಕೊಂಡಿರಬಹುದು. ಆದರ ಜೊತೆಗೆ ತನ್ನ ರಾಜಕೀಯ ವರ್ಚಸ್ಸನ್ನು ಶಹರದವರೆಗೂ ವಿಸ್ತರಿಸಿಕೊಳ್ಳಬೇಕೆಂಬ ದಾಹ.

ಬಾಲಸುಟ್ಟ ಬೆಕ್ಕಿನಂತಾಗಿತ್ತು ಶಂಕರಪ್ಪನ ಅವಸ್ಥೆ. ಗೌಡನ ಮೇಲೆ ಹೇಗಾದರೂ ಮಾಡಿ ಸೇಡು ತೀರಿಸಿಕೊಳ್ಳಬೇಕೆಂಬ ಹಟ.

ಕೈ ಕೈ ಹಿಚುಕಿಕೊಂಡ, ಗುದ್ದಿಕೊಂಡ.

ಎಲ್ಲಿಂದಲೋ ದೆವ್ವಗಾಳಿ 'ರೊಂಯ್ ರೊಂಯ್' ಎಂದು ಬೀಸತೊಡಗಿತು. ನೆಲದ ಮೇಲೆ ಬಿದ್ದ ವಸ್ತುಗಳನ್ನೆಲ್ಲ ಕೊಂಚ ದೂರದವರೆಗೆ ತಳ್ಳಿಕೊಂಡು ಹೋಗಿ ಮೇಲಕ್ಕೆದ್ದ ಸುಳಿ ಚೆಲ್ಲಾಪಿಲ್ಲಿ ಮಾಡಿತು.

ಶಂಕರಪ್ಪನ ಟೊಪ್ಪಿಗೆ ಆ ಸುಂಟರ ಗಾಳಿಯಲ್ಲಿ ಎಲ್ಲೆಲ್ಲೋ ಪಕ್ಷಾಂತರಿಗಳಂತೆ ಹಾರಾಡತೊಡಗಿತು. 'ಅಲಾಇವ್ನ! ಎಲ್ಲೆ ಹಾರ್‍ತದಲೇ ಇದು' ಎಂದು ಹಿಡಿಯುವಷ್ಟರಲ್ಲಿ ಮತ್ತೆ ಪುಟುಗಿಬಿಡುತ್ತಿತ್ತು.

ಮತ್ತೊಂದು ದೊಡ್ಡ ದೆವ್ವಗಾಳಿ. ಶಂಕರಪ್ಪ ಈ ಸಲ, 'ನಾನೇ ಎಲ್ಲಿ ಹಾರಿ ಹೋಗಿಬಿಡುತ್ತನೊ' ಎಂಬ ಗಾಬರಿಯಿಂದ ಓಡಿಹೋಗಿ, ಬೇವಿನ ಮರದ ಬೊಡ್ಡೆಯನ್ನು ಗಟ್ಟಿಯಾಗಿ ಅಪ್ಪಿಕೊಂಡ.

ನೋಡುನೋಡುತ್ತಿದ್ದಂತೆ ಗಿಡವು ಬುಡಮೇಲಾಗಿ ನಿಂತಂತೆ ಭಾಸವಾಯಿತು. ಮರುಕ್ಷಣದಲ್ಲಿ ಮೇಲಾದ ಬೇರುಗಳು, ಇಳಿಯುತ್ತ, ಜಡೆಯಾಗಿ ಬೆಳೆಯುತ್ತ, ಬೃಹದಾಕಾರ ತಳೆದವು.

ಶಂಕರಪ್ಪನ ಮುಖ ಬಿಳಿಚಿಕೊಂಡಿತು. ಬಾಯಿ ಒಣಗಿ ನಾಲಿಗೆ ಸೇದಿ ಬಂದಂತಾಯಿತು. ಗಂಟಲಲ್ಲೇ ಶಬ್ದಗಳನ್ನು ಹಿಚುಕಿದಂತೆನ್ನಿಸಿತು.

'ಹೌದು! ಅಜ್ಜ ಹೇಳಿದ ಮಾತು ಖರೇ ಐತಿ. ಈ ಗಿಡದಾಗ ಬ್ರಹ್ಮರಾಕ್ಷಸಾ ಐತಿ. ಎಪ್ಪೋ! ಹ್ಯಾಂಗ ಪಾರಾಗೋದು ಇನ್ನು ಅಂತೇನ' ಎಂದು ಶಂಕರಪ್ಪ ಕಂಗೆಟ್ಟು ಬಡಬಡಿಸತೊಡಗಿದ.

ನಿಧಾನವಾಗಿ ಆ ಬ್ರಹ್ಮರಾಕ್ಷಸ ಶಂಕರಪ್ಪನ ಬಳಿ ಸಾಗಿ, ಹಾರಿಹೋದ ಅವನ ಟೊಪ್ಪಿಗೆಯನ್ನು ಮತ್ತೆ ಅವನ ತಲೆಯ ಮೇಲಿರಿಸಿ "ಶಂಕರಪ್ಪ, ಗಾಬರಿಯಾಗಬ್ಯಾಡಾ. ನೀನು ಮನಸಿನ್ಯಾಗ ಅಂದಕೊಂಡಹಂಗ ನಾ ಬ್ರಹ್ಮರಾಕ್ಷಸಾ ಖರೇ! ಆದರ ನೋಡು, ನಾನು ಮನುಷ್ಯರ ಹಾಂಗ ಕುಬ್ಜ ಆಗಿ ಬರ್‍ತೀನಿ ನಿನ್ನ, ಒಂದು ಮಾತು ಕೇಳಬೇಕಾಗೇದ" ಎಂದಿತು.

ಬಿಗಿಯಾಗಿ ಹೊಲಿದುಕೊಂಡ ರೆಪ್ಪೆಗಳನ್ನು ಶಂಕರಪ್ಪ ಬಿಡಿಸಿಕೊಂಡು ನೋಡಿದ.

ಮಾನವರೂಪ ತಾಳಿದ ಆ ಬ್ರಹ್ಮರಾಕ್ಷಸ ಅದರ ಮಿದುವಾದ ಮಾತು ಕೇಳಿ, ಅವನಿಗೆ ಸ್ವಲ್ಪ ಧೈರ್ಯ ಬಂದಂತಾಯಿತು. ಎಂಥೆಂಥ ಮನುಷ್ಯರ ಸಹವಾಸ ಮಾಡಿದ ಶಂಕರಪ್ಪನಿಗೆ ಈ ಬ್ರಹ್ಮರಾಕ್ಷಸ ಅಪಾಯಕಾರಿ ಎನ್ನಿಸಲಿಲ್ಲ.

"ಬ್ರಹ್ಮರಾಕ್ಷಸಾ ಅದ್ಯಾವ ಮಾತು ನೀನು ನನ್ನ ಕೇಳಬೇಕಂದೀ...?"

ಮಾತಿಗಾರಂಭಿಸಿದ ಶಂಕರಪ್ಪ. ಬ್ರಹ್ಮರಾಕ್ಷಸ ಅವನನ್ನ ಹತ್ತಿರ ಎಳೆದುಕೊಂಡು ಕುತೂಹಲದಿಂದ ಕೇಳಿತು.

"ಅಲ್ಲಾ, ನಾನು ಭಾಳಾ ದಿವ್ಸದಿಂದ ನೋಡಲಿಕ್ಕೆ ಹತ್ತೀನಿ ಈ ಮನುಷ್ಯರ ಗತ್ತs ಗುರ್ತ ಆಗವಲ್ದು; ಅದೇನು ಈ ಮಲ್ಲಪ್ಪಗೌಡನ ಹಿಂದೆ ಜೈ ಜೈ ಜೈ ಅನಕೋತ ಇಷ್ಟs ಜನಾ ತಿರುಗ್ತಾರಲ್ಲಾ"

"ಇನ್ನೇನೋ ಎಲೆಕ್ಷನ್ ಬರ್ತದಂತ. ಅದರ ತಯಾರಿ ಈಗs ನಡಿಸ್ಯಾನ ಇಂವಾ. ಗುಂಪು ಕಟ್ಟಲಿಕ್ಕೆ ಹತ್ಯಾನ. ದೊಡ್ಡ ಎಲೆಕ್ಷನ್ನದಾಗ ಆರಿಸಿ ಬಂದು, ಮಗಾ ಮಂತ್ರಿ ಆಗೋ ಕನಸು ಕಾಣಲಿಕ್ಕೆ ಹತ್ಯಾನ."

"ಎಲೆಕ್ಷನ್ ಅಂದ್ರ?..."

"ಎಲೆಕ್ಷನ್ ಅಂದ್ರ ಗೊತ್ತಿಲ್ಲಾ? ಹೊಗ್ಗೋ ನಿನs.... ನೀ ಎಂಥಾ ಬ್ರಹ್ಮರಾಕ್ಷಸಾ ಅಂತೀನಿ.."

ಎಂದು ಗೊಳ್ಳನೆ ಧೋತರದ ಚುಂಗನ್ನು ಬಾಯಲ್ಲಿ ಸಿಕ್ಕಿಸಿಕೊಂಡು ನಗತೊಡಗಿದ. ಬ್ರಹ್ಮರಾಕ್ಷಸಗೆ ಸ್ವಲ್ಪ ಅಸಮಾಧಾನವಾಗಿರಬೇಕು.

"ಲೋ! ಮನುಷ್ಯಾ ಯಾಕ ನಗ್ತೀ?" ಎಂದು ಗದ್ದರಿಸಿತು.

"ಸಿಟ್ಟಿಗೇಳಬ್ಯಾಡೋ ಮಹಾರಾಯಾ, ನಮ್ಮ ಜನಕ್ಕ ನಾವು ಯಾರು? ನಮ್ಮ ದೇಶ ಯಾವುದು ಗೊತ್ತಿರಲಿ ಬಿಡಲಿ, 'ಎಲೆಕ್ಷನ್' ಮಾತ್ರ ಗೊತ್ತು. ಎಲೆಕ್ಷನ್ ಅಂದ್ರ ಕಲೆಕ್ಷನ್ ಅಂದ್ರ ಅಂತ ಮುತ್ತ ನೀ ಕೇಳ್ತಿ. ಕಲೆಕ್ಷನ್ ಅಂದ್ರ, ಬಳಕೋಬೇಕು. ಮೊದಲು ಓಟ ಬಳಕೊ, ಆಮ್ಯಾಗ ರೊಕ್ಕಾ ಬಳಕೋ ಅಂತ ಅರ್ಥಾ. ಇದರ ರುಚಿ ತಾಗಿತು ಅಂದ್ರ ಮುಗೀತು, ಕರಡಿಗೆ ಕಳ್ಳಿನ ಸೇಂದಿ ಹತ್ತಿದ್ಹಂಗ ತನ್ನದ ಹಿಡ್ತಾ ಹಾಕ್ಕೊಂತ ಕುಂದ್ರತದ. ಎಲೆಕ್ಷನ್ನಿಗೆ ನಿಲ್ಲೋದು, ಆರಿಸಿ ಬರೋದು. ಆಮ್ಯಾಗ ಮಂತ್ರಿ ಆಗೋದು, ಘನಮಜಾ ಹೋಗು... ಅದು..."

ಇದನ್ನೆಲ್ಲ ಆಲಿಸಿದ ಬ್ರಹ್ಮರಾಕ್ಷಸನ ಬಾಯಲ್ಲೂ ನೀರೂರಿತು.

"ಶಂಕರಪ್ಪ ನನ್ನೂ ಈ ಎಲೆಕ್ಷನ್ನ್ಯಾಕ ನಿಂದ್ರಲಿಕ್ಕೆ ಬರೋದಿಲ್ಲೇನು?"

"ಏನು ಬ್ರಹ್ಮರಾಕ್ಷಸ, ನೀನು ಎಲೆಕ್ಷನ್ನಿಗೆ ನಿಂದ್ರಬೇಕು ಅಂತೀಯಾ?"

"ಯಾಕ ಅದು ಮನುಷ್ಯಾರಿಗಷ್ಟs ಅದs ಏನು?"

"ಛೇ, ಛೇ.... ಹಂಗೇನಿಲ್ಲ" ಎಂದ ಶಂಕರಪ್ಪ. ಒಂದು ಕ್ಷಣ ಯೋಚನೆಯಲ್ಲಿ ಮುಳುಗಿದ.

"ಬ್ರ. ರಾ. ನೀ ಒಂದು ವ್ಯಾಕ್ಯಾ ನಿಂತ್ರ ಆ ಮಲ್ಲಪ್ಪಗೌಡನ ನೆಗವಿ ಒಗೀಬಹುದು."

"ಅಂದ್ರ...?"

"ನೀ ಆರಿಸಿ ಬಂದಾs ತೀರತೀ... ಆಮ್ಯಾಲೆ ನೋಡು ಮಜಾ..."

"ನನಗೂ 'ಜೈ ಜೈ' ಅಂತಾರೇನು ಜನಾ?"

"ಆದಕ್ಯಾಕ ಹಣಾ ಕೊಟ್ಟರ ಚುನಾವಣ್ಯಾಗ ಹೆಣಾನೂ ಜೈ ಅಂತsದs.... ಆದ್ರ ಬ್ರ. ರಾ. ಒಂದು ಕಂಡೀಸನ್..."

"ಏನದು?...."

"ನಾನು ನಿನ್ನ ಆಪ್ತಕಾರ್ಯದರ್ಶಿಯಾಗ್ತೀನಿ. ನಾ ಹೇಳಿದ್ಹಂಗ ನೀ ಕೇಳಬೇಕು."

"ಹಂಗs ಆಗಲಿ, ನೀ ಹ್ಯಾಂಗ ಹೇಳ್ತಿ ಹಂಗs ಕೇಳ್ತೀನಿ."

"ಒಳ್ಳೇದು ಇವತ್ತಿನಿಂದ ನಾ ನಿನ್ನ ಆಪ್ತ ಕಾರ್ಯದರ್ಶಿ ಏನ ಕೆಲಸಾ ಮಾಡಿದ್ರು ನೀ ನನ್ನ ಕೇಳೇ ಮಾಡಬೇಕು. ನಾ ಹೇಳಿದ್ಹಂಗ ನಡಕೋಬೇಕು."

"ಹುಂ!" ಎಂದು ಗೋಣಹಾಕಿ ಒಪ್ಪಿಗೆ ಸೂಚಿಸಿತು ಬ್ರಹ್ಮರಾಕ್ಷಸ.

* * *

ಶಂಕರಪ್ಪ ಸಂಭ್ರಮದಿಂದ ಓಡಾಡಿ ದೇ.ಭ.ಗೆ ಬೇಕಾಗುವ ಉಡಿಗೆತೊಡಿಗೆಗಳನ್ನೆಲ್ಲ ಸಿದ್ಧಪಡಿಸಿದ. ಖಾದೀ ಧೋತರ, ಕಡಕ್ ಇಸ್ತ್ರಿ ಆದ ನೆಹರು ಶರ್ಟು ಟೊಪ್ಪಿಗೆ ಎಲ್ಲವೂ ಬೆಳ್ಳಗೆ ಚಕಚಕ ಹೊಳೆಯುತ್ತಿದ್ದವು.

ಬ್ರಹ್ಮರಾಕ್ಷಸ ಅವುಗಳನ್ನೆಲ್ಲ ಧರಿಸಿಕೊಂಡು ಶಂಕರಪ್ಪನ ಮುಂದೆ ಬಂದು ನಿಂತು, 'ಹ್ಯಾಂಗ ಕಾಣಸ್ತೀನಿ ಈಗ?' ಎಂದು ಕೇಳಿತು.

"ವ್ಹಾ! ಬ್ರ.ರಾ. ನೀನು ಥೇಟ ದೇ.ಭ.ನಂಗ ಕಾಣಸ್ತಿ. ಚುನಾವಣೆಯೊಳಗ ಗೆದ್ದ ಹಾಂಗs" ಎಂದು ಶಂಕರಪ್ಪ ಸ್ವಲ್ಪ ಹುಬ್ಬು ಮೇಲೇರಿಸಿ, ಅದರತ್ತ ದೃಷ್ಟಿ ಬೀರುತ್ತ ಕೇಳಿದ.

"ನಿನ್ಗ ಏನಂತ ಹೆಸರ ಇಡಬೇಕು?"

"ನನ್ಗ ಅದೆಲ್ಲ ಗೊತ್ತಿಲ್ಲ. ನಾನು ಬ್ರಹ್ಮರಾಕ್ಷಸಾ ಅಂತನs ಹೇಳೋದು."

"ಛೇ... ಛೇ... ಹಂಗೆಲ್ಲ ಬಾಯಿಬಿಟ್ಟೀ"

"ಮತ್ತೇನ ಮಾಡೋದು? ನೀನs ಹೇಳು."

"ಹಾಂ! ನಿನ್ನ ಬ್ರ.ರಾ. ಅಂತನs ಕರಿಯೋಣ."

"ಅಂದ್ರ...?"

"ಅಂದ್ರ ಬ್ರಹ್ಮರಾಕ್ಷಸ ಅಲ್ಲಾ ಬ್ರಹ್ಮರಾಜ. ಮತ್ತ ಯಾವಾಗಲೂ ನಿನ್ನ ಬಾಯಾಗ ಗಾಂಧೀ, ಭಾರತ, ದೇಶೋದ್ಧಾರ, ಬಡತನ ಅನ್ನೋ ಬ್ರಹ್ಮರಾಕ್ಷಸನ್ನ ತೊಲಗಿಸಿರಿ ಅನ್ನೋ ಮಾತs ಇರಬೇಕು."

"ಹಂಗs ಆಗಲಿ. ಈಗ ಮತ್ತ ನನಗ ಜೈ ಅಂತಾರೋ ಇಲ್ಲೋ?"

"ಒಂದು ತಾಸ 'ಟೈಂ' ಕೊಡು ನನ್ಗ. ಆಮ್ಯಾಲೆ ನೋಡು ಅದ್ರ ಮಜಾ. ಹುಂ! ಈಗ ನೀನು ಈ ಗುಡೀಯೊಳಗ ಅಂದ್ರ ಮಲ್ಲಪ್ಪಗೌಡನ ಸಭಾ ಮುಗೀತದಲ್ಲ. ಅಲ್ಲೇ ನೀನು ಧ್ವಜಾ ಊರಬೇಕು. ನಾನು ಊರಾಗ ಹೋಗಿ ನಿನ್ನ ಜೈ ಜೈಕಾರ ಮಾಡಲಿಕ್ಕೆ ಜನರ್ನ ಕೂಡಿಸಿಕೊಂಡು ಬರ್ತೀನಿ."

"ಅದು ಹ್ಯಾಂಗ, ಲವರು ನನ್ನ ನೋಡಿಲ್ಲ ಸಹಿತ?"

"ಅದಕ್ಯಾಕ ಚಿಂತೀ ಮಾಡ್ತೀ ರೊಕ್ಕಾ ಕೊಟ್ರ ಒಂದು ಜೈ ಅಂದ ಹೋಗ್ತಾರ. ಇನ್ನೂ ಸ್ವಲ್ಪ ಹೆಚ್ಚಿಗೆ ಕೊಟ್ಟರ, ನಿನ್ನ ಭಾಷಣಕ್ಕ ಕಿಕ್ಕಿರಿದು ಬರ್ತಾರ. ಈ ಗುಟ್ಟು ಬಿಟ್ಟುಕೊಡಬ್ಯಾಡಾ. ಜನರು ನಿನ್ನ ಮ್ಯಾಲೆ ಬಿದ್ದ ಸಾಯೋಹಂಗ ಮಾಯಾಮಾಡ್ತೀನಿ ನೋಡು. ನಾನು ಬರ್ತೀನಿ ಹಂಗಾದ್ರ. ಮಲ್ಲಪ್ಪಗೌಡ ಮಾಡಿದ ಭಾಷಣದ ವೇದಕೀ ಮ್ಯಾಲೇ ನಿನ್ನ ಭಾಷಣನೂ ಇವತ್ತ ಆಗಬೇಕು"

ಎಂದು ಸಂಭ್ರಮದಿಂದ ಶಂಕರಪ್ಪ ಹೊರಟುಹೋದ.

ಶಂಕರಪ್ಪ ತಂದುಕೊಟ್ಟ ನಿಲುಗನ್ನಡಿಯಲ್ಲಿ ಬ್ರ.ರಾ. ತನ್ನ ಬದಲಾದ ಆಕಾರವನ್ನು ನೋಡಿದ್ದೇ ನೋಡಿದ್ದು. ನೆಹರೂ ಶರ್ಟಿನ ನೀಳತೋಳುಗಳನ್ನು ಮುಂಗೈಯಿಂದ ಜಗ್ಗಿ ಜಗ್ಗಿ ಸರಿಪಡಿಸಿಕೊಂಡು ನೋಡಿತು. ಮೀಸೆಯನ್ನು ತಿದ್ದಿತೀಡಿ ಟೊಪ್ಪಿಗೆಯನ್ನು ಹಿಂದೆಮುಂದೆ ಎಳೆದಾಡಿಕೊಂಡಾಗ ಎಂಥ ಖುಷಿ ಅದಕ್ಕೆ....!

ಸಂಜೆ ಐದು ಗಂಟೆಯ ಸಮಯ. ದೂರದಲ್ಲಿ ಕೇಳುವ ಜೈಜೈಕಾರ ಬ್ರ.ರಾ.ದ ನಿದ್ದೆಯನ್ನು ಬಡಿಸಿ ಬಡಿದೆಬ್ಬಿಸಿದಂತಾಯಿತು. ಕಿಟಕಿಯಿಂದ ಇಣಕಿ ನೋಡಿ ಮೆಲ್ಲಗೆ ಹಿಂಜರಿಯಿತು. ಜನ ತಂಡೋಪತಂಡವಾಗಿ ಜೈ ಜೈಕಾರ ಮಾಡುತ್ತ ತನ್ನತ್ತ ಬರುತ್ತಿರುವದು ಕಾಣಿಸಿತು. ಮೆಲ್ಲಗೆ ಆಚೆಗೆ ಸರಿಯಿತು.

ಜೊತೆಗೆ ಜೈಜೈಕಾರ ಹೇಗೆ ಮಾಡುತ್ತಾರೆ ಎಂಬುದನ್ನು ಕೇಳಬೇಕೆಂಬ ಆಸೆಯೂ ಕೂಡ ಅದಕ್ಕೆ. ಬಾಗಿಲ ಬಳಿ. ಬ್ರ.ರಾ. ಬಂದು ನಿಂತಿತು. ದೂರದಲ್ಲಿ ಮಂದವಾಗಿ ಕೇಳಿಬರುತ್ತಿದ್ದ ಜೈ ಜೈಕಾರ ಬರುಬರುತ್ತ ಜೋರಾಗಿ ಕೇಳಿಸತೊಡಗಿತು.

"ಬ್ರ.ರಾ. ಅವರಿಗೆ ಜಯವಾಗಲಿ"

"ಬ್ರ.ರಾ. ಅವರಿಗೆ ಜಯವಾಗಲಿ"

"ಜನತೆಗೆ ಉದ್ಧಾರ "

"ಬ್ರ.ರಾ. ಸಿದ್ಧಾಂತ ಬ್ರ ರಾ... ಜಿಂದಾಬಾದ್..."

ಬ್ರಹ್ಮರಾಕ್ಷಸಗೆ ಇದೇನೋ ಒಂದು ಅನುಭವ ಹಿತ. ಏಳು ಗಂಟೆಯ ಸುಮಾರಿಗೆ ಸಭೆಯ ಕಾರ್ಯ ಕಲಾಪಗಳು ಪ್ರಾರಂಭವಾದವು. ಮೊದಲು ಶಂಕರಪ್ಪನ ಮಗಳ ಪ್ರಾರ್ಥನಾ ಕಮ್ ಸ್ವಾಗತಗೀತೆ, ನಂತರ ಶಂಕರಪ್ಪನ ಸ್ವಾಗತ ಭಾಷಣ : "ಹಿರಿಯರೆ, ಅಣ್ಣಾತಮ್ಮಂದಿರೆ, ಅಕ್ಕತಂಗಿಯರೆ, ಇವತ್ತು ನಮ್ಮ ಹಿರೇಹಳ್ಳಿಯ ಸೌಭಾಗ್ಯ ತೆರೆಯಿತು ಅನ್ನಬೇಕು. ನಮ್ಮೂರಿಗೆ ಮಹಾತ್ಯಾಗಿ ಬ್ರ.ರಾ. ಅವರು ದಯಮಾಡಿಸಿದ್ದಾರೆ. ಅವರ ಪರಿಚಯ ನಿಮಗೆ ಇಲ್ಲ.

ಆದರೆ ಒಂದಸರೆ ಅವರ ಸಂಪರ್ಕ ಬಂದ್ರ ಸಾಕು. ಅವರು ಲೋಹಚುಂಬಕ ಇದ್ದ ಹಂಗ ಇದ್ದಾರs. ನಿಮ್ಮನ್ನ ಆಕರ್ಷಿಸಿಬಿಡ್ತಾರ. ಮೂವತ್ತು ವರುಷ ಹಿಮಾಲಯದೊಳಗೆ ದೇವ್ರನ್ನ ಹುಡುಕಿಕೊಂಡು ಹೋಗಿ, ತಪಸ್ಸ ಮಾಡಿ ಜನತೆಯಲ್ಲೇ ದೇವರು ಇದ್ದಾನ ಅನ್ನೋದ್ನ ಸಾಕ್ಷಾತ್ಕಾರ ಮಾಡಕೊಂಡು, ಇಲ್ಲಿಗೆ ದಯ ಮಾಡಿಸ್ಯಾರ, ಇದು ನಮ್ಮ ಭಾಗ್ಯ. ತಮ್ಮ ಕಾರ್ಯಕ್ಷೇತ್ರವಾಗಿ ಈ ಊರನ್ನ ಆರಿಸಿಕೊಂಡದ್ದು ನಮ್ಮ ಸೌಭಾಗ್ಯ. ಅವರು ಮಾತಾಡೋದಿಲ್ಲ, ಮಾತಿಗಿಂತ ಕೃತಿ ಮುಖ್ಯ. ನಿಮ್ಮೆಲ್ಲರ ಪರವಾಗಿ ಈ ಹೂ ಮಾಲೆಯನ್ನು ಅವರಿಗೆ ಅರ್ಪಿಸ್ತೀನಿ."

ಜೈ ಜೈ ಕಾರ, ಹರ್ಷೋದ್ಗಾರ, ಕರತಾಡನ.... ಬ್ರ.ರಾ. ಗೆ ರೋಮಾಂಚಕ ಅನುಭವ, ಮೈ ಉಬ್ಬಿಹೋಯಿತು. ಎದ್ದು ಗಂಭೀರವದನನಾಗಿ ನಮಸ್ಕರಿಸಿ ಒಂದೆರಡು ಮಾತನಾಡಿತು. ಮುಖದಲ್ಲಿ ಎಂಥಾ ತೇಜಸ್ಸು! ಮಾತಿನಲ್ಲಿ ಎಂಥಾ ವಿನಯ! ಇಂಥಾ ವ್ಯಕ್ತಿ ನಮ್ಮ ಮುಖಂಡ ಆದ್ರ ಸುಖದ ಕಾಲ ಬಂದಹಂಗs.

ದಿನಗಳು ಉರುಳಿದಂತೆ ಬ್ರ.ರಾ.ಗೆ ಎಡೆಬಿಡದ ಕಾರ್ಯಕ್ರಮಗಳು. ಶಂಕರಪ್ಪ ಹೇಳಿದಂತೆ ಬ್ರ.ರಾ. ಕುಣಿಯುತ್ತಿದ್ದರೂ, ಮಧ್ಯ ರಾತ್ರಿ ಎರಡು ಗಂಟೆಯ ನಂತರ ಯಾರೂ ತನ್ನನ್ನು ಕಾಣಬಾರದೆಂದು ಕಟ್ಟಪ್ಪಣೆ ಮಾಡಿತ್ತು. ಆ ಸಮಯಕ್ಕೆ ಅದು ತನ್ನ ಮೂಲಸ್ವರೂಪವನ್ನು ಹೊಂದಿ ತನ್ನ ಚಟುವಟಿಕೆಗೆ ಅಣಿಯಾಗುತ್ತಿತ್ತು.

ಚುನಾವಣೆಯ ಝಳ ಹಿರೇಹಳ್ಳಿಗೂ ತಾಗಿತು. ಅಬ್ಬರದ ಪ್ರಚಾರ ಹಣಾಹಣಿ; ಗೋಡೆಕಿಟಕಿಬಾಗಿಲು ಕಾಣದಷ್ಟೂ ಪ್ರಚಾರ ಸಾಹಿತ್ಯ.

ಮಲ್ಲಪ್ಪಗೌಡನನ್ನು ಮಣ್ಣು ಮುಕ್ಕಿಸಬೇಕೆಂಬ ಪಣತೊಟ್ಟ ಶಂಕರಪ್ಪ ಬ್ರ.ರಾ. ಪರ ಭಾರೀ ಪ್ರಚಾರ ನಡೆಸಿದ.

ಕೊನೆಯ ಗಳಿಗೆಯಲ್ಲಿ ಮಲ್ಲಪ್ಪ ಏನೋ ಕುತಂತ್ರ ಹೂಡಿದ ಸುಳುಹು ಹತ್ತಿತು. ಅವೆರಡು ಕುಳಗಳನ್ನು ಹತ್ತಿಕ್ಕಿದರೆ ಆಯ್ತು. ಆದರೆ ಅದು ಹೇಗೆ ಎಂದು ಯೋಚಿಸತೊಡಗಿದ.

"ಶಂಕರಪ್ಪ, ನನ್ಗ ಹೇಳು ಏನ ಮಾಡಬೇಕು?"

"ಅದs ತಿಳೀವಲ್ದು ಬ.ರಾ. ಈ ಚುನಾವಣೆಯೊಳಗ ಯಾರs ಅಡ್ಡ ಬರಲಿ ಅವರ್ನ ಖತಂ..."

"ಇಷ್ಟನs.... ನನಗ ಯಾರ ಈಡು? ಯಾರು ತೋರಸು, ನುಂಗಿ ನೀರ ಕುಡ್ದಬಿಡ್ತೀನಿ."

ಶಂಕರಪ್ಪನಿಗೆ ಅದೇ ದಾರಿ ಸರಿ ಎನ್ನಿಸಿತು. ಬ್ರ.ರಾ. ಚುನಾವಣೆ ಕಣಕ್ಕಿಳಿಯಿತು.

ಚುನಾವಣೆಗಳು ಮುಗಿದವು. ಬ್ರ.ರಾ. ಅತ್ಯಂತ ಬಹುಮತದಿಂದ ಆರಿಸಿ ಬಂತು. ಮಲ್ಲಪ್ಪಗೌಡ ಮುಖ ಮೇಲೆತ್ತದ ಹಾಗೆ, ಇಡುಗಂಟು ಕಳೆದುಕೊಂಡು ಉಡುಗಿಹೋದ. ಆದರೂ ಒಳಗೊಳಗೇ ದ್ವೇಷದ ಉರಿ ಹೊತ್ತಿ ಉರಿಯತೊಡಗಿತ್ತು.

ಬ್ರ.ರಾ. ದ. ಅದ್ದೂರಿ ವಿಜಯದ ಮೆರವಣಿಗೆ ಅದರ ಅಧ್ವರ್ಯು ಶಂಕರಪ್ಪ, ಮಠದ ಆನೆಯ ಮೇಲೆ ಬ್ರ.ರಾ.ನನ್ನು ಕೂಡಿಸಿದ್ದರು. ಅದರ ಮುಂದೆ ಕರಡೀ ಮಜಲಿನ ಮೇಳ,

ಅದರ ಹಿಂದೆ ಹಿರೇಹಳ್ಳಿಯ ವೇಶ್ಯೆಯರ ಅರಬೆತ್ತಲೆ ನೃತ್ಯ, ಅದರ ಮುಂದೆ ಕುಡುಕರ ತಂಡದ ಹಾಡುಕುಣಿತ. ಹಿಂದೆ ಹಿಂದೆ ಇಡೀ ಹಿರೇಹಳ್ಳಿಯೇ ಜೈ ಜೈಕಾರ ಮಾಡುತ್ತ ನಡೆದಿತ್ತು. ಮೆರವಣಿಗೆ ದ್ಯಾಮವ್ವನ ಗುಡಿಯ ಬಳಿ ಬಂತು. ಕಡಿಸಿಕೊಳ್ಳಲು ಹದವಾಗಿ ಮೇಯ್ದು ಕೊಬ್ಬಿದ ಕೋಣ ನಿಂತಿತ್ತು. ಅದನ್ನು ನೋಡಿದ ತಕ್ಷಣವೇ ಅದರ ಮೇಲೆ ಹಾರಿ ಬಿಡಬೇಕೆನ್ನಿಸಿತು ಬ್ರ.ರಾ.ಗೆ ಶಂಕರಪ್ಪನ ಕಿವಿಯಲ್ಲಿ ಉಸುರಿತು. ಶಂಕರಪ್ಪ ಅದರ ತೊಡೆ ಚಿವುಟಿ ಸುಮ್ಮನಿರಿಸಿದ.

ಪೂಜೆ ಮಾಡಿ ಕೋಣನ ಕತ್ತಿಗೆ ಕತ್ತಿ ಹಾಕಿದರು. ರುಂಡಮುಂಡ ಬೇರೆಬೇರೆಯಾಗಿ ಬಿದ್ದವು. ರಕ್ತದ ಕೋಡಿ ಹರಿಯತೊಡಗಿತು. ಮತ್ತೆ ಜೈ ಜೈಕಾರ ಅದು ಮುಗಿಯುವಷ್ಟರಲ್ಲಿ ಅಲ್ಲಿ ಕೋಣದ ರುಂಡವೂ ಇರಲಿಲ್ಲ. ಮುಂಡವೂ ಇರಲಿಲ್ಲ. ರಕ್ತವೂ ಇರಲಿಲ್ಲ.

ಬ್ರ.ರಾ. ತನ್ನ ಹುಟ್ಟುಗುಣ ಬಿಟ್ಟಿರಲಿಲ್ಲ. ಕ್ಷಣಾರ್ಧದಲ್ಲಿ ಮುಗಿಸಿ ಹಾಕಿತ್ತು. ಜನ ಚಕಿತರಾದರು. ಏನಾಯಿತು ತಿಳಿಯಲಿಲ್ಲ. ಗುಜುಗುಜು ಪ್ರಾರಂಭವಾಯಿತು. ಈ ಸೂಕ್ಷ್ಮವನ್ನು ಅವಲೋಕಿಸಿದ ಶಂಕರಪ್ಪ ಎದ್ದು ನಿಂತು,

"ಬ್ರ.ರಾ. ಅವರು ಇಂತಹದ್ದನ್ನೆಲ್ಲ ಸಹಿಸರು. ಅವರ ತೇಜಸ್ಸಿಗೆ ಕೋಣ ಮತ್ತೆ ಜೀವ ತಳೆದು ಮಾಯವಾಗಿ ಹೋಗಿದೆ" ಎಂದು ಹೇಳಿದ. ಇದನ್ನು ಕೇಳಿದ ಜನ ಭಕ್ತಿಭಾವೋನ್ಮಾದದಲ್ಲಿ ಮುಳುಗಿದರು. ಒಬ್ಬೊಬ್ಬರಾಗಿ ಬಂದು ಬ್ರ.ರಾ. ನ ಕಾಲಿಗೆ ಎರಗಿ ನಮಸ್ಕರಿಸತೊಡಗಿದರು. ಬ್ರ.ರಾ.ಗೆ ಏನೂ ಅರ್ಥವಾಗಲಿಲ್ಲ. ಎಂಥ ಹುಚ್ಚು ಜನ ಇವರು ಎನ್ನಿಸಿತು.

ಬ್ರ.ರಾ.ದ ಖ್ಯಾತಿ ರಾಜಧಾನಿಯವರೆಗೂ ಹಬ್ಬಿತು. ದಿನನಿತ್ಯ ಅದರ ಮನೆ ಮುಂದೆ ಜನ ಜಾತ್ರೆ. ಸ್ವಲ್ಪೇ ದಿನಗಳಲ್ಲಿ ಬ್ರ.ರಾ. ಮಂತ್ರಿಯೂ ಆಗಬೇಕೆ? ಮುಗಿಯಿತು ಜನಪ್ರವಾಹ ಬೆಳಗಿನಿಂತ ಬೆಳಗಿನವರೆಗೆ ಬ್ರ.ರಾ. ಸುಸ್ತಾಗಿ ಹೋಯಿತು. ಶಂಕರಪ್ಪನ ಕಲ್ಪನೆ ಮೀರಿ ಸಂದರ್ಶಕರ ಆಗಮನ. ಏನು ಮಾಡಬೇಕು ತೋಚದಾಯಿತು.

ಬ್ರ.ರಾ.ಗೆ ದಿನಾಲು ಹಲವಾರು ಮಹತ್ವದ ಕಾರ್ಯಕ್ರಮಗಳು.

ಪಂಪ್‌ಸೆಟ್ ಉದ್ಘಾಟನೆ.

ಕೆರೆನೀರು ಯೋಜನೆಯ ಶಂಕುಸ್ಥಾಪನೆ,

ಕೃಷಿ ಉಪಕರಣಗಳ ವಿತರಣೆ,

ಶಾಲಾ ವಾರ್ಷಿಕೋತ್ಸವ,

ಬಡವರಿಗೆ ಭೂಮಿ ದಾನ ಸಮಾರಂಭ,

ಶಿಫಾರಸ್ಸುವರ್ಗಾಸ್ಸು. ನೌಕರಿ ಅರ್ಜಿ... ಒಂದೇ ಎರಡೇ....

ಮಧ್ಯರಾತ್ರಿಯವರೆಗೆ ಕಾರ್ಯಕ್ರಮ ನಡೆದರೂ ಎರಡು ಹೊಡೆಯುವದರಲ್ಲಿ ಬ್ರ.ರಾ. ಆಪ್ತಾಲೋಚನೆ ಕೋಣೆ ಪ್ರವೇಶಿಸಿಬಿಡುತ್ತಿತ್ತು.

ಅವತ್ತು ಬ್ರ.ರಾ.ಗೆ ತಲೆ ಸಿಡಿವಷ್ಟು ಕೋಪ, ಬೇಜಾರು. ಮನುಷ್ಯ ಇಷ್ಟೊಂದು ಕ್ಷುಲ್ಲಕ ಜೀವಿಯೆಂದು ಅದಕ್ಕ ಎನ್ನಿಸಿಯೇ ಇರಲಿಲ್ಲ. ಅದೇನೋ ಪಕ್ಷಾಂತರಿಗಳ ಭಾರೀ ಸೇರ್ಪಡೆ ಸಮಾರಂಭ. ಆ ಜನ ಬ್ರ.ರಾ.ನನ್ನು ಹೊಗಳಿದ್ದೇ ಹೊಗಳಿದ್ದು. ಎಲ್ಲರ ಮನೋವ್ಯಾಪಾರವನ್ನು ಅರಿತ ಬ್ರ.ರಾ. ಗೆ ಅವರ ಮುಖವಾಡ ಬಗೆದು ಬಕ್ಕರಿಸಿಬಿಡಬೇಕೆನ್ನಿಸಿತು. ಒಂದು ಕ್ಷಣವೂ ಬ್ರ.ರಾ. ನ್ನ ಸುಮ್ಮನ ಇರಗೊಡುತ್ತಿರಲಿಲ್ಲ. ಆ ಜನ, ನಾಯಿಗಳಂತೆ ಬಾಲ ಮುದುರಿಕೊಂಡು ದೇಶಾವರಿ ನಗೆ ಬೀರುವ ನಕಲಿ ದೇ.ಭ.ಗಳು ಒಂದೇ.... ಎರಡೇ....

ಶಂಕರಪ್ಪನ ಒತ್ತಾಯಕ್ಕೆ ಬ್ರ.ರಾ. ಹೇಗೋ ಕೆಲ ತಿಂಗಳು ನೂಕಿತು.

ಕತಕತ ಕುದಿಯುತ್ತಿದ್ದ ಮಲ್ಲಪ್ಪಗೌಡನಿಗೆ ಒಂದು ಸಂಶಯ ತಲೆದೋರಿತು. 'ಎಂಥದ್ದೇ ಸಮಾರಂಭವಿರಲಿ ಮಧ್ಯರಾತ್ರಿ ಎರಡು ಗಂಟೆಯಾದರೆ ಈ ಬ್ರ.ರಾ. ಯಾಕೆ ಆಪ್ತಾಲೋಚನೆಯ ಕೋಣೆಗೆ ಓಡುತ್ತಾನೆ. ಏನೋ ಕಾರಸ್ಥಾನ ಇರಬೇಕು.'

ಶಂಕರಪ್ಪ ಯಾವದೋ ಕಾರ್ಯಭಾರದ ನಿಮಿತ್ತ ದಿಲ್ಲಿಗೆ ಹೋಗಿದ್ದ. ಮಲ್ಲಪ್ಪಗೌಡ ಇದೇ ಸಮಯ ಸಾಧಿಸಿ ಗದ್ದಲ ಎಬ್ಬಿಸಿದ. ಹಲವಾರು ದಿನಗಳಿಂದ ಜನರ ಕಿವಿಯಲ್ಲಿ ಬಿತ್ತಿದ್ದ ವಿಷದ ಬೀಜ ಮೊಳಕೆಯೊಡೆಯಿತು.

ಬ್ರ.ರಾ.ಗೆ ಮನುಷ್ಯರ ಸಹವಾಸದಿಂದ ದೂರ ಹೋಗಿಬಿಡಬೇಕೆನ್ನಿಸುವಷ್ಟು ಬೇಸರ.

ಅಂದು ಮಲ್ಲಪ್ಪಗೌಡ ಹಿಂಸಾಚಾರದ ವಿರುದ್ಧ ತಲೆ ಎತ್ತಲು ಸರ್ವ ಪಕ್ಷಗಳ ಸಭೆ ಕರೆದಿದ್ದ. ಬ್ರ.ರಾ. ನನ್ನೇ ಅಧ್ಯಕ್ಷನನ್ನಾಗಿ ಮಾಡಲಾಗಿತ್ತು.

ರಾತ್ರಿ ತಡವಾಗಿ ಪ್ರಾರಂಭವಾದ ಸಭೆ ಮಧ್ಯರಾತ್ರಿ ಎರಡು ಗಂಟೆಯಾದರೂ ಮುಗಿಯಲಿಲ್ಲ. ಬ್ರ.ರಾ. ಚಡಪಡಿಸಿತು. ಹಾಳಾಗಿಹೋಗಲಿ ಈ ಮನುಷ್ಯರು ಎಂದು. ಯಾರಿಗೂ ಹೇಳದೇ ಕೇಳದೆ ಆಪ್ತಾಲೋಚನೆಯ ಕೋಣೆಗೆ ಓಡಿಹೋಯಿತು.

ಕೂಡಲೇ ಮಲ್ಲಪ್ಪಗೌಡ ಎದ್ದುನಿಂತು,

"ಮಹಾ ಜನರೆ,

ಇವತ್ತು ನೀವೇ ಕಣ್ಣಾರೆ ನೋಡುತ್ತಿದ್ದೀರಿ, ಬ್ರ.ರಾ. ಅವರು ಸಭೆಯನ್ನು ಅರ್ಧಕ್ಕೆ ಬಿಟ್ಟು ಓಡಿಹೋದರು. ಈಗಾದರೂ ನಿಮಗೆ ಮನದಟ್ಟಾಗಿರಬೇಕು. ಇದರಲ್ಲಿ ಏನೋ ಕಾರಸ್ಥಾನ ಇದೆ. ಬನ್ನಿ ಬಾಗಿಲು ಮುರಿದು ಅವರನ್ನು ಹೊರಗೆ ತರುವಾ."

ಮಲ್ಲಪ್ಪಗೌಡನ ಆವೇಶದ ನುಡಿಗಳನ್ನು ಆಲಿಸಿದ ಜನ ಆಪ್ತಾಲೋಚನೆಯ ಕೋಣೆಗೆ ಲಗ್ಗೆ ಹಾಕಿತು.

"ಬ್ರ.ರಾ. ಅವರೇ ಸುಮ್ಮನೆ ಹೊರಗೆ ಬನ್ನಿ, ಇಲ್ಲದಿದ್ದರೆ ನಿಮ್ಮ ಗತಿ ನೆಟ್ಟಗಾಗಲಿಕ್ಕಿಲ್ಲ."

ಕೂಗಾಟ ನೂಕುನುಗ್ಗಲು 'ಬಾಗಿಲು ಮುರಿಯಿರಿ' ದೊಡ್ಡ ದೊಡ್ಡ ಬೊಡ್ಡೆಗಳನ್ನು ತಂದು ಜನ ಬಾಗಿಲು ಬಡಿದು ಮುರಿದು ನೋಡುತ್ತಾರೆ ಬ್ರ.ರಾ. ಇಲ್ಲವೇ ಇಲ್ಲ.

ಮಂಗಮಾಯ ಜನ ಚಕಿತರಾದರು. 'ಬ್ರ.ರಾ. ಒಳಗೆ ಹೋಗಿ ಬಾಗಿಲು ಹಾಕಿಕೊಂಡಿದ್ದನ್ನು ನೋಡಿದ್ದೇವೆ ಗುಪ್ತ ದ್ವಾರವೇನಾದರೂ ಇದೆಯೆ?' ಇಡೀ ಕೋಣೆಯನ್ನು ಶೋಧಿಸಲಾಯಿತು. ಏನೂ ಸಿಕ್ಕಲಿಲ್ಲ.

ಏನೋ ಎಲ್ಲಾ ವಿಚಿತ್ರ ಎಂದುಕೊಳ್ಳುವಷ್ಟರಲ್ಲಿ ಬೆಳಗಿನ ರೈಲಿಗೆ ಶಂಕರಪ್ಪ ಬಂದ 'ಶಂಕರಪ್ಪ ಬಂದಾ ಹಿಡಿಯಿರಿ' ಕೆಲವರಂತೂ ಅವನನ್ನು ಥಳಿಸಿಯೇ ಬಿಟ್ಟರು 'ಎಲ್ಲಿ ನಿಮ್ಮ ಜನನಾಯಕ ಬ್ರ. ರಾ. ಎಲ್ಲಾ ಎತ್ತಿ ಹಾಕಿ ಹೋದ...?' ಶಂಕರಪ್ಪನಿಗೆ ಏನೂ ಅರ್ಥವಾಗಲಿಲ್ಲ.

ಬೆಳಕು ಹರಿಯಿತು. ಜನ ಚೆದುರಿತು. ಅಷ್ಟರಲ್ಲಿ ಶಂಕರಪ್ಪನಿಗೆ ಅರ್ಥವಾಗಿತ್ತು. ಕಾಲು ಹೊಸೆಯುತ್ತ ಮತ್ತೆ ಊರ ಹೊರಗಿನ ಬೇವಿನ ಮರದ ಹತ್ತಿರ ಬಂದ. ಮತ್ತೆ ಅದೇ ದೆವ್ವಗಾಳಿ.

ಮರ ತಲೆಕೆಳಗಾಗಿ ನಿಂತಿತು. ಬೇರಿನಿಂದ ಇಳಿದು ಬಂದ ಬ್ರಹ್ಮರಾಕ್ಷಸ ಶಂಕರಪ್ಪನ ಟೊಪ್ಪಿಗೆಯನ್ನು ಹಾರಿಸಿಕೊಂಡು ಹೋಯಿತು.

## ೧೫. ಆರನೆಯ ಬೆರಳು

ನನ್ನ ಮುಂದಿರಿಸಿದ ಅಗ್ಗಿಷ್ಟಿಕೆಯ ಕೆಂಡಕ್ಕಿಂತ ಹೆಚ್ಚು ಮನದ ಉದ್ವೇಗ ನಿಗಿನಿಗಿಯಾಗಿತ್ತು. ಕೈಕಾಲು ಕಾಸಿಕೊಂಡಿದ್ದರೂ, ಅದೇ ಆಗ ಎರೆದುಕೊಂಡಿದ್ದ ನನ್ನ ಹಸಿ ಮೈ ಬೆನ್ನೊಳಗೆ ಚಳಿ ಹರಿದಾಡಿದಂತಾಯಿತು.

ಅಗ್ಗಿಷ್ಟಿಕೆಯನ್ನು ಹೊರಸಿನ ಕೆಳಗಡೆ ಸರಿಸಿ ಅದರ ಮೇಲೆ ಮೈಗೆ ಸುತ್ತಿದ ತುಂಡು ಸೀರೆಯನ್ನು ಬಿಸುಟಿ ಬಿದ್ದುಕೊಂಡೆ. ಕಿಟಕಿಯಿಂದ ತೂರಿ ಬರುವ ಬೆಳಕನ್ನು ಕಪ್ಪು ಪರದೆ ತನ್ನ ಮನದ ಪಾಪವನ್ನು ಪ್ರತಿನಿಧಿಸುವಂತೆ ಇಳಿ ಬಿದ್ದಿತ್ತು.

ಬಲ ಮಗ್ಗಲಾದೆ, ಹತ್ತಿರದ ಕಪಾಟಿನ ಬಳಿ ಇರಿಸಿದ ತೊಟ್ಟಿಲಲ್ಲಿ ಮಲಗಿದ ಪುಟ್ಟ (ಪಾಪ ಪುಣ್ಯದ ಅರಿವಿಲ್ಲದ ಆ ಮುಗ್ಧ ಹಸುಳೆ) ನಿಶ್ಚಿಂತೆಯಿಂದ ನಿದ್ರೆಹೋಗಿದ್ದ. ಮಗ್ಗುಲಾಗಿ ಮಲಗಿದ ಆ ಮುಗ್ಧಮುಖದಲ್ಲಿ ಪೂರ್ವಜನ್ಮದ ಅದಾವುದೋ ನೆನಪು ಮರುಕಳಿಸಿ ಬಂದಂತಾಗಿ ಬಿಕ್ಕಳಿಸಿ ಮುಖ ಪರಚಿಕೊಂಡು ಮತ್ತೆ ಮಲಗಿತು. ಆದರೆ ಆ ಹಸುಳೆಯ ಬಲಗೈಯ ಆರನೆಯ ಬೆರಳು ನನ್ನ ಕಣ್ಣಲ್ಲಿ ಚುಚ್ಚಿದಂತಾಯಿತು. ಏಕೆ ಅದನ್ನು ನೋಡಿದಾಗಲೆಲ್ಲಾ ಹರಳಾಡಿಸಿದಂತಾಗುತ್ತದೆ. ಸೋಡಾ ಬಾಟಲಿಯ ಗುಂಡನ್ನು ಒಳಕ್ಕೆ ನೂಕಿದಾಗ ಅದರೊಳಗಿಂದ ಚಲ್ಲನೆ ಉಕ್ಕಿಬರುವ ಗ್ಯಾಸಿನ ನೊರೆಯಂತೆ ಭಾವನೆಗಳು ಚಿಮ್ಮಿದವು.

ದಿಗ್ಗನೆ ಎದ್ದು ಆ ತುಂಡು ಬಟ್ಟೆಯನ್ನು ಎದೆಯವರೆಗೆ ಎಳೆದುಕೊಂಡು ತೊಟ್ಟಿಲಲ್ಲಿ ಮಲಗಿದ ಪುಟ್ಟನನ್ನು ದಿಟ್ಟಿಸಿ ನೋಡಿದೆ. ಎಷ್ಟು ಸಲ...... ಒಂದು...... ಎರಡು..... ಮೂರು..... ಎಷ್ಟೆಂದು ಎಂಕಿ ಎಣಿಸಲಿ (ಅದು ಅಂಕಿ ಆಗಿರಲಿಲ್ಲ. ಅಂಕುಶವಾಗಿತ್ತು.)

ಹೌದು ಅವರದೇ ಮೂಗು ಅವರದೇ ಕಣ್ಣು ಬಾಯಿ. ಅವರದೇ ಬಣ್ಣ, ಎಲ್ಲ ಅವರದೇ ಹೋಲಿಕೆ. ಗದ್ದ ಮಾತ್ರ ನನ್ನಂತಿದೆ. ಹಾಗಾದರೆ ಆ ಬಲಗೈಯ ಆರನೆಯ ಬೆರಳು?

ಅದೂ ಅವರದೇ ಹೋಲಿಕೆ. ಅವರ ಬಲಗೈಗೂ ಆರು ಬೆರಳುಗಳಿವೆ.

ಪುಟ್ಟನ ಆರು ಬೆರಳುಗಳನ್ನೆಣಿಸುವಷ್ಟರಲ್ಲಿ ಆ ಆರು ವರ್ಷಗಳ ದೃಶ್ಯ ಎಲ್ಲಾ ನೆನಪಾಯಿತು. ಮರುಕಳಿಸಿತು. ಉಮ್ಮಳಿಸಿತು. ನೆನಪು ನೆನಪು...

ನೆನಪು ಅಗ್ಗಿಷ್ಟಿಕೆಯನ್ನು ಆಚೆ ಗೋಡೆಗೆ ಸರಿಸಿ ಹೊರಸಿನ ಮೇಲೆ ಅಂಗಾತ ಉರುಳಿದೆ. ಮತ್ತೆ ಸ್ಮೃತಿ ಚಕ್ರ. ಸವೆಸಿದ ಸವೆಯದ ಅಕ್ಷಯ ಪಾತ್ರೆಯಲ್ಲವೆ ಚಿತ್ತ.

ಆ ಆರು ವರ್ಷದ ಹಿಂದಿನ ನೆನಪು. ಅದೇ ಆಗ ನಾನು ಈ ಮನೆಗೆ ಹೊಸತಾಗಿ ಮದುವೆಯಾಗಿ ಬಂದಿದ್ದೆ. ನನ್ನವರಿಗಾದ ಆನಂದ ಅಷ್ಟಿಷ್ಟಲ್ಲ. ಮನೆಯಲ್ಲಿ ನನ್ನ ಅವರ ಹೊರತು ಮತ್ತಾರೂ ಇರಲಿಲ್ಲ. ಮದುವೆಗಿಂತ ಮುಂಚೆಯೇ ನನ್ನ ಮಾವ ಕಣ್ಣು ಮುಚ್ಚಿದ್ದರು. ಹೊಸ ಸಂಸಾರದ ಸುಖ ಉಣ್ಣಲಿ ಅಂತ ಹಳ್ಳಿಗೆ ಹೊರಟುಹೋಗಿದ್ದರು ಅತ್ತೆ. ಅಲ್ಲಿಯೇ ಅವರ ವಾಸ.

ಅವರು ಖಾಸಗಿ ಸಂಸ್ಥೆಯೊಂದರಲ್ಲಿ ಇಂಜಿನಿಯರ್ ಆಗಿದ್ದರು. ಆಗಿದ್ದರು ಏಕೆ? ಆಗಿದ್ದಾರೆ. ಟೂರ್‌ಗೀರ್ ಅಂತ ಯಾವಾಗಲೂ ಅಲೆದಾಡುತ್ತಲೇ ಇರುತ್ತಾರೆ. ಅವರಿಗೆ ವಾರ್ನ್ ಮಾಡಿದ್ದೆ ಮದುವೆ ಹೊಸತರಲ್ಲಿ ಇವೆಲ್ಲಾ ಬಾರದು ಅಂತ.

ಆ ಸಂಜೆ ಮುಡಿತುಂಬ ಮಲ್ಲಿಗೆ ಮುಡಿದು ನೀಲಿಯ ನೈಲಾನ್ ಸೀರೆ ಉಟ್ಟುಕೊಂಡು ಹಾರಾಡುವ ಮುಂಗುರುಳನ್ನು ನಾನೇ ನೇವರಿಸಿಕೊಳ್ಳುತ್ತ ಅವರ ಪ್ರತೀಕ್ಷೆಯಲ್ಲಿದ್ದೆ. (ನನ್ನ ಪ್ರತಿಯೊಂದು ಅಂಗಾಂಗಗಳಿಂದ ಹೊಮ್ಮುತ್ತಿದ್ದ ಆ ಯೌವನದ ಮಾದಕತೆ ಅವರಿಗಾಗಿ ಹಾತೊರೆಯುತ್ತಿತ್ತು. ಛೇ ನಾನೆಂಥ ಲಜ್ಜಗೇಡಿ. ಆದರೆ ಇದು ನಿಜ. ಜೀವನದ ಆ ಹಂತವೇ ಹಾಗಿತ್ತು.)

ಅವರು ಬಂದರು. ಬೂಟಿನ ಸದ್ದಾಯಿತು. ಒಳಗೆ ನಡೆದು ಬಂದರು. ಅತೀ ಸನೀಹಕ್ಕೆ.... ಮೈದಡವಿದರು. ಒಮ್ಮೆಲೇ ಸಿತಾರದ ತಂತಿಯನ್ನು ಮೀಟಿ ಬಿಟ್ಟಂತಾಯಿತು.

"ಸುನೀತಾ....."

(ಓ ಆ ದನಿಯಲ್ಲಿ ಕೊಚ್ಚಿಕೊಂಡು ಹೋಗುವಂತೆ ಸೆಳೆವಿತ್ತು. ನಾಚಿಕೆಯಿಂದ ತಲೆ ತಗ್ಗಿಸಿದ್ದೆ.)

"ಸುನೀತಾ ಇದೇನು ಇವತ್ತು....?"

ಮೆಲ್ಲನೆ ನನ್ನ ಗದ್ದ ಹಿಡಿದೆತ್ತಿ ಕಣ್ಣಲ್ಲಿ ಕಣ್ಣರಿಸಿ ನೋಡಿದರು. ಆಗಲೂ ನಾನು ಮೊಗ್ಗು ಅರಳುವಂತೆ ಅಧರಗಳನ್ನು ಅಲುಗಿಸಿದೆ. ಅಷ್ಟೇ ಸಾಕಿತ್ತೇನೋ ಅವರಿಗೆ. ಸರಕ್ಕನೆ ಬಾಗಿಲ ಮರೆಗೆ ಎಳೆದುಕೊಂಡರು. ಮುಂದೇನಾಯಿತು.... ಅದು ಅಷ್ಟಕ್ಕೆ ಮುಗಿಯಲಿಲ್ಲ.... ಮುಂದಿನ ಕಥೆಯು ಮುಗಿದಿತ್ತು. ಬೆಡ್ರೂಮಿನ ಕಾಟ್ ತಲೆದಿಂಬು, ಶಯ್ಯೆ ಆಹ್ವಾನಿಸಿದಾಗ, ಥೂ ಸೂರುಸಂಜೆ ಹೊತ್ತು ವೇಳೆ ಬೇಡವೆ? ಎಲ್ಲ ಮುಗಿದ ಮೇಲೆಯೇ ನನ್ನ ಬಾಯಿಯಿಂದ ಈ ಮಾತು ಹೊರಟಿದ್ದು. ಅವರು ನಕ್ಕು ಹಾಗೆಯೇ ಒರಗಿದರು. ಅರೆ ನಿದ್ರೆಯಲ್ಲಿ ಸುಖ ಸ್ವಪ್ನದಲ್ಲಿ.

ಕಣ್ಣಾರಳಿಸಿ ಅವರ ಸ್ಫುರದ್ರೂಪವನ್ನು ಹೀರಿದೆ. ಮುಚ್ಚಿದ್ದ ಅರೆಗಣ್ಣು ಸುಖದ ದರ್ಪಣದಂತಿತ್ತು. ಅವರ ಚೆಲುವಿಕೆಯ ಮುಂದೆ ನಾನೇ ಎಡ ಎನ್ನಿಸಿತು. ರೂಪದಲ್ಲಿಯೂ ಅಷ್ಟೇ. ವಿದ್ಯೆಯಲ್ಲಿಯೂ ಅಷ್ಟೆ. ಮ್ಯಾಟ್ರಿಕ್ಯುಲೇಶನ್ ಕೂಡ ಮುಗಿಸಲಿಕ್ಕಾಗಲಿಲ್ಲ ನನಗೆ.

ಏನೇನೋ ಆ ಸುಷುಪ್ತಿಯಲ್ಲಿಯೇ ಕನವರಿಕೆ.

"ಸುನೀತಾ..."

ಮೆಲ್ಲನೆ ಅವರ ನೀಳ್ತೋಳು ಕಂಕುಳ ಬಳಸಿತು.

"ಹುಂ..."

ಇನ್ನಿಷ್ಟು ಅವರು ಹತ್ತಿರ ಒಲಿದು ನುಡಿದರು.

"ನೀ ನನ್ನ ಪ್ರೀತಿಸ್ತೀಯಾ?"

ಅವರ ಈ ಅನಿರೀಕ್ಷಿತ ನುಡಿ ಬಡಿದೆಬ್ಬಿಸಿತು. ಮಿದುವಾಗಿ ನಕ್ಕು ಅವರ ಗಲ್ಲ ತಟ್ಟಿ

"ಇದೇನು ಹೀಗೆ ಕೇಳ್ತೀರಾ? ಮದುವೆಯಾದ ಮೇಲೆ?"

ನಾನಿನ್ನೂ ಏನೇನೋ ಹೇಳಲಿಕ್ಕೆ ಹೋಗಿದ್ದೆ.

"ಸುನೀತಾ ಮದುವೆ ಬರಿ ದೈಹಿಕ ಸಂಬಂಧವಾಗಬಾರದು. ದೇಹದ ಕೋಟೆಯೊಳಗೆ ಇರುತ್ತದಲ್ಲ. ಆ ಹೃದಯದ್ದಾಗಿರಬೇಕು" ಎಂದರು.

ಅವರ ಆ ಕಾವ್ಯಮಯದ ನುಡಿ ಅಂತಃಕರಣದೊಳಗಿಳಿಯಿತು. ದಾಂಪತ್ಯಜೀವನದ ಸುಖ ಸೋಪಾನವಾಯಿತು. ಮೌನ ಮುರಿದು ಮಿಂಚಿನಂತೆ ಅವರು ನುಡಿದರು.

"ಅಂದ ಹಾಗೆ ಸುನೀತಾ, ನಿನಗೊಂದು ಮಾತು ಹೇಳಲಿಕ್ಕೆ ಮರೆತಿದ್ದೆ."

"ಏನು?" ನಾನು ಉತ್ಸುಕಳಾಗಿ ಕೇಳಿದೆ.

"ನೀನೇ ಹೇಳು ಏನು ಸಮಾಚಾರ?"

"ನಿಮ್ಮ ಮನಸ್ಸಿನ ಮಾತು ನಾ ಹೇಗೆ ಹೇಳಲಿ?"

"ಹೇಳಲ್ಲ. ಗಂಡಸರ ಮನದ ಇಂಗಿತ ತಿಳಿದುಕೊಳ್ಳೋದು ಅಷ್ಟೇನೂ ಕಷ್ಟ ಅಲ್ಲ."

"ಅಂದರೆ ಹೆಂಗಸರ ಮನಸ್ಸು ಅರಿಯೋದು..."

"ಛೇ ನಾನೆಲ್ಲಿ ಹಾಗೆ ಹೇಳಿದೆ"

ಎಂದು, ಮುಕ್ತಮನದಿಂದ ನಕ್ಕರು. ನಾನೂ ಆ ನಗೆಯಲ್ಲಿ ಭಾಗಿಯಾದೆ. ಅವರು ಅಂದರು.

"ಬಾಯಿಯಿಂದ ಬರೋದಕ್ಕಿಂತ ಮೊದಲೇ ಮನಸ್ಸು ಅರ್ಥಮಾಡಿಕೊಂಡು ಇರಬೇಕು. ಆಗಲೇ ಅದು ಸಾರ್ಥಕ ಬಾಳು."

ನನ್ನ ಮನ ಆಗಲೇ ಟೆಲಿಪ್ರಿಂಟರಿನ ಹಾಗೆ ಅವರ ಹೃದಯದ ಮಾತನ್ನು ಬರೆದುಕೊಂಡು ಬಿಟ್ಟಿತ್ತು. ಅವರ ಮುಖದಲ್ಲಿ ರೇಡಿಯಂದಂತೆ ಮಿನುಗುವ ಆ ಉತ್ಸಾಹ ಸಂತಸದ ಆ ಸನ್ನಿವೇಶ ಅವರ ಇಂಗಿತವನ್ನು ಅರುಹಿತ್ತು.

ಅವರಿಗೆ ಒಂದು ತಿಂಗಳ ರಜೆ ಮಂಜೂರ ಆಗಿತ್ತು. ನಮ್ಮ ಹನೀಮೂನ್ ಟ್ರಿಪ್ ಹೊರಟಿತು. ಸುಗ್ಗಿಯ ಹಕ್ಕಿಗಳಂತೆ ಹಳೇಬೀಡು, ಬೇಲೂರು, ವೃಂದಾವನ ಸುತ್ತಾಡಿದೆವು.

ಭೂಲೋಕದ ಸ್ವರ್ಗ ಸದೃಶವಾದ ಆ ವೃಂದಾವನ, ನಾನು ಚಿಕ್ಕವಳಿದ್ದಾಗ ನೋಡಿದಾಗ ಬರೀ ಬಣ್ಣ ಬಣ್ಣದ್ದಾಗಿ ಕಂಡಿತ್ತು. ಆದರೆ ಈ ಸಂದರ್ಭದಲ್ಲಿ ರಂಗು ರಂಗಿನ ಬೆಳಕನ್ನು ಚೆಲ್ಲುತ್ತ ಚಿಮ್ಮುವ ಈ ಕಾರಂಜಿ ನಕ್ಕು ನಲಿಯುವ ಆ ಉದ್ಯಾನವನ ನನ್ನ ಅಂತರಂಗದ ಪ್ರಣಯ ರಂಗಸ್ಥಲದ ಸಜ್ಜಿಕೆಯಾಗಿತ್ತು.

"ಸುನೀತಾ.... ಸುನೀತಾ.... ಅಗ್ಗಿಷ್ಟಿಕೆ ಕಾಯಿಸಿಕೊಳ್ಳೋದು ಆಯ್ತೋ ಇಲ್ಲೊ? ಪುಟ್ಟಿ ಅಳ್ತಾ ಇದ್ದಾನೆ. ಕೇಳಸ್ತಾ ಇಲ್ಲ?"

ಅಡುಗೆ ಮನೆಯಿಂದ ಅತ್ತೆ ಕೂಗಿದಾಗಲೇ ಇಹಲೋಕಕ್ಕೆ ಇಳಿದಿದ್ದು.

ಎದ್ದು ಹೋಗಿ ತೊಟ್ಟಿಲಲ್ಲಿ ಮಲಗಿದ್ದ ಪುಟ್ಟನನ್ನು ಎತ್ತಿಕೊಂಡೆ. ಆಗಲೂ ಅವನು ಗಪ್ಪಾಗಲಿಲ್ಲ. ಎದೆಗವಚಿಕೊಂಡು ಹೊಟ್ಟೆಗೆ ಕೊಡಹತ್ತಿದೆ. ಅವನು ಪುಟ್ಟ ಪುಟ್ಟ ಕೈಕಾಲುಗಳನ್ನು ಬೀಸುತ್ತ ಸೈಕಲ್ ಸವಾರಿ ನಡೆಸಿದ್ದ. ಒಮ್ಮೆಲೆ ಅವನ ಆರನೆಯ ಬೆರಳು ಎದೆಗೆ ತಾಕಿತು. ಮತ್ತೆ ಅಂಕುಶದ ತಿವಿತ. ಮನದ ಮಡುವು ಕದಡಿದಂತಾಗಿ ಕೆಸರು ತೇಲ ಹತ್ತಿತು.

..... ಉರಿ ಉದ್ವೇಗ... ಆ ಘಟನೆಗಳ ಚಿತ್ರಹಿಂಸೆ ಹುಣ್ಣಿನ ಮೇಲೆ ದೋಮಾರಿ ಮುಕುರುವಂತೆ ನೆನಹಿನ ದಾಳಿ ಪುಟ್ಟನನ್ನು ಬಿಸಾಡಿಬಿಡಲೇ ಎನ್ನಿಸಿತು. ಅವನ ಕಡೆಗೆ ನೋಡಿದೆ. ಮೊಲೆ ತಿನ್ನುವುದನ್ನು ಬಿಟ್ಟು ಅವನು ನನ್ನ ಕಡೆಗೆ.... ಹೊರಳಿ ನಿರ್ವಿಕಾರ ನಗೆ ಬೀರಿದ. ನಾನು ನಕ್ಕೆ. ಅವನ ನಗೆಗೆ ನನ್ನ ನಗೆಗೆ ಸೇತುವೆ ಇರಲಿಲ್ಲ ಮಧ್ಯ ಸಮುದ್ರ ಹರಿಯುತ್ತಿದೆಯಲ್ಲ.

ಈ ಪುಟ್ಟನಿಗಾಗಿಯೇ ಅಲ್ಲವೇ ನಾನು.... ನಾನು ಏನು ಅಂತ ಹೇಳಲಿ, ಎಷ್ಟು ಅಂತ ಉಡಿಯಲ್ಲಿ ಕೆಂಡ ಕಟ್ಟಿಕೊಳ್ಳಲಿ....

ಮದುವೆಯ ನಂತರ ಒಂದೆರಡು ವರ್ಷ ಜೀವನದ ಪ್ರವಾಹದಲ್ಲಿ ಸುಖದ ಹಾಳಿ ಹಡಗುಗಳು ಸರಾಗವಾಗಿ ಚಲಿಸಿಹೋದವು. ಯಾವುದಕ್ಕೂ ನನಗೆ ಅವರು ಕಡಿಮೆ ಮಾಡಲಿಲ್ಲ. ಆದರೆ ಒಳಗೊಳಗೇ ಯಾವುದೋ ಕೊರತೆಯ ಕೊರಗು ಕೃಶಗೊಳಿಸಹತ್ತಿತು. ಮೊದಲು ಮನೆಯಲ್ಲಿ ನಾವಿಬ್ಬರೇ ಇರಬೇಕೆಂದು ಬಯಸುವ ಮನ ಮೂರನೆಯ ವ್ಯಕ್ತಿಗಾಗಿ ಹಾತೊರೆಯ ಹತ್ತಿತು. ಅದೇ ಕೊರತೆ ತುಂಬಲಾರದ ಕೊರತೆಯಾಯಿತು.

ಐದು ವರ್ಷ ಉರುಳಿತು ತಾಯಿಯಾಗಬೇಕೆಂಬ ಅತೃಪ್ತ ಬಯಕೆ ಭುಗಿಲೆಂದಿತು. ಸದಾ ನನಗೆ ಅದೇ ಗುಂಗು, ನಾನು ಬಂಜೆಯೇ, ನನ್ನ ಮದುವೆಗಿಂತ ಎರಡು ದಿನ ಹಿಂದೆ ಮದುವೆಯಾದ ಗೆಳತಿ ಸುಶೀಲೆ ಕಳೆದ ವರ್ಷ ಹೆತ್ತಳು. ಅದೇಕೋ ಅವಳನ್ನು ಕಂಡಾಗಲೆಲ್ಲಾ ಒಂದು ತರಹದ ಅಸೂಯೆ. ಹಡೆದು ಬಂದ ಮೇಲೆ ಬಿತ್ತಿದ ಅವಳ ಆ ವಿಷಬೀಜ ಹೀಗೆ ನೀನು ಬಿಟ್ಟರೆ ಬಂಜರು ಭೂಮಿಯಾಗ್ತೀಯ? ಒಮ್ಮೊಮ್ಮೆ ನೆಲ ಹದಗೊಳಿಸಲಿಕ್ಕೆ ಎರವಲು ನೀರು ತೆಗೆದುಕೊಂಡರೇ ಏನು ತಪ್ಪು ಥೂ ಹಾಳಾಯಿತು ಅವಳ ಬಾಳು. ಅರ್ಥ ಮಾಡಿಕೊಳ್ಳಲಿಕ್ಕೂ ಅಸಹ್ಯ ಬರುತ್ತಿತ್ತು. ಆದರೆ ಬಯಕೆ ನರಗಳ ತುಂಬೆಲ್ಲ ದಾಂಗುಡಿ ಇಡ ಹತ್ತಿತ್ತು.

* * *

ಸೀರೆ ಒದೆ ಒದ್ದೆಯಾಗಿ ಬೆಚ್ಚಗೆ ಹತ್ತಿದಾಗಲೇ ಪುಟ್ಟ ಉಚ್ಚೆ ಹೊಯ್ದುದರ ಅರಿವಾಯಿತು. ಸರಕ್ಕನೆ ಎತ್ತಿ ದುಪ್ಪಟಿ ಕೆಳಗೆ ಹಾಸಿ ಹೊಟ್ಟೆಗೆ ಕೊಟ್ಟೆ. ಸ್ವಲ್ಪ ಹೊತ್ತಿನ ಮೇಲೆ ಅವನು

ಮಲಗಿದ. ಯಾಂತ್ರಿಕವಾಗಿಯೇ ಮತ್ತೆ ತೊಟ್ಟಿಲದಲ್ಲಿ ಮಲಗಿಸಿ ಸರಿಯಾಗಿ ಸೀರೆ ಉಟ್ಟುಕೊಂಡೆ.

"ಪುಟ್ಟ ಮಲಗಿದನೆ?"

ಅವರು ಒಳಗೆ ಬಂದರು.

ನಾನು ಸೆರಗು ಸರಿಪಡಿಸಿಕೊಂಡು,

"ಹೂಂ" ಎಂದೆ, ಉತ್ತರವೇನೋ ಅಷ್ಟಕಷ್ಟೇ ಇತ್ತು. ಆದರೆ ಅವರ ನಿಷ್ಕಲ್ಮಷ ಮುಖ ನೋಡಿದಾಗ!

ಆ ದಿನ ನನಗೆ ನೆನಪಿದೆ 'ನಿಮ್ಮ ಶ್ರೀಮತಿ ತಾಯಿಯಾಗಲಿದ್ದಾಳೆ' ಎಂದು ಡಾಕ್ಟರರು ಹೇಳಿದಾಗಂತೂ ಮುತ್ತಿನ ಗೊನೆ ಹೊತ್ತು ನಿಂತ ತನ್ನ ಹೊಲವನ್ನು ಕಂಡ ರೈತನ ಹೃದಯದಂತಾಗಿತ್ತು ಅವರ ಮನಸ್ಸು. ಮನೆಗೆ ಮರಳುವುದೊಂದೇ ತಡ, ನನ್ನ ಅಂಗಾಂಗಗಳಿಗೆ ಮುತ್ತಿನ ಮಳೆಗರೆದಿದ್ದರು. ಆ ಪವಿತ್ರ ಸ್ಪರ್ಶಕ್ಕೆ ತಲ್ಲಣಿಸಿದೆ. ಅವರಿಂದ ಮುಖ ಮರೆಸಿಕೊಂಡು ಓಡಿಹೋಗಬೇಕೆನ್ನಿಸುತ್ತಿತ್ತು. ಮಂತ್ರಗಳ ಪಠಣಕ್ಕೆ ಪಿಶಾಚಗಳು ದಿಕ್ಕಾಪಾಲಾಗುವಂತೆ ಆಗಿತ್ತು ನನ್ನ ಪರಿಸ್ಥಿತಿ. ಅವರು....... ಓ ನನ್ನವರು.... ನನ್ನ ದೇವರು.....

ಮುಟ್ಟಿದರೆ ಮುದುಡಿಕೊಳ್ಳುವಂತಾದ ನನ್ನ ಮನಸ್ಸು ಜೀವಗಳ್ಳನಂತೆ ವರ್ತಿಸುವ ಪಲಾಯನ ಪ್ರವೃತ್ತಿ ಅವರಿಗೆ ಕಂಡುಬಾರದೆ ಇರಲಿಲ್ಲ.

"ಯಾಕೆ ಸುನೀತಾ, ನಮ್ಮ ಬಾಳನ್ನು ಬೆಳಗಲು ಮುದ್ದು ಕಂದ ಬರುತ್ತಿರುವುದು ನಿನಗೆ ಆನಂದವನ್ನು ಉಂಟು ಮಾಡುತ್ತಿಲ್ಲವೇ?"

ಆ ನುಡಿ ಕೇಳಿ ಯಾತನೆಯನ್ನು ಅಂತರಾಳಕ್ಕೆ ಮೆಟ್ಟಿ ಮುಖದಲ್ಲಿ ನಗೆ ತಂದುಕೊಂಡು 'ಹಾಗೇನಿಲ್ಲ' ಎಂದೆ.

ಆಗ ನಾನು ತುಂಬು ಬಸರಿ. ಅವರು, ಅತ್ತೆ ಹೂವಿನಂತೆ, ನನ್ನನ್ನು ನೋಡಿಕೊಂಡರು. ನನ್ನ ಬಾಯಿಗೆ ಬಂದದ್ದು ಸದಾ ಸಿದ್ಧವಿರುತ್ತಿತ್ತು. ಆದರೆ ಬಯಕೆಗೆ ಬಾಯಿಯೇ ಇರಲಿಲ್ಲ. ಗರ್ಭಿಣಿಯ ಕೃಶಶರೀರದಲ್ಲಿ ಔಷಧಿಯನ್ನು ತುಂಬಲು ಅವರು ಹಂಬಲಿಸಿದ್ದು ವ್ಯರ್ಥವಾಯಿತು.

ಅಂತೂ ಹಾಗೂ ಹೀಗೂ ಪುಟ್ಟನನ್ನು ಹೊಟ್ಟೆಯಿಂದ ಹೊರಗೆ ಹಾಕಿದೆ. ಲೇಬರ್ ವಾರ್ಡಿನಿಂದ ಕೋಣೆಗೆ ತಂದು ಮಲಗಿಸಿ ಎಷ್ಟೋ ಹೊತ್ತಿನ ಮೇಲೆ ಎಚ್ಚರ ಬಂತು. ಮುದ್ದಾಗಿದೆ ಮಗು ಎಂದು ಅತ್ತೆ ತೋರಿಸಿದಾಗ ಅತಿ ಪ್ರಯಾಸದಿಂದ ಕಣ್ಣುಬಿಟ್ಟೆ. ಶರೀರ ಕಂಪಿಸಿತು. ಅತೃಪ್ತ ಆಶೆ ಬಯಸಿದ ಬಲಾತ್ಕಾರದ ಫಲವೇ ಇದು. ಮನೆ ಹೊಕ್ಕ ಹಾವಿಗೆ ಮೈತೆತ್ತು ನಂಜೇರಿಸಿಕೊಂಡಿದ್ದೆ...

ಅವರು "ಮಗು ಮುದ್ದಾಗಿದೆ. ನನ್ನ ಹಾಗೆ ಇದೆ. ಎಲ್ಲಾ ನನ್ನ ಹಾಗೆಯೇ" ಎನ್ನುತ್ತಿದ್ದಾಗ ನನ್ನ ಮನ ಮುಖದಲ್ಲಿ ಏನೋ ಒಂದು ತರಹದ ಪರಿವರ್ತನೆ ತನ್ನ ತಾನೇ ಮೂಡತೊಡಗಿತ್ತು.

"ಪೂರ್ತಿ ಅಪ್ಪನನ್ನೇ ಹೊತ್ತಾನೆ ಎನ್ನಲಿಕ್ಕೆ ಸಾಕ್ಷಿ ಪುಟ್ಟನ ಬಲಗೈಗೆ ಆರು ಬೆರಳುಗಳಿವೆ ನೋಡೆ" ಎಂದು ಅತ್ತೆ ನಗುತ್ತಾ ಹೇಳಿದಾಗ ಮಾತ್ರ ಮಗುವನ್ನು ನೋಡಬೇಕೆಂಬ ಆತುರ ನೂರ್ಮಡಿಸಿತು.

"ಏನು ಮಗುವಿಗೆ ಅವರ ಹಾಗೆ ಆರು ಬೆರಳುಗಳಿವೆಯೇ?"

ಮನ ತವಕಿಸಿತು. ಪ್ರಯಾಸದಿಂದ ಎದ್ದು ತೆಕ್ಕೆಗೆ ಆನಿಕೊಂಡು ಕುಳಿತು ಮಗುವನ್ನು ಎತ್ತಿಕೊಂಡೆ. ಅವರದೇ ಸಂತಾನ; ಸಂತಸ ಉಕ್ಕಿತು. ನನ್ನ ಮೃತ ಚೇತನಕ್ಕೆ ಪುಟ್ಟನ ಆರನೆಯ ಬೆರಳು ಸಂಜೀವಿನಿಯಾದರೂ ರಾತ್ರಿ ಭೂತ ನನ್ನ ನಿದ್ದೆ ಕೆಡಿಸಿ ಕೊಳ್ಳೆ ಆಟ ಆಡಹತ್ತಿತ್ತು.

"ಸುನೀತಾ ಬಾಮ್ಮಾ, ಪಾಯಸ ಆರಿಹೋಗ್ತಾ ಇದೆ."

ಎಂದು ಅತ್ತೆ ಕೂಗಿ ಕರೆದಾಗ, ಮತ್ತೊಮ್ಮೆ ಪುಟ್ಟನ ಕಡೆಗೆ ದೃಷ್ಟಿ ಹಾಯಿಸಿದೆ. ಅವನು ದೀರ್ಘನಿದ್ರೆಯಲ್ಲಿ ಇದ್ದುದನ್ನು ಖಚಿತಪಡಿಸಿಕೊಂಡು ಒಳಗೆ ಹೋದೆ. ಶೀತ ಆಗುತ್ತೆ, ಸರಿಯಾಗಿ ಶಾಲು ಹೊದ್ದುಕೊ ಎಂದು ಅತ್ತೆ ಎಚ್ಚರಿಸುವುದಕ್ಕಿಂತ ಮೊದಲೇ ಜಾಗ್ರತೆ ವಹಿಸಿದೆ.

ಕತ್ತಲ ಕೋಣೆಯ ಶೆಖೆ. ಅಂತರಂಗದ ಲಾವಾರಸ ಜೀವ ಮುಕ್ತಿಯ ಬೆಳಕಿಗೆ ಪರಿತಪಿಸಿತು. ಅಂತೂ ಮೂರು ತಿಂಗಳ ಬಾಣಂತನ ನೂಕಿದೆ. ಗುಡಿಗೆ ಹೋಗಿ ಬರುವ ದಿನ. ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಮುಂಬೈಯಿಂದ ನನ್ನ ತಂಗಿ ಸರಳೆಯೂ ಆಗಮಿಸಿದ್ದಳು.

ಬಂದಾಗಿನಿಂದ ಪುಟ್ಟನನ್ನು ಬಿಟ್ಟಿರಲೇ ಇಲ್ಲ. ಎತ್ತಾಡಿ ಮುದ್ದಾಡಹತ್ತಿದ್ದಳು.

"ಸರಳಾ, ಪುಟ್ಟ ಯಾರ ಹಾಗೆ ಇದ್ದಾನೆ ಹೇಳು?"

ಅವರು ನಗುತ್ತಾ ಕೇಳಿದರು. ಆ ನಗೆಯಲ್ಲಿ ಯಾವುದೋ ಹೆಮ್ಮೆ ಇತ್ತು. ಆದರೆ ಆ ಮಾತನ್ನು ಇನ್ನೂ ಅವರು ಪೂರ್ತಿ ಮುಗಿಸಿದ್ದರೊ ಇಲ್ಲೋ.

"ಇನ್ನು ಯಾರ ಹಾಗಿರಬೇಕು? ನನ್ನ ಹಾಗೆಯೇ" ಎಂದ ದನಿ ಬಾಗಿಲ ಬಳಿ ಕೇಳಿಸಿತು.

ಆ ದನಿ ನನ್ನ ಸೋದರಮಾವ ಸುವಾಸನದಾಗಿತ್ತು. ಸುವಾಸ ಅಲ್ಲ ದುರ್ವಾಸ ಪಶು. ಬೆಂಗಳೂರಿನಲ್ಲಿ ನೌಕರಿ ಇಲ್ಲದೇ ಅಲೀತಾ ಇದ್ದವ. ಧೂಮಕೇತು ಕಂಡ ಹಾಗಾಯಿತು. ಬಳಿ ಬಂತೆಂದೂ ನುಸುಳಿಕೊಂಡು ಒಳಗೆ ಹೋಗಿ ಹೊರಸಿನ ಮೇಲೆ ಉರುಳಿದೆ.

ಆ ಶರಪಂಜರದ ಮೇಲೆ ಬಿದ್ದಿದ್ದರೂ ಹೊರಗಿನ ಕೋಣೆಯಲ್ಲಿ ನಡೆದ ಸಂಭಾಷಣೆ ನನಗೆ ಸ್ಪಷ್ಟವಾಗಿ ಕೇಳಿಸಹತ್ತಿತ್ತು.

"ಯಾರು? ಸುವಾಸನೆ? ಯಾವಾಗ ಬಂದೆ, ಕೂತುಕೋ."

ನನ್ನವರು ಬರಮಾಡಿಕೊಳ್ಳುತ್ತಾ ಹೇಳಿದರು.

"ಈಗ ಬಂದೆ."

"ಏನಪ್ಪಾ ಅಪರೂಪ ಆದೆ, ಈ ಕಡೆಗೆ ಬಂದೆ ಇಲ್ಲ."

"ಅದ್ಯಾಕೆ ಹೋದ ವರುಷ ಬಂದಿದ್ದೆ. ನೀನು ಟೂರ್ ಮೇಲೆ ಹೋಗಿದ್ದೆ ಅಂತ ಕಾಣುತ್ತದೆ. ಸುನೀತಾ ಹೇಳಲಿಲ್ಲವೇ?"

"ಇಲ್ಲ, ಹೋಗಲಿ ಬಿಡು ಮರೆತಿರಬಹುದು, ಒಳ್ಳೇ ದಿವ್ಸ ಬಂದೆ."

"ಏನು ಶುಭಕಾರ್ಯ? ಗುಡಿಗೆ ಹೋಗೋ ದಿನಾನೋ?"

"ಹೌದು, ಟೈಂ ಇಟಗೊಂಡು ಬಂದಿಯೋ ಇಲ್ಲವೋ?"

"ಸಂಜೆ ರೈಲಿಗೆ ಹೋಗಬೇಕು."

"ಊಟ ಮಾಡಿಕೊಂಡು ಹೋಗಲಿಕ್ಕೆ ಬರುತ್ತದೆ"

(ನಾನು ಒಳಗೊಳಗೇ ಕುದ್ದುಹೋಗಿದ್ದೆ.)

ಆಗ ಸರಳೆ,

"ಪುಟ್ಟನನ್ನೇ ಹೊತ್ತಿರಬೇಕು ಅಂದೆ ಅಲ್ಲ, ಅದು ಹ್ಯಾಗೆ?" ಎಂದು ಸುವಾಸನನ್ನು ಕೇಳಿದಾಗ ಮೆಟ್ಟಿಬಿದ್ದೆ. ಅವರ ಬರಿ ನಗು ಕೇಳಿಸಿತು. ಆಗ ಅವಳೇ,

"ಪುಟ್ಟ ಪೂರ್ತಿ ಮಾಧು ಮಾವನನ್ನೇ ಹೊತ್ತಿದ್ದಾನೆ" ಎಂದಳು.

"ಅದು ಹ್ಯಾಗೆ ಹೇಳ್ತೀಯ?" ಆಗ ಅವನು ಬಹುಶಃ ಪುಟ್ಟನನ್ನು ಎತ್ತಿಕೊಂಡಿರಬೇಕು. ಸರಳೆ ಅವರಂತೆಯೇ ಬಲಗೈಗೆ ಇದ್ದ ಆರನೆಯ ಬೆರಳನ್ನು ಅವನ ಮುಖಕ್ಕೆ ತಿವಿದಿರಬೇಕು. ಅದನ್ನು ನೋಡಿದ ಮೇಲೆ ಹೌದು ಮಾದಣ್ಣನ ಹಾಗೆ ಇದೆ ಎಂದು ದೇಶಾವರಿ ನಗೆ ಬೀರಿದಂತೆ ಭಾಸವಾಯಿತು. ಥೂ ಇಲ್ಲಿಂದ ತೊಲಗು ಎನ್ನಬೇಕು ಅನ್ನಿಸಿತು.

ಸಂಜೆಯಾಗುವಷ್ಟರಲ್ಲಿ ನನಗೆ ವಿಪರೀತ ಜ್ವರ. ಅವರು, ಅತ್ತೆ, ಸರಳೆ ಗಾಬರಿಯಾದರು. ಡಾಕ್ಟರು ಬಂದು ಔಷಧಿ ಇಂಜೆಕ್ಷನ್ ಇತ್ತು ಹೋದರು. ಎಲ್ಲಾ ಕಾರ್ಯಕ್ರಮ ರದ್ದಾಯಿತು. ಸುವಾಸ ಸಂಜೆ ಗಾಡಿಗೆ ಹೊರಟುಹೋದ ಮೇಲೆಯೇ ನನ್ನ ಎದೆಭಾರ ಇಳಿದಂತಾಯಿತು. ರಾತ್ರಿ ಇಡೀ ಕನವರಿಸಿದೆ ಅಂತೆ, ಹಲವಾರು ಸಲ ಪುಟ್ಟನನ್ನು ಎತ್ತಿ ಎತ್ತಿ ಮುದ್ದಾಡಿ ಕೊಡುತ್ತಿದ್ದನಂತೆ.

* * *

ಈಗ ಪುಟ್ಟನಿಗೆ ಎರಡೂವರೆ ವರ್ಷ. ಮನೆಯಲ್ಲಿ ಅವನದೇ ಹಾವಳಿ. ಡಿರೇಲ್ ಆದ ನನ್ನ ಬಾಳೂ ಅದೇ ಆಗ ಹಳಿಯ ಮೇಲೆ ಹತ್ತಿ ಸಾಗುತ್ತಿತ್ತು. ಆದರೂ ಪುಟ್ಟನ ಆರನೆಯ ಬೆರಳು ನೋಡಿದಾಗಲೆಲ್ಲಾ ಹಾಳು ಸ್ಮೃತಿ ಅಸ್ಥಿರಗೊಳಿಸಿಬಿಡುತ್ತದೆ.

ಆ ಬೆರಳನ್ನೇ ತೆಗೆಯಿಸಿಬಿಟ್ಟರೆ ಚೆನ್ನಾಗಿರುತ್ತದೆ ಎಂದು ಭಾವಿಸಿ ಒಂದು ದಿನ ಅವರನ್ನು ಕೇಳಿದೆ.

"ನೀವು ಏನೂ ಭಾವಿಸದಿದ್ದರೆ ನಿಮ್ಮನ್ನು ಒಂದು ಮಾತು ಕೇಳುವೆ"

"ಕೇಳು, ಯಾಕೆ ಹೀಗೆ ಮಾತಾಡ್ತೀಯಾ?"

"ಪುಟ್ಟನ ಆರನೆಯ ಬೆರಳು ಆಪರೇಷನ್ ಮಾಡಲಿಕ್ಕೆ ಬರುತ್ತಿದ್ದರೆ ತೆಗೆಯಿಸಿ ಬಿಡೋಣವೇ?"

ನನ್ನ ಆ ಮಾತು ಅವರಿಗೆ ಅಚ್ಚರಿಗೊಳಿಸಿತು.

"ಯಾಕೆ ಇದ್ದರೇನಾಗುತ್ತದೆ? ನನಗಿಲ್ಲವೇ?" ಎಂದರು.

"ಹಾಗೇನಿಲ್ಲ ಸುಮ್ಮನೆ ಅಂದೆ ನೀವೇ ಅಂದಿದೀರಿ, ಮಕ್ಕಳಿದ್ದಾಗ ಆಪರೇಷನ್ ಮಾಡಿಸಿ ಬಿಡಬಹುದು ಅಂತ"

ಎಂದು ಅವರನ್ನು ಮನವೊಲಿಸಲೆತ್ನಿಸಿದೆ. ನನ್ನ ಯಾವ ಬಯಕೆಯನ್ನೂ ಅವರು ಈಡೇರಿಸದೆ ಇಲ್ಲ. ಅದಕ್ಕೂ ಒಪ್ಪಿದರು. ಡಾಕ್ಟರ್ ಸಹ ಇದು ಇದ್ದರೆ ಏನಾಗುತ್ತದೆ ಎಂದು ಕೇಳಿದರೂ ನಮ್ಮ ಒತ್ತಾಯಕ್ಕೆ ಕಟ್ಟುಬಿದ್ದು ಆಪರೇಷನ್ ಮಾಡಿದರು.

ಈಗ ಪುಟ್ಟಸಿಗೆ ಬಲಗೈಗೆ ಬರೀ ಐದೇ ಬೆರಳು. ಆದರೆ ಆ ಅದೃಶ್ಯ ಆರನೆಯ ಬೆರಳು ಇನ್ನೂ ನನ್ನ ಎದೆಗೆ ಅಂಕುಶವಾಗಿಯೇ ಇದೆ. ಅವನು ಬೆಳೆದಂತೆಲ್ಲಾ ಹೀನ ನೋವಿನ ಆಲದ ಮರ ಶಾಖೋಪಶಾಖಿವಾಗಿ ನನ್ನ ಅಂತರಂಗವನ್ನೆಲ್ಲ ವ್ಯಾಪಿಸುತ್ತಲೇ ಇದೆ.

# ೧೬. ಅಮಾನತ್

ಕೆಲ ವರುಷಗಳ ಹಿಂದಿನ ಘಟನೆಯಿಂದ ವಿವಿಧ ದೇಶಗಳ ಸಾಂಸ್ಕೃತಿಕ ವಿನಿಮಯದ ಅಂಗವಾಗಿ ನನಗೆ ಪಾಕಿಸ್ತಾನಕ್ಕೆ ಹೋಗುವ ಅವಕಾಶ ದೊರಕಿತು. ಇಸ್ಲಾಮಾಬಾದ್‌ನಲ್ಲಿ ಒಂದು ತಿಂಗಳ ಕಾಲ ಜರುಗುವ ಜನಸಂಖ್ಯಾ ಬೆಳವಣಿಗೆ ಅಧ್ಯಯನ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು ಆಮಂತ್ರಣ ಬಂದಿತ್ತು.

ಮನದೊಳಗಿನ ಆತುರ, ಉಮ್ಮಳಗಳ ಮಧ್ಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದೆ. ಮೊದಲ ಬಾರಿ ನಾನು ವಿಮಾನಯಾನ ಮಾಡುತ್ತಿದ್ದುದರಿಂದ ಕೊಂಚ ಗಲಿಬಿಲಿಗೊಂಡಿದ್ದೆ. ಆ ಭವ್ಯ, ವಿಶಾಲ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಸ್ಲಾಮಾಬಾದಿಗೆ ಹೊರಡುವ ವಿಮಾನವನ್ನರಸಿ ಹೊರಟೆ. ಅಂತೂ ನೆಲೆ ಸಿಕ್ಕಿತು.

ಫ್ಲೈಟ್ ಏರುವ ಮುನ್ನ ಹಲವಾರು ಪರೀಕ್ಷಾ ಘಟ್ಟಗಳನ್ನು ಪೂರೈಸಿಕೊಂಡು ಪಿ.ಕೆ. ೨೭ ವಿಮಾನದಲ್ಲಿ ಬಂದು ಕುಳಿತು ನಿಟ್ಟುಸಿರು ಬಿಟ್ಟೆ. ನೇರವಾಗಿ ಇಸ್ಲಾಮಾಬಾದಿಗೆ ಹೊರಡುವ ಯಾವ ಫ್ಲೈಟೂ ಇಲ್ಲ. ಪಿ.ಕೆ. ೨೭೧ ಬರೀ ಲಾಹೋರಿಗೆ ಹೊರಡುತ್ತದೆ. ಅಲ್ಲಿಂದ ಬೇರೆ ಫ್ಲೈಟಿಗೆ ಹೋಗಬೇಕಾಗುತ್ತದೆ ಎಂದು ತಿಳಿಯಿತು.

ಸುಮಾರು ೫ ಗಂಟೆಗೆ ನಮ್ಮ ವಿಮಾನ ಗಗನಕ್ಕೆ ಹಾರಿತು. ದೆಹಲಿಯಿಂದ ಲಾಹೋರಿಗೆ ಸುಮಾರು ೫೦ ನಿಮಿಷಗಳ ದಾರಿ. ಸುಮಧುರ ಸ್ವರದಲ್ಲಿ ಗಗನಸಖಿ 'ನಾವು ಈಗ ೨೬೦೦ ಅಡಿ ಎತ್ತರದಲ್ಲಿದ್ದೇವೆ. ವಿಮಾನ ತಾಸಿಗೆ ೬೮೦ ಕಿ.ಮೀ. ಧಾವಿಸುತ್ತದೆ' ಎಂದು ಹೇಳಿದಳು.

ನಾನು ಕಿಟಕಿಯ ಆಚೆ ಹೊರಗಿನ ರಮಣೀಯ ದೃಶ್ಯದತ್ತ ದೃಷ್ಟಿ ಹರಿಸಿದೆ. ಆ ಅದ್ಭುತ ನೋಟ ಹೃನ್ಮನವನ್ನು ತಣಿಸಿತು. ಗಗನದಲ್ಲಿ ತೇಲಾಡುವ ನೀಲಿ ಮಿಶ್ರಿತ ಬಿಳಿಯ ಮೋಡಗಳನ್ನೇರಿ ನಾನು ಹೊರಟಂತೆ ಭಾಸವಾಯಿತು. ವೃಕ್ಷ ಸಮೂಹವನ್ನೂ ತಬ್ಬಿಕೊಂಡ ಎತ್ತರೆತ್ತರದ ಪರ್ವತಗಳೂ ಮಾನವನ ಸಾಹಸದ ಮುಂದೆ ತಲೆ ತಗ್ಗಿಸಿದಂತೆ ಎನ್ನಿಸಿತು.

ಲಾಹೋರಿನಲ್ಲಿಳಿದು ಆಗಲೇ ಸಿದ್ಧವಾಗಿದ್ದ ಇನ್ನೊಂದು ಫ್ಲೈಟ್ ಹಿಡಿದು ಇಸ್ಲಾಮಾಬಾದಿಗೆ ಬಂದೆ. ನನ್ನನ್ನು ನಿಶ್ಚಿತ ಸ್ಥಳಕ್ಕೆ ಕರೆದುಕೊಂಡು ಹೋಗಲು ಬರುವ ವ್ಯಕ್ತಿಗೆ ಬರುವುದಕ್ಕೆ ಇನ್ನೂ ಸಮಯವಿತ್ತು. ಅಲ್ಲಿಯೇ ಇದ್ದ ಪ್ರತೀಕ್ಷಾ ಕಕ್ಷದ ಸುಖಾಸನದ ಮೇಲೆ ಕುಳಿತುಕೊಂಡೆ. ಗೋಡೆಗೆ ತಗಲಿದ್ದ ಗಡಿಯಾರವನ್ನು ನೋಡಿ ನನ್ನ ವಾಚನ್ನು ನೋಡಿಕೊಂಡೆ. ಏನೋ ವಿಚಿತ್ರವೆನ್ನಿಸಿತು. ಮತ್ತೆ ನನ್ನ ವಾಚಿನಲ್ಲಿಯ ಸಮಯವನ್ನು

ಅವಲೋಕಿಸಿದೆ. ನನ್ನ ಪಕ್ಕದಲ್ಲಿ ಕುಳಿತ ವ್ಯಕ್ತಿ "ನೀವು ಇಂಡಿಯಾದಿಂದ ಬಂದಿದ್ದೀರಾ?" ಎಂದು ಕೇಳಿದ. ನಾನು ಬೆಚ್ಚಿ ಬಿದ್ದವನಂತೆ ಅವನತ್ತ ನೋಡಿದೆ.

ಅವನ ಮುಖದಲ್ಲಿ ಮುಗುಳ್ನಗೆ ಮಿಂಚಿತ್ತು. ತೆಳ್ಳಗಿನ, ಬೆಳ್ಳಗಿನ ಆಕರ್ಷಕ ವ್ಯಕ್ತಿ, ನನ್ನನ್ನು ಆಕರ್ಷಿಸಿದ.

'ಹೌದು! ಆದರೆ..."

ಎಂದು ನಾನು ನುಡಿಯುವಷ್ಟರಲ್ಲಿ ಅವನು ಹೇಳಿದ.

"ಇಂಡಿಯಾಕ್ಕೂಪಾಕಿಸ್ತಾನಕ್ಕೂ ಸಮಯದಲ್ಲಿ ವ್ಯತ್ಯಾಸವಿದೆ. ಪಾಕಿಸ್ತಾನದ ಸಮಯ ನಿಮಗಿಂತ ಅರ್ಧಗಂಟೆ ಹಿಂದೆ ಇದೆ" ಎಂದಾಗ ಒಮ್ಮೆಲೆ ನೆನಪಾಯಿತು. ನನ್ನ ಮರುವಿಗೆ, ಅಜ್ಞಾನಕ್ಕೆ ನಾಚಿಕೆಯಾಯಿತು.

ನಂತರ ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಂಡು ಸಂತಸದಿಂದ ಕೈ ಕುಲುಕಿದೆವು.

ಆತನ ಹೆಸರು ಅಕ್ರಮ. ಅವನೂ ಢಾಕಾದಿಂದ ನಾನು ಭಾವಗಹಿಸುವ ಕಾರ್ಯಾಗಾರದಲ್ಲೆ ಪಾಲ್ಗೊಳ್ಳಲು ಬಂದಿದ್ದ. ವಿಮಾನ ನಿಲ್ದಾಣದಲ್ಲಿಯೇ ನನಗೆ ಸ್ನೇಹಿತ ದೊರಕಿದ್ದಕ್ಕೆ ನೆಮ್ಮದಿಯಾಯಿತು. ನನ್ನ ಮಾತುಕತೆ ಸಾಗಿದ್ದಂತೆ ನೀಲಿ ಸ್ಕರ್ಟ್ ಧರಿಸಿದ, ಕುಳ್ಳನೆಯ, ಬೆಳ್ಳನೆಯ ಸ್ವಲ್ಪ ದಪ್ಪಗಿನ ಚೀನಾ ದೇಶದ ಮಹಿಳೆ ನನ್ನ ಪಕ್ಕದ ಆಸನದಲ್ಲಿ ಬಂದು ಕುಳಿತಳು. ನಾನು ಹೊರಳಿ ಅವಳತ್ತ ನೋಡಿದೆ. ತನ್ನ ಚಿಕ್ಕ ಚಿಕ್ಕ ಕಣ್ಣುಗಳಲ್ಲಿ ನಗು ಅರಳಿಸಿದಳು.

ನನ್ನ ಹಾಗೂ ಅಕ್ರಮನ ನಡುವಿನ ಸಂಭಾಷಣೆ ಆಲಿಸುತ್ತಿದ್ದ ಆ ಮಹಿಳೆ ಮಧ್ಯ ಮಾತಾಡಿ ತನ್ನನ್ನು ಪರಿಚಯಿಸಿಕೊಂಡಳು. ಅವಳೂ ಚೀನಾದೇಶದ ಪ್ರತಿನಿಧಿಯಾಗಿ ಕಾರ್ಯಾಗಾರದಲ್ಲಿ ಭಾಗವಹಿಸಲು ಬಂದುದಾಗಿ ತಿಳಿಯಿತು. ನಾನು ಅವಳತ್ತ ತಿರುಗಿ

"ನಿಮ್ಮ ಹೆಸರೇನು?" ಎಂದು ಕೇಳಿದೆ.

"ಮಿಸೆಸ್ ಸೂಯೀಯಾನ್‌ಮಿನ್, ನಿಮ್ಮದು?"

"ನಾನು ಪವನಕುಮಾರ ಡೋಗ್ರಾ. ಇಂಡಿಯಾದಿಂದ ಬಂದಿದ್ದೇನೆ. ಇವರು ಅಕ್ರಮ, ಢಾಕಾದಿಂದ ಬಂದಿದ್ದಾರೆ" ಎಂದೆ. ನಾನೇ ಅಕ್ರಮನ ಪರಿಚಯವನ್ನೂ ಮಾಡಿಕೊಟ್ಟೆ.

ನನ್ನ ಹೆಸರನ್ನು ಉಚ್ಚರಿಸಲಿಕ್ಕೆ ಅವಳಿಗೆ ಕಷ್ಟವಾಯಿತು. "ಬರೀ ನಿಮ್ಮನ್ನು 'ಪವನ್' ಎಂದು ಕರೆಯುತ್ತೇನೆ" ಎಂದಳು. ಅಂತೆಯೇ ನಾನು ಅವಳನ್ನು 'ಸೂಯೀ' ಎಂದು ಕರೆಯುವುದಾಗಿ ಹೇಳಿದೆ. 'ಅಕ್ರಮ' ಹೆಸರನ್ನೂ ಉಚ್ಚರಿಸಲಿಕ್ಕೆ ಅವಳಿಗೆ ತೊಂದರೆಯಾಗಲಿಲ್ಲ. ಸ್ವಾಗತ ಕಕ್ಷೆಯಿಂದ ನಮಗೆ ಕರೆ ಬಂತು. ನಂತರ ನಮ್ಮನ್ನು ಇಸ್ಲಾಮಾಬಾದಿನ ಸುಂದರ ಮೋಟೆಲ್ ಡ್ರೀಮ್ ಲ್ಯಾಂಡಿಗೆ ಕರೆದುಕೊಂಡು ಹೋದರು.

ನಾನು ಅಕ್ರಮ ಒಂದೇ ಕೋಣೆಯಲ್ಲಿ ಉಳಿದೆವು. 'ಸೂಯೀ' ನೇಪಾಳದ ಶ್ರೀಮತಿ ಕಿರಣಳ ಜೊತೆ ಇದ್ದಳು.

ನಮ್ಮ ಕಾರ್ಯಾಗಾರದಲ್ಲಿ ಭಾರತ, ನೇಪಾಳ, ಚೀನಾ, ಬಾಂಗ್ಲಾದೇಶ, ಸಿಂಗಾಪೂರ, ಮಲೇಶಿಯಾ, ವಿಯಟ್‌ನಾಂ, 'ಭ್ರೂಹಿ' ಮೊದಲಾದ ೧೫ ದೇಶಗಳು ಪ್ರತಿನಿಧಿಗಳು ಭಾಗವಹಿಸಿದ್ದ ಬೇರೆ ಬೇರೆ ದೇಶಗಳ ಈ ಸಾಂಸ್ಕೃತಿಕ ಸಮ್ಮೇಳನ ಅತ್ಯಂತ ರೋಚಕವೆನಿಸಿತು.

ರಜೆಯ ದಿನ ನಮಗೆಲ್ಲ ಸಂತಸದ ದಿನ. ನಾನೂ, ಸೂಯಿ, ಅಕ್ರಮ, ಒಟ್ಟಿಗೆ ತಿರುಗಾಡಲಿಕ್ಕೆ ಹೋಗುತ್ತಿದ್ದೆವು. 'ಶಾಪಿಂಗ್'ಗೆ ಹೋಗುತ್ತಿದ್ದೆವು.

ಇಸ್ಲಾಮಾಬಾದ್ ಸುಂದರ ನಗರ. ಪಾಕಿಸ್ತಾನದ ರಾಜಧಾನಿ ೧೯೬೧ರಲ್ಲಿ ಹೊಸದಾಗಿ ನಿರ್ಮಾಣಗೊಂಡ ನಗರ. ಮಾರ್ಗಲಾ ಪರ್ವತಗಳ ಅಡಿಯಲ್ಲಿ ಪವಡಿಸಿದೆ. ಗುಲಾಬಿಮಲ್ಲಿಗೆ ಉದ್ಯಾನ ಮನಸೆಳೆಯಿತು. ಜಗತ್ತಿನಲ್ಲಿಯೇ ಅತ್ಯಂತ ಬೃಹತ್ ಮಸೀದಿ ಇಲ್ಲಿಯ ಶಾಹಿ ಫೈಜಲ್ ಮಸೀದಿ ಬಹಳ ಹೊತ್ತಿನವರೆಗೆ ನಾವು ಮೂವರು ಅಲ್ಲಿ ಸುತ್ತಾಡಿ ಸಂಜೆ 'ಜುಮ್ಮಾ' ಮಾರ್ಕೆಟ್ಟಿಗೆ ಬಂದೆವು.

ನಾನು ಭಾರತದಿಂದ ಬಂದಿರುವುದಾಗಿ ತಿಳಿದಾಗ ಅಂಗಡಿ ಮಾಲಿಕರು ನನ್ನನ್ನು ಆತ್ಮೀಯತೆಯಿಂದ ಸ್ವಾಗತಿಸಿ ಭಾರತದ ಬಗ್ಗೆ ವಿಚಾರಿಸಿದರು. ಚಹಾ, ಪಾನೀಯ ಕೊಟ್ಟು ಬೀಳ್ಕೊಟ್ಟರು. ನನ್ನ ಮನ ತುಂಬಿ ಬಂತು.

ನಮ್ಮ ಕಾರ್ಯಾಗಾರದ ಕಾರ್ಯಕ್ರಮದ ಅಂಗವಾಗಿ ಕೆಲ ಪ್ರೇಕ್ಷಣೀಯ ಸ್ಥಾನಗಳಿಗೆ ಹೋಗಿ ಬಂದೆವು. 'ಮರ್ರಿ' ಶೀತಲ ಪರ್ವತ ನಿಲ್ದಾಣ. ಆ ಎತ್ತರದ ಪ್ರದೇಶದಲ್ಲಿ ನಾವೆಲ್ಲ ನಲಿದಾಡಿದೆವು. ನನಗೂ ಈ ಪ್ರದೇಶ ಹೊಸತು. ತೇಲಾಡುವ ಯಾಂತ್ರಿಕ ತೊಟ್ಟಿಲಲ್ಲಿ ಓಲಾಡಿದೆವು. ಬೌದ್ಧ ಸಂಸ್ಕೃತಿಯ ಪರಾಕಾಷ್ಠೆಯ ತಕ್ಷಿಲಾ ನನ್ನನ್ನು ಹಿಡಿದು ನಿಲ್ಲಿಸಿತು.

ನಾವು ಲಾಹೋರಿಗೆ ಬಂದಾಗಂತೂ ನನ್ನ ಮನಸ್ಸು ತಲ್ಲಣಿಸಿತು. ನನ್ನ ಮಾನಸಿಕ ಹೊಯ್ದಾಟವನ್ನು ನೋಡಿ ಸೂಯೀ 'ಏನಾಯಿತು?' ಎಂದು ಕೇಳಿದಳು. 'ಏನೂ ಇಲ್ಲ' ಆಮೇಲೆ ಹೇಳುತ್ತೇನೆ' ಎಂದು ಮಾತು ಮುಗಿಸಿ ನನ್ನಷ್ಟಕ್ಕೆ ನಾನೇ ಸಂತೈಸಿಕೊಂಡೆ.

ನಾನು ಅಕ್ರಮ, ಸೂಯಿ ಲಾಹೋರ್ ಕೋಟೆ, ಜಹಾಂಗೀರ ಸಮಾಧಿ 'ಶಾಲೀಮಾರ್ ಗಾರ್ಡನ್' ಶೀಷಮಹಲ್‌ಗಳಲ್ಲಿ ಸುತ್ತಾಡಿ ಬಂದೆವು. ಒಂದೊಂದು ಸ್ಥಳವೂ ನನ್ನ ನೆನಪನ್ನು ಕೆದಕಿತು. ಶೀಷಮಹಲಿನಲ್ಲಿ ನನ್ನ ಪ್ರತಿಬಿಂಬಗಳ ಬಹುರೂಪ ಕಂಡು ಸೂಯಿ ನಲಿದದ್ದೇ ನಲಿದದ್ದು. ಅಕ್ರಮ ಹಲವಾರು ಸಲ ನಮ್ಮಿಬ್ಬರನ್ನೆ ಬಿಟ್ಟು ಬೇರೆ ಎಲ್ಲೆಲ್ಲೋ ಸುತ್ತಾಡಿ ಬರುತ್ತಿದ್ದ. ನಾವು ಮಾತ್ರ ಅಲ್ಲಿಯೇ ಇದ್ದೆವು. ನಾನು ಭಾವಾವೇಶದಿಂದ ಕೂತಿದ್ದೆ. ಒಂದೊಂದು ವಸ್ತುವಿನಲ್ಲೂ ನನ್ನನ್ನು ಹುಡುಕತೊಡಗಿದೆ.

ನಮ್ಮ ಕಾರ್ಯಾಗಾರದ ಮುಖ್ಯಸ್ಥರು ಲಾಹೋರದಲ್ಲಿ ನಾವು ಒಂದು ವಾರದ ಮಟ್ಟಿಗೆ ಇರುವುದಾಗಿ ತಿಳಿಸಿದ್ದಲ್ಲದೆ ನಮ್ಮೆಲ್ಲರಿಗೂ ಅಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದ್ದರು. ಲಾಹೋರದ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಿಗೆ, ಇಬ್ಬರು ಹಾಗೂ ಮೂವರು ಪ್ರತಿನಿಧಿಗಳನ್ನೊಳಗೊಂಡ ಗುಂಪುಗಳನ್ನು ಮಾಡಿ 'ಸರ್ವೆ' ಗಾಗಿ ನೇಮಕ ಮಾಡಿದಾಗ ನಾನು ಅಸ್ಥಿರಗೊಂಡೆ. ನನ್ನಿಂದ ಮಾತುಗಳೇ ಹೊರಡಲಿಲ್ಲ. ಹಾಗೇ ಕುಳಿತುಬಿಟ್ಟೆ. ಸೂಯೀ ಗಾಬರಿಯಿಂದ 'ಏನಾಯಿತು ಪವನ್' ಎಂದು ಕೇಳಿದಳು.

"ಏನೂ ಇಲ್ಲ" ಎಂದು ಮಾತು ಮುಗಿಸಲು ಪ್ರಯತ್ನಿಸಿದೆ.

"ಯಾಕೆ! ನಾನು ನಿಮ್ಮ ಜೊತೆ ಬರುವುದು ನಿಮಗೆ ಇಷ್ಟವಿಲ್ಲವೆ?" ಎಂದು ಅವಳು ಅಳುಕುತ್ತ ಕೇಳಿದಳು. 'ಛೇ ಛೇ, ಹಾಗೇನಿಲ್ಲ. ಇದು ನನ್ನ ಭಾಗ್ಯ, ಎಂದೆ. ಮತ್ತೆ ನನ್ನ ಮನವನ್ನು ಸಂತೈಸಿಕೊಂಡೆ.

ಅಂದು ಶುಕ್ರವಾರ. ಪಾಕಿಸ್ತಾನದಲ್ಲಿ ಸಾರ್ವತ್ರಿಕ ರಜೆ. ಶನಿವಾರದೊಳಗಾಗಿ ನಾವು ವರದಿ ಸಲ್ಲಿಸಬೇಕಾಗಿದ್ದರಿಂದ, ಶುಕ್ರವಾರವೇ ನಾವು 'ತುಲಸೀ' ಗ್ರಾಮಕ್ಕೆ ತೆರಳಿದೆವು.

'ತುಲಸೀ' ಒಂದು ಪುಟ್ಟ ಗ್ರಾಮ. ಭಾರತದ ಗಡಿಗೆ ತೀರ ಹತ್ತಿರ. ಆ ನೆಲದಲ್ಲಿ ಕಾಲಿಡುತ್ತಲೇ ನನ್ನ ದುಃಖ ಉಮ್ಮಳಿಸಿ ಬಂತು. ಇನ್ನು ಹತ್ತಿಕ್ಕಿಕೊಳ್ಳಲು ಅಸಾಧ್ಯವಾಯಿತು. ಅಲ್ಲಿಯೇ ಇದ್ದ ಮರದ ಅಡಿಯ ಕಟ್ಟೆಯ ಮೇಲೆ ಕುಸಿದು ಕುಳಿತೆ. ನನ್ನ ಮುಖ ಬೆವೆತು, ಕಳಾಹೀನವಾಗಿತ್ತು. ಸೂಯೀ ಭಯದಿಂದ 'ಏನಾಯಿತು' ಎಂದು ಕೇಳಿದಳು. ಇದುವರೆಗೂ ನಾನು ಹತ್ತಿಕ್ಕಿಕೊಂಡ ಮನದಳಲನ್ನು ತೋಡಿಕೊಳ್ಳಲೇಬೇಕಾಯಿತು.

"ಸೂಯೀ, 'ತುಲಸೀ' ನಾನು ಹುಟ್ಟಿ ಬೆಳೆದ ಗ್ರಾಮ' ಎಂದು ನಾನು ಹೇಳುತ್ತಿದ್ದಂತೆ ಅವಳು ಚಕಿತಳಾಗಿ ಪ್ರಶ್ನಿಸಿದಳು "ಅಂದರೆ?"... "ಹೌದು ಸೂಯೀ, ನನ್ನ ಕುಟುಂಬದ ಮರ ಹೆಮ್ಮರವಾಗಿ ಬೆಳೆದದ್ದು ಇಲ್ಲಿಯೇ! ಆದರೆ ದುರ್ದೈವ ಅದನ್ನ ಕತ್ತರಿಸಿ, ಕಡಿದು ಪಲಾಯನ ಮಾಡಬೇಕಾಗಿ ಬಂತು."

"ನಿಮ್ಮ ಮಾತಿನ ಅರ್ಥವಾಗುತ್ತಿಲ್ಲ ಪವನ?..."

"ಸೂಯೀ, ನಿನಗೆ ಗೊತ್ತ ಇಂಡಿಯಾ ಸ್ವತಂತ್ರವಾಗುವುದರ ಜೊತೆಗೆ ವಿಭಜಿಸಲ್ಪಟ್ಟಿತು, ಭಾರತ ಪಾಕಿಸ್ತಾನಗಳಾಗಿ. ಆಗ ಅಸಂಖ್ಯಾತ ಹಿಂದುಮುಸ್ಲಿಮರು ನಿರಾಶ್ರಿತರಾದರು. ಕೋಮು ಗಲಭೆಯ ದಳ್ಳುರಿ ಭುಗಿಲೆದ್ದಿತು. ರಕ್ತದ ಕೋಡಿ ಹರಿಯಿತು. ಈ ತುಲಸೀ ಭಾರತದ ಗಡಿ ಹತ್ತಿರದ ಹಳ್ಳಿ ಪಾಕಿಸ್ತಾನಕ್ಕೆ ಸೇರಿತು. ದಳ್ಳುರಿ ನಮ್ಮನ್ನು ದಹಿಸಿತು."

"ಅಂದರೆ ನೀವು ವಿಭಜನೆಯ ಕಾಲಕ್ಕೆ ಇಂಡಿಯಾಕ್ಕೆ ಓಡಿ ಹೋದಿರಾ?"

"ಹೇಳುತ್ತೇನೆ ಕೇಳು ಸೂಯೀ, 'ತುಲಸೀ' ಹಿಂದುಮುಸ್ಲಿಂ ಏಕತೆಯ ಸಂಕೇತದಂತಿತ್ತು. ನಾನಂತೂ ಆಗ ಇನ್ನೂ ಚಿಕ್ಕವ. ರಹೀಮ ಚಾಚಾನ ಮನೆಯಲ್ಲೇ ಇರುತ್ತಿದ್ದೆ. ಅವನ ಮಕ್ಕಳ ಜೊತೆಗೆ ಒಡನಾಟ. ಆಗ ನಾನು ಏಳೆಂಟು ವರುಷದವನಿರಬೇಕು. ಈ ವಿಭಜನೆಯಿಂದ ನನ್ನ ತಂದೆ ತತ್ತರಿಸಿದರು. ಏನು ಮಾಡಬೇಕೋ ತಿಳಿಯಲಿಲ್ಲ. ಹಾಗೇ ಕೆಲದಿನ ನೂಕಿದೆವು.

ಆ ದಿನ... ರಾತ್ರಿ ಹನ್ನೆರಡು ಗಂಟೆಯಾಗಿರಬೇಕು. ಸುತ್ತಲು ಜರುಗುತ್ತಿದ್ದ ದಂಗೆಯಿಂದ ಕಂಗೆಟ್ಟ ನಾವು ನಿದ್ರೆಯಿಲ್ಲದೆ ಕುಳಿತಿದ್ದೆವು.

"ನಾವು ಆದಷ್ಟು ಬೇಗ ಇಲ್ಲಿಂದ ಹಿಂದುಸ್ತಾನಕ್ಕೆ ಓಡಿಹೋಗುವುದು ಒಳಿತು" ನನ್ನ ತಾಯಿ, ತಂದೆಗೆ ಸಲಹೆ ನೀಡಿದರು.

"ಅದು ಹೇಗೆ? ನಮ್ಮ ಕರುಳನ್ನೇ ಕತ್ತರಿಸಿ ಹೋಗಬೇಕೆ?" ಎಂದು ಉದ್ವಿಗ್ನರಾಗಿ ನುಡಿದರು ನನ್ನ ತಂದೆ.

ಅಷ್ಟರಲ್ಲಿ ಜೋರಾಗಿ ಬಾಗಿಲು ಬಡಿದ ಸದ್ದಾಯಿತು. ನಾವೆಲ್ಲ ಭಯದಿಂದ ತತ್ತರಿಸಿದೆವು.

ನನ್ನ ತಂದೆ 'ಯಾರವರು?' ಎಂದು ಜೋರಾಗಿ ಕಿರುಚಿದರು. ನಾನು, ನನ್ನ ತಂಗಿ, ತಾಯಿಯನ್ನು ಗಟ್ಟಿಯಾಗಿ ತಬ್ಬಿಕೊಂಡೆವು.

"ರಾಧಾಕೃಷ್ಣ. ನಾನು ರಹೀಮ. ಬೇಗ ಬಾಗಿಲು ತೆಗೆ"

ರಹೀಮ ಚಾಚಾನ ಧ್ವನಿ ಕೇಳಿ ನಮಗೆ ಹೋದ ಜೀವ ಮರಳಿ ಬಂದಂತಾಯಿತು. ನನ್ನ ತಂದೆ ಓಡಿ ಹೋಗಿ ಬಾಗಿಲ ತೆರೆದರು.

ರಹೀಮ ಚಾಚಾ ಹಾಗೂ ಅವನ ಹಿಂದೆ ನಾಲ್ವರು ಪಂಜು ಹಿಡಿದುಕೊಂಡು ನಿಂತಿದ್ದರು. ರಹೀಮ ಏದುಸಿರು ಬಿಡುತ್ತಿದ್ದ.

"ಏನು ರಹೀಮ?".... ಏನಾಯ್ತು?"

"ರಾಧಾಕೃಷ್ಣ, ಇನ್ನೂ ಏನೂ ಆಗಿಲ್ಲ, ಆಗುವುದಿದೆ. ಈಗ ಹೆಚ್ಚು ಮಾತನಾಡಲಿಕ್ಕೆ ಸಮಯವಿಲ್ಲ. ನೀನು ಭಾಬಿ ಮಕ್ಕಳನ್ನು ಕರೆದುಕೊಂಡು ಇಲ್ಲಿಂದ ಹಿಂದೂಸ್ತಾನಕ್ಕೆ ಓಡಿ ಹೋಗು."

"ಅದು ಹೇಗೆ ರಹೀಮ...?"

"ಓ! ಅಲ್ಲಾ ನಿನಗೆ ಹೇಗೆ ಹೇಳಲಿ. ನಿನ್ನ ಮನೆ ಲೂಟಿಯಾಗಲಿದೆ. ನಿಮ್ಮೆಲ್ಲರ ಜೀವಕ್ಕೆ ವಿಪತ್ತಿದೆ. ನಾನು ಹೇಳಿದಂತೆ ಕೇಳು. ಈ ನಾಲ್ಕು ಜನ ನಿಮ್ಮನ್ನು ಗಾಡಿ ದಾಟಿಸಿ ಬರುತ್ತಾರೆ, ಚಿಂತಿಸಬೇಡ" ಎಂದ ರಹೀಮ ಚಾಚಾ ನನ್ನ ತಂದೆಯನ್ನು ಒಳಗೆ ನೂಕಿ, ನನ್ನ ಹಾಗೂ ನನ್ನ ತಂಗಿಯನ್ನು ತಬ್ಬಿಕೊಂಡ.

ನನ್ನ ತಂದೆ, ತಾಯಿ, ಇದ್ದಬದ್ದ ಹಣ, ಬಂಗಾರವನ್ನು, ಬೆಲೆಬಾಳುವ ಸಾಮಾನುಗಳನ್ನು ಸರಸರನೆ ಪೆಟ್ಟಿಗೆಗಳಲ್ಲಿ ತುರುಕಿ ಸಿದ್ಧರಾದರು.

"ಆಮೇಲೆ...?" ಸೂಯೀ ಉಸಿರು ಗಟ್ಟಿ ಹಿಡಿದುಕೊಂಡು ಕೇಳಿದಳು.

"ಆ ಪಂಜಿನ ಬೆಳಕಿನಲ್ಲಿ ಭರಭರನೆ ಹೊಲದಿಂದ ಹೊಲಕ್ಕೆ ಹಾರುತ್ತ ಪಲಾಯನಗೈದೆವು. ನನ್ನ ತಂದೆ ಹೆಗಲ ಮೇಲೆ ಪೆಟ್ಟಿಗೆ ಹೊತ್ತುಕೊಂಡು ನನ್ನನ್ನು ದರದರ ಎಳೆದುಕೊಂಡು ಓಡತೊಡಗಿದರು. ತಾಯಿ ತಂಗಿಯನ್ನು ಎತ್ತಿಕೊಂಡು ಅಳುತ್ತ ಓಡ ಹತ್ತಿದ್ದರು. ನನ್ನ ಕಾಲು ರಕ್ತಸಿಕ್ತವಾಗಿತ್ತು. ಅಂತೂ ಗಡಿ ದಾಟಿದೆವು.."

"ಓ! ಮೈಗಾಡ್" ಸೂಯೀ ನಿಟ್ಟುಸಿರು ಬಿಟ್ಟಳು.

"ಸೂಯೀ... ಅದೋ ಅಲ್ಲಿ ಕಾಣುತ್ತಿದೆಯಲ್ಲ ಆ ಹಾಳುಬಿದ್ದ ಮನೆಯೇ ನಮ್ಮ ಮನೆ. ಅದನ್ನು ನೋಡಲಿಕ್ಕಾಗುತ್ತಿಲ್ಲ. ಕರುಳು ಹಿಚುಕಿದಂತಾಗುತ್ತಿದೆ" ಸೂಯೀ ತದೇಕ ಚಿತ್ತದಿಂದ ಆ ಮನೆಯನ್ನೇ ದಿಟ್ಟಿಸತೊಡಗಿದಳು.

"ಬನ್ನಿ ಆ ಕಡೆಗೆ ನನ್ನ ರಹೀಮ ಚಾಚಾನ ಮನೆ ಇದೆ! ಈಗ ಅವನಿಗೆ ತುಂಬಾ ವಯಸ್ಸಾಗಿರಬೇಕು. ಭೆಟ್ಟಿಯಾಗಿ ಬರುವಾ!"

ನಾವು ಮೆಲ್ಲಗೆ ಎದ್ದು ಊರೊಳಗೆ ನಡೆದೆ. ಸೂಯೀ ನನ್ನನ್ನು ಹಿಂಬಾಲಿಸಿದಳು.ರಹೀಮ ಚಾಚಾನ ಮನೆಯಲ್ಲಿಯೂ ಅಷ್ಟೊಂದು ಲವಲವಿಕೆ ಇಲಲಿಲ್ಲ. ಭಣಗುಡುತ್ತಿತ್ತು. ಹೊರಗಡೆ

ಯಾರೂ ಇದ್ದಂತೆ ಕಾಣಿಸಲಿಲ್ಲ. "ರಹೀಮ ಚಾಚಾ.." ಎಂದು ಕೂಗಿದೆ. ಬುರಖಾ ಹಾಕಿಕೊಂಡ ಹೆಣ್ಣುಮಗಳು ಹೊರಬಂದು "ಯಾರು?" ಎಂದು ಪ್ರಶ್ನಿಸಿದಳು. ಅವಳ ಗುರುತು ನನಗೆ ಸಿಕ್ಕಲಿಲ್ಲ. ಬಹುಶಃ ಸೊಸೆ ಇರಬಹುದು.

"ರಹೀಮ ಚಾಚಾ... ಇಲ್ಲವೆ?"

"ಇದ್ದಾರೆ ಬನ್ನಿ. ಅವರ ಮೈಯಲ್ಲಿ ಹುಷಾರಿಲ್ಲ, ಮಲಗಿದ್ದಾರೆ. ನೀವು ಯಾರು?" ಎಂದು ಕೇಳಿದಳು. ನಾನೆಲ್ಲ ವಿವರಿಸಿದೆ. ಅಷ್ಟರಲ್ಲಿ ರಹೀಮ ಚಾಚಾ ಮೆಲ್ಲಗೆ ಕೋಲಿನ ಆಸರದಿಂದ ನಡೆಯುತ್ತ ನಡುಗುತ್ತ ಬಂದ. ಎತ್ತರ ನಿಲುವಿನ ಆ ಗಟ್ಟಿ ವ್ಯಕ್ತಿ ಕೃಶವಾಗಿದ್ದ. ಆ ಕೋಲುಮುಖದಲ್ಲಿ ಬಿಳಿಯ ನೀಳ ದಾಡಿ ನೇತಾಡುತ್ತಿತ್ತು. ದೃಷ್ಟಿಯೂ ಮಂದವಾದಂತಿತ್ತು.

"ಯಾರು ಬೇಟಾ ನೀನು?..." ಎಂದು ಹತ್ತಿರ ಬಂದು ಹಣೆಯ ಮೇಲೆ ಕೈಯಿರಿಸಿ ನನ್ನನ್ನು ಪರೀಕ್ಷಿಸುವಂತೆ ಕೇಳಿದ.

ನನ್ನ ವಿವರವನ್ನು ಕೇಳುತ್ತಲೇ ರಹೀಮ ಚಾಚಾ ಕೈಯಲ್ಲಿದ್ದ ಕೋಲನ್ನು ಆಚೆ ಬಿಸುಟು ನನ್ನನ್ನು ಗಟ್ಟಿಯಾಗಿ ತಬ್ಬಿಕೊಂಡ. ಓಲಾಡಿದ, ಹರ್ಷದ ಕಂಬನಿ ಸುರಿಸಿದ. 'ರಾಧಾಕೃಷ್ಣ ಹೇಗಿದ್ದಾನೆ? ನಿನ್ನ ತಾಯಿ, ತಂಗಿ ಹೇಗಿದ್ದಾರೆ' ಎಂದೆಲ್ಲಾ ಪ್ರಶ್ನೆಗಳ ಸುರಿಮಳೆಗರೆದ. ಅವನ ಸೊಸೆ ನಮ್ಮಿಬ್ಬರಿಗೂ ಹಾಲು, ಹಣ್ಣು ತಂದುಕೊಟ್ಟರು.

ನಾನು ಹಣ್ಣು ತಿಂದು ಹಾಲು ಕುಡಿಯುವವರೆಗೆ ರಹೀಮ ಚಾಚಾ ನನ್ನ ಬರಿದಾದ ಕರಗಳಲ್ಲಿ ನನ್ನನ್ನು ತುಂಬಿಕೊಂಡು ಸೊಯೀ ಹಾಲು ಕುಡಿದು ಮುಗಿಸಿದ ಮೇಲೆ ನಾವು ಹೊರಟು ನಿಂತೆವು.

ರಹೀಮ ಚಾಚಾ ಉದ್ವಿಗ್ನನಾಗಿ ಹೇಳಿದ:

"ತಡೀ ಬೇಟಾ, ನಿನ್ನ ತಂದೆಯ ಒಂದು ಅಮಾನತ್ತನ್ನು ಈವರೆಗೆ ರಕ್ಷಿಸಿಕೊಂಡು ಬಂದಿದ್ದೇನೆ. ಅದನ್ನು ಕೊಡುತ್ತೇನೆ. ಸುಮಾರು ಮೂವತ್ತು ನಲ್ವತ್ತು ವರುಷಗಳಾಗಿರಬೇಕು. ಸರಿಯಾದ ದಿನವೇ ಬಂದಿದೀಯಾ. ಇವತ್ತು ದೀಪಾವಳಿ ಅಲ್ಲವೆ?" ಎಂದ. ನನಗೇ ಮರೆತುಹೋಗಿತ್ತು. ನಿನ್ನ ತಂದೆಯ ಅಮಾನತ್ತು ಕೊಡುತ್ತೇನೆ ಎಂದ. ಅದೇನಿರಬಹುದು? ನನ್ನ ತಾಯಿ ಏನಾದರೂ ಬಂಗಾರದ ಸರವನ್ನು ಬಿಟ್ಟು ಹೋಗಿರಬಹುದೆ? ಎಂದು ಊಹಿಸತೊಡಗಿದೆ.

ರಹೀಮ ಚಾಚಾ ನನ್ನನ್ನು ಒಳಗೆ ಕರೆದುಕೊಂಡು ನಡೆದ ಚಿಕ್ಕ ಕತ್ತಲು ಕೋಣೆ ಅದನ್ನು ನೋಡಿದ ನೆನಪು ನನಗಿಲ್ಲ, "ಬೇಟಾ, ದೀಪಾವಳಿ ದಿನದಂದು ನಿಮ್ಮ ಮನೆಯ ದೇವರು ಕೋಣೆಯಲ್ಲಿ ಇರಿಸಿ ಪೂಜಿಸುತ್ತಿದ್ದ ವಸ್ತು ನನ್ನ ಹತ್ತಿರವೇ ಇದೆ" ಎಂದ. ಆಗಲೂ ನನಗೆ ಅರ್ಥವಾಗಲಿಲ್ಲ. ಚಿಕ್ಕದಾದ ಚೌಕಟ್ಟನ್ನು ದಾಟಿಕೊಂಡು ಒಳಗೆ ಅವನ ಹಿಂದೆ ನಡೆದೆ. ಅಲ್ಲಿ ಒಂದು ಸಣ್ಣ ಪೆಟ್ಟಿಗೆ ಇತ್ತು, ಅದರ ಮುಂದೆ ನಂದಾದೀಪ ಬೆಳಗತೊಡಗಿತ್ತು. ಆ ಪೆಟ್ಟಿಗೆ ನೋಡಿದ ನೆನಪು ಮಸಕು, ಮಸುಕಾಗಿ ಹೊಳೆಯಿತು. ಅಷ್ಟೆ!

"ಬೇಟಾ! ನಿನಗೆ ನೆನಪಿರಲಿಕ್ಕಿಲ್ಲ. ನಿಮ್ಮನ್ನು ಅವತ್ತು ರಾತ್ರಿ ಹಿಂದುಸ್ತಾನದ ಗಡಿಯ ಕಡೆಗೆ ಕಳುಹಿಸಿ ವಾಪಸು ಬಂದಾಗ ನಿಮ್ಮ ಮನೆ ಲೂಟಿಯಾಗಿ ಹೋಗಿತ್ತು. ನಂದಗೋಕುಲದಂತಿದ್ದ ನಿಮ್ಮ ಮನೆಗೆ ಬೆಂಕಿ ಇಟ್ಟಿದ್ದರು. ಹೊತ್ತಿ ಉರಿಯತೊಡಗಿತ್ತು. ಅದನ್ನು ನೋಡಿ ನಾನು ಬಿಕ್ಕಿ ಬಿಕ್ಕಿ ಅಳುತ್ತ ಕುಳಿತುಬಿಟ್ಟೆ. ಮುಖವೆತ್ತಿ ನೋಡಿದಾಗ ನಿಮ್ಮ ದೇವರ ಮನೆಯಲ್ಲಿದ್ದ ಆ ಪೆಟ್ಟಿಗೆ ಕಾಣಿಸಿತು. ನನ್ನ ಮೈಯಲ್ಲೇ ಉರಿ ಹತ್ತಿದಂತಾಯ್ತು. ಆ ಬೆಂಕಿಯಲ್ಲಿ ಓಡಿ ಹೋಗಿ ಆ ಪೆಟ್ಟಿಗೆಯನ್ನು ಎತ್ತಿ ಎದೆಗೆ ಅವಚಿಕೊಂಡು ಹೊರಗೆ ಬಂದೆ. ಕೈ ಸುಟ್ಟಿತ್ತು. ಇರಲಿ, ಅಂದಿನಿಂದ ಇಂದಿನವರೆಗೆ ಅದನ್ನು ರಕ್ಷಿಸಿಕೊಂಡು ಬಂದಿದ್ದೇನೆ. ರಾಧಾಕೃಷ್ಣನ ಅಮಾನತ್ತು ಅದು. ನೀನು ಅಲ್ಲಾನ ದೂತ ಬಂದ ಹಾಗೆ ಬಂದಿದ್ದೀಯಾ. ಒಯ್ದು ನಿನ್ನ ತಂದೆಗೆ ಕೊಡು" ತನ್ನ ನಡಗುವ ಕೈಗಳಲ್ಲಿ ಆ ಪುಟ್ಟ ಪೆಟ್ಟಿಗೆಯನ್ನು ಎತ್ತಿಕೊಂಡು ಬಂದು ನನ್ನ ಕೈಗಿತ್ತ ರಹೀಮ ಚಾಚಾ.

ಅದರಲ್ಲೇನಿದೆ? ನನ್ನ ಆತುರ ಸೂರ್ಮಡಿಸಿತು. "ನಿನಗೆ ಅದರಲ್ಲೇನಿದೆ ಗೊತ್ತಿಲ್ಲ, ತೆಗೆದು ನೋಡು ಬೇಟಾ' ಎಂದು ರಹೀಮ ಚಾಚಾ ಹೇಳುತ್ತಿದ್ದಂತೆ ಕಿರ್ರನೆ ಸದ್ದಿನ ಅದರ ಮುಚ್ಚಳ ತೆರೆದೆ. ಅದರೊಳಗಿದ್ದ ಅಮೂಲ್ಯ ವಸ್ತುವನ್ನು ಹೊರಗೆತ್ತಿಕೊಂಡು ನೋಡಿದೆ. ಮಂದ ಬೆಳಕಿನಲ್ಲಿ ಅದ್ಭುತ ಪ್ರಕಾಶದ ಭಗವದ್ಗೀತೆ ಪುಸ್ತಕ ಹೊರ ಬಂತು. ರಹೀಮ ಚಾಚಾ ಹೇಳಿದ: 'ಬೇಟಾ ಇದು ರಾಧಾಕೃಷ್ಣನ ಜೀವ. ಪ್ರತಿ ದೀಪಾವಳಿ ದಿನದಂದು ಅವನು ನನಗೆ ಇದರ ಸಾರ ತಿಳಿಸಿ ಹೇಳುತ್ತಿದ್ದ. ತೂಗೋ ಈ ಅಮಾನತ್ ಅವನಿಗೆ ಮುಟ್ಟಿಸು. ಇನ್ನು ನಾನು ನಿಶ್ಚಿಂತೆಯಿಂದ ಅಲ್ಲಾನ ಪಾದ ಸೇರ್ತೇನೆ'. ಚಾಚಾನ ಮೈಮನ ಹರ್ಷದಿಂದ ಉಬ್ಬಿತ್ತು. ನಾನು ಬೆರಗಾಗಿದ್ದೆ.

ಮತ್ತೊಮ್ಮೆ ರಹೀಮ ಚಾಚನ್ನ ತಬ್ಬಿಕೊಂಡು, ಹೊರಬಿದ್ದೆ. ಸೂಯೀಗೆ ಏನೂ ಅರ್ಥವಾಗಲಿಲ್ಲ. ಯಂತ್ರದ ಬೊಂಬೆಯಂತೆ ನನ್ನನ್ನು ಹಿಂಬಾಲಿಸಿದಳಾದರೂ ನಡೆದ ಘಟನೆ ಏನೆಂಬುದನ್ನು ತಿಳಿದುಕೊಳ್ಳುವ ಆತುರ ಅವಳದು. ಮರದ ಅಡಿಯ ಕಟ್ಟೆಯ ಮೇಲೆ ಕೂಡಿಸಿ ವಿವರಿಸಿದೆ. ಅವಳು ತೆರೆದ ಕಣ್ಣನ್ನು ತೆರೆದೇ ಇರಿಸಿದ್ದಳು. ಮೈ ಪುಳಕಿತಗೊಂಡಿತ್ತು.

# ೧೭. ಗೋಳಗುಮ್ಮಟ

*('ಫಲಿತಾಂಶ' ಹೆಸರಿನಲ್ಲಿ ಚಿತ್ರೀಕರಣಗೊಂಡ ಕಥೆ)*

ಸೊಳ್ಳೆಪರದೆಯೊಳಗೆ ನಿದ್ದೆ ಬಾರದೆ ಹೊರಳಾಡುತ್ತಿದ್ದ ನನ್ನನ್ನು ಯಾರೋ ಚುಚ್ಚಿ ಎಬ್ಬಿಸಿದಂತಾಯಿತು. ನಾನು ಬೆಚ್ಚಿಬಿದ್ದೆ. 'ಯಾರು ನೀನು' ಎಂದು ಉಸುರಿದೆ. ಮೈ ಕಂಪಿಸತೊಡಗಿತ್ತು. ಅದು ಪ್ರತಿಧ್ವನಿಸಿತು 'ಯಾರೊ? ನೀನೇ ನಾನು...' 'ಹಾಂ! ನಾನು... ನಾನು... ಇದೇನು ಸೊಳ್ಳೆಪರದೆ ಆಚೆ ಆಲದಮರದ ಒಂದೊಂದು ಬೇರಿಗೆ ಒಂದೊಂದು ಭೂತ.... ಭೂತ....' 'ಹಾಂ! ಹೊರಗಿನ ಭೂತವಲ್ಲ, ನಿನ್ನೊಳಗಿನ ಭೂತ. ನಿನ್ನ ಪಾಪದ ಕರ್ಮದ ಫಲದ ಭೂತ....' 'ಯಾವ ಭೂತ, ಯಾವ ಕರ್ಮ, ಯಾವ ಫಲ?....ಅವೆಲ್ಲ ವೇದಾಂತಿಯ ಮಾತು' ಎಂದು ಸಮಾಧಾನಿಸಿಕೊಂಡೆ. ಆದರೆ ಅದೇ ಧ್ವನಿ: 'ಹುಂ ಬರಿ ಬಾಹ್ಯದಲ್ಲಿ ನಾಸ್ತಿಕ', ನಿನ್ನೊಳಗೆ ನೀನು ಹೊಕ್ಕು ನೋಡು, ಒಳಗಿನ ನೀನು ಕಂಪಿಸುತ್ತಿರುವೆ. ನೀ ಮಾಡಿದ ಕರ್ಮದ ಪಾಪದ ಫಲ...' ದಿಗ್ಗನೆ ಎದ್ದೆ. ಲೈಟು ಹಾಕಿದೆ. ಭೂತ ಓಡಿ ಹೋಗಿರಬೇಕು. ಆಂ! ಇವು ಭೂತ ಅಲ್ಲಾ ಎಷ್ಟೋ ದಿವಸದಿಂದ ಇಸ್ತ್ರೀ ಕಾಣಲಾರದೆ ಪುಸ್ತಕದ ಕಪಾಟಿಗೆ ತೂಗಾಡುವ ಪ್ಯಾಂಟು, ಶರ್ಟ, .... ಅರೇ.... ಆ ಸ್ಥಳ ..... ಆ ಖುರ್ಚಿ ಮ್ಯಾಲೆ.... ಯಾರು? ..... ಕೂತಾರಾ?.... ಯಾರು?..... ನೀನು ಸುನೀತಾ....

ಅಡರಾಸಿ ಓಡಿದೆ. ಸುನೀತಾಳ ಫೋಟೋದ ಗ್ಲಾಸ ಒಡೆದುಹೋಯಿತು. ಅದರ ಗಂಧದ ಫ್ರೇಮ ವಾಸನೆ ಕಳೆದುಕೊಂಡಿತ್ತು.

"ಓ! ಸುನೀತಾ, ನನ್ನ ಯಾಕ ಹೀಂಗ ನೋಡ್ತೀ? ನಿನ್ನ ಕೋರೈಸೋ ಕಣ್ಣು ಆ ಗಂಭೀರ ಮೌನ, ನನ್ನ ಹೃದಯ ಭೇದಿಸಲಿಕ್ಕೆ ಹತ್ಯಾವ, ಆ ನಿನ್ನ ದೃಶ್ಯ ಎದುರಿಸಲಾರೆ ಸುನೀ...." ಸೊಳ್ಳೆ ಪರದೆಯ ದಾರ ಹರಿದು ಬಿತ್ತು. ಹಾಳು ನೆನಪು ನಿದ್ದೆ ಬರವಲ್ದು. ಈ ಸೃಷ್ಟಿಯಲ್ಲಿ ರಾತ್ರಿ ಅನ್ನೋದಾದ್ರು ಯಾಕಿದೆ. ಮನ ಹಂಗಿಸಿತು. ಮೂರ್ಖಾ ಬರಿ ಹೊರಗಿನ ಬೆಳಕನ್ನು ಆಶಿಸಿದರೆ ಏನು ಪ್ರಯೋಜನ? ನಿನ್ನೊಳಗೆ ಬೆಳಕು ಬರಬೇಕು. ನಿನ್ನ ಕಪ್ಪು ರೂಪಾ ನೋಡಕೋ.... ಅಲ್ಲಿಯೆ ಬಿದ್ದ ಕನ್ನಡಿಯನ್ನು ಎತ್ತಿಕೊಂಡು ನೋಡಿದೆ. ಬೆಳೆದ ಕುರುಚಲು ಗಡ್ಡ, ನಿಸ್ತೇಜವಾದ ಕಣ್ಣು, ಜೋಲು ಮಾರಿ ಇದು ನನ್ನ ರೂಪಾನ? ಥೂ ಹಾಳು ಕನ್ನಡಿ ರಾಪ್ಪ ಹೊಡೀತದ ಪುಸ್ತಕ ಎಡವಿದೆ, ಯಾವ ಪುಸ್ತಕ ಎತ್ತಿಕೊಂಡೆ. ಶಬ್ದಗಳ ಮೇಲೆ ಕಣ್ಣು ಹಾದರೂ ಅರ್ಥವಾಗಲಿಲ್ಲ. ಬರೀ ಪುಟಾ ತಿರುವುತ್ತ ಹೋದೆ. ಅಲ್ಲಿ ನನಗೆ ದೊರೆತದ್ದು,

ಸಾಮಾನುಗಳ ಪಟ್ಟಿ, ದುಂಡು ದುಂಡಾದ ಮುದ್ದಾದ ಅಕ್ಷರ, ತಿಂಗಳ ಸಾಮಾನು ಖರ್ಚು ಕಡಿಮೆ. ಓ ಸುನೀತಾ  ಸುನೀತಾ

ಸುನಿ ಬಳಿ ಸಾರಿ ಬಂದಳು. ನನ್ನ ತುಟಿಗಳ ಮೇಲೆ ಬೆರಳಾಡಿಸುತ್ತ

'ನಿಮ್ಮ ಧೂಮಪಾನಾ ಪೂರಾ ಬಂದ. ಹುಂ! ತೂಗೊಳ್ಳಿ ಉಳಿದ ಸಾಮಾನುಗಳ ಪಟ್ಟಿ ೧೦ ಕಿಲೊ ಅಕ್ಕಿ, ೪ ಕಿಲೋ ಗೋದಿ, ರವಾ ಅರ್ಧಾ ಕಿಲೊ...'

"ಇದೇನು? ಎಲ್ಲಿ ಸುನೀತಾ... ಆಂ! ಇದೇನು ನಿನ್ನ ಧ್ವನಿ ಕತ್ತನ್ನು ಯಾರು ಹಿಚಕಿದ್ರು ಆದು ಅರ್ಧದೊಳಗ ಸತ್ತುಹೋತಲ್ಲ  ಯಾರು?"

ಹೌದು, ಇದೆಲ್ಲ ಸುಖಸ್ವಪ್ನ, ಸಂಸಾರ ಸ್ವಪ್ನಮಯವೆ, ಇದೆಲ್ಲ ಮಿಥ್ಯ, ಶಂಕರಾಚಾರ್ಯರ ಮಾತು ಅಕ್ಷರಶಃ ಸತ್ಯ... ಓ! ಮನೆ ತುಂಬಾ ದೀಪಾ ಉರಿಸಿದರು, ಸೊಳ್ಳೆ ಪರದೆಯೊಳಗೆ ಅವಿತುಕೊಂಡು ಕುಳಿತರೂ ನಿದ್ದೆ ಬರ್‍ತಾ ಇಲ್ಲಾ.... ಆಂ! ಇದೇನು? ಓ! ಮೆದುಳಿನೊಳಗೆ ಯಾರೊ ಛಾಣಾದಿಂದ ಹೊಡೀತಿದ್ದ ಹಂಗ ಅದ... ಅದೇನು? ಅದೇನು? ಗೋಳ ಗುಮ್ಮಟ....

ಹೌದು, ಆ ದಿನ ನಾನು ಸುನೀತಾ ವಿಜಾಪುರದ ಗೋಳಗುಮ್ಮಟದಲ್ಲಿ ಹೋದಾಗ ಅದಾವ ಅವರ್ಣನೀಯ ಲೋಕವನ್ನು ಹೊಕ್ಕಿದ್ದೆವು. ಆ ಮಾತನಾಡುವ ಕಟಾಂಜನದಲ್ಲಿ ನಾವು ಪ್ರೇಮವಕ್ಕಿಗಳು, ಲಲ್ಲೆಗರೆದದ್ದೆ ಗರದದ್ದು, 'ಸುನಿ, ನಿನ್ನ ಸಿಹಿಮಾತು ಕೇಳಕೋತ ನಿಂತಬಿಡಬೇಕು ಅನಸ್ತದ'  ಎಂದೆ. ಗೊಮ್ಮಟದ ಬಳತೀರದ ಒಂದು ಗೋಡೆಗೆ ಕಿವಿ ಹಚ್ಚಿದ ಸುನೀತಾ ಮೆಲುವಾಗಿ ನಕ್ಕ ಹೇಳಿದಳು. 'ಹುಂ! ಇಲ್ಲೇ ಇದ್ದಬಿಡೋಣ, ನಾನೂ ಈ ಗೋಳಗುಮ್ಮಟದಾಗ ಒಂದಾಗಿಬಿಡಬೇಕು ಅನಸ್ತದ!

ಸುನಿ, ನಾನು ದುಂಡು ಕಟಾಂಜನದ ಬಳಿ ಬಂದೆವು.

'ಅಬ್ಬಾ! ಅಲ್ಲಿ ನೋಡ್ರಿ ಕೆಳಗ ನೋಡಿದ್ರ ಕಣ್ಣಾ ತಿರಗ್ತಾವ'

'ಭಾಳಾ ಮುಂದಕ ಹೋಗಬ್ಯಾಡಾ ಸುನೀತಾ'....

'ಯಾಕ ಹೆದ್ರಿದ್ರೇನು? ಇಲ್ಲಿಂದ ಕೆಳಗೆ ಬಿದ್ದವರ ಕಥಿ ಮುಗದ ಹಂಗ ಅಲ್ಲ... ಆಹುತಿ ಆದ್ಹಂಗ....

'ಇಂಥವೆಷ್ಟೋ ಘಟನೆಗಳು ಇಲ್ಲೇ ನಡೆದಹೋಗ್ಯಾವ, ನಡೀತಾವ ಅವು'

'ಇರಬೇಕಲ್ಲಽ?'

'ಸುನೀ, ಈ ಗೋಳಗುಮ್ಮಟದ ನಿರ್ಮಾಣದ ಹಂತದೊಳಗ ಒಂದು ಹೃದಯಸ್ಪರ್ಶಿ ಘಟನೆ ನಡೆದ ಹೋಗೇದ. ಇನ್ನೂ ಇದು ಪೂರ್ತಿಗೊಂಡಿರಲಿಲ್ಲ. ದೊರೆ ಮಹ್ಮದ ಷಾ ಇದ್ನ ನೋಡಲಿಕ್ಕೆ ರಾಣಿ ರಂಭಾಳ ಜೋಡಿ ಬಂದಿದ್ದ. ರಂಭಾ ದೊರೆಗೆ ತನ್ನ ಸರ್ವಸ್ವವನ್ನು ಅರ್ಪಿಸಿದ್ದಳು. ದೊರೆಯ ಹೃದಯದಲ್ಲಿ ಅವಳಿಗೂ ಅಷ್ಟಽ ಸ್ಥಾನ ಇತ್ತು, ಅರ್ಧಪೂರ್ತಿಗೊಂಡ ಕಟಾಂಜನದಲ್ಲಿ ನಿಂತ ದೊರೆ,

'ಹೇಳು ರಂಭಾ, ನನ್ನ ಮೇಲೆ ನಿನಗೆ ಅಪಾರ ಪ್ರೀತಿ ಇದೆಯೆ' ಎಂದು ಕೇಳಿದಾಗ ರಂಭಾ ಮುಗುಳ್ನಗೆ ಬೀರಿ 'ಇದೇನು ನೀವು ಹೀಗೆ ಕೇಳುತ್ತೀರಿ. ನನ್ನ ಹೃದಯ ಮಂದಿರದ

ಪ್ರೇಮದ ಮೂರ್ತಿ ನೀವು. ನಿಮಗೆ ಸರ್ವಸ್ವವನ್ನು ಅರ್ಪಿಸಲು ಸಿದ್ಧಳು' ಎಂದಳು. ದೊರೆ ರಂಭಾಳನ್ನು ಬಾಹುಗಳಲ್ಲಿ ಸೆಳೆದುಕೊಂಡ. ಅವನಿಗೆ ರಂಭಾಳ ಬಗ್ಗೆ ರಾಣಿವಾಸದ ಕೊಂಕು, ಅವಳ ಅನುಪಮ ಪ್ರೇಮದ ಬಗ್ಗೆ ಶಂಕೆ ಬೀರಿದ ಆಸ್ಥಾನ. ಎಲ್ಲವೂ ಸ್ಮರಣೆಗೆ ಬಂದು ಹೋದವು. ಒಂದು ನಿಮಿಷ ಹಾಗೆ ಕೆಳಗಡೆ ದಿಟ್ಟಿಸಿ ಕೇಳಿದ. 'ರಂಭಾ, ನನ್ನ ಪ್ರೀತಿಯ ದ್ಯೋತಕವಾಗಿ ಗುಮ್ಮಟದಿಂದ ಕೆಳಗೆ ಧುಮುಕುವಿಯಾ?'

ಅವನು ಉಸಿರುವಷ್ಟರಲ್ಲಿ ಆ ಉಸಿರುನೊಂದಿಗೆ ಕೆಳಕ್ಕೆ ಧುಮುಕಿ ಅಸುನೀಗಿದ್ದಳು ರಂಭಾ.

ನಾ ಇನ್ನೂ ಏನೋ ಹೇಳಬೇಕೆಂದವನು ಸುನೀತಾಳ ಕಡೆ ನೋಡಿದ. ಅವಳ ಕಣ್ಣಲ್ಲಿ ಹೊಳಪಿತ್ತು 'ಸುನೀತಾ ಸುನೀತಾ' ಎಂದಾಗ,

'ಅಷ್ಟೊಂದು ಮನಸ್ಸು ಪಕ್ವವಾಗಿರಬೇಕಾದ್ರೆ' ಎಂದಳು.

'ಯಾರದು? ಏನು?' ಎಂದು ಅಲ್ಲಾಡಿಸಿದೆ ಅವಳನ್ನು.

'ನೀವು ಹೇಳಿದ್ರೆಲ್ಲಾ ರಂಭಾನ ಕಥೀನಾ, ಅವಳ ಮನಸ್ಸು ಅಷ್ಟು ಸ್ಥಿರಗಟ್ಟಿ ಆಗಬೇಕಾದ್ರ ಸುಮ್ಮನೆ ಅಲ್ಲಾ.'

'ನಡೀ ಸುನೀತಾ ನೆಲಮನಿಯೊಳಗೆ ಮಹ್ಮದ ಷಹಾನ ಹತ್ತರ ರಂಭಾಳ ಸಮಾಧೀನೂ ಅದ.'

'ಹೌದಃ?'

'ಹೌದು ಸುನೀ, ಮೇಲಿಂದ ಬಿದ್ದ ಅವಳ ದೇಹ ಗಳಕ್ಕೆ ಸಿಕ್ಕು ನೆಲಕ್ಕೆ ಬಿದ್ದು ಛಿದ್ರ ವಿಛಿದ್ರ ಆಗಿಹೋಗಿತ್ತಂತ ಮಹ್ಮದ ಷಹಾ ತತ್ತರಿಸಿ ಹೋಗಿದ್ದ. ಅವಳ್ನ ಕೆಳಗೆ ಇಳದ ಹೋಗಿ ತನ್ನ ತೊಡಿಮ್ಯಾಲೆ ಹಾಕ್ಕೊಂಡ ಅವಳ ಕಣ್ಣಾಗ ಕಣ್ಣಿಟ್ಟು ನೋಡಿದ. ಅವಳ ಕಡೇ ಆಶ್ಯಾ ಒಂದ ಒಂದಾಗಿತ್ತು. ದೊರೆ ಸಮಾಧಿ ಹತ್ತಿರ ಅವಳ ಸಮಾಧೀನೂ ಇರಬೇಕು ಅನ್ನೋದು, ದೊರೆ ಅವಳ ಆಶ್ಯಾ ಈಡೇರಿಸ್ಯಾನ. ತನ್ನ ಸಮಾಧಿ ಕಟ್ಟಲು ನಿಶ್ಚಿತಪಡಿಸಿದ ಸ್ಥಳದ ಹತ್ತಿರದ್ದಾನ ಅವಳ ಸಮಾಧೀನೂ ಕಟ್ಟಿಸಿದ.'

'ಹಂಗಾರ ನಡೀರಿ ಮೊದಲು ಆ ಸಮಾಧಿ ನೋಡೋಣ'.... ಕಣ್ಮನ ತಣಿಸಿದ ಗೋಳಗುಮ್ಮಟದಿಂದ ತಿರುಗಿ ನಾವು ಇಳಿದುಕೊಂಡ ಹೋಟಲಿಗೆ ಬಂದೆವು. ಹಸಿವೆ ಎಳ್ಳಷ್ಟೂ ಆಗಿರಲಿಲ್ಲ.

'ಸುನೀತಾ ಆ ಹಾಲಿನ ಗ್ಲಾಸು ಟೇಬಲ್ ಮ್ಯಾಲೆ ಇಟ್ಟು ಬೆಡ್‌ಸ್ವಿಚ್ ಹಾಕಿ ದೊಡ್ಡ ಲೈಟ್ ಆರಿಸಿಬಿಡು. ನಿದ್ದಿ ಬರೋ ಹೊತ್ತಿಗೆ ಹಾಲು ಕುಡುದು ಮಲಗಿದ್ರಾಯ್ತು'.... ಎಂದೆ. ಅವಳೂ ಅಂತೆಯೇ ಮಾಡಿ ನನ್ನ ಬಳಿ ಬಂದು ಮಲಗಿದಳು. ಆ ಮಂದ ನೀಲ ಪ್ರಕಾಶದಲ್ಲಿ ಕೇಳಿದೆ 'ಗೋಳಗುಮ್ಮಟ ಹ್ಯಾಂಗ ಅನಸ್ತು ಸುನೀ?'

'ಈಗ ನನ್ನ ಕಣ್ಣಮುಂದ ಬರೇ ಅದ ಚಿತ್ರ ಅದ. ಅದ್ನ ಬಿಟ್ಟು ಬರಲಿಕ್ಕೆ ಮನಸ್ಸು ಆಗಲೇ ಇಲ್ಲಾ. ರಂಭಾ ಮತ್ತು ದೊರೆಯ ಸಮಾಧಿ ಬಳಿ ಎಂಥಾ ಪ್ರಶಾಂತ ವಾತಾವರಣವಿತ್ತು'

'ಆ ಸ್ಟಳಾ ಮುಟ್ಟೋವರೆಗೂ ಎಷ್ಟು ಕತ್ತಲ ಇತ್ತಲ್ಲ, ಆ ಗೈಡ ಕಂದೀಲ ಹಿಡಕೊಂಡು ಹಂಗ ಮುಂದ ಮುಂದ ಹೊಂಟಿದ್ದ.'

'ಹೌದ್ರೀ ನಾನಂತೂ ನಿಮ್ಮ ಹೆಜ್ಜಿ ಒಳಗೆ ಹೆಜ್ಜಿ ಇಟಗೋತ ಹೊಂಟಿದ್ದೆ. ಥೂ ಹೋಗ್ರೀ ನೀವೊಂದು ಅಂಥಾ ಕತ್ಲದಾಗ ಸಹಿತ ಕೈ ಹಿಡಿದು ಎಳಕೋಬೇಕೇನು ನಿಮ್ಮ ಕಡೆ' ಎಂದು ನಕ್ಕಳು. ನಾನೂ ನಕ್ಕೆ. ನಗುವಿನ ಅಲೆ ತೇಲಿತು. ಹೋಟೆಲಿನ ವರಾಂಡದಲ್ಲಿಯ ಗಡಿಯಾರದ ಗಂಟೆ ಬಾರಿಸಿತು. ಸುನೀತಾ ನನ್ನ ಕಡೆಗೆ ಹೊರಳಿ ಕೇಳಿದಳು, 'ಹತ್ತು ಹೊಡೀತು ಅಂತ ಕಾಣಸ್ತದ ನಿದ್ದಿ ಬಂತು' 'ಊಹುಂ' ಎಂದು ನಾನು ಗೋಣು ಹಾಕಿದೆ. ಮಾತಿಗೆ ಮಾತು ಮಿಂಚಿದವು. ನಾನು ಅವಳ ಮುಖವನ್ನು ನನ್ನ ಕಡೆಗೆ ಹೊರಳಿಸಿಕೊಂಡು ಕೇಳಿದೆ:

'ಸುನೀತಾ, ನಾ ಹ್ಯಾಂಗ ಇದ್ದೀನಿ, ನನ್ನ ಪರಸನ್ಯಾಲಿಟಿ ಹ್ಯಾಂಗ ಅದ?'

'ಯಾಕ ಇನ್ನೇನ ನಿಮ್ಮ ವರ ಪರೀಕ್ಷೆ ಇಲ್ಲಲ್ಲs'

'ಇರಲಿ ಹೇಳಬಾರದ?'

'ಭಾಳಾ ಸ್ಮಾರ್ಟ ಆಗಿ ಇದ್ದೀರಿ, ಮನ್ಮಥಾ ಇದ್ದಿದ್ದರ ನಿಮ್ಮ ಮುಂದ ನಾಚಗೊಂತಿದ್ದ.'

ನನ್ನ ತುಟಿಗಳಿಗೆ ತುಟಿ ಒತ್ತಿದಳು. ನಾನು ಹೆಮ್ಮೆ ಕೊಚ್ಚಿಕೊಳ್ಳುತ್ತ 'ಚಾಷ್ಟಿ ಮಾಡಲಿಕ್ಕೆ ಹತ್ತಿಯೇನು? ಖರೇವಂದ್ರು ನನ್ನ ಈ ಪರಸನ್ಯಾಲಿಟಿಗೆ ಮರಳಾಗಿ ಮೂರು ನಾಲ್ಕು ಹುಡುಗೇರು ಗಂಟು ಬಿದ್ದಿದ್ದರು. ಇಂಟರನ್ಯಾಗ ಒಂದು ಹುಡುಗಿ ಬಿ.ಎ.ದಾಗ ಒಂದು ಹುಡುಗಿ' ಎಂದು ಇನ್ನೂ ನಾನು ಮಾತು ಮುಂದುವರೆಸುವುದನ್ನು ತಡೆದು ನಕ್ಕು ಸುನೀತಾ ಹೇಳಿದಳು. 'ಎಂ.ಎ.ದಾಗ ಇದ್ದಾಗ ಒಂದು ಹುಡುಗಿ. ಮತ್ತ ಅವರ್ನ ಮದುವಿ ಆಗಬೇಕಿತ್ತು.'

ಆಗ ನಾನು ಸುನೀಯನ್ನು ತಬ್ಬಿಕೊಂಡು 'ಅವೆಲ್ಲ ಮದುವೆಗೆಲ್ಲಾ ಮಚಾಕ್ಕ, ಸಿನೇಮಾಕ್ಕ, ವಾಕಿಂಗಿಗೆ, ಜೋಗ ಜಲಪಾತಕ್ಕ ಹೋಗಿದ್ವಿ, ಬ್ಯಾಡ ಬಿಡು ಆ ಮಾತು ಸಿಟ್ಟ ಬಂದರ.' ಕೆದಕಿದೆ. 'ಇಲ್ಲ ಇಲ್ಲ. ಅದ್ರಾಗೇನದ ಹೇಳ್ರೀ ಅದಿಷ್ಟು ಹೇಳಬಿಡ್ರಿ.'

'ಬ್ಯಾಡಾ ಹೆಂಗಸರಿಗೆ ಸಹನ ಶಕ್ತಿ ಕಡಿಮಿ.'

'ಹಂಗಾದ್ರ ಬಿಟ್ಟಬಿಡ್ರಿ.'

ಮಾತು ನಿಂತು ಹರಡಿದ ಮೌನ ಒಡೆದೆ.

'ಸುನೀತಾ, ಮದ್ವಿಗಿಂತಾ ಮುಂಚೆ ನೀನು ಯಾರನ್ನಾದ್ರು ಪ್ರೀತಿಸಿದ್ಯಾ?'

ಸುನೀ ನನ್ನಿಂದ ಈ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ. ನಾನು ನಕ್ಕು 'ಅಷ್ಟ್ಯಾಕ ಗಾಬರಿ ಆಗ್ತಿ ಹೇಳು. ನಾನು ಭಾಳಾ ಸೋಷಿಯಲ್. ಇಂಥಾದಕ್ಕೆಲ್ಲ ಮಹತ್ವ ಕೋಡೋದಿಲ್ಲ' ಎಂದೆ. ಆ ಮಂದ ನೀಲಿ ಬೆಳಕಿನಲ್ಲಿಯೂ ಅವಳ ಮುಖ ವಿವರ್ಣಗೊಂಡುದು ಗೋಚರಿಸಿತು. ಅವಳ ಹೊಯ್ದಾಡುವ ಮನ ಉಚ್ಚರಿಸಿತು. 'ಇಲ್ಲರೀ, ನಿಮ್ಮ ಹೊರತು ಅಲ್ಲರಿ' ಮಾತು ಬದಲಿಸಲಿಕ್ಕೆ ಪ್ರಯತ್ನಿಸಿದಳು. 'ನಾನೂ ಏನೂ ಭಾವಿಸೋದಿಲ್ಲ ಸುನಿ' ಎಂದು ಒತ್ತಾಯಿಸಿದೆ.

'ಓ! ದಯಮಾಡಿ ಆ ವಿಷ್ಯ ಬದ್ಲಾಯಿಸಿಬಿಡ್ರಿ, ನನ್ನ ಕಾಡಸಬ್ಯಾಡ್ರಿ.'

'ಇಲ್ಲ ಸುನೀತಾ, ನೀನು ಹೇಳಲಿಕ್ಕೆ ಬೇಕು. ನನ್ನ ಆಣೆ ಅದ.'

ಸುನೀತಾ ಎದ್ದು ದಿಂಬಿಗೆ ಒರಗಿ ಕುಳಿತಳು. ಏನು ಹೇಳಬೇಕೋ ತೋಚಲಿಲ್ಲ. ನಿಮಿಷ ನಿಮಿಷಕ್ಕೆ ನದಿ ಉಕ್ಕೇರಿದಂತೆ ಅವಳ ಎದೆಯ ಏರಿಳಿತದ ಉದ್ವೇಗವಾಗಿತ್ತು. ಆಮೇಲೆ ಸಾವರಿಸಿಕೊಂಡು ನನ್ನ ಕರಗಳನ್ನು ತನ್ನ ಕರಗಳಲ್ಲಿ ಒತ್ತಿಕೊಂಡು, 'ಇಲ್ನೋಡ್ರಿ, ಹಂಗಾದ್ರ ನೀವು ಏನು ತಿಳಕೊಳ್ಳೋದಿಲ್ಲ ಅಂತ ವಚನ ಕೊಡ್ರಿ ಮೊದಲು' ಎಂದಾಗ ಅದೇ ಉದ್ವೇಗದಲ್ಲಿ 'ಅಯ್ಯೋ ಹುಚ್ಚೀ ಎಷ್ಟು ಅಂಜಿದಿ, ನಾ ಏನ ಅನಾಗರಿಕ ಅಂತ ತಿಳದೀ ಏನು ತಪ್ಪು ಭಾವಿಸಲಿಕ್ಕೆ' ಎಂದೆ ..... ಆದರೆ.... ಆದರೆ.... ಓ! ನಾ ಏನು ಮಾಡ್ಲಿ ಸೋಷಿಯಲ್... 'ಸಿವಿಲೈಜಡ ಈ ಶಬ್ದಗಳು ಎದೆ ಹೊಕ್ಕು ಇರೀತಾ ಇವೆ. ನನ್ನ ಮುಂಗುರುಳನ್ನು ನೇವರಿಸುತ್ತ ಅವಳು ಉತ್ತರಿಸತೊಡಗಿದಳು...

'ನನ್ನ ಜೀವನದಾಗೂ ಒಂದು ಘಟನೆ ನಡೀತು. ಅದ್ನ ನಾನು ಪ್ರೀತಿ ಅಂತ ಕರೀಲಾರೆ. ನಮ್ಮ ನೆರೆಹೊರೆ ಭಾಳಾ ಸಲಗೀಽಂದಾ ಇತ್ತು. ಮಗ್ಗಲ ಮನಿ ಶಾಮರಾಯರಿಗೆ ರಮೇಶ ಅನ್ನೋ ಒಬ್ಬ ಮಗಾ ಇದ್ದ. ಕಾಲೇಜಿಗೆ ಹೋಗತಿದ್ದಾ.'

'ಹುಂ.....'

'ಸ್ವಲ್ಪ ದಿವಸದೊಳಗೆ ನನ್ನ ತಾಯಿ ಆ ಹುಡುಗನ್ನ ತಾಯಿ ಭಾಳಾ ಆತ್ಮೀಯರಾಗಿ ಬಿಟ್ರರು. ಆ ಮ್ಯಾಲೆ ಏನು ಕೇಳೋದ ಎರಡೂ ಮನೆಯವರೂ ನಮ್ಮಿಬ್ಬರ ಜೋಡಿ ಕೂಡ್ಸಿ ಖ್ಯಾಷ್ಟಿ ಮಾಡಲಿಕ್ಕೆ ಹತ್ತೀದ್ರು. ಈ ಸಂಧಿ ಸಾಧಿಸಿ ಆ ಹುಡುಗನೂ ನನ್ನ ಮನಸೂ ಒಲಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡ್ದಾ. ಆದರ ನಾನು ಅವಕಾಶಾ ಕೊಡಲಿಲ್ಲ. ಕೆಲವೊಂದು ಸಲ ನಾನೂ 'ಆತಾ' ಒಳ್ಳೇ ಹುಡುಗ ಅಂದುಕೊಂಡೆ ಅಷ್ಟ? ಅಷ್ಟರೊಳಗೆ ಅವರಿಗೆ ಬೆಂಗಳೂರಿಗೆ ಬದಲಿ ಆತು ಹೋಗಿಬಿಟ್ರು, ಇದಕ್ಕಿಂತಾ ಹೆಚ್ಚಾಗಿ ನನ್ನ ಜೀವನದಾಗ ಇನ್ನೇನು ನಡೀಲಿಲ್ಲ'...

ಅವಳು ಹೇಳುತ್ತಿದ್ದ ಮೂರು ನಾಲ್ಕು ಮಾತುಗಳಷ್ಟೇ ಕೇಳಿಸಿದ್ದು. ನನ್ನ ಆದರ್ಶದ ಅವಳಿಗೆ ಕೊಟ್ಟ ವಚನದ ಮರಳಿನ ಮಂದಿರ ಹಾಗೇ ಕುಸಿದುಹೋಗಿತ್ತು. ಕ್ರೋಧ ಹಂತಹಂತವಾಗಿ ಏರತೊಡಗಿತ್ತು. ಮೈ ಮನ ಕಾದಿತ್ತು. ಕಿಚ್ಚಿನಲ್ಲಿ ಎಸೆದ ಹೆಣದಂತೆ ಬಿದ್ದಿದ್ದೆ ಎಷ್ಟೋ ಹೊತ್ತು!

ಸುನೀ ನನ್ನ ಕಾದ ಮುಖವನ್ನು ಕಂಡು ಕಂಗೆಟ್ಟಳು 'ಅಂ! ಇದೇನು! ಹಿಂಗ ಸುಮ್ಮನ ಕೂತೂಬಿಟ್ರಲ್ಲ ಮಾತಾಡ್ರಿ ನನ್ನ ಮ್ಯಾಲೆ ಸಿಟ್ಟ ಬಂತಾ ನನ್ನ ಬಗ್ಗೆ ಸಂಶಯ ಬಂತ?'

'ಓ! ಸುನೀ ನಾ ಇದ್ನ ಕೇಳಬಾರದಾಗಿತ್ತು'

'ಇಲ್ನೋಡ್ರಿ ನಾ ಖರೇ ಹೇಳ್ತೀನಿ, ಇದ್ರಕಿಂತಾ ಹೆಚ್ಚಾಗಿ ಏನೂ ಆಗಿಲ್ಲ.'

'ಓ! ತಲೆಶೂಲಿ! ಸುತ್ತಿಗಿ ಇಂದಾ ಹೊಡೀಲಿಕ್ಕೆ ಹತ್ತಿದ್ಹಂಗ ಅನಸಲಿಕ್ಕೆ ಹತ್ತೇದ' ನಾನು ಚಾದರ ಮುಖಕ್ಕೆ ಎಳೆದುಕೊಂಡೆ. ಸುನೀತಾ ಅದ್ನ ಸರಿಸಿ ಮೆಲುವಾಗಿ ಕೇಳಿದಳು.

'ತಲೀ ಒತ್ತತೇನಿ ಕೈ ತಗೀರಿ.'

'ಬ್ಯಾಡ ಬಿಡು ಸುನೀತಾ'

'ಯಾಕ ನೀನು....'

'ಹಂಗೇನಿಲ್ಲ ಈಗ ಕಡಿಮಿ ಆಗ್ತದ.'

'ಚಹ ಅಥವಾ ಗುಳಿಗಿ ತರಿಸಿಕೊಡ್ಲ್ಯಾ?'

'ಏನೂ ಬ್ಯಾಡಾ ಸ್ವಲ್ಪ ಹೊತ್ತ ನನ್ನ ಒಬ್ಬಾಂವನ್ನ ಬಿಟ್ಟುಬಿಡು. ಹೊಟ್ಯಾಗ ಏನೋ ಒಂದು ಥರಾ ಸಂಕಟ ಓ!.....'

ನಾನು ಮತ್ತೆ ಪೂರ್ತಿ ಮುಸುಕು ಹಾಕಿಕೊಂಡೆ. ಸುನೀ ಎದ್ದು ಹೋಗಿ ಟೇಬಲ್ ಮೇಲಿನ ಹಾಲಿನ ಗ್ಲಾಸು ತಂದು,

'ಏನೊ ಹೊಟ್ಟೆಯೊಳಗೆ ಸಂಕಟ ಆಗ್ತದ ಅಂದಿರಿ, ಹಾಲ ತಂದೀನಿ ಕುಡೀರಿ' ಆರಾಮ ಆಗ್ತದ' ಎಂದಳು. ನನ್ನ ಸಹನೆ ಮೀರಿತ್ತು. 'ಎಷ್ಟುಸರೆ ಹೇಳಲಿ ನನ್ಗ ಹಾಲು ಗೀಲೂ ಏನೂ ಬ್ಯಾಡಾ ಹೋಗು ಅತ್ಲಾಗ' ಎಂದು ತಳ್ಳಿದೆ. ಹಾಲಿನ ಗ್ಲಾಸು ನೆಲಕ್ಕೆ ಬಿದ್ದು ಒಡೆದುಹೋಯಿತು. ಹಾಲು ಚೆಲ್ಲಿಹೋದವು. ಸುನೀತಾಗೆ ಏನೂ ತೋಚದೆ ಅಳುತ್ತ ಮೂಲೆಯಲ್ಲಿ ನಿಂತುಬಿಟ್ಟಳು. ಸ್ವಲ್ಪ ಹೊತ್ತು ಬಿಟ್ಟು ಮತ್ತೆ ಸುನೀತಾಳನ್ನು ಕರೆದೆ. ಅಡರಾಸಿ ಬಂದು ಬಿಕ್ಕಳಿಸುತ್ತ 'ಏನು ನನ್ನ ಯಾಕ ಇಷ್ಟೆ ಕಾಡಸ್ತೀರಿ, ನಾ ಏನ ಮಾಡೀನಿ' ಎಂದು ಕೇಳಿದಾಗ 'ಸುನೀ ನಾನು ನಿನ್ನ ಮೊದಲಿನ ಕಥೆ ಕೇಳಬಾರದಿತ್ತು ಹೋಗಲಿ ಬಿಡು ನನ್ನ ಮನಸ್ಸು ಹೊತ್ತಿ ಉರಿಲಿಕ್ಕೆ ಹತ್ತೇದ. ನಾ ಹ್ಯಾಂಗ ಇಷ್ಟ ದುರ್ಬಲ ಆದೆ. ನನಗ ಒಂದೂ ತಿಳಿಲಾರದ್ಹಂಗ ಆಗೇದ...' ಎಂದ ನನ್ನ ಮಾತು ಅವಳನ್ನು ಕಂಗೆಡಿಸಿತು. 'ನಾ ನಿಮಗೆ ಇನ್ನೇನ ಹೇಳಲಿ ನಿಮ್ಮ ಪಾದದ ಆಣಿ ಮಾಡಿ ಹೇಳ್ತಿನಿ ಇದ್ರಕ್ಕಿಂತ ಹೆಚ್ಚಾಗಿ ಇನ್ನೇನು ಆಗಿಲ್ಲ' ನನ್ನನ್ನು ಅವಳು ಸಂತೈಸಲು ಯತ್ನಿಸಿದಳಷ್ಟೆ!.... ಆದರೆ!..... ಆದರೆ....!..... ಗರಬಡೆದವರಂತೆ ಆಗಿದ್ದೆವು. ಯಾವಾಗ ನಮ್ಮಿಬ್ಬರಿಗೂ ನಿದ್ದೆ ಹತ್ತಿತೋ ಗೊತ್ತೇ ಆಗಲಿಲ್ಲ. ಎಚ್ಚತ್ತಾಗ ಬೆಳಗು ಹರಿದಿತ್ತು. ಕುರ್ಚಿಯಲ್ಲಿ ಕುಸಿದ ಸುನೀತ ರಾತ್ರಿ ಅಲ್ಲಿಯೇ ಕಳೆದಿದ್ದಳು. ಭಯಾನಕವಾದ ರಾತ್ರಿಯಿಂದ ನಿರ್ಜೀವವಾದ ಹಗಲಿಗೆ ಸಾಗಿದೆವು. ಅವಳ ಮುಖಾ ನೋಡಲಿಕ್ಕೆ ಮನಸ್ಸು ಆಗಲಿಲ್ಲ.

ಪ್ರವಾಸದ ಉತ್ಸಾಹ ಕಾಯಿಲೆ ಬಿದ್ದ ಹಾಗೆ ಆಗಿತ್ತು. ಮತ್ತೆ ಹಗಲು ಮತ್ತೆ ರಾತ್ರಿ ಹಾಗೇ ಸಾಗಿತು. ಅಂದು ನಾನು ತಲೆ ಕೊಡುಹಿಕೊಂಡು ಎದ್ದೆ. 'ಏನ್ರಿ ಏನು' ನೂರಾರು ಸಲ ಅವಳು ಮಾತಾಡಿಸಿದ್ದಳು. ನಾನು ಮಾತಾಡಿರಲಿಲ್ಲ. ಅಂದು ನಾನೇ ಕರೆದೆ ಸುನೀತಾ.

'ಆಂ.... ಏನು ನನ್ನ ಮ್ಯಾಲಿನ ಸಿಟ್ಟು ಇಳೀತಾ?'

'ರೆಡಿ ಆಗು, ಎಲ್ಲಾದ್ರು ತಿರುಗಾಡಿಕೊಂಡು ಬರೋಣ' ಅಷ್ಟೇ ನಾನು ಹೇಳಿದ್ದು. ಮತ್ತೆ ಅವಳು ಝರ್ರನೆ ಇಳಿದು ಹೋದಳು. ಹೋಟಲಿನಿಂದ ಹೊರಗೆ ಬಂದು ಟಾಂಗಾವಾಲಾನಿಗೆ ಹೇಳಿದೆ. 'ವಿಜಾಪೂರದಲ್ಲಿ ನೋಡುವಂಥಾ ಸ್ಥಳಾ ಅವ ಅಲ್ಲ ಅಲ್ಲೆಲ್ಲಾ ಕರಕೊಂಡು ಹೋಗು.'

ಟಾಂಗಾದ ಕುದುರೆ ಓಡಿತು, ಮರಳುಗಾಡಿನಲ್ಲಿ ಡುಬುರೆ ಬೆನ್ನಿನ ಒಂಟೆ ಮೇಲೆ ಪ್ರವಾಸ ಮಾಡುತ್ತಿದ್ದ ಹಾಗೆ ಅನ್ನಿಸಿತು.

'ಚಾಂದ ಬಾವುಡಿ ಗಗನ್‌ಮಹಲ್ ಇಬ್ರಾಹಿಮ್ ರೋಜಾ' ಇನ್ನು ಏನೇನೋ.... ಹೊಟೇಲಿಗೆ ಮರಳಿದೆವು.

ನಾಲ್ಕೈದು ದಿನಗಳು ಉರುಳಿದವು. ಬರಿ ಯಾಂತ್ರಿಕ ಜೀವನ. ಮತ್ತೆ ರಾತ್ರಿ ಎಷ್ಟು ಮರೆಯಬೇಕೆಂದರೂ ಅವೇ ಚಿತ್ರಗಳು. ಸೊಳ್ಳೆ ಹಾಗೆ ಮೆದುಳನ್ನು ಕಚ್ಚುತ್ತಿದ್ದವು. ಸುನೀ ಖಿರೇವಂದ್ರು ನಿಮ್ಮಿಬ್ಬರ ಸಂಬಂಧ ಅಷ್ಟೆ ಇತ್ತ 'ಓ! ಮತ್ತ ಅದ ಮಾತು ಯಾಕ ನನ್ನ ಹಿಂಬಿ ಹಿಂಬಿ ಸಾಯಿಸ್ತೀರಿ. ಮಾತಾಡಿದ್ರ ಬರೆ ಅದ ಇಲ್ಲದಿದ್ದರ ಮೌನ. ಈ ನಿಮ್ಮ ಚಿತ್ರ ಹಿಂಸೆ ಎಷ್ಟಂತ ಸಹಿಸಲಿ. ನಿಮಗೆ ಅಷ್ಟು ಸಂಶಯ ಬಂದ್ರ ನನ್ನ ಕುತಗಿ ಹಿಚಕಿ ಒಗದ ಬಿಡ್ರಿ, ಇಂಥಾ ಚಿತ್ರಹಿಂಸೆ ಮಾತ್ರ ಕೊಡಬ್ಯಾಡ್ರಿ....'

ಅವಳ ಅಳು ನನ್ನ ಮೌನ....

ರಾತ್ರಿ ಸರಿದಿತ್ತು. ಸುನೀತಾ ನನ್ನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಹಲುಬಿ ಅಲ್ಲಿಯೇ ನಿದ್ರೆ ಹೋಗಿದ್ದಳು. ಅವಳನ್ನು ಆಚೆ ಸರಿಸಿ ಎದ್ದು ಹೋಗಿ ಕಿಟಕಿ ತೆರೆದು ನಿಂತುಕೊಂಡೆ. ಅಂಕುಡೊಂಕಾಗಿ ಸಾಗಿದ ದಾರಿ ಎಲ್ಲಿಯೋ ಹೋಗಿ ಮುಟ್ಟಿತ್ತು. ಎಲ್ಲೆಡೆ ನೀರವ ವಾತಾವರಣ ನನ್ನ ಶೂನ್ಯಮನಸ್ಸಿನ ಕಥೆ ಸಾರುವಂತಿತ್ತು. ಕಿಟಕಿಯಿಂದ ತೂರಿ ಬಂದ ಕತ್ತಲು ಮನದಲ್ಲಿ ಇನ್ನಷ್ಟು ಗೊಂದಲ ಎಬ್ಬಿಸಿತು. ಅವಳ ಬಳಿ ಬಂದೆ. ಹೌದು, ಸುನೀತಾಳ ಈ ಕೋಮಲ ಬಾಹುಗಳು ಆ ಯುವಕನ ಬಾಹುಗಳನ್ನು ಬಳಸಿರಬೇಕು. ಈ ಕೆಂದುಟಿಗಳನ್ನು ಆ ಯುವಕ ಚುಂಬಿಸಿರಬಹುದೆ? ಸುನೀತಾಳ ತುಂಬಿದ ಎದೆಯನ್ನು ತನ್ನ ಎದೆಗೆ ಒತ್ತಿಕೊಂಡು ಅವನು ತಣಿದಿರಬೇಕು... ಹೌದು ಅದೆ ಎದೆ....ಅವೇ ತುಟಿ... ಅವೇ ಬಾಹುಗಳು.... ಅವುಗಳನ್ನು ನಾನು ಈಗ ಹೇಗೆ ಅಪ್ಪಿಕೊಳ್ಳಲಿ.... ಹೇಗೆ?....

ಬೆಳಕು ಹರಿದಿರಬೇಕು. ಇಡೀ ರಾತ್ರಿ ಜಾಗರಣೆ ಮಾಡಿದ ನನ್ನ ಕೆಂಡದುಂಡಿಯಂಥ ಕಣ್ಣುಗಳನ್ನು ಕಂಡು ಸುನೀತಾ ಬೆಚ್ಚಿಬಿದ್ದಳು. ಪರಿಪರಿಯಾಗಿ ನನ್ನನ್ನು ಕೇಳಿಕೊಂಡಳು. ಮಾತನಾಡಿಸಿದಳು.

ನಾನು ಮಾತನಾಡದೆ ಹಾಗೆ ಖುರ್ಚಿಯಲ್ಲಿ ಕುಸಿದಿದ್ದೆ. ಅವಳು ಹತಾಶಳಾದಳು. 'ಇನ್ನು ನಾನು ಬದುಕಿ ವ್ಯರ್ಥ' ಎಂದಿಷ್ಟೆ ಉಸುರಿದಳು.

ನಾನು ಬಹಳಷ್ಟು ಯೋಚಿಸಿ ನಿರ್ಣಯಕ್ಕೆ ಬಂದೆ.

..... ಅದೊಂದೆ ದಾರಿ ನನಗೆ ಉಳಿದಿತ್ತು. ದೈತ್ಯಶಕ್ತಿ ನನ್ನಲ್ಲಿ ಸೇರಿತು.

ನನ್ನ ಬಳಿ ಸುನೀತಾ ಬಂದು ನನ್ನ ಮನದ ಮಾತನ್ನೇ ಕದ್ದಂತೆ 'ಇವತ್ತು ಮತ್ತೊಮ್ಮೆ ಗೋಳಗುಮ್ಮಟಕ್ಕೆ ಹೋಗೋಣ' ಎಂದಳು. ನಾನು ಬೇಡ ಎನ್ನಲಿಲ್ಲ. ಬರೀ ಕಾಫಿ ಕುಡಿದು ಟಾಂಗಾದಲ್ಲಿ ಕುಳಿತು ಗೋಳಗುಮ್ಮಟ ತಲುಪಿದೆವು. ಕೆಲವು ದಿನಗಳ ಹಿಂದೆ ನಮಗೆ ಪ್ರೇಮದ ಮಂದಿರವಾಗಿ ಕಂಡ ಆ ಗುಮ್ಮಟ ಇಂದು ಪ್ರೇತಗಳ ಮಯವಾಗಿತ್ತು. ಎಲ್ಲೆಲ್ಲಿಯೂ ಅತೃಪ್ತಿ ಪ್ರತೀಕಾರದ ದಳ್ಳುರಿ ಹೊತ್ತಿ ಉರಿಯತೊಡಗಿತ್ತು.

ಮೌನವಾಗಿಯೇ ಇಬ್ಬರೂ ಮೆಟ್ಟಲೇರತೊಡಗಿದೆವು. ಒಂದೊಂದು ಮೆಟ್ಟಿಲು ಎದೆಯನ್ನೇರಿ ಬರುತ್ತಿದ್ದಂತೆ ಎನ್ನಿಸಿತು.

ಪೂರ್ತಿ ಗುಮ್ಮಟದ ಮೇಲೆ ಬಂದೆವು. ಕೆಲ ಸಮಯ ಅಲ್ಲಿಯೇ ಇದ್ದ ಗಚ್ಚಿನ ಆಸನದ ಮೇಲೆ ಕುಳಿತೆವು. ಆಮೇಲೆ ಸುನೀತಾ ದುಂಡು ಕಟಾಂಜಿನದ ಬಳಿ ಹೋಗಿ 'ಇಲ್ಲಿ ಬರ್ರಿ' ಎಂದು ಕರೆದಳು. ನಾನು ಹೋದೆ. 'ಅಲ್ಲೆ ನೋಡ್ರಿ ಕೆಳಗ ಓಡ್ಯಾಡೋ ಜನ ಹೆಂಗ ಗೊಂಬಿ ಹಂಗ ಕಾಣಸ್ತಾರಾ'. 'ಹುಂ' ನನ್ನ ಉತ್ತರ.

ಹೌದು, ನನ್ನ ಕೈ ಆವಳ ಕಂಕುಳ ಬಳಸಿತು. ಗಟ್ಟಿ ಹಿಡಿದುಕೊಂಡೆ. ಆವಳು ಬಾಗಿದ್ದಳು. ಛೇ ಹೀನ ಕೃತ್ಯ ಮತ್ತೆ... ಏನು ಮಾಡಲಿ ನನ್ನ ಕೈ ಹಗುರಾಯಿತು...

'ಸುನೀತಾ' ಕಿರುಚಿಕೊಂಡೆ. ಸುನೀತಾ ಸುನೀತಾ ಗೋಳಗುಮ್ಮಟ ಪ್ರತಿಧ್ವನಿಸಿ ಗೋಳೋ ಎಂದು ಅಳಹತ್ತಿತ್ತು.

'ಅಯ್ಯೋ ಅನಾಹುತ' ಎಂದು ಜನ ಧಾವಿಸಿ ಬಂತು. ಇದೇನು ಮಾಡಿಬಿಟ್ಟೆ ಸುನೀತಾ ಸುನೀತಾ ಎಂದು ಹಲುಬುತ್ತಿದ್ದ ನನ್ನನ್ನೂ ನಾಲ್ಕೈದು ಜನ ಗಟ್ಟಿಯಾಗಿ ಹಿಡಿದು ಕೆಳಗೆ ತಂದರು.

ಸುನೀತಾಳ ಪಾರ್ಥಿವ ಶರೀರ ಪುಡಿ ಪುಡಿಯಾಗಿ ಹೋಗಿತ್ತು. ಪ್ರೀತಿಯನ್ನೆ ಬಗೆದು ತೋರಿದಂತೆ. ಕರುಳು ಕಿತ್ತಿ ಹೊರಬಂದಿತ್ತು. ರಕ್ತದ ಚೆಲ್ಲಾಟವಾಡಿತ್ತು ಗೋಳಗುಮ್ಮಟ. ದಿಟ್ಟಿಸಿ ನೋಡಿದೆ. 'ಸುನೀತಾ ರಂಭಾ ರಂಭಾ ಸುನೀತಾ' ಕಣ್ಣುಗುಡ್ಡೆಗಳಲ್ಲಿ ಕಚಪಚನೆ ಸೂಜಿ ಚುಚ್ಚಿದಂತಾಯಿತು. ಗಟ್ಟಿಯಾಗಿ ಮುಚ್ಚಿಕೊಂಡೆ ಕಣ್ಣುಗಳನ್ನು. ಜನ ಸಂತೈಸಿದರು. ಪಂಚನಾಮೆಯಲ್ಲಿಯೂ ಆಕಸ್ಮಿಕ ಎಂದು ತೀರ್ಮಾನವಾಯಿತು. ಆದರೆ ಇಂದಿಗೂ 'ಪಾಪಿ' ನೀನೇ ಎಂದು ಅಂತರಾತ್ಮ ಸಾರಿ ಹೇಳುತ್ತಿದೆ ಆದರೆ ನಾನು ನಿರ್ದೋಷಿ. ನನಗೆ ಕೊಲೆ ಮಾಡಲಿಕ್ಕಾಗಲಿಲ್ಲ. ಹಾಗಾದರೆ ಇದು ಆತ್ಮಹತ್ಯೆಯೆ? ಆಕಸ್ಮಿಕವೆ? ಕೊಲೆಯೆ? ಯಾವದು? ನನ್ನ ಮೆದುಳಿನ ಗುಮ್ಮಟದಲ್ಲಿ ದರವು ಹಿಡಿದಿದೆ. 'ನಾನೇ.... ನಾನೇ....'

ಪಾಪ... ಕರ್ಮ.... ಫಲ..... ಒಂದಕ್ಕೊಂದು ಪೂರಕವಾಗಿವೆ. ನನ್ನ ಪ್ರತಿಬಿಂಬವೇ ನನ್ನನ್ನೂ ತಿರಸ್ಕರಿಸುತ್ತಿದೆ. ಪ್ರಾಯಶ್ಚಿತ್ತವಾಗಲೇಬೇಕು. ಅದಕ್ಕೆ ನನ್ನೊಡಲೇ ನಿನಗೆ ಆಶ್ರಯ ಎಂದು ಇಂದಿಗೂ ಗೋಳಗುಮ್ಮಟ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಿದೆ.

○

# ೧೮. ರಾಜೀನಾಮೆ

ಮಧ್ಯರಾತ್ರಿಯ ನೀರವ ವಾತಾವರಣವನ್ನು ಸೀಳಿ, ದಾಪುಗಾಲು ಹಾಕುತ್ತ ಸಾಗಿದ್ದ ಆನಂದನ ಎದೆ ಹೊತ್ತಿ ಉರಿಯತೊಡಗಿತ್ತು. ಅಂತರಂಗದ ಜ್ವಾಲಾಮುಖಿ ಉಮ್ಮಳಿಸಿ ಕತಕತನೆ ಕುದಿಯತೊಡಗಿತ್ತು. ಈ ಪೇಯ ಜಗತ್ತಿನ ಹೇಸಿ ಜನಗಳ ಕಣ್ಣುಗುಡ್ಡೆಗಳಲ್ಲಿ ಕಚಪಚನೆ ಟಾಚಣಿ ಚುಚ್ಚಬೇಕೆನ್ನಿಸಿತು ಅವನಿಗೆ. ನುಂಗಿದ ಅವಮಾನದ ಕರಗಸ. ಅವನ ಕರುಳನ್ನು ಕತ್ತರಿಸುತ್ತ ಸಾಗಿತ್ತು. ಅಲ್ಲೊಂದು ಇಲ್ಲೊಂದು ಹತ್ತಿ ಉರಿಯುತ್ತಿದ್ದ ಬೀದಿದೀಪದ ಮಂದ ಬೆಳಕಿನಲ್ಲಿ ಮಾನಿನಿಯ ಸೀರೆ ಸೆಳೆದು ಬೆತ್ತಲೆ ಎಸೆದಂತೆ ಟಾರ್ ರಸ್ತೆ ಅಂಗಾತ ಬಿದ್ದಿತ್ತು.

ಆನಂದನ ಮೈಯಲ್ಲಿ ಎಚ್ಚರವೇ ಇರಲಿಲ್ಲ. ನಿಷ್ಠಾವಂತ ಕಾಲುಗಳು ಅವನನ್ನು ಎಳೆದುಕೊಂಡು ಮನೆಗೆ ತಂದು ಮುಟ್ಟಿಸಿದವು. ಕೈಗಳು ತಂತಾನೆ ಬಾಗಿಲು ತಟ್ಟಿದವು.

ಗಂಡನ ದಾರಿಯನ್ನೇ ಕಾಯುತ್ತ ಕುಳಿತಿದ್ದ ಸಂಧ್ಯಾ ಓಡಿಹೋಗಿ ಬಾಗಿಲನ್ನು ತೆರೆದಳು. ವಿವರ್ಣಗೊಂಡ ಆನಂದನ ಮುಖ ನೋಡಿ ಗಾಬರಿಗೊಂಡಳು.

"ಯಾಕ ಏನಾತು? ಹಿಂಗ್ಯಾಕ ಇದ್ದೀರಿ ಮೈಯಾಗ ಆರಾಮ ಅದನೋ ಇಲ್ಲೊ?" ಒಂದೇ ಉಸಿರಿನಲ್ಲಿ ವಿಚಾರಿಸುತ್ತ ಗಂಡನ ಮೈದಡವಿದಳು. ಆನಂದನ ಮೈ ಕೆಂಡವಾಗಿತ್ತು.

"ಅಯ್ಯೋ ದೇವ್ರೆ ಏನಾಗೇದ ಹೇಳ್ರಿ ನಿಮಗ ಅಂದ್ರ" ಎನ್ನುತ್ತ ಆನಂದನನ್ನು ಅಲ್ಲಿಯೇ ಇದ್ದ ಆರಾಮ ಖುರ್ಚಿಯ ಮೇಲೆ ಕೂಡಿಸುತ್ತ ಕೇಳಿದಳು.

ಆನಂದ ಖುರ್ಚಿಯಲ್ಲಿ ಕುಸಿದ. ಕಣ್ಣಾರಳಿಸಿ ಗೋಡೆಯತ್ತ ನೋಡಿದ. ಗೋಡೆಗೆ ತೂಗು ಬಿಟ್ಟ ಅವನ ತೈಲವರ್ಣದ ಚಿತ್ರಗಳು "ನೀನು ಸ್ವಾಭಿಮಾನಿ ಕಲಾವಿದನೆ, ಥೂ ಹೇಡಿ!...." ಎಂದು ಹಂಗಿಸುತ್ತ ಅವನ ಕಣ್ಣ ಮುಂದೆ ಕೊಳ್ಳಿದೆವ್ವಗಳಾಗಿ ಕುಣಿಯತೊಡಗಿದವು.

ಆನಂದ ಕಣ್ಣುಗಳು ಕಿಡಿಕಾರಿದವು. ಸರ್ರನೆ ಅವುಗಳತ್ತ ಸಾಗಿ, ಎರಡೂ ಕೈಗಳಿಂದ ಪರಪರನೆ ಹರಿಯುತ್ತ ಕುಸಿದು ಕುಳಿತ. ಸಂಧ್ಯಾ ಮಧ್ಯ ಪ್ರವೇಶಿಸಿ ಅವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದ್ದೂ ವಿಫಲವಾಯಿತು. ಅವಳ ಕಂಗಳ ಅಂಚಿನಲ್ಲಿ ನೀರು ಒತ್ತರಿಸಿ ನಿಂತವು.

"ಇವತ್ತ ಏನಾಗೇದ ನಿಮಗ? ಹಿಂಗ್ಯಾಕ ಮಾಡ್ತೀರಿ, ನಿಮ್ಮ ಕಲಾಸೃಷ್ಟಿ; ನಿಮ್ಮ ಪ್ರಾಣ ಅವು, ಅವ್ನ ಯಾಕ ಹರದ ಹಾಕೀದ್ರಿ ಹೇಳ್ರೀ..." ಎನ್ನುತ್ತ ಅವನ ಮುಂಗುರುಳು ನೇವರಿಸುತ್ತ ಕೇಳಿದಳು.

"ಇಲ್ಲ ಸಂಧ್ಯಾ, ನಾ ಇನ್ನ ಕಲಾವಿದ ಅಲ್ಲ. ಹೊಟ್ಟೆಪಾಡಿಗೆ ಬದುಕಬೇಕಾದ ಪಶು ಅಷ್ಟ...."

"ಆನಂದ! ನಾ ನಿಮ್ಮ ಹೆಂಡಡಿ, ಅರ್ಧಾಂಗಿ. ನಿಮ್ಮ ದುಃಖದೊಳಗ ನನ್ನೂ ಪಾಲು ಅದಃ ನನ್ನ ಆಣಿ ಅದ, ಕಿರಣನ ಆಣಿ ಅದ, ಹೇಳ್ರಿ ಏನಾಯಿತು?" ಎಂದು ಸಂಧ್ಯಾ ಮುಖ ಕೆಳಗೆ ಹಾಕಿ ಸೆರಗಿನ ಅಂಚನ್ನು ಬಾಯಲ್ಲಿರಿಸಿಕೊಳ್ಳುತ್ತ ಅಳಹತ್ತಿದಳು.

ಆನಂದ ಮೆಲ್ಲನೆ ಅವಳತ್ತ ಬಾಗಿ ಗಟ್ಟಿಯಾಗಿ ತಬ್ಬಿಕೊಂಡು ಚಿಕ್ಕ ಮಕ್ಕಳಂತೆ ಅತ್ತುಬಿಟ್ಟ. ಮನ ಹಗುರವಾಯಿತು. ಸಂಧ್ಯಾಳ ಗದ್ದ ಹಿಡಿದೆತ್ತಿ, ಅವಳ ಮುಖದಲ್ಲಿ ಅಡಗಿದ್ದ ಕಂಗಳಲ್ಲಿ ಇಣಕಿ ನೋಡಿದ.

* * *

ಆನಂದ ನಗರದ ಅತಿ ದೊಡ್ಡ 'ರಂಜನಾ' ಜಾಹಿರಾತು ಕಂಪನಿಯಲ್ಲಿ ಮುಖ್ಯ ಕಲಾವಿದನಾಗಿದ್ದ. ಜಾಹೀರಾತಿನಂಥ ವ್ಯಾಪಾರಿ ಕಲೆಯಲ್ಲೂ ತನ್ನ ಸ್ವಂತಿಕೆಯನ್ನು ಬೆಳಗಿದ್ದ. ಅವನ ಕುಂಚಸ್ಪರ್ಶದಿಂದ ಜಾಹಿರಾತುಗಳು ಜೀವಕಳೆ ತುಂಬಿ ನಳನಳಿಸತೊಡಗಿದವು. ಕಂಪನಿಯ ಮುಂದೆ ಜಾಹಿರಾತುದಾರರ ಸಾಲು ನಿಂತಿತು.

'ರಂಜನಾ' ಜಾಹಿರಾತು ಕಂಪನಿಯ ನಿರ್ದೇಶಕರಾದ ಶಾಮಣ್ಣನವರಿಗಾದ ಆನಂದ ಅಷ್ಟಿಷ್ಟಲ್ಲ. ಆನಂದನ ಬಗೆಗೆ ಅವರ ಅಭಿಮಾನ ತುಂಬಿ ತುಳುಕಿತು.

ಆದರೆ ಕರುಬುವ ಕಿಲುಬುಮನಗಳಿಗೇನು ಕೊರತೆ ಇಲ್ಲ. ಆನಂದನ ಕೈಕೆಳಗೆ ಕೆಲಸ ಮಾಡುವ ಸಹಾಯ ಕಲಾವಿದ ಕರುಪ್ಪಸ್ವಾಮಿ ಕಸವಿಸಿಗೊಂಡಿದ್ದ. ಗೊಮ್ಮಟನ ಮುಂದೆ ಅವನು ಬರಿ ಇರುವೆಯಾಗಿದ್ದರೂ, ಆನಂದನನ್ನು ಆ ಜಾಗದಿಂದ ಇಳಿಸಿ, ತಾನು ಆ ಪಟ್ಟವೇರಬೇಕೆಂಬ ಹೀನ ಪಿಪಾಸೆ ಅವನದು.

ಅಂದಿನ ಘಟನೆ....

ಪ್ರಸಿದ್ಧ ವ್ಯಾಪಾರಿ ಕಾಂತಿಲಾಲ, ಆನಂದನ ಕೋಣೆಯೊಳಗೆ ನಡೆದಾಗ, ಕರುಪ್ಪಸ್ವಾಮಿ ಕೆಟ್ಟಗಣ್ಣು ಬೀರಿ, ಮೆಲ್ಲಗೆ ಅವನ ಹಿಂದೆಯೇ ಹೋಗಿ, ಬಾಗಿಲು ಮರೆಯಲ್ಲಿ ಅವಿತು, ಸಂದಿಯೊಳಗಿಂದ ಏನು ನಡೆಯುತ್ತಿದೆ ಎಂದು ನೋಡತೊಡಗಿದ.

ಆನಂದ ಆತ್ಮೀಯ ಸ್ವಾಗತ ನೀಡಿ, ಕಾಂತಿಲಾಲನನ್ನು ಬರ ಮಾಡಿಕೊಂಡು, ತನ್ನ ಎದುರಿಗಿದ್ದ ಖುರ್ಚಿಯ ಮೇಲೆ ಕೂಡಿಸಿದ.

ಕಾಂತಿಲಾಲ ನಸುನಗೆ ಬೀರುತ್ತ

"ಆನಂದರಾವ್, ನಿಮ್ಮ ಕೈಯಾಗ ಸ್ವತಃ ಕಲಾಸರಸ್ವತಿ ಇದ್ದಾಳ ನೋಡ್ರೀ. ನೀವು ತಗದ ನಮ್ಮ ಅಂಗಡಿ ಜಾಹಿರಾತು ಚಿತ್ರ ನಮ್ಮ ವ್ಯಾಪಾರನ್ನ ನಾಲ್ಕು ಪಟ್ಟು ಹೆಚ್ಚಿಸ್ತು..." ಎಂದ.

"ಏನೋ ನಿಮ್ಮ ಅಭಿಮಾನ ಹಂಗ ಆಡಸ್ತದ...." ಎಂದ ಆನಂದ.

ಕಾಂತಿಲಾಲ, ಸ್ವಲ್ಪ ಅಳುಕುತ್ತಲೇ ಮುಖದಲ್ಲಿ ನಗೆ ತಂದುಕೊಳ್ಳುತ್ತ, ಒಂದು ಕವರನ್ನು ಮುಂದೆ ಚಾಚುತ್ತ,

"ಆನಂದರಾವ, ಒಂದು ಮಾತು ನೀವು ಬ್ಯಾಡ ಅನಬಾರ್ದು. ಇದು ನಮ್ಮ ಕಾಣಿಕೆ ಪ್ರೀತಿಯಿಂದ ಕೊಟ್ಟೇವಿ ತಗೋಬೇಕು...."

"ಏನದು?"

"ಐದುನೂರು ರೂಪಾಯಿ"

"ನೋಡ್ರಿ ಕಾಂತಿಲಾಲ್, ನಾನು ಈ ಕಂಪನಿ ಕಲಾವಿದ, ನನಗ ಕಂಪನಿ ಪಗಾರ ಕೊಡ್ತದ. ನೀವು ಏನಕ ಕೊಡೋದಿದ್ದರ ನಮ್ಮ ಡೈರೆಕ್ಟರ ಅವರಿಗೆ ಕೊಡ್ರೀ"

ಎಂದು ಖಡಾಖಂಡಿತವಾಗಿ ಹೇಳಿಕಳುಹಿಸಿದ.

ಈ ಘಟನೆಯನ್ನು ಆಲಿಸಿದ ಶಾಮಣ್ಣನವರ ಮೈ ಉಬ್ಬಿಹೋಯಿತು. ಆನಂದನ ಬಗೆಗಿದ್ದ ಅಭಿಮಾನ ನೂರ್ಮಡಿಸಿತು. ನಮ್ಮ ಕೋಣೆಗೆ ಅವನನ್ನು ಕರೆಯಿಸಿ ಮೆಚ್ಚುಗೆ ಸೂಚಿಸಿ, ಅಭಿನಂದಿಸಿದರು.

ಆದರೆ ಕುರುಪ್ಪಸ್ವಾಮಿಯ ಕುರುಚಲಮನ, ಈ ಘಟನೆಗೆ ವಿಕೃತರೂಪ ನೀಡಿತು. ಡಾಂಬರಿನಲ್ಲಿ ಅದ್ದಿ ತೆಗೆದಿದ್ದ ಅವನ ಮುಖ, ಮನ ಎರಡೂ ಡಾಂಬರ್...

ದಿನಗಳು ಉರುಳಿದವು. ಮುಂಬಯಿಯಲ್ಲಿದ್ದ ರಂಜನಾ ಜಾಹಿರಾತು ಕಂಪನಿಯ ಹೆಡ್ ಆಫೀಸಿಗೆ, ಆನಂದನ ವಿರುದ್ಧದ ಮೂಕರ್ಜಿಗಳು, ಆರೋಪಗಳ ಸರಮಾಲೆಗಳು ತಲುಪಿದವು. ಜನರಲ್ ಮ್ಯಾನೇಜರ್ ದೇಶಪಾಂಡೆ ಅಸಮಾಧಾನಗೊಂಡರು.

ಪರಿಸ್ಥಿತಿಯನ್ನು ತಾವೇ ಸ್ವತಃ ಅಧ್ಯಯನ ಮಾಡಲು ನಿರ್ಧರಿಸಿ, ತಮ್ಮ ಆಪ್ತ ಕಾರ್ಯದರ್ಶಿಯೊಂದಿಗೆ ತರ್ತುಭೇಟಿ ನೀಡುವ ಸಂದೇಶವನ್ನು ಶಾಮಣ್ಣನವರಿಗೆ ಕಳುಹಿಸಿದರು.

ಸಂದೇಶ ತಲುಪುತ್ತಲೇ, ಶಾಮಣ್ಣನವರು ಆನಂದನನ್ನು ಕರೆಯಿಸಿ, "ನೋಡ್ರಿ ಆನಂದ, ಜಿ.ಎಂ. ನಾಳೆ ಮುಂಜಾನೆ ಫ್ಲೈಟಿಗೆ ಬರ್‍ತಾರಂತೆ, ಏರ್‌ಪೋರ್ಟಿಗೆ ಹೋಗಬೇಕು. ಏಳು ಗಂಟೆಗೆ ನಮ್ಮ ಮನೆಗೆ ಬಂದುಬಿಡ್ರಿ. ಅಲ್ಲಿಂದ ಇಬ್ಬರೂ ಹೋಗೋಣ" ಎಂದು ಹೇಳಿದರು.

ಆಗಲಿ ಎಂದು ಆಜ್ಞೆ ಸ್ವೀಕರಿಸಿ ಆನಂದ ಮನೆಗೆ ಮರಳಿದ.

ಆಗ ರಾತ್ರಿ ೯ ಗಂಟೆಯಾಗಿತ್ತು. ಕಿಟಕಿಯಲ್ಲಿ ನಿಂತು, ಆನಂದರ ಬರುವಿಕೆಯನ್ನೇ ನೋಡುತ್ತಿದ್ದ ಸಂಧ್ಯಾ, ಬಾಗಿಲು ತೆರೆದಳು. ಒಳಗೆ ಕಾಲಿಡುತ್ತಲೇ ನಾಲ್ಕು ವರುಷದ ಮುದ್ದು ಮಗು ಕಿರಣನನ್ನು ಕರೆಯುವ ರೂಢಿ ಆನಂದನದು. "ಕಿರಣ" ಎಂದು ಕೂಗಿದ.

"ಕಿರಣಗೆ ಜ್ವರಾ ಬಂದಾವ" ಎಂದು ಸಂಧ್ಯಾ ಹೇಳುವುದೊಂದೇ ತಡ, ಆನಂದ ಕೋಣೆಯೊಳಗೆ ಓಡಿ, ಮಗನ ಹಣೆಯ ಮೇಲೆ ಕೈಯಿರಿಸುತ್ತ ಹೇಳಿದ,

"ಬಾಳ ಏನಿಲ್ಲ, ಸ್ವಲ್ಪ ಜ್ವರಾ ಆವ."

"ಸಾಲಿಯಿಂದ ತೂಯ್ಸಿಗೊಂಡು ಮನಿಗೆ ಬಂದ. ಕಷಾಯಿ ಮಾಡಿ ಕೊಟ್ಟೆನಿ, ನಾಳಿಗೆ ಕಡಿಮೆ ಆಗಬಹುದು."

ಸಂಧ್ಯಾ ಗಂಡನಿಗೆ ಸಮಾಧಾನ ಹೇಳಿದಳು.

ಆನಂದ ಜಿ.ಎಂ. ಬರುವ ವಿಷಯವನ್ನು ತಿಳಿಸಿ ಬೆಳಗ್ಗೆ ಬೇಗ ಹೊರಡುವುದಾಗಿ ಹೇಳಿದ. ಇಬ್ಬರೂ ಊಟದ ಶಾಸ್ತ್ರ ಮುಗಿಸಿ ಮಲಗಿದರು.

ಆನಂದ ಬೆಳಿಗ್ಗೆ ಎದ್ದಾಗ ಕಿರಣಗೆ ವಿಪರೀತ ಜ್ವರ. ಆ ಝಳಕ್ಕೆ ಏನೇನೋ ಬಡಬಡಿಸತೊಡಗಿದ. ಸಂಧ್ಯಾ ಗಾಬರಿಗೊಂಡಳು. ಬೇಗನೆ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಒಳಿತೆಂದು ಇಬ್ಬರೂ ಭಾವಿಸಿದರು.

"ಸಂಧ್ಯಾ, ಯೋಚಿಸಬ್ಯಾಡ. ಡೈರೆಕ್ಟರಿಗೆ ಫೋನ ಮಾಡಿ ಹೇಳ್ತೀನಿ, ಏರ್‌ಪೋರ್ಟಗೆ ನಾನು ಹೋಗೋದಿಲ್ಲ. ಕರುಪ್ಪಸ್ವಾಮಿಯನ್ನು ಕರಕೊಂಡ ಹೋಗ್ತಾರೆ. ನಾನು ಆಮ್ಯಾಲೆ ಹೋಗಿ ಜಿ.ಎಂ.ನ್ನ ಭೇಟಿ ಆಗ್ತೀನಿ."

ಎಂದು ಹೇಳಿ ಆನಂದ, ಪಕ್ಕದ ಮನೆಯವರಲ್ಲಿದ್ದ ಫೋನಿನ ಮೂಲಕ ಶಾಮಣ್ಣನವರಿಗೆ ಸಮಾಚಾರ ತಿಳಿಸಿದ. ಶಾಮಣ್ಣನವರು, ಆನಂದನಿಗೆ ಸಮಾಧಾನ ಸೂಚಿಸಿ ಮಗುವಿನ ಆರೋಗ್ಯ ನೋಡಿಕೊಳ್ಳಲು ಹೇಳಿದರು.

ಏರ್‌ಪೋರ್ಟಿನಿಂದ ಹೊರಬರುತ್ತಲೇ "ಆನಂದ ಯಾಕ ಬರಲಿಲ್ಲ?" ಎಂದ ದೇಶಪಾಂಡೆ ಪ್ರಶ್ನಿಸಿದರು. ಶಾಮಣ್ಣನವರು ನೀಡಿದ ವಿವರಣೆ ಸಮಾಧಾನ ನೀಡುವ ಬದಲು ಅವರ ಶಂಕೆಗೆ ಉತ್ತೇಜನ ನೀಡಿತು.

ಕರುಪ್ಪಸ್ವಾಮಿ ಅದರ ಲಾಭ ಪಡೆದ. ಗೆಸ್ಟಹೌಸ್‌ನಲ್ಲಿ ಉಳಿದಿದ್ದ ಅವರ ಬಳಿ ಸಾಗಿ ಕಿವಿ ಕಚ್ಚಿದ. ಕೊನೆಗೂ ಗೆದ್ದ.

ಆಫೀಸ ಪ್ರಾರಂಭವಾಗುತ್ತಲೇ ದೇಶಪಾಂಡೆ ಬಂದರು. ಶಾಮಣ್ಣನವರು ಎದ್ದು ತಮ್ಮ ಆಸನವನ್ನು ಬಿಟ್ಟುಕೊಟ್ಟರು. ದೇಶಪಾಂಡೆ ಫೈಲಿನಲ್ಲಿಯ ಪತ್ರಗಳನ್ನು ತಿರುವಿ ಹಾಕುತ್ತ "ಶಾಮಣ್ಣ, ಆನಂದನನ್ನು ಕಲಾವಿಭಾಗದಿಂದ ತೆಗೆದು ರಿಸೆಪ್ಶನ್ ಇನ್‌ಚಾರ್ಜ ಮಾಡ್ರಿ" ಎಂದರು.

ಶಾಮಣ್ಣ ಹಾವು ತುಳಿದವರಂತೆ ಬೆಚ್ಚಿಬಿದ್ದರು. "ಯಾಕ್ ಸರ್! ಆನಂದ ಒಳ್ಳೇ ಕಲಾವಿದ, ನಿಷ್ಠಾವಂತ, ಪ್ರಾಮಾಣಿಕ. ಅವನಿಂದಾನs ನಮ್ಮ ವ್ಯಾಪಾರ ಹೆಚ್ಚೇದ...." ದೇಶಪಾಂಡೆ ಮುಖ ಕೂಡ ಮೇಲೆತ್ತಲಿಲ್ಲ.

"ನಾನು ಹೇಳಿದಷ್ಟು ಕೇಳ್ರಿ, ಆತನ ಜಾಗಕ್ಕೆ ಕರುಪ್ಪಸ್ವಾಮಿನ್ನ ಅಪಾಯಿಂಟ್ ಮಾಡ್ರಿ, ಇವತ್ತಿ ಈ ಸಧ್ಯೇನ ಆಗಬೇಕು."

ಶಾಮಣ್ಣನವರಿಗೆ ಏನು ಮಾಡಬೇಕು ತೋಚಲಿಲ್ಲ. ಬರೀ ತಲೆಹಾಕಿ ಹೊರಟುಹೋದರು.

ಆನಂದ ಆಫೀಸಿಗೆ ಬಂದಾಗ ಆಘಾತ ಕಾದಿತ್ತು. ತನ್ನ ತಿರುಗು ಖುರ್ಚಿಯ ಮೇಲೆ ಕರುಪ್ಪಸ್ವಾಮಿ ಕುಳಿತು, ಗರಗರನೆ ತಿರುಗಿಸುತ್ತ ಗಹಗಹಿಸಿ ನಗುತ್ತ ಜವಾನ ನಜೀರ್‌ನಿಗೆ ಚಹಾ ತರಲು ಹೇಳತೊಡಗಿದ್ದ. ಆನಂದನಿಗೆ ಕೋಪ ಉಕ್ಕಿ ಬಂತು. ಸರಸರನೆ ಡೈರೆಕ್ಟರ್ ರೂಮಿಗೆ ನಡೆದು ಧಡಾರನೆ ಬಾಗಿಲು ತೆರೆದು ಒಳಗೆ ನುಗ್ಗಿದ.

ಡೈರೆಕ್ಟರ್ ಖುರ್ಚಿಯಲ್ಲಿ ಕುಳಿತು ತೂಗುಯ್ಯಾಲೆಯಾಡುತ್ತಿದ್ದ. ಜಿ.ಎಂ. ಅವರನ್ನು ನೋಡಿ ಆನಂದ ಝುರ್ರನೆ ಇಳಿದು ಹೋದ. "ಆನಂದ! ಇವತ್ತಿನಿಂದ ನೀವು ರಿಸೆಪ್ಷನ್ ಸೆಕ್ಷನ್ನಿಗೆ ಇನ್‌ಚಾರ್ಜ ನಿಮ್ಮನ್ನು ಆರ್ಟಿಸ್ಟ್‌ವಿಂಗ್‌ನಿಂದ ತೆಗೆದದ."

"ಯಾಕ್ ಸಾರ್.... ಹಿಂಗ್ಯಾಕ್... ನಾನೂ ಒಬ್ಬ ಕಲಾವಿದ. ನಾನು ಸುಖೀ ಆಗಿ ಇರಬೇಕಾದ್ರ ಆ ಜಾಗಾದಾಗ ಅಲ್ಲ ಸಾರ್."

"ನಾ ಹೇಳಿದಷ್ಟು ಕೇಳ್ರೀ... ಕೆಲಸ ಬೇಕಾಗಿದ್ದರಽ ತಿಳೀತಽ" ಎನ್ನುತ್ತಿದ್ದಾಗ ಶಾಮಣ್ಣನವರೂ ಒಳಗೆ ಬಂದಿದ್ದರು. ಆನಂದ ಅವರ ಮುಖದತ್ತ ನೋಡಿದ. ಅವರ ಮುಖ ಕೆಳಗಾಯಿತು.

"ಆಗಲಿ ಸಾರ್" ಎಂದು ಹೇಳಿ ಹೊರಡುವಷ್ಟರಲ್ಲಿ ದೇಶಪಾಂಡೆ ಹೇಳಿದರು:

"ನೋಡ್ರಿ ಆನಂದ, ಇವತ್ತ ಸಂಜೀಮುಂದ ಪಾರ್ಟೀ ಅದ. ಫಾರೆನ್ ಲಿಕ್ಕರ್ ಇರಬೇಕು. ಸರಿಯಾಗಿ ವ್ಯವಸ್ಥೆ ಮಾಡ್ರಿ, ಓ.ಕೆ."

"ಆಗಲಿ ಸಾರ್..." ಎಂದವನೆ ಧಡಾರನೆ ಬಾಗಿಲು ತೆರೆದುಕೊಂಡು ರಿಸೆಪ್ಷನ್ ರೂಮಿಗೆ ಬಂದು ಕುರ್ಚಿಯ ಮೇಲೆ ಕುಸಿದ. ಸಹಸ್ರಚೇಳು ಕುಟುಕಿದಂತಾಗಿತ್ತು ಆವನ ಸ್ಥಿತಿ. ಶಾಮಣ್ಣನವರು ಎಷ್ಟೇ ಸಂತೈಸಿದರೂ ಆವನ ಮನದ ಹೊಯ್ದಾಟ, ಭುಗಿಲೆದ್ದ ಜ್ವಾಲೆ ಸ್ತಿಮಿತಕ್ಕೆ ಬರಲಿಲ್ಲ.

ಸಂಜೆ ಸರಿದಂತೆ ಆನಂದ ಮೆಲ್ಲನೆ ಎದ್ದು ತನ್ನ ಕೋಣೆಯಲ್ಲಿದ್ದ ಕುಂಚಗಳನ್ನೆಲ್ಲ ಎತ್ತಿ ಕಿಟಕಿ ಆಚೆ ಬಿಸುಟಿ, ವಿದೇಶಿ ಮದ್ಯವನ್ನರಿಸಿ ಹೊರಟ.

ಒಂದು ಹನಿ ಮದ್ಯವನ್ನು ಸವಿಯದ ಆನಂದನಿಗೆ ಅದರ ಸರಬರಾಜಿನ ವ್ಯವಸ್ಥೆ ತನ್ನ ಪಾಲಿಗೆ ಬಿದ್ದುದಕ್ಕೆ ಮುಜುಗರವೆನ್ನಿಸಿತು. ನಿರ್ವಾಹವಿಲ್ಲದೆ ಕೆಲಸಕ್ಕೆ ಅಣಿಯಾದ.

ಸಂಜೆ ಏಳು ಗಂಟೆಗೆ ಪಾರ್ಟಿ ಪ್ರಾರಂಭವಾಯಿತು. ಗ್ಲಾಸುಗಳಿಗೆ ಮದ್ಯ ಸುರುವಿ, ಮಧ್ಯದಲ್ಲೇ ಹೊರಗೆ ನುಸುಳಿ ಹೊರಟುಹೋದ.

ರಾತ್ರಿ ಸುಮಾರು ಹನ್ನೆರಡು ಗಂಟೆಯಾಗುತ್ತ ಬಂದರೂ ಇನ್ನೂ ಪಾರ್ಟಿ ಮುಗಿದಿರಲಿಲ್ಲ. ರಾತ್ರಿ ಏರುತ್ತಿದ್ದಂತೆ ಚಳಿಗಾಳಿಯೂ ಬೀಸತೊಡಗಿತು. ಹೊರಗಡೆ ಮರದಡಿ ನಡುಗುತ್ತ ಕುಳಿತು ಮೆಲ್ಲನೆ ಎದ್ದು ಪಾರ್ಟಿ ನಡೆಯುತ್ತಿದ್ದ ಸ್ಥಳದತ್ತ ಸಾಗಿದ. ಮಂಜು ಮುಸುಕಿದ ಕಿಟಕಿ ಗಾಜನ್ನು ಒರೆಸಿ ಇಣುಕಿ ನೋಡಿದ. ಹುಚ್ಚು ಹೊಳೆಯಲ್ಲಿ ಉನ್ಮತ್ತ ಜನ ಹೆಣ್ಣುಗಂಡು ಎಂಬ ಭೇದವಿಲ್ಲದೆ ಓಲಾಡುತ್ತಿದ್ದುದು ಆನಂದನಿಗೆ ಅಸಹ್ಯವೆನಿಸಿತು. ಅಂತೂ ಪಾರ್ಟಿ ಮುಗಿಯಿತು. ಸೋಕಾಲ್ಡ ಪ್ರತಿಷ್ಠಿತರು ತೂಗಾಡುತ್ತ, ತೂರಾಡುತ್ತ ತಮ್ಮ ತಮ್ಮ ವಾಹನಗಳನ್ನೇರಿ ಮನೆಗಳತ್ತ ಹೊರಟರು. ಆನಂದನಿಗೆ ಉಸಿರುಗಟ್ಟಿಸುವ ಅವಸ್ಥೆ. ಗುಹೆಯಿಂದ ಹೊರಬಂದಂತೆ ಭಾಸವಾಯಿತು. ಆಳಿದುಳಿದ ಮದ್ಯವನ್ನು ಕೆಲಸದವರಿಗೆ ಹಂಚಿ ಮನೆಯತ್ತ ನಡೆದ.

* * *

ಸಂಧ್ಯಾ ಆನಂದನ ಬಾಹುಗಳನ್ನು ಮೆಲ್ಲನೆ ಬಳಸಿಕೊಂಡಳು. "ಹೇಳು ಸಂಧ್ಯಾ" ಈಗ ನೀವ ಹೇಳು ಇಂಥ ಅವಮಾನ ಸಹಿಸಿಕೊಂಡು ನಾನು ಈ ಕಂಪನಿಯೊಳಗೆ ಇರಲ್ಯಾ ಒಬ್ಬ ಕಲಾವಿದನ್ನ ಇವತ್ತ ಹೆಂಡಾ ಹಂಚಲಿಕ್ಕೆ ಹೇಳಿದ್ರು ನಾಳೆ ಹೆಣ್ ಸಪ್ಲೈ ಮಾಡಲಿಕ್ಕೆ ಹೇಳ್ತಾರ. ಹಣದ ಮದದಿಂದ ಕೊಬ್ಬಿದ ಈ ಶ್ರೀಮಂತರು ಇವ್ರಿಗೆ ಕಲೆಗೂ ಬೆಲೀ ಇಲ್ಲ, ಬಡವರ ಜೀವಕ್ಕೂ ಬೆಲೀ ಇಲ್ಲ..."

ಇನ್ನೂ ಆನಂದ ಮಾತು ಮುಗಿಸಿರಲಿಲ್ಲ. ಸಂಧ್ಯಾ ಅವನ ಬಾಯಿ ಮೇಲೆ ಬೆರಳು ಇರಿಸಿ ಮುಚ್ಚಿಸಿದಳು. "ನಿಮ್ಮ ಮನಸ್ಸಿನ ಮ್ಯಾಲ ಆದ ಆಘಾತದ ಅರ್ಥ ನನಗ ಆಗ್ತದ. ಇನ್ನ ಆ ಕಂಪನಿಯೊಳಗ ಕಾಲ ಇಡಬ್ಯಾಡ್ರಿ."

"ಅಂದ್ರ ಸಂಸಾರ ಹ್ಯಾಂಗ ಸಾಗಬೇಕು ಸಂಧ್ಯಾ, ಬ್ಯಾರೆ ಕೆಲಸ ಎಲ್ಲಿ ಸಿಗ್ತದ. ಕಲಾವಿದರು ಈ ಜಗತ್ತಿನ್ಯಾಗ ಬದಕೋದ ಕಷ್ಟ."

"ಏನ ಆಗಲಿ! ನಾವು ಉಪವಾಸ ಸತ್ತರೂ ಚಿಂತಿ ಇಲ್ಲಾ. ನೀವು ಈ ಕೆಲಸಕ್ಕ ಒಪ್ಪಬ್ಯಾಡ್ರಿ, ಬಂದದ್ದು ಬರಲಿ. ದೇವರಿದ್ದಾನಽ...."

ಸಂಧ್ಯಾ ಆನಂದನ ವಿಶಾಲ ವಕ್ಷದಲ್ಲಿ ತಲೆ ಇರಿಸಿ ಹೇಳಿದಳು.

ಹೆಂಡತಿಯ ಸ್ಫೂರ್ತಿಯ ನುಡಿಗಳು ಆನಂದನಲ್ಲಿ ಚೈತನ್ಯ ತುಂಬಿದವು. ಅವಳು ಮುಖವನ್ನು ತನ್ನತ್ತ ತಿರುಗಿಸಿಕೊಂಡು "ನಂಗ ಗೊತ್ತಿತ್ತು; ನೀನು ಹಿಂಗೆ ಹೇಳ್ತಿ ಅಂತ. ಸಂಧ್ಯಾ, ನಾಳೆ ಜಿ.ಎಂ.ನ ಮುಖದ ಮ್ಯಾಲೆ ರಾಜೀನಾಮೆ ಪತ್ರ ಒಗದ ಬರತೀನಿ" ಎಂದ ಆನಂದ ದಣಿದ ಮನದಿಂದ.

"ಅಂಧಂಗ ಈಗ ಕಿರಣಗ ಹ್ಯಾಂಗ ಅದ...?"

"ಸ್ವಲ್ಪ ಆರಾಮ ಆಗೇದ, ಮಲಗ್ಯಾನ"

ಆನಂದ, ಸಂಧ್ಯಾ, ಊಟ ಮುಗಿಸಿ ಕಿರಣನನ್ನು ತಮ್ಮ ನಡುವೆ ಮಲಗಿಸಿಕೊಂಡರು. ಸಂಧ್ಯಾಳಿಗೆ ಬೇಗ ನಿದ್ರೆ ಆವರಿಸಿತು. ಆದರೆ ಆನಂದ ಬಹಳ ಹೊತ್ತಿನವರೆಗೆ ಎಚ್ಚರವಾಗಿಯೇ ಇದ್ದ. ಹೆಂಡತಿ ಮಗನತ್ತ ದೃಷ್ಟಿ ಹರಿಸಿ ಇವರ ಸುಖಕ್ಕಾಗಿಯೇ ಅಲ್ಲವೆ ನಾನು ಬದುಕಿದ್ದು ಎಂದುಕೊಳ್ಳುತ್ತ ಹಾಗೆ ನಿದ್ರಾಪರವಶನಾದ.

* * *

ರಾಜೀನಾಮೆ ಪತ್ರ ಕೈಯಲ್ಲಿ ಹಿಡಿದುಕೊಂಡೇ ಆನಂದ ಆಫೀಸಿನತ್ತ ಸಾಗಿದ. ದಾರಿಯುದ್ದಕ್ಕೂ ಸಂಧ್ಯಾ ಕಿರಣರ ಮುಗ್ಧ ಮುಖಗಳು ಕಣ್ಣು ಮುಂದೆ ಸುಳಿಯತೊಡಗಿದವು. ನನಗೆ ಬೇರೆ ಕೆಲಸ ಸಿಕ್ಕಬಹುದೆ? ಸಿಕ್ಕದೇ ಹೋದರೆ.... ನನ್ನನ್ನೆ ನಂಬಿದ ಈ ಎರಡು ಜೀವಿಗಳು ಪರಿತಪಿಸುವಂತೆ ಮಾಡಬೇಕೆ? ಕಲೆ ಅಷ್ಟೇ ಜೀವನವು ಮಹತ್ವದ್ದಲ್ಲವೆ? ಛೇ ಉಪಜೀವನಕ್ಕಾಗಿ ಕಲೆಯನ್ನು ಬಲಿಕೊಡಬೇಕೆ?

ಮತ್ತೆ ಆನಂದನ ಮನದಲ್ಲಿ ಬಿರುಗಾಳಿ ಎದ್ದಿತು. ಆಫೀಸು ತಲುಪಿದ. ಏನೇ ಇರಲಿ, ರಾಜೀನಾಮೆ ಪತ್ರವನ್ನು ಜಿ.ಎಂ.ನ ಮುಖದ ಮೇಲೆ ಎಸೆದುಬಿಡಬೇಕೆಂದು ನಿರ್ಧರಿಸಿದ. ಧಡಾರನೆ ಬಾಗಿಲು ತೆರೆದು ಒಳಗೆ ನುಗ್ಗಿದ.

ಕಿಟಕಿಯತ್ತ ಮುಖ ಮಾಡಿದ್ದ ಜಿ.ಎಂ. ತಿರುಗು ಖುರ್ಚಿಯನ್ನು ಗರ್‍ರನೆ ಅವನತ್ತ ತಿರುಗಿಸಿ ಮೋನಚುದೃಷ್ಟಿ ಬೀರಿ, ಗಡಚು ಧ್ವನಿಯಲ್ಲಿ "ಬರ್‍ರಿ ಆನಂದ! ನಿನ್ನೆ ಪಾರ್ಟಿ ಭಾಳ ಛಲೋ ಇತ್ತು. ಆ ಯ್ಯಾಮ್ ವೆರಿ ಹ್ಯಾಪಿ! "ಇವತ್ತು ಫಾರೆನ್ ಡೆಲಿಗೇಟ್ಸ್ ಬರ್‍ತಾರಾ ಇನ್ನೂ ಫಸ್ಟ ಕ್ಲಾಸ್ ಇರಬೇಕು. ಸಂಜಿ ಪಾರ್ಟಿ ಓಕೆ?" ಎಂದಾಗ ಆನಂದ ಸ್ತಂಭೀಭೂತನಾಗಿ ನಿಂತುಬಿಟ್ಟ.

"ಯಾಕೆ ಆನಂದ ಏನಾಯಿತು?" ಎಂದು ಜಿ.ಎಂ. ಎಚ್ಚರಿಸಿದಾಗ ಆನಂದ ಪೆಟ್ಟು ಬಿದ್ದವನಂತೆ ಎಚ್ಚೆತ್ತು "ಆಗಲಿ ಸಾರ್" ಎನ್ನುತ್ತಾ ಕೋಣೆಯಿಂದ ಹೊರಬಿದ್ದ. ಆನಂದನ ಕಣ್ಣುಗಳು ಹನಿ ತುಂಬಿದವು. ತನ್ನ ಕೈಯಲ್ಲಿದ್ದ ರಾಜೀನಾಮೆ ಪತ್ರವನ್ನು ಚೂರು ಚೂರಾಗಿ ಹರಿದು ಗಾಳಿಯಲ್ಲಿ ತೂರಿಬಿಟ್ಟ.

○

# ೧೯. ವ್ರಣದೇವ

ತೇಲುವ ಸೃಷ್ಟಿಸೌಂದರ್ಯದ ಜಹಾಜಿನಂತಿರುವ ಹವಾಯಿದ್ವೀಪ, ಚರ್ಚ್ ಗಂಟೆಯ ನಿನಾದವನ್ನಾಲಿಸಿ ತನ್ನ ಸಂಜೆಯ ಪ್ರಾರ್ಥನೆಯನ್ನು ಸಲ್ಲಿಸಿತು. ಚರ್ಚಿನ ಮುಂಭಾಗದಲ್ಲಿ ನಿಂತಿದ್ದ ಫಾದರ್ ಡ್ಯಾಮಿಯನ್ ತನ್ನ ಕಣ್ಣುಗಳಲ್ಲಿ ಪ್ರಕೃತಿಯ ದೈವೀ ಸೊಬಗನ್ನು ತುಂಬಿಕೊಳ್ಳತೊಡಗಿದ್ದ.

ಡ್ಯಾಮಿಯನ್ ಮೆಲ್ಲಗೆ ಒಳಗೆ ನಡೆದು, ಮೇಣದ ಬತ್ತಿಯನ್ನು ಹೊತ್ತಿಸಿಕೊಂಡು ಏಸೂವಿನ ಶಿಲುಬೆಯ ಬಳಿ ಬಂದಾಗ ಹೆಣ್ಣಿನ ಬಿಕ್ಕಳಿಕೆ ಕೇಳಿಸಿತು.

"ಯಾರು?" ಎನ್ನುತ್ತ ಡ್ಯಾಮಿಯನ್ ಶಿಲುಬೆಯ ಕೆಳಗಿನ ಮೆಟ್ಟಿಲ ಬಳಿ ಹೋಗಿ ನೋಡಿದ. ಮೇಣಬತ್ತಿಯ ಮಂದ ಪ್ರಕಾಶದಲ್ಲಿ ರೋಜಿಯ ಅಶ್ರುಗಳು ಪ್ರತಿಫಲಿಸಿದವು. ಬಿಕ್ಕಳಿಗೆ ಇನ್ನೂ ಹೆಚ್ಚಾಯಿತು.

"ಯಾರು? ರೋಜಿ? ಏನಾಯಿತು ರೋಜಿ? ಏಕೆ ಅಳುತ್ತಿರುವೆ?"

ಅವಳ ತಲೆಯ ಮೇಲೆ ಕೈಯಾಡಿಸಿ ಡ್ಯಾಮಿಯನ್ ಕೇಳಿದ. ರೋಜಿಯ ದುಗುಡ ಉಕ್ಕಿಬಂತು. ಅವನ ಅಂಗೈಯಲ್ಲಿ ಮುಖವಿರಿಸಿ "ಫಾದರ್, ನನ್ನ ಪತಿ ಅಬ್ರಾಹಿಂನನ್ನು ನನ್ನಿಂದ ಅಗಲಿಸುತ್ತಿದ್ದಾರೆ. ಅವನನ್ನು ಮನೆಯಿಂದ ಹೊರಗೆ ಎಳೆದು ಹಾಕುತ್ತಿದ್ದಾರೆ" ಎಂದು ರೋದಿಸತೊಡಗಿದಳು.

"ಯಾಕೆ? ಏನಾಯಿತು" ಎಂದು ಫಾದರ್ ಕೇಳುವಷ್ಟರಲ್ಲಿ "ಹಿಡಿಯಿರಿ, ಹಿಡಿಯಿರಿ ಅವನನ್ನು, ಊರೊಳಗೆ ಬಿಡಬೇಡಿ. ಅವನು ಸಮಾಜಬಾಹಿರ" ಎಂದು ಕೂಗಿಕೊಳ್ಳುತ್ತ ಜನರ ಗುಂಪೊಂದು ಅಬ್ರಾಹಿಮನನ್ನು ಅಟ್ಟಿಸಿಕೊಂಡು ಬರುತ್ತಿದ್ದುದು ಕಾಣಿಸಿತು.

ಓಡಿ ಓಡಿ ದಣಿದು ತೇಕುತ್ತ ಬಂದ ಅಬ್ರಾಹಿಂ ಚರ್ಚಿನ ಚೌಕಟ್ಟನ್ನು ಎಡವಿ ಫಾದರ್ ಡಾಮಿಯನ್‌ನ ಪಾದಗಳ ಮೇಲೆ ಬಿದ್ದ. ಡ್ಯಾಮಿಯನ್ ಮೇಣಬತ್ತಿಯನ್ನು ಆಚೆ ಇರಿಸಿ, ಅಬ್ರಾಹಿಂನನ್ನು ತನ್ನ ತೋಳುಗಳಿಂದ ಎತ್ತಿ ತಬ್ಬಿಕೊಂಡ. ಕಂಬಳಿಯನ್ನು ಸುತ್ತಿಕೊಂಡ ಅಬ್ರಾಹಿಂ ಕಂಪಿಸತೊಡಗಿದ್ದ, ಕಂಗಳಿಂದ ನೀರು ಧಾರಾಕಾರವಾಗಿ ಹರಿಯತೊಡಗಿತ್ತು. ಆ ದೀನ ದೃಷ್ಟಿ "ಫಾದರ್, ನಿಮ್ಮ ಆಶ್ರಯದಲ್ಲಿ ಬಂದಿದ್ದೇನೆ, ನನ್ನನ್ನು ಉಳಿಸಿ" ಎಂದು ಕೇಳಿಕೊಳ್ಳುವಂತಿತ್ತು.

ರೋಜಿ ಕಂಗಾಲಾಗಿ ನಿಂತಿದ್ದಳು. ಡ್ಯಾಮಿಯನ್ ಒಂದು ಕ್ಷಣ ಅವರಿಬ್ಬರನ್ನೂ ನೋಡಿದ. ಅಷ್ಟರಲ್ಲಿ ಚರ್ಚಿನ ಹೊರಗಡೆ ನಿಂತಿದ್ದ ಜನರು "ಅಬ್ರಾಹಿಂ, ಚರ್ಚಿನಿಂದ ಹೊರಗೆ ಬಾ" ಎಂದು ಕೂಗಿಕೊಳ್ಳತೊಡಗಿದರು.

ಅಬ್ರಾಹಿಂನ ಬದಲಾಗಿ ಒಳಗಿನಿಂದ ನೀಳ ದಾಡಿಯ ಹೊಳೆವ ಕಂಗಳ ತೇಜಸ್ವೀ ವ್ಯಕ್ತಿ ಹೊರಗೆ ಬಂದಾಗ ಎತ್ತರದಲ್ಲಿ ಮಾತನಾಡುತ್ತಿದ್ದ ಜನರ ಧ್ವನಿ ತಗ್ಗಿತು.

"ಅವನೇಕೆ ಹೊರಗೆ ಬರಬೇಕು? ಏಸುವಿನ ಕರುಣೆಗೆ ಪಾತ್ರರಾದವರು ಎಂದೂ ಅವನಿಂದ ವಂಚಿತರಾಗಲಾರರು. ಅವನನ್ನು ಏಕೆ ಈ ರೀತಿ ಹಿಂಸಿಸುತ್ತೀರಿ?"

ತುಂಬಿದ ಧ್ವನಿ ತುಳುಕಿತು. ಕ್ರುದ್ಧ ಜನಜಂಗುಳಿಯಲ್ಲಿಯ ಒಬ್ಬ ಕೂಗಿದ

"ಫಾದರ್, ನಿಮಗೆ ಗೊತ್ತಿಲ್ಲ, ಅವನೆಲ್ಲ ಮುಚ್ಚಿಡುತ್ತಾನೆ. ಅವನಿಗೆ ಕುಷ್ಠರೋಗ ಅಂಟಿದೆ."

"ಮನುಷ್ಯರಿಗೆ ರೋಗ ಬರುವುದು ಸಹಜ, ಇದರಲ್ಲೇನು ಅಬ್ರಾಹಿಮ್ ಮಾಡಿದ ಅಪರಾಧ?"

"ಇಂಥವರು ಸಮಾಜದಲ್ಲಿ ಇರಕೂಡದು ಫಾದರ್, ಈ ಪಾಪಿಯನ್ನು ಮೊಲಕಾಯ್ ದ್ವೀಪಕ್ಕೆ ಅಟ್ಟಲೇಬೇಕು."

ಒಂದರ ಮೇಲೊಂದು ಧ್ವನಿ ಏರೇರಿ ಬಂತು, ಡ್ಯಾಮಿಯನ್ ಶಾಂತ ಚಿತ್ತದಿಂದ ಹೇಳಿದ:

"ನೀವು ತಪ್ಪು ಭಾವಿಸಿದ್ದೀರಿ. ಏಸು ಕುಷ್ಠರೋಗಿಗಳನ್ನು ಉದ್ಧರಿಸಿದ. ಸ್ವತಃ ಅವರ ಶುಶ್ರೂಷೆಯನ್ನು ಮಾಡಿದ. ಅದನ್ನಾದರೂ ನೆನಪಿಸಿಕೊಳ್ಳಿ."

"ಅಂದರೆ ಈ ಪಾಪಿಯನ್ನು ಊರಲ್ಲಿರಿಸಿಕೊಂಡು ನಾವು ಈ ಹೇಯ ರೋಗಕ್ಕೆ ತುತ್ತಾಗಬೇಕೆ? ಬಾಂಧವರೆ, ಒಳಗೆ ನುಗ್ಗಿ ಅಬ್ರಾಹಿಂನನ್ನು ಹೊರಗೆ ಎಳೆಯಿರಿ."

ಹಿಂದಿನಿಂದ ಕೇಳಿಬಂದ ಧ್ವನಿಯ ಆಜ್ಞೆ ಪಾಲಿಸುವಂತೆ ಜನಜಂಗುಳಿ ಒಳಕ್ಕೆ ನುಗ್ಗಿತು. ಆ ನೂಕುನುಗ್ಗಲಿಗೆ ಫಾದರ್ ಕುಸಿದು ಬಿದ್ದ. ರೋಜಿ ಅವನನ್ನು ಆ ಕಡೆಗೆ ಕರೆದುಕೊಂಡು ಹೋದಳು.

ಡ್ಯಾಮಿಯನ್‌ಗೆ ಎಚ್ಚರವಾದಾಗ ರೋಜಿ ಅವನ ತಲೆ ನೇವರಿಸತೊಡಗಿದ್ದಳು. "ರೋಜಿ, ರೋ....ಜಿ.... ಅಬ್ರಾಹಿಂ."

"ಫಾದರ್, ಈ ನಿರ್ದಯ ಜನ ಅಬ್ರಾಹಿಮ್‌ನನ್ನು ದೋಣಿಯಲ್ಲಿ ನೂಕಿ ಮೊಲಕಾಯ್ ದ್ವೀಪದತ್ತ ತಳ್ಳಿಬಿಟ್ಟರು."

ರೋಜಿಯ ಕಣ್ಣೀರನ್ನು ಒರೆಸುತ್ತ ಡ್ಯಾಮಿಯನ್ "ಕೊನೆಗೂ ಅಬ್ರಾಹಿಂನನ್ನು ತಳ್ಳಿಬಿಟ್ಟರೇ? ಇವರಲ್ಲಿ ಮನುಷ್ಯತ್ವ ಉಳಿದಿಲ್ಲ ರೋಜಿ. ಈ ಜನ ಕುಷ್ಠರೋಗಿಗಳನ್ನು ಪಾಪಿಗಳೆಂದು ತಿಳಿದಿದ್ದಾರೆ. ನಿಜವಾಗಿಯೂ ಪಾಪಿಗಳು ಇವರು. ಈ ಪಾಪಿಗಳ ಮಧ್ಯೆ ನಾನಿರಬಾರದು" ಎಂದು ಎದ್ದು ಕುಳಿತ.

"ಅಂದರೆ ಫಾದರ್..." ರೋಜಿ ಚಕಿತಳಾಗಿ ಪ್ರಶ್ನಿಸಿದಳು. ಉದ್ವೇಗದಿಂದಿದ್ದ ಡ್ಯಾಮಿಯನ್ "ರೋಜಿ, ನಾನೂ ಮೊಲಕಾಯ್ ದ್ವೀಪಕ್ಕೆ ಹೋಗುತ್ತೇನೆ. ಆ ಕುಷ್ಠರೋಗಿಗಳ ಸೇವೆ ಮಾಡುತ್ತೇನೆ. ರೋಜಿ, ಈ ಹವಾಯಿ ದ್ವೀಪದ ಬರಿಯ ರಂಜನೀಯ ಸೃಷ್ಟಿಸೌಂದರ್ಯ ಸವಿಯುವುದು, ಆಡಂಬರದ ಧರ್ಮೋಪದೇಶ ಮಾಡುವುದು ನನಗೆ ಬೇಕಿಲ್ಲ, ಮಾನವತೆಯ

ಸೇವೆಯಲ್ಲಿಯೇ ನಿರತನಾಗುವೆ" ಎಂದಾಗ ಆ ಮಂದಪ್ರಕಾಶದಲ್ಲಿ ಡ್ಯಾಮಿಯನ್ನನ ದೃಢನಿರ್ಧಾರದ ಕಣ್ಣುಗಳು ಹೊಳೆದವು. ರೋಜಿಗಾದ ಸಂತಸ ಅಷ್ಟಿಷ್ಟಲ್ಲ. "ಫಾದರ್, ನಿಮ್ಮ ಹೃದಯ ಎಷ್ಟೊಂದು ಕರುಣೆಯಿಂದ ತುಂಬಿದೆ. ನಾನೂ ನಿಮ್ಮ ಜೊತೆ ಬರುತ್ತೇನೆ" ಎಂದಾಗ ಡ್ಯಾಮಿಯನ್ "ರೋಜಿ, ಈಗ ಬೇಡ, ನಾನು ಮೊದಲು ಹೋಗುತ್ತೇನೆ. ಆಮೇಲೆ ನೋಡುವ. ನಾನು ಜಗತ್ತಿಗೆ, ಕುಷ್ಠರೋಗಿಗಳು ಸಮಾಜಬಾಹಿರರಲ್ಲ, ಪೂರ್ವಜನ್ಮದ ಪಾಪಪೀಡಿತರಲ್ಲ ಎನ್ನುವುದನ್ನು ತೋರಿಸಿಕೊಡಬೇಕಾಗಿದೆ" ಎಂದ.

ರೋಜಿಯ ಹೃದಯ ತುಂಬಿಬಂತು. "ಫಾದರ್, ದೇವರು ನಿಮ್ಮನ್ನು ರಕ್ಷಿಸಲಿ, ಈ ಮಗಳ ಹಾರೈಕೆ ಸದಾ ನಿಮ್ಮ ಜೊತೆ ಇರುತ್ತದೆ" ಎಂದಳು.

* * *

ಸಮುದ್ರದ ಅಲೆಗಳ ಮೇಲೆ ದೋಣಿಯನ್ನು ತೇಲಿಸಿಕೊಂಡು ಫಾದರ್ ಡ್ಯಾಮಿಯನ್ ಮೊಲಕಾಯ್ ದ್ವೀಪ ತಲುಪಿದಾಗ ಸಂಜೆ ಸಮೀಪಿಸಿತ್ತು. ದ್ವೀಪದೊಳಗೆ ನಡೆದ. ಒಂದು ಗುಡಿಸಲೂ ಕಾಣಿಸಲಿಲ್ಲ. ಪೊದೆಗಳನ್ನು ಸರಿಸಿ ಮುನ್ನಡೆದಾಗ, "ಅಯ್ಯೊ ಪಾಪಿ, ನನ್ನ ಕತ್ತಿನ ಮೇಲೆ ಕಾಲಿಟ್ಟು ಕೊಂದೆ' ಎಂದು ಒಂದು ಧ್ವನಿ ಕಿರುಚಿತು. ಡ್ಯಾಮಿಯನ್ ಗಕ್ಕನೆ ನಿಂತು ಅಲ್ಲಿದ್ದ ತೊಪ್ಪಲು ಪೊದೆಯನ್ನು ಆಚೆ ಸರಿಸಿ ನೋಡಿದಾಗ ಮೈ ನಡುಕ ಬಂದಂತಾಯಿತು. ಅಲ್ಲಿ ಬಿದ್ದ ವ್ಯಕ್ತಿಗೆ ಬರಿ ರುಂಡ, ಮುಂಡ ಅಷ್ಟೇ, ಕೈಕಾಲು ಕಳೆದುಹೋಗಿವೆ. ಮೈತುಂಬ ಹುಣ್ಣು, ಕಣ್ಣುಗಳಲ್ಲಿ ಕಣ್ಣು, ಇಂಥ ಯಾತನೆಯನ್ನು ಹೇಗೆ ಸಹಿಸುತ್ತಾನೆ ಈತ ಎನ್ನಿಸಿತು.

ಸಹಜೀವಿಯ ಧ್ವನಿ ಆಲಿಸಿ ಬಂಡೆಗಲ್ಲುಗಳ ಪೊದರಿನೊಳಗಿಂದ ಕಾಲುಗಳನ್ನು ಕಳೆದುಕೊಂಡ ವ್ಯಕ್ತಿಯೊಂದು ಪ್ರಾಣಿಯಂತೆ ತೆವಳುತ್ತ ಹೊರಬಂತು. ಅದನ್ನು ನೋಡಿ ಡ್ಯಾಮಿಯನ್ ಒಂದು ಕ್ಷಣ ಅಲುಗಿದ. ಸುತ್ತಲೂ ಮತ್ತೆ ಕಣ್ಣು ಹಾಯಿಸಿದ.

"ನಾನು ಪ್ರಾಣಿಯಲ್ಲ, ನನ್ನ ಹೆಸರು ಡೇವಿಡ್, ನಿನಗೆಲ್ಲಿ ಹುಣ್ಣಾಗಿದೆ?" ಎಂದು ಆ ಅಂಗವಿಹೀನ ವ್ಯಕ್ತಿ ಜೋರಾಗಿ ಕೂಗತೊಡಗಿದ. "ಬಂಧುಗಳೇ, ಹೊರಗೆ ಬನ್ನಿ, ನಮ್ಮ ದ್ವೀಪಕ್ಕೆ ಒಬ್ಬ ಹೊಸ ಪಾಪಿಷ್ಠ ಕಾಲಿಟ್ಟಿದ್ದಾನೆ."

ಸ್ವಲ್ಪ ಹೊತ್ತಿನಲ್ಲಿಯೇ ಪೊದೆಗಳೊಳಗಿಂದ, ಗುಹೆಯೊಳಗಿಂದ ರೋಗಗ್ರಸ್ತರು ಪ್ರೇತಗಳಂತೆ ಪುದುಪುದು ಹೊರಬಂದರು. 'ಕೈಬೆರಳೋ, ಕಾಲ್ಬೆರಳೋ ಉದುರಿರಬೇಕು ಈ ಪಾಪಿಯವು' ಎನ್ನುತ್ತ ಡ್ಯಾಮಿಯನ್‌ನನ್ನು ಪರೀಕ್ಷಿಸತೊಡಗಿದರು. ಆತ್ಮೀಯತೆಯಿಂದ ಅವರೆಲ್ಲರ ಬಳಿ ಸಾರಿ ಡ್ಯಾಮಿಯನ್ ಹೇಳಿದ: "ನನ್ನ ಯಾವ ಅಂಗವೂ ಊನವಾಗಿಲ್ಲ. ನನಗೆ ಯಾವ ರೋಗವೂ ಇಲ್ಲ, ನಾನು ಫಾದರ್ ಡ್ಯಾಮಿಯನ್, ನೀವ್ಯಾರೂ ಪಾಪಿಗಳಲ್ಲ..."

ಆ ಜೀವಂತ ಪ್ರೇತಗಳು ಒಬ್ಬರ ಮುಖ ಒಬ್ಬರು ನೋಡತೊಡಗಿದವು. ಡೇವಿಡ್‌ನು ಡ್ಯಾಮಿಯನ್‌ನ ಪಾದದ ಬಳಿ ಹೋಗಿ, "ಇದೇನು, ಮೊಟ್ಟಮೊದಲ ಬಾರಿ ಒಬ್ಬ ಮನುಷ್ಯನ

ಬಾಯಿಂದ ಈ ಮಾತನ್ನು ಕೇಳುತ್ತಿದ್ದೇವೆ. ಹಾಗಾದರೆ ನಾವು ಪಾಪಿಗಳಲ್ಲವೆ?" ಎಂದ. ಡ್ಯಾಮಿಯನ್ ಅವನ ಮೈದಡವಿ,

"ಉಹುಂ! ನೀವು ದೇವರ ಮಕ್ಕಳು. ಬರೀ ರೋಗಗ್ರಸ್ತರು" ಅವನ ಪಕ್ಕದಲ್ಲಿದ್ದ ವ್ಯಕ್ತಿ ಜೋರಾಗಿ ನಗುತ್ತ, "ಓಹೋ, ಯಾವನೋ ದೇವದೂತ ಬಂದಹಾಗಿದೆ ಈ ಪಾಪಿಗಳ ಯಾತನೆಯನ್ನು ನೋಡಲಿಕ್ಕೆ. ದೇವರಿಗೆ ವರದಿ ಒಪ್ಪಿಸಲಿಕ್ಕಲ್ಲವೆ?" ಎಂದು ನುಡಿದ. ಡೇವಿಡ್ ಮಧ್ಯ ಬಾಯಿ ಹಾಕಿ,

"ಫಾದರ್, ಇವನು ಹುಚ್ಚ. ಇವನ ಮಾತಿಗೆ ಲಕ್ಷ್ಯ ಕೊಡಬೇಡಿ" ಎಂದಾಗ, ಡ್ಯಾಮಿಯನ್ ಹೇಳಿದ "ಇವನು ಹುಚ್ಚನಲ್ಲ, ಸಮಾಜ ಹುಚ್ಚನನ್ನಾಗಿ ಮಾಡಿದೆ."

ನಗುತ್ತಿದ್ದ ಹುಚ್ಚ ಕಣ್ಣೀರು ಸುರಿಸತೊಡಗಿದ.

"ನಿಜ ಫಾದರ್, ನೀವು ಹೇಳಿದ್ದು ನಿಜ. ನಮ್ಮನ್ನು ಸಮಾಜ ಹುಚ್ಚರನ್ನಾಗಿ ಮಾಡಿತು. ಮೈತುಂಬ ವ್ರಣತುಂಬಿ ನರಳಾಡುವ ನನ್ನನ್ನು ಬೀದಿನಾಯಿಯಂತೆ ಎಳೆದು ಹವಾಯಿಯಿಂದ ಈ ದ್ವೀಪದಲ್ಲಿ ತಂದು ಎಸೆದರು. ಹೆಂಡತಿ, ಮಕ್ಕಳನ್ನು ನೆನೆದು ಹುಚ್ಚನಾಗಿದ್ದೇನೆ, ಸಾಯಬೇಕೆಂದರೂ ಸಾವು ಸಮೀಪಿಸುತ್ತಿಲ್ಲ."

ಡ್ಯಾಮಿಯನ್ ಆ ದೀನನ ಕಣ್ಣೀರು ಒರಸಿ ಸಂತೈಸಿದ.

ರಾತ್ರಿ ಏರತೊಡಗಿತ್ತು. ಆ ದೀನ ಜನತೆ ಅಲ್ಲಲ್ಲಿ ಪೊದರುಗಳಲ್ಲಿ ಒರಗಿ ಹಾಗೇ ನಿದ್ರೆ ಹೋಗಿದ್ದರೂ, ಗಿಡದಡಿಯಲ್ಲಿ ಕುಳಿತ ಡ್ಯಾಮಿಯನ್‌ಗೆ ನಿದ್ರೆ ಬಾರದೆ ಆ ರುದ್ರಭೂಮಿಯ ಯಾತನೆ ಕಣ್ಣಿಗೆ ಕಟ್ಟಿತ್ತು.

ಬೆಳಗಾಯಿತು. ಅದೇ ಗಿಡದಡಿಯಲ್ಲಿ ಡ್ಯಾಮಿಯನ್ ಶಿಲುಬೆಯನ್ನು ನಿಲ್ಲಿಸಿ ಸ್ವಾಮಿಗೆ ವಂದಿಸಿದ. ಹಿಂದಿನಿಂದ ಧ್ವನಿ ಕೇಳಿಸಿತು.

"ಫಾದರ್...."

"ಯಾರು..... ಅಬ್ರಾಹಿಮ್...."

"ಈ ದ್ವೀಪಕ್ಕೆ ಫಾದರ್ ಡ್ಯಾಮಿಯನ್ ಅನ್ನೋ ದೇವದೂತ ಬಂದಿದ್ದಾನೆ ಎಂಬ ವಾರ್ತೆ ಕೇಳಿ, ನಿನ್ನತ್ತ ಹಾರಿಬಂದೆ ತಂದೆ. ಆದರೆ ಇದು ನಿಮಗೆ ಯೋಗ್ಯಸ್ಥಳವಲ್ಲ ಫಾದರ್."

"ಏಸುದೇವನ ಆದೇಶ. ಅದೋ, ಅಲ್ಲಿ ನೋಡು. ಆ ಕೊಳೆತ ದೇಹವನ್ನು ಸ್ವಚ್ಛ ನೀರಿನಿಂದ ತೊಳೆದು ಶುದ್ಧಗೊಳಿಸಬೇಕು. ಈ ನಿರ್ಭಾಗ್ಯರಿಗೆ ಹೊಸ ಬದುಕು ಕೊಡುವಲ್ಲಿ ನೀನು ನನಗೆ ನೆರವು ನೀಡು" ಫಾದರ್ ಡ್ಯಾಮಿಯನ್‌ನನ್ನು ಅನುಸರಿಸಿ ಅಬ್ರಾಹಿಂ ಹೊರಟ.

ದಿನಗಳು ಉರುಳಿದವು. ಮೊಲಕಾಯ್ ದ್ವೀಪ ಡ್ಯಾಮಿಯನ್‌ನ ಸಂಜೀವಿನಿ ಸ್ಪರ್ಶದಿಂದ ಜೀವ ತಳೆದು ನಲಿಯತೊಡಗಿತು. ಗುಡಿಸಲುಗಳು ಕಾಣಿಸಿಕೊಂಡವು. ಶುದ್ಧ ನೀರಿನ ಒರತೆಗಳು ಪುಟಿದವು. ಆಸ್ಪತ್ರೆ ತೆರೆಯಿತು. ಶಾಲೆ ಪ್ರಾರಂಭವಾಯಿತು. ಚರ್ಚಿನ ಗಂಟೆ ನಿನದಿಸಿತು. ಮಾನವೀಯತೆಯ ಕಣ್ಣು ತೆರೆಸಿದ ಡ್ಯಾಮಿಯನ್‌ನ ನೆರವಿಗೆ ಇಡೀ ವಿಶ್ವವೇ ಮುಂದಾಯಿತು.

ಅಂದೇಕೋ ಇಡೀ ದಿನ ಡ್ಯಾಮಿಯನ್ನನ ಮನದಲ್ಲಿ ರೋಜಿ ಸುಳಿದಾಡಿದಳು. ಅವಳ ಮುಗ್ಧ ಮುಖದ ಜೊತೆಗೆ ಅಬ್ರಾಹಿಂನ 'ಫಾದರ್, ರೋಜಿ ಹೇಗಿದ್ದಾಳೆ? ಅವಳ ನೆನಪು ನನ್ನ ಮ್ಮ ಮನಗಳನ್ನಾವರಿಸಿದೆ' ಎಂಬ ನುಡಿಗಳು ಹಿಮ್ಮೇಳ ಹಿಡಿದಂತಿದ್ದವು.

ಏಸುವಿನ ಶಿಲುಬೆಯ ಕೆಳಗೆ ಡ್ಯಾಮಿಯನ್ ಕಣ್ಣುಮುಚ್ಚಿ ಕುಳಿತಿದ್ದ. 'ಫಾದರ್' ಹಿಂದಿನಿಂದ ಮೆಲುವಾಗಿ ಕೇಳಿಬಂದ ಆ ಧ್ವನಿ ಅವನನ್ನು ಬಡಿದೆಬ್ಬಿಸಿತು.

"ನಾನು ಫಾದರ್, ರೋಜಿ..."

ಡ್ಯಾಮಿಯನ್ ತನ್ನ ಕಣ್ಣುಗಳನ್ನೇ ನಂಬದಾದ. ಆನಂದಾಶ್ಚರ್ಯಗಳು ಮುತ್ತಿದವು.

"ಮಗಳೇ, ನಿನ್ನ ನೆನಪಿನಲ್ಲಿಯೇ ನಾನು ಮುಳುಗಿದ್ದೆ; ಬಾ ನಿನಗೆ ನೂರು ವರುಷ"

"ತಂದೆ, ಆ ನೂರು ವರುಷ ನಿನಗೇ ಸಂದಲಿ, ಜನರು ಇನ್ನಷ್ಟು ಪುನೀತರಾಗಲಿ"

ಎನ್ನುತ್ತ ರೋಜಿ ಡ್ಯಾಮಿಯನ್‌ನ ವಿಶಾಲವಾದ ಹಣೆಗೆ ಮುತ್ತಿಟ್ಟಳು. ಡ್ಯಾಮಿಯನ್ ತಬ್ಬಿಕೊಂಡ. ಅಂತಃಕರಣ ಉಕ್ಕಿತು.

"ರೋಜಿ, ನೀನು ಇಲ್ಲಿಗೆ ಹೇಗೆ ಬಂದೆ?" ಫಾದರ್ ಡ್ಯಾಮಿಯನ್ ಏನೋ ನೆನಪಿಸಿಕೊಂಡಂತೆ ಕೇಳಿದ.

ರೋಜಿಗೆ ಗರಿ ಮೂಡಿತ್ತು.

"ಫಾದರ್, ಇಂದು ನನಗಾದ ಆನಂದ ಅಷ್ಟಿಷ್ಟಲ್ಲ. ಜಗತ್ತಿನಾದ್ಯಂತ ತಬ್ಬಲಿಗಳಾದ, ಸಮಾಜದಿಂದ ಬಹಿಷ್ಕೃತರಾದ ಕುಷ್ಠರೋಗಿಗಳ ಬಗ್ಗೆ ಅನುಕಂಪ ಮೂಡಿಸಿದಿರಿ."

"ನನ್ನ ಕರ್ತವ್ಯ ಮಾತ್ರ ನಾನು ಮಾಡಿದ್ದೇನೆ."

"ಫಾದರ್, ನಿಮ್ಮ ಹಿರಿಮೆಗೆ ಗರಿ ಮೂಡಿದೆ. ಈ ರೋಗಿಗಳಿಗೆ ಸರಕಾರ ಮತ್ತು ಇತರ ಸಂಸ್ಥೆಗಳು ಸಹಾಯ ಒದಗಿಸುವಂತೆ ಕಣ್ಣು ತೆರೆಯಿಸಿದಿರಿ. ವಿಶ್ವದ ಬಾಯಲ್ಲಿ ನಿಮ್ಮ ಹೆಸರೇ ಉಸುರುತ್ತದೆ."

"ಅದಿರಲಿ ರೋಜಿ, ನೀ ಹೇಗೆ ಇಲ್ಲಿಗೆ ಬಂದೆ ಹೇಳು."

ತನ್ನ ಹೊಗಳಿಕೆ ಸಾಕೆನ್ನುವಂತೆ ಫಾದರ್ ಕೇಳಿದ. ರೋಜಿಗೆ ಅರ್ಥವಾಯಿತು. ಹೇಳಿದಳು.

"ದೀನದಲಿತರ ಸೋದರಿಯರು ಎಂಬ ಸನ್ಯಾಸಿನಿಯರ ಗುಂಪು ನಿಮ್ಮೊಡನೆ ಸೇವಾರಂಗಕ್ಕಿಳಿಯಲು ಹೊರಟಿತು. ನಾನೂ ಅವರ ಜೊತೆ ಹೊರಟೆ. ಫಾದರ್...... ಅಬ್ರಾಹಿಂ..... ಎಲ್ಲಿ?"

ರೋಜಿ ಅಬ್ರಾಹಿಂನಿಗಾಗಿ ಹಾತೊರೆದಳು. ನೋಡುವ, ಕೂಡುವ ಹಂಬಲ ನೂರ್ಮಡಿಸಿತು. ಫಾದರ್ ಹೇಳಿದ :

"ನಾನು ಹೊತ್ತಿಸಿದ ಜ್ಯೋತಿಯನ್ನು ಅವನು ಬೆಳಗಿಸುತ್ತಿದ್ದಾನೆ. ಹಗಲಿರುಳು ಅದು ನಂದದಂತೆ ನೋಡಿಕೊಳ್ಳುತ್ತಿದ್ದಾನೆ. ಬಾ, ಅಬ್ರಾಹಿಂ ಜ್ಯೋತಿಯನ್ನು ನಿನಗೆ ತೋರಿಸುತ್ತೇನೆ."

ಫಾದರ್ ಡ್ಯಾಮಿಯನ್ ರೋಜಿಯನ್ನು ಸೇವಾಶ್ರಮಕ್ಕೆ ಕರೆದುಕೊಂಡು ಹೋದ. ರೋಜಿಯನ್ನು ಬಾಗಿಲು ಮರೆಯಲ್ಲಿ ನಿಲ್ಲಿಸಿ ಅಬ್ರಾಹಿಂನನ್ನು ಕೂಗಿದ.

ಕೈ ಒರೆಸಿಕೊಳ್ಳುತ್ತ ಒಳಗಿನಿಂದ ಬಂದ ಅಬ್ರಾಹಿಂ

"ಫಾದರ್, ನಾನೇ ನಿಮ್ಮ ಬಳಿ ಬರಬೇಕೆಂದು ಮಾಡಿದ್ದ. ನಿಮ್ಮ ಸೋದರ ಫಾದರ್ ಪಾಂಪ್ಷೀಲಿಯಸಂ ಬಂದಿದ್ದಾರೆ. ಈ ಸೇವಾದ್ವೀಪಕ್ಕೆ..."

ಇನ್ನೂ ಅವನು ಏನೇನೋ ಹೇಳತೊಡಗಿದ್ದ, ಅಲ್ಲಿಗೆ ನಿಲ್ಲಿಸಿ ಡ್ಯಾಮಿಯನ್ ಹೇಳಿದ:

"ಹೌದೇ? ಅಂದ ಹಾಗೆ ಅಬ್ರಾಹಿಂ, ನಿನಗೊಂದು ಉಡುಗೊರೆ ತಂದಿರುವೆ."

ಆ ಮಾತುಗಳನ್ನು ಕೇಳಿ ಅಬ್ರಾಹಿಂನ ಮುಖ ಇಳಿದಂತಾಯಿತು. ರೋಜಿಯ ನೆನಪಿನ ಆಲ್ಬಮ್ಮಿನ ಪುಟಗಳು ಸರಸರ ಬಿಚ್ಚಿಕೊಂಡವು.

"ನನ್ನಂಥ ಹತಭಾಗ್ಯರಿಗೆ ಅದೇನು ಉಡುಗೊರೆ ಕೊಡುತ್ತೀರಿ. ಫಾದರ್....?"

ಫಾದರ್ ಡ್ಯಾಮಿಯನ್ ಮುನ್ನಡೆದು ಅವನ ತಲೆಯ ಮೇಲೆ ಕೈಯಾಡಿಸಿ ಹೇಳಿದ :

"ಕಣ್ಣು ಮುಚ್ಚಿಕೋ...."

ಅಬ್ರಾಹಿಂ ಕಣ್ಣು ಮುಚ್ಚಿಕೊಂಡ ಕೆಲಕ್ಷಣಗಳಲ್ಲಿಯೇ ಮೃದುಧ್ವನಿ ಕೇಳಿಸಿತು:

"ಹಾಂ ಈಗ ಕಣ್ಣು ತೆರೆ ..."

ಅಬ್ರಾಹಿಂನ ಮೈಮನಗಳಲ್ಲಿ ಒಮ್ಮೆಲೆ ನೂರಾರು ಬಣ್ಣ ಬಣ್ಣದ ಕಾರಂಜಿಗಳು ಚಿಮ್ಮಿದಂತಾಯಿತು.

"ರೋಜಿ, ರೋಜಿ...."

ಇಬ್ಬರ ಗಾಢಾಲಿಂಗನ ನಿಮಿಷಗಳನ್ನು ಉರುಳಿಸಿತ್ತು.

"ನೀನು ಇಲ್ಲಿಗೆ ಹೇಗೆ ಬಂದೆ ರೋಜಿ?"

"ದೀನ ದಲಿತರ ಸೋದರಿಯರ ಗುಂಪಿನೊಂದಿಗೆ ಬಂದೆ."

"ರೋಜಿ, ನಿನ್ನನು ನೆನೆಯದ ಒಂದು ನಿಮಿಷವೂ ಇಲ್ಲ."

"ಇಂಗಿಹೋಗಿದ್ದ ನನ್ನ ಕಣ್ಣುಗಳಲ್ಲಿ ಇಂದು ಬೆಳಕು ಬಂತು ಅಬ್ರಾಹಿಂ!"

"ಇಂದು ನನಗಾದ ಆನಂದ ಅಷ್ಟಿಷ್ಟಲ್ಲ. ನನ್ನ ಭುಜಗಳಲ್ಲಿ ನೂರ್ಮಡಿ ಶಕ್ತಿ ಬಂದಂತಾಯಿತು. ಫಾದರ್..... ಎಲ್ಲಿ?"

"ನಮ್ಮಿಬ್ಬರನ್ನೂ ಕೂಡಿಸಿ ಹೊರಟುಹೋದರು."

"ಆಂ! ಬಾ ರೋಜಿ. ಈ ಮೊಲ್ಕಾಯ್ ದ್ವೀಪವನ್ನು ತೋರಿಸುತ್ತೇನೆ. ಇದರ ಮುಖವನ್ನೇ ಬದಲಿಸಿದ್ದಾರೆ ಫಾದರ್ ಡ್ಯಾಮಿಯನ್..."

ಅಬ್ರಾಹಿಂ ರೋಜಿಯನ್ನು ಕರೆದುಕೊಂಡು ದ್ವೀಪದ ಸುತ್ತೆಲ್ಲ ಅಲೆದದ್ದೇ ಅಲೆದದ್ದು. ಅವನಿಗೆ ಫಾದರ್ ಡ್ಯಾಮಿಯನ್‌ನ್ನು ಎಷ್ಟು ಹೊಗಳಿದರೂ ತೃಪ್ತಿಯಿಲ್ಲ.

"ಇದೇನು ಅಬ್ರಾಹಿಂ! ಇಲ್ಲಿರೋದು!"

ರೋಜಿ ಕೈ ಮಾಡಿ ಕೇಳಿದಳು.

"ಇದು ಚಿಕಿತ್ಸಾಲಯ, ಆ ಕಡೆ ಇದೆಯಲ್ಲ, ಅದು ಅನಾಥಾಲಯ. ಅದು ಪಾಠಶಾಲೆ. ಫಾದರ್ ಸ್ವತಃ ಪಾಠ ಹೇಳಿಕೊಡುತ್ತಾರೆ."

"ಓ! ಎಂಥ ಮಹಾಜೀವಿ....!"

ದೂರದಲ್ಲಿಯ ಚರ್ಚ್ ಗಂಟೆ ಬಾರಿಸಿತು.

ಆಲಿಸಿ ಬಂದ ಧ್ವನಿಯತ್ತ ಮುಖಮಾಡಿ ಅಬ್ರಾಹಿಂ ಹೇಳಿದ :

"ಆ ಕಡೆಗೆ ಚರ್ಚ್ ಇದೆ, ಬಾ ರೋಜಿ. ಕ್ರಾಸ್ ಕೆಳಗೆ ನಿಂತು ಫಾದರ್ ಮಾತನಾಡುವಾಗ ಸಾಕ್ಷಾತ್ ಏಸುವೆ ಕಣ್ಮುಂದೆ ಬಂದಂತೆ ಭಾಸವಾಗುತ್ತದೆ."

ಚರ್ಚಿನ ಆ ನೀರವ ವಾತಾವರಣದಲ್ಲಿ ಅಬ್ರಾಹಿಂ-ರೋಜಿ ಮನದಣಿಯ ಮಾತನಾಡಿಕೊಂಡರು.

ಎಚ್ಚೆತ್ತಾಗ ಹೊತ್ತು ಸರಿದಿತ್ತು.

* * *

ಮಧ್ಯರಾತ್ರಿ ಸೇವಾಶ್ರಮದ ಮಂದ ಬೆಳಕಿನಲ್ಲಿ ಫಾದರ್ ಡ್ಯಾಮಿಯನ್ ಇನ್ನೂ ಅವಿಶ್ರಾಂತವಾಗಿ ದುಡಿಯುತ್ತಲೇ ಇದ್ದ. ಏಕೋ ಸ್ವಲ್ಪ ಅವನಿಗೆ ಆಯಾಸವೆನ್ನಿಸಿತು.

"ಓ! ತಂದೆ ಏಸುವೆ, ಏಕೋ ಮೈಯಲ್ಲಿಯ ಶಕ್ತಿ ಕ್ಷೀಣಿಸುತ್ತಿರುವಂತೆ ಭಾಸವಾಗುತ್ತಿದೆ. ಆಯಾಸ, ಬಳಲಿಕೆ ನನ್ನನ್ನು ಮುತ್ತುತ್ತಿವೆ. ನನ್ನ ಕರ್ತವ್ಯವನ್ನು ನಾನು ಪೂರೈಸಿದ್ದೇನೆ... ಅಂ! ನಾಳೆ ಒಂದು ಸೇವಾತಂಡ ಬರುತ್ತದೆ. ಅವುಗಳ ಆರೈಕೆಯ ವ್ಯವಸ್ಥೆಯಾಗಬೇಕಲ್ಲಾ..."

ಫಾದರ್ ಹಾಗೇ ಟೇಬಲ್ಲಿಗೆ ಹಣೆಯಿರಿಸಿ ಒರಗಿದ. ಫಾದರ್‌ನ ಕೋಣೆಯಲ್ಲಿ ಇನ್ನೂ ಉರಿಯುತ್ತಿದ್ದ ದೀಪ ಕಂಡು ರೋಜಿ, ಅಬ್ರಾಹಿಂ ಎದ್ದು ಬಂದರು.

"ಫಾದರ್...."

"ಬಾ, ರೋಜಿ.... ಬಾ, ಅಬ್ರಾಹಿಂ..... ಇನ್ನೂ ನೀವು ಮಲಗಿಕೊಳ್ಳಲಿಲ್ಲವೆ?"

"ಇದೇನು ಫಾದರ್, ಮಧ್ಯರಾತ್ರಿಯಾದರೂ ಇನ್ನೂ ಕೆಲಸದಲ್ಲಿ ತೊಡಗಿದ್ದೀರಿ.... ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲವೆ?" ಎಂದು ರೋಜಿ ಅವನ ಹಿಂದೆ ಹೋಗಿ, ನೀಳವಾಗಿ ಇಳಿಬಿದ್ದ ಕೂದಲುಗಳಲ್ಲಿ ಕೈಯಾಡಿಸುತ್ತ ಕೇಳಿದಳು. ಅಬ್ರಾಹಿಂ ಫಾದರ್‌ನ ಕೈಯಲ್ಲಿಯ ಪುಸ್ತಕವನ್ನು ಆಚೆ ಸರಿಸುತ್ತ, "ತುಂಬಾ ಬಳಲಿದ್ದೀರಾ, ಹೀಗಾದರೆ ನಿಮ್ಮ ಆರೋಗ್ಯದ ಗತಿ ಏನು? ಏಳಿ, ಮಲಗಿಕೊಳ್ಳಿ" ಎಂದ.

ಅಬ್ರಾಹಿಂ, ರೋಜಿ ಇಬ್ಬರೂ ಒತ್ತಾಯದಿಂದ ಡ್ಯಾಮಿಯನ್‌ನನ್ನು ಹಾಸಿಗೆಯ ಮೇಲೆ ಮಲಗಿಸಿದರು. ಚಾದರವನ್ನು ಹೊದಿಸಲು ಹೋದ ರೋಜಿ ಚಟ್ಟನೆ ಕಿರುಚಿಕೊಂಡಳು.

ಫಾದರ್ ಚಂಗನೆ ಹಾಸಿಗೆಯಿಂದ ಜಿಗಿದೆದ್ದು "ಏನಾಯಿತು ರೋಜಿ?" ಎಂದು ಕೇಳಿದ.

"ಯಾಕೆ ಚೀರಿಕೊಂಡೆ ರೋಜಿ?"

ಅಬ್ರಾಹಿಂ ಗಾಬರಿಯಿಂದ ಅವಳ ಮೈದಡವಿದ.

ರೋಜಿಯ ಬಿಳಿಯ ಮುಖ ಕಪ್ಪಿಟ್ಟಿತ್ತು. ಕಂಪಿಸುತ್ತ ಬಿಕ್ಕಳಿಸುತ್ತ ಹೇಳಿದಳು,

"ಫಾದರ್.... ನಿಮ್ಮ ಮೈಮೇಲೆ ಕುಷ್ಠರೋಗದ ಚಿಹ್ನೆಗಳು ಕಾಣಿಸತೊಡಗಿವೆ"

ಅಬ್ರಾಹಿಂ ಥಟ್ಟನೆ ಆ ಕಡೆಗೆ ನೋಡಿದ.

"ಹೌದು ಫಾದರ್, ಇದೋ.... ಇಲ್ಲಿ..."

ಫಾದರ್ ಹಾಗೇ ಹಾಸಿಗೆಗೆ ಉರುಳಿ ಏನೂ ಆಗದವರಂತೆ ಶಾಂತವಾಗಿ ಉತ್ತರಿಸಿದ.

"ಏನಾಯಿತು, ನನಗೂ ಈ ರೋಗ ಅಂಟಿಕೊಂಡರೆ?"

ರೋಜಿ, ಅಬ್ರಾಹಿಂ ಅವನ ಪಕ್ಕದಲ್ಲಿ ಕುಳಿತುಕೊಳ್ಳುತ್ತ

"ಫಾದರ್, ನೀವು ಇದರಿಂದ ಮುಕ್ತರಾಗಬೇಕು" ಎಂದು ಹೇಳಿದರು.

"ಒಂದಿಲ್ಲ ಒಂದು ದಿನ ಪ್ರತಿಯೊಬ್ಬನೂ ಮರಣವನ್ನಪ್ಪಲೇಬೇಕು... ಹೋಗಿ.... ನೀವು ಮಲಗಿಕೊಳ್ಳಿ. ನನ್ನ ಯೋಚನೆ ಮಾಡಬೇಡಿ."

ಫಾದರ್ ಒತ್ತಾಯದಿಂದ ಅವರಿಬ್ಬರನ್ನೂ ಅವರ ಕೋಣೆಗೆ ಕಳುಹಿಸಿಕೊಟ್ಟ. ರೋಜಿ ಬಿಕ್ಕಳಿಸುತ್ತಲೇ ಇದ್ದಳು.

* * *

ಕೆಲವೇ ದಿನಗಳಲ್ಲಿ ಕುಷ್ಠ ಮುಯ್ಯಿ ತೀರಿಸಿಕೊಳ್ಳುವಂತೆ, ಫಾದರ್ ಡ್ಯಾಮಿಯನ್‌ನ ದೇಹವನ್ನೆಲ್ಲ ಆಕ್ರಮಿಸಿಕೊಂಡಿತು. ಕೈಕಾಲುಗಳ ಬೆರಳುಗಳು ಪಟಪಟನೆ ಉದುರತೊಡಗಿದವು. ಕಣ್ಣುಗಳಲ್ಲಿಯೂ ವ್ರಣ ಕಾಣಿಸಿತು. ಎರಡೂ ಗುಡ್ಡೆಗಳು ಕೊಳೆತ ಕವಳಹಣ್ಣಿನಂತೆ ಕಿತ್ತು ಬಂದಿದ್ದವು.

ಮೊಲಕಾಯ್ ದ್ವೀಪ ಕಂಗೆಟ್ಟಿತ್ತು.

ಇಡೀ ದ್ವೀಪವೇ ಸೇವಾಶ್ರಮದ ಸುತ್ತ ಬೀಡು ಬಿಟ್ಟಂತಿತ್ತು. ಅಬ್ರಾಹಿಂ, ರೋಜಿ ಇಬ್ಬರೂ ಫಾದರ್ ಡ್ಯಾಮಿಯನ್ನನ ಮಂಚದಿಂದ ದೂರ ಸರಿದಿರಲಿಲ್ಲ.

ತಮ್ಮ ಆರಾಧ್ಯ ದೇವನ ದರುಶನಕ್ಕೆ ಜನ ಹಂಬಲಿಸಿತು. ರೋಜಿ ಫಾದರನ ಕಿವಿಯ ಹತ್ತಿರ ಹೋಗಿ,

"ಫಾದರ್, ಕಣ್ಣು ತೆರೆಯಿರಿ. ನಿಮ್ಮಿಂದ ಹೊಸ ಜೀವ ಪಡೆದ ಈ ದ್ವೀಪದ ಜನರೆಲ್ಲ ನಿಮ್ಮ ದರುಶನಕ್ಕೆ ಬರುತ್ತಿದ್ದಾರೆ" ಎಂದು ಮೆಲುವಾಗಿ ಉಸುರಿದಳು.

ತೆವಳುತ್ತ ಬಂದ ಡೇವಿಡ್ ಬಿಕ್ಕಳಿಸತೊಡಗಿದ "ಓ! ಫಾದರ್, ನೀವು ನಮ್ಮೆಲ್ಲ ಪಾಲಿನ ದೇವರು. ಈ ದ್ವೀಪ ಬಿಟ್ಟು ನೀವು ಹೊರಟುಹೋಗಿ. ಇದರಿಂದ ಮುಕ್ತರಾಗಿ. ನಮ್ಮಿಂದಲೇ ನಿಮಗೆ ಈ ರೋಗ ಅಂಟಿತು."

ಫಾದರ್ ಡ್ಯಾಮಿಯನ್ ಪ್ರಯಾಸದಿಂದ ಕಣ್ಣು ತೆರೆಯಲೆತ್ನಿಸಿದ. ಅಂತಃಕರಣ ಕಣ್ಣು ಬಿಟ್ಟಂತಾಯಿತು. ಅರೆತೆರದ ದೃಷ್ಟಿ. ಜನ "ಫಾದರ್, ಫಾದರ್, ನಮ್ಮ ಕಡೆಗೆ ನೋಡಿ" ಎಂದು ದೈನ್ಯತೆಯಿಂದ ಕೇಳಿಕೊಂಡಿತು.

ಡೇವಿಡ್ ಮತ್ತೆ ಹೇಳಿದ "ಫಾದರ್, ನೀವು ಹೊರಟುಹೋಗಿ" ಎಂದು. ಆಗ ಫಾದರ್ ಕ್ಷೀಣ ಸ್ವರದಲ್ಲಿ ಉಸುರಿದ, "ಇಲ್ಲ.... ಬಂಧುಗಳೇ.... ನಿಮ್ಮ ಪ್ರೀತಿಯಲ್ಲೆ ನಾನು ಬದುಕುತ್ತೇನೆ. ಈ ವೇದನೆ ಸಹಿಸಿಕೊಳ್ಳುವೆ. ಸಮಾಧಾನ ತಂದುಕೊಳ್ಳಿ.... ಇನ್ನು ವಿಶ್ವ ನಿಮ್ಮನ್ನು ಕರುಣೆಯಿಂದ ಕಾಣುತ್ತದೆ... ನಿಮ್ಮಲ್ಲಿ ಸದಾ ನಾನಿದ್ದೇನೆ..."

ಇನ್ನೂ ಫಾದರ್ ಏನೇನೋ ಹೇಳಲೆತ್ನಿಸಿದ, ಸಾಧ್ಯವಾಗಲಿಲ್ಲ. ಬಳಲಿಕೆ ಹೆಚ್ಚಾಯಿತು. ಹಾಗೇ ಮತ್ತೆ ಕಣ್ಣು ಮುಚ್ಚಿದ...

* * *

ಆ ರಾತ್ರಿ ಭಯಾನಕವಾಗಿತ್ತು. ಒಡಲೊಳಗಿಂದ ಬಿರುಗಾಳಿಯನ್ನು ತೂರುತ್ತ ಸಮುದ್ರ ಅಲ್ಲೋಲಕಲ್ಲೋಲಗೊಂಡಿತ್ತು. ಮೊಲಕಾಯ್ ದ್ವೀಪ ತಲ್ಲಣಿಸಿತು. ತಮ್ಮ ದೇವದೂತ ತಮ್ಮನ್ನು ಅನಾಥರನ್ನಾಗಿ ಮಾಡಿ ಹೋಗುತ್ತಿದ್ದಾನೆಂಬ ಅಳಲಿನಿಂದ ಆ ದೀನ ಜನತೆ ಚರ್ಚಿನತ್ತ ಧಾವಿಸಿ ಏಸುವಿನಲ್ಲಿ ತಮ್ಮ ಪ್ರಾರ್ಥನೆಯನ್ನು ಸಲ್ಲಿಸತೊಡಗಿತು.

ರೋಜಿ, ಅಬ್ರಾಹಿಂರ ಮುಖದಲ್ಲಿ ಒಂದು ಹನಿಯೂ ರಕ್ತವಿರಲಿಲ್ಲ. ರೋಜಿ ಉಮ್ಮಳಿಸುವ ದುಗುಡವನ್ನು ಹತ್ತಿಕ್ಕಿಕೊಳ್ಳುತ್ತ "ಅಬ್ರಾಹಿಂ, ಇದೆಂಥ ಭಯಾನಕ ರಾತ್ರಿ ಫಾದರ್ ಡ್ಯಾಮಿಯನ್ನರ ಮುಖದತ್ತ.... ನೋಡಲಿಕ್ಕಾಗುತ್ತಿಲ್ಲ" ಎಂದಾಗ ಅಬ್ರಾಹಿಂ "ಹೌದು ರೋಜಿ, ನನಗೆ ನೋಡಲಿಕ್ಕಾಗುತ್ತಿಲ್ಲ. ಈ ದೇವದೂತನಿಗೂ ಇಂಥ ಅವಸ್ಥೆ ಬರಬೇಕೇ?" ಎಂದ.

ನಿಶ್ಶಕ್ತನಾಗಿ ಸಾವಿನೊಂದಿಗೆ ಸೆಣಸಾಡುತ್ತಿದ್ದ ಫಾದರ್ ಡ್ಯಾಮಿಯನ್ ಏನೋ ಹೇಳಬೇಕೆನ್ನುವಂತೆ ತುಟಿ ಅಲುಗಾಡಿಸಿದ ಅಷ್ಟೇ!

ರೋಜಿ ಅವನ ಮುಖದ ಹತ್ತಿರ ಹೋಗಿ, ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು "ಫಾದರ್.... ಮಾತನಾಡಿ ಫಾದರ್..... ಅಬ್ರಾಹಿಂ, ಫಾದರ್ ಮಾತಾಡ್ತಾ ಇಲ್ಲ. ಕತ್ತು ಹೊರಳುತ್ತಿದೆ" ಎಂದು ಕೂಗಿಕೊಂಡಳು.

"ಫಾದರ್, ಫಾದರ್" ಅಬ್ರಾಹಿಂ ಅರಚಿಕೊಂಡ.

ರೋಜಿಯ ತೊಡೆಯಿಂದ ಫಾದರ್ ಡ್ಯಾಮಿಯನ್ನನ ಕತ್ತು ಕೆಳಗುರುಳಿತು.

'ಫಾದರ್' ರೋಜಿಯ ಎದೆ ಸೀಳಿ ಬಂತು, ಆಕ್ರಂದನ. ಅಬ್ರಾಹಿಂ ಚಿಕ್ಕ ಮಕ್ಕಳಂತೆ ಅತ್ತ.

'ಫಾದರ್ ಇನ್ನಿಲ್ಲ' ಆ ವ್ರಣದೇವನ ಪ್ರಾಣಪಕ್ಷಿ ಏಸುವಿನೊಳಗೆ ಸೇರಿಹೋಗಿತ್ತು. ಚರ್ಚಿನ ಗಂಟೆ ನಿನದಿಸುತ್ತಿದ್ದಂತೆ ಅಬ್ಬರದ ಸಮುದ್ರವೂ ಬಿಕ್ಕಳಿಸಿತು.

○

# ೨೦. ಪುರಸ್ಕಾರ

ಮನುಷ್ಯನ ಜೀವನದಲ್ಲಿ ಕೆಲವೊಂದು ಅಘಡಿನ ಘಟನೆಗಳು ಜರುಗಿ ಬದುಕಿಗೆ ಹೊಸ ತಿರುವನ್ನೇ ಕೊಡುತ್ತವೆ. ಅದು ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ವರ್ತಮಾನಕ್ಕಂತೂ ಅರಿವಾಗದು, ಭವಿಷ್ಯವೇ ಹೇಳಬೇಕು.

ಚಂದ್ರುವಿಗೆ ತಂದೆ ರಾಮರಾಯರು ತೀರಿಕೊಂಡ ಮೇಲೆ ಹೊಸನಗರ ಬಿಟ್ಟು ತನ್ನ ಹಿರೇಹಳ್ಳಿಗೆ ಬರಲೇಬೇಕಾದ ಪ್ರಸಂಗ ಬಂತು. ಅವನು ಹುಟ್ಟಿದ್ದು ಹಿರೇಹಳ್ಳಿಯಾದರೂ ಬೆಳೆದದ್ದು ಓದಿದ್ದು ಹೊಸನಗರದಲ್ಲಿಯೇ. ತಾಯಿ ತೀರಿಕೊಂಡ ಮೇಲೆ ರಾಮರಾಯರೇ ಆವನ ಪಾಲಿಗೆ ತಂದೆತಾಯಿಯಾಗಿ ಬೆಳೆಸಿದರು.

ರಾಮರಾಯರು ಹೊಸನಗರದಲ್ಲಿ ಇದ್ದುಕೊಂಡೇ ಹಿರೇಹಳ್ಳಿಯಲ್ಲಿದ್ದ ತಮ್ಮ ಹೊಲ, ಮನೆಯ ಉಸ್ತುವಾರಿ ವಹಿಸಿಕೊಂಡಿದ್ದರು. ಆದರೆ ಚಂದ್ರು ಪದವೀಧರನಾಗಿ ಹೊಸನಗರದಲ್ಲಿಯೆ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕನಾಗಿ ಸೇರಿಕೊಂಡ ಮೇಲೆ ತಮ್ಮ ವಾಸವನ್ನು ಹಿರೇಹಳ್ಳಿಗೆ ವರ್ಗಾಯಿಸಿದರು. ಅವನಿಗೆ ಮದುವೆ ಮಾಡಿಬಿಡಬೇಕೆಂದು ಹಂಬಲಿಸುತ್ತಿದ್ದಾಗಲೇ ಸ್ವರ್ಗಸ್ಥರಾದರು. ಅವನು ಹಿರೇಹಳ್ಳಿಯಲ್ಲಿಯೇ ಬಂದು ವಾಸಿಸಬೇಕೆಂಬುದು ಅವರ ಕೊನೆಯ ಆಸೆಯಾಗಿತ್ತು.

ಶಿಕ್ಷಕ ವೃತ್ತಿಗೆ ರಾಜೀನಾಮೆ ಇತ್ತು, ಚಂದ್ರು ಹಿರೇಹಳ್ಳಿಗೆ ಬಂದು ನೆಲೆಸಿದ.

ಹಿರೇಹಳ್ಳಿ ಮಲಪ್ರಭ ನದಿಯ ದಂಡೆಯ ಮೆಲೆ ಪವಡಿಸಿರುವ ಪುಟ್ಟ ಗ್ರಾಮ. ನಿಸರ್ಗದ ರಮಣೀಯ ಪರಿಸರ ಅದರ ಸಂಪತ್ತಾಗಿತ್ತು.

ಚಂದ್ರು ಊರಿಗೆ ಬಂದು ಒಂದೆರಡು ತಿಂಗಳು ಕಳೆದರೂ ಮನೆ ಬಿಟ್ಟು ಹೊರಗೆ ಹೋಗಲೇ ಇಲ್ಲ. ಕೋಣೆಯ ಕಿಡಕಿಯ ಬಳಿ ಇದ್ದ ಖುರ್ಚಿಯ ಮೇಲೆ ಕುಳಿತುಕೊಂಡು ತಂದೆಯವರು ಸಂಗ್ರಹಿಸಿದ್ದ ಪುಸ್ತಕಗಳನ್ನೇ ತಿರುವಿಹಾಕುತ್ತಿದ್ದ.

ಮನೆ ಆಳು ಶಂಕ್ರಪ್ಪನ ಮೇಲೆ, ರಾಮರಾಯರು ಸಾಯುವಾಗ, ಎಲ್ಲ ಜವಾಬ್ದಾರಿಯನ್ನು ವಹಿಸಿದ್ದರಿಂದ, ಅವನಿಗೆ ಚಂದ್ರುವಿನದೇ ಚಿಂತೆಯಾಯಿತು. ಅವನ ಆರೋಗ್ಯವೆಲ್ಲಿ ಕೆಡುವದೋ ಎಂಬ ಆತಂಕವೂ ಮೂಡಿತು. ಹೇಗಾದರೂ ಮಾಡಿ ಚಂದ್ರುವಿನ ಮನಸ್ಸನ್ನು ಪರಿವರ್ತಿಸಬೇಕೆಂದು ಯೋಚಿಸುತ್ತ ಅವನು ಓದುತ್ತ ಕುಳಿತ ಕೋಣೆಯೊಳಗೆ ಹೋಗಿ

"ಲಪ್ಪಾವ್ರs ಹಿಂಗ ಮನಿ ಹಿಡಿದು ಕುಂತ್ರ ಹ್ಯಾಂಗರಿ. ನಿಮ್ಮ ಆರೋಗ್ಯರ ಹ್ಯಾಂಗ ಛೊಲೆ ಉಳೀತೈತಿ" ಎಂದ. ಚಂದ್ರು ಪುಸ್ತಕವನ್ನು ಆಚೆ ಇರಿಸಿ ಶಂಕರಪ್ಪನತ್ತ ದೃಷ್ಟಿ ಬೀರಿ

"ಶಂಕ್ರಪ್ಪಾ, ಯಾಕೋ ನನಗ ಯಾವುದಕ್ಕೂ ಮನಸ್ಸು ಬರವಲ್ಲು. ಹೊಸನಗರದ ಮಾಸ್ತರಕಿ ಬಿಟ್ಟು ಬರಬಾರದಿತ್ತು. ಅಪ್ಪನ ಮಾತಿಗೆ ಕಟ್ಟುಬಿದ್ದೆ. ಈಗ ಮತ್ತ ಹೊಸನಗರಕ್ಕೆ ಹೋಗಿಬಿಡಲೇನೊ ಅನಸ್ತದ" ಎಂದ. ಶಂಕರಪ್ಪ ಇನ್ನಷ್ಟು ಅವನ ಹತ್ತಿರ ಹೋಗಿ ಅಕ್ಕರೆಯಿಂದ ಹಾಗೆಲ್ಲಾ ಅನಬ್ಯಾಡ್ರಿ ಅಪ್ಪಾ ಅವ್ರ. ದೊಡ್ಡ ಯಜಮಾನ್ರಿಗೆ ಇಲ್ಲೇ ಇತ್ತೀನಿ ಅಂತ ಮಾತು ಕೊಟ್ಟೀರಿ. ಸ್ವಲ್ಪ ದಿನಾ ಆದ ಮ್ಯಾಗ ಎಲ್ಲಾ ಸರಿ ಹೊಕ್ಕೈತಿ. ಈಗ ಊಟ ಮಾಡ ಏಳ್ರೀ, ಸಂಜೀ ಮುಂದ ಹೊಲದ ಕಡೆ ಹೋಗಿಬರೋಣ" ಎಂದು ಸಾಂತ್ವನ ಹೇಳಿ ಊಟಕ್ಕೆ ಕರೆದುಕೊಂಡು ಹೋದ. ಚಂದ್ರುವಿಗೆ ಶಂಕ್ರಪ್ಪನ ಮಾತು ಸರಿಯೆನ್ನಿಸಿತು.

ಚಂದ್ರು, ಶಂಕ್ರಪ್ಪ ಹೊಲಕ್ಕೆ ಬಂದಾಗ ಹೊತ್ತು ಇಳಿದಿತ್ತು. ಒಂದೆಡೆ ಮುಗಿಲಿಗೆ ತಲೆಯೊತ್ತಿ ನಿಂತ ಗುಡ್ಡದ ಸಾಲು, ಇನ್ನೊಂದೆಡೆ ಜುಳುಜುಳು ಮಂಜುಳ ನಿನಾದದಿಂದ ಹರಿವ ಮಲಪ್ರಭೆ ಮಧ್ಯ ಹಸಿರಿನಿಂದ ಕಂಗೊಳಿಸುವ ಹೊಲ. ಮನೆಗೆ ಮರಳುತ್ತಿರುವ ಪಕ್ಷಿಗಳ ಇಂಚರ, ಮುಳುಗುತ್ತಿರುವ ಸೂರ್ಯನ ಹೊಂಗಿರಣಗಳು ಚಂದ್ರುವಿನ ಮನಸ್ಸನ್ನು ಸೂರೆಗೊಂಡವು. "ನಮ್ಮ ಹೊಲದ ಸುತ್ತಮುತ್ತ ಎಷ್ಟು ಚಂದ ಅದ ಅಲ್ಲ ಶಂಕ್ರಪ್ಪ" ಎನ್ನುತ್ತ ಚಂದ್ರು ಮೈದುಂಬಿ ಬೆಳೆದು ನಿಂತ ಬೆಳೆಗಳನ್ನು ಅಪ್ಪಿಕೊಳ್ಳುತ್ತ ಸನಿಹದಲ್ಲಿ ಹರಿಯುವ ನದಿಯ ದಂಡೆಯ ಮೇಲೆ ಬಂದು ಕುಳಿತುಕೊಂಡ.

"ಅದಕ್ಕ ಹೇಳಿದೆ ಅಪ್ಪಾ ಅವ್ರ. ಇದ್ನೆಲ್ಲಾ ನೋಡಿದ ಮ್ಯಾಲೆ ನೀವು ಈ ಊರ ಬಿಟ್ಟು ಹೋಗಾಕಿಲ್ಲ ಅಂತ" ಅವನ ಹಿಂದೆಯೇ ಸಾಗಿ, ಹತ್ತಿರದಲ್ಲಿಯೇ ಕುಳಿತು ಶಂಕ್ರಪ್ಪ ನಕ್ಕು ನುಡಿದ.

ಚಂದ್ರುವಿನ ಮನಸ್ಸು ಸ್ವಲ್ಪ ಹಗುರವಾಯಿತು. ಅಲ್ಲಿಂದೆದ್ದು ಶಂಕ್ರಪ್ಪನನ್ನು ಕರೆದುಕೊಂಡು ಗುಡ್ಡಕ್ಕೆ ಹೊಂದಿದ ತನ್ನ ಹೊಲದ ಹತ್ತಿರ ಬಂದ.

ಹಸಿರಿನ ಉಸಿರಿಲ್ಲದೆ, ನೀರು ಕಾಣದೆ ತೃಪ್ತಿಯಿಂದ ಬಳಲಿದ ಹೊಲದ ಆ ಭಾಗ ಪಡಬಿದ್ದಿತ್ತು.

"ಶಂಕ್ರಪ್ಪ, ಇದೂ ನಮ್ಮದ ಹೌದಲ್ಲೊ?"

ಚಂದ್ರು ಗಕ್ಕನೆ ನಿಂತು ಕೇಳಿದ.

"ಹೌದು ಅಪ್ಪಾ ಅವ್ರ"

"ಮತ್ತ ಇದು ಯಾಕ ಹಿಂಗ ಪಡಾ ಬಿದ್ದದ?"

"ಇದು ದೇವ್ರ ಹೊಲಾ ಎಪ್ಪಾ, ತಲೆತಲಾಂತರದಿಂದ ಇದು ಹೀಂಗ ಬಿದ್ದೈತಿ. ಹಿಂದಕ ನಿಮ್ಮ ಕುಟುಂಬದವರು ಉಳಾಕ ಹೋಗಿ ರಕ್ತಕಾರಿ ಸತ್ತಾಂತ್ರರಿ. ಅಲ್ಲಿ ನೋಡ್ರಿ ಅದ ಜಾಗದಾಗ..."

ಬೇವಿನ ಮರದತ್ತ ಶಂಕ್ರಪ್ಪ ಕೈ ಮಾಡಿ ಹೇಳಿದ.

ಚಂದ್ರ ಜನರ ಮೂಢ ನಂಬಿಕೆಗೆ ನಕ್ಕು,

"ಅದೆಲ್ಲಾ ಏನೂ ಆಗೋದಿಲ್ಲ ಶಂಕ್ರಪ್ಪ. ಅದೆಲ್ಲಾ ಮೂಢನಂಬಿಕೆ. ನಾ ಇದ್ನ ಉಳಿಸಿ ಛೊಲೊ ಮಾಡ್ತೀನಿ ನೋಡು" ಎಂದಾಗ ಶಂಕ್ರಪ್ಪ ಗಾಬರಿಯಿಂದ ಬಾಯಿ ಮೇಲೆ ಕೈಯಿರಿಸಿಕೊಂಡು "ಹಾಗೆಲ್ಲಾ ಮಾಡಾಕ ಹೋಗಬ್ಯಾಡ್ರಿ ಎಪ್ಪಾ, ಅನಾಹುತ ಆದೀತು" ಎನ್ನುತ್ತ ಚಂದ್ರುವಿನ ಕೈ ಹಿಡಿದು ಅಲ್ಲಿಂದ ಕರೆದುಕೊಂಡು ಧಡಧಡ ನದಿಯ ದಂಡೆಯ ಬಳಿ ಬಂದುಬಿಟ್ಟ.

ಹತ್ತಿರದಲ್ಲಿದ್ದ ಬಂಡೆಯ ಮೇಲೆ ಕುಳಿತ ಚಂದ್ರು, ಬಹಳ ಹೊತ್ತು ತೆರೆಗಳನ್ನೇ ವೀಕ್ಷಿಸುತ್ತ ತನ್ನ ನಿರ್ಧಾರಕ್ಕೆ ಬದ್ಧನಾದ.

ಚಂದ್ರು ದೇವರ ಭೂಮಿಯನ್ನು ಉಳುವನೆಂಬ ಸುದ್ದಿ ಹಿರೇಹಳ್ಳಿಯಲ್ಲಿ ಕಾಳ್ಗಿಚ್ಚಿನಂತೆ ಹರಡಿತು. ಊರಿನ ಮುಖಂಡ ರುದ್ರಪ್ಪಗೌಡ ಕಿಡಿಕಾರುತ್ತ, ಮಾಸ್ತರ ನಂಜಪ್ಪನ ಮುಂದೆ ಕಿರುಚಾಡಿದ.

"ಅವನ ನೋಡ್ರೀ ಗೌಡ್ರ, ಎಷ್ಟು ಹೇಳಿದ್ರೂ ಅಂವಾ ಕೇಳವಲ್ಲ!" ಬೆಂಕಿಯಲ್ಲಿ ಎಣ್ಣೆ ಸುರಿಯುವಂತೆ ನುಡಿದ ನಂಜಪ್ಪ.

"ಶಹರದಾಗ ಇದ್ದು ಬಂದದ್ದಕ್ಕ ಅಂತಾ ಏನು ಮಹಾ ಶಾಣ್ಯಾ ಆಗ್ಯಾನೇನು? ಇದು ನನ್ನ ಹೊಲಕ್ಕ ಅಷ್ಟು ಸಂಬಂಧಿಸಿಲ್ಲ. ಇಡೀ ಊರಿಗೇ ಸಂಬಂಧಿಸೇದ. ಹಿಂದಕ್ಕ ಇದ್ನ ಉಳಾಕ ಹೋಗಿದ್ದಕ್ಕ ಊರಾಗ ಪ್ಲೇಗ ಬಂದು ಜನಾ ಸತ್ತರಂತ, ನಂಜಪ್ಪಾ ಆ ಚಂದ್ರ್ಯಾಗ ಹೇಳು ನಾ ತಾಕೀತು ಮಾಡೀನಿ ಅಂತ. ಊರನ ಮಂದಿಗೂ ಯಾರೂ ಅವ್ನ ಸಹಾಯಕ್ಕ ಹೋಗಬಾರದು ಅಂತ ಹೇಳು."

"ಗೌಡ್ರ, ಊರಿನ ಮಂದಿ ಆಗ್ಲೇ ಆಗಾಕಿಲ್ಲ, ಈ ಕೆಲಸಕ್ಕ ಕೈ ಹಾಕಬ್ಯಾಡಾ ಅಂತ ಹೇಳಬಿಟ್ಟಾರಾಸ" ಎಂದು ನಂಜಪ್ಪ ಗೌಡರನ್ನು ಸಮಾಧಾನಗೊಳಿಸಿ ಚಂದ್ರುವಿನ ಬಳಿ ಬಂದು ಬೀಗುತ್ತ ಗೌಡರ ಆಜ್ಞೆಯನ್ನು ಅರುಹಿದ.

ಚಂದ್ರು ನಂಜಪ್ಪನತ್ತ ನೋಡಿ ನಸುನಕ್ಕ "ನಂಜಪ್ಪ, ಇದು ನನ್ನ ಹೊಲಾ, ನಾನೇನಾದರೂ ಮಾಡ್ತೀನಿ. ಇದ್ರಾಗ ಗೌಡರಿಗೆ ತಲೀ ಹಾಕಬ್ಯಾಡಾ ಅಂತ ಹೇಳು. ಮತ್ತ ಊರಾನ ಜನ ಸಹಾಯಕ್ಕ ಬರದಿದ್ದರ ನಾನೊಬ್ಬನ ಉಳತೀನಿ ತಿಳೀತ" ಎಂದು ತನ್ನ ಅಚಲ ನಿರ್ಧಾರವನ್ನು ತಿಳಿಸಿದ. ನಂಜಪ್ಪ ಕಕ್ಕಾಬಿಕ್ಕಿಯಾಗಿ ಅಲ್ಲಿಂದ ಕಾಲ್ತೆಗೆದ.

ಎತ್ತರದ ನಿಲುವಿಗನ ಚಂದ್ರು ಮೈ ಕೈಯಿಂದ ತುಂಬಿಕೊಂಡು ಗಟ್ಟಿ ಮುಟ್ಟಾಗಿದ್ದ. ಸಾದುಗಪ್ಪು, ತೋಳುಗಳನ್ನು ಮಡಚಿದರೆ ಸ್ನಾಯುಗಳು ಮಿರಿಮಿರಿ ಮಿಂಚುತ್ತ ಕುಣಿಯುತ್ತಿದ್ದವು. "ಯಾರ ಸಹಾಯವೂ ಬೇಡಾ. ನಾನು ಏಕಾಂಗಿಯಾಗಿ ಉಳತೀನಿ ಏನಾಗುತ್ತದೆ ನೋಡ್ತೀನಿ" ಎನ್ನುತ್ತ ಚಂದ್ರು ನೇಗಿಲು ಹೊತ್ತುಕೊಂಡು ಹೊಲದತ್ತ ನಡೆದ. ಎತ್ತುಗಳು ಹೊಲದಲ್ಲೇ ಇದ್ದವು.

ರುದ್ರಪ್ಪಗೌಡ ತನ್ನ ಮನೆಯ ಎತ್ತರದ ಕಟ್ಟೆಯ ಮೆಲೆ ಕುಳಿತುಕೊಂಡು ಅವನನ್ನು ದುರುದುರು ನೋಡಿದ. ಊರಿನ ಜನ ಮಿಕಿಮಿಕಿ ಕಣ್ಣು ಬಿಡುತ್ತ 'ಏನಾಗುತ್ತದೊ' ಎನ್ನುವಂತೆ ನೋಡತೊಡಗಿದ್ದರು.

ಚಂದ್ರು ಯಾರನ್ನೂ ಲೆಕ್ಕಿಸದೆ ಹೊಲದ ಬೇವಿನ ಮರದ ಕೆಳಗೆ ಬಂದು ಕುಳಿತ. ಗಾಬರಿಯಿಂದ ಕಂಗೆಟ್ಟಿದ್ದ ಶಂಕ್ರಪ್ಪ ಚಂದ್ರುವಿನ ಬಳಿ ಓಡಿ ಬಂದು "ಅಪ್ಪಾ ಅವ್ರ, ಹಟ ಮಾಡಬ್ಯಾಡ್ರಿ. ಅದರ ತಂಟ್ಯಾಕ ಹೋಗಬ್ಯಾಡ್ರಿ. ನಂಗೂ ನಿಮ್ಮ ನೆರವಿಗೆ ಬರಾಕಾಗಿಲ್ಲ" ಎಂದು ಅಳುಕುತ್ತ ನುಡಿದಾಗ "ಶಂಕ್ರಪ್ಪ, ಹೊಲದ ಅತ್ಲಾಗಿನ ಭಾಗಾ ನೋಡಕೊ ಹೋಗು. ನಾನೊಬ್ಬನ ಇದರ ಕೆಲಸಾ ನೋಡಕೋತೀನಿ. ಎತ್ತುಗಳನ್ನು ನೇಗಲಕ್ಕ ತಂದು ಕಟ್ಟು" ಎಂದು ನಕ್ಕು ಅವನನ್ನು ಕಳುಹಿಸಿಕೊಟ್ಟ.

ಶಂಕ್ರಪ್ಪ ಎತ್ತುಗಳನ್ನು ನೇಗಲಕ್ಕೆ ಕಟ್ಟಿ ಹೊರಟುಹೋದ. ಚಂದ್ರು ರೈತರಿಗಿಂತ ಮಿಗಿಲಾದ ರೈತನಾಗಿ ನೇಗಿಲನ್ನು ಭೂಮಿಯೊಳಗೆ ತೂರಿಸಿ ಎತ್ತುಗಳ ಬಾಲ ತಿರುವಿ ಮುಂದಕ್ಕೆ ತಳ್ಳಿದ. ಸ್ವಲ್ಪ ದೂರ ಸಾಗಿದ್ದಾನೆ, ಎತ್ತುಗಳು ನೇಗಿಲನ್ನು ಎಳೆಯದಂತೆ ನಿಂತುಬಿಟ್ಟವು. ಅವನಿಗೆ ಏನಾಯಿತು ಗೊತ್ತಾಗಲಿಲ್ಲ. ಹೇ! ಹೇ! ಎಂದು ಹುರುಪು ತುಂಬುತ್ತಾ ಅವುಗಳು ಮುಂದಕ್ಕೆ ನುಗ್ಗುವಂತೆ ಪ್ರಯತ್ನಿಸಿದಾಗ ದೊಡ್ಡದೊಂದು ಬಂಡೆಗಲ್ಲು ಹೊರಬಂತು. ಆತುರದಿಂದ ಅದರ ಬಳಿ ಹೋಗಿ ಮೆತ್ತಿದ ಮಣ್ಣನ್ನು ಸರಿಸಿ ನೋಡಿದ. ಅದೊಂದು ಮಹಿಷಾಸುರನನ್ನು ನಾಶಮಾಡಲು ಹೊರಟ ರುದ್ರಾವೇಶದ ಮಹಿಷಾಸುರ ಮರ್ದಿನಿಯ ಸುಂದರ ಆಕರ್ಷಕ ಮೂರ್ತಿಯಾಗಿತ್ತು. ಇತಿಹಾಸದ ಹಿನ್ನೆಲೆಯಿದ್ದ ಚಂದ್ರುವಿಗೆ ಆದ ಆನಂದ ಅಷ್ಟಿಷ್ಟಲ್ಲ.

ಗುಡಿಸಲಲ್ಲಿದ್ದ ಗುದ್ದಲಿ, ಸಲಿಕೆ, ಹಾಗೆ ತರಲು ಶಂಕ್ರಪ್ಪನಿಗೆ ಕೂಗಿ ಹೇಳಿದ. ಶಂಕ್ರಪ್ಪ ಅವೆಲ್ಲವನ್ನೂ ಹೊತ್ತುಕೊಂಡು ಬಂದ. ಚಂದ್ರು ಮತ್ತೆ ಮುಂದೆ ಅಗೆಯುತ್ತ ಹೋದಂತೆ ಶಿಲಾಶಾಸನ ಹೊರಬಂತು. ಅದನ್ನು ಒಬ್ಬನೇ ಎತ್ತಿ ನಿಲ್ಲಿಸಲು ಹೋದಾಗ ಜಾರಿ ಅವನ ಕಾಲಮೇಲೆ ಬಿತ್ತು.ಚಂದ್ರು ಕುಸಿದು ಕುಳಿತ. ಶಂಕ್ರಪ್ಪ ಓಡಿಬಂದು "ಇದೇನು ಮಾಡಿಕೊಂಡ್ರಿ ಅಪ್ಪಾ ಅವ್ರ. ರಕ್ತಾ ಬರಾಕ ಹತ್ಯೆತಿ ನೋಡ್ರಿ" ಎನ್ನುತ್ತ ಅವನನ್ನು ಎತ್ತಿ ಆಚೆ ಕೂಡಿಸಿ ಹೊಲದ ಬದುವಿನಲ್ಲಿದ್ದ ಯಾವುದೊ ತೊಪ್ಪಲಿನ ರಸ ಹಿಂಡಿ ಹೆಗಲ ಮೇಲಿದ್ದ ಅರಿವೆಯನ್ನು ಹರಿದು ಕಟ್ಟಿದ.

"ನೋಡು ಶಂಕ್ರಪ್ಪ, ಇದು ಎಂಥಾ ಛಂದ ಮೂರ್ತಿ ಅದ. ಇದೊಂದು ಐತಿಹಾಸಿಕ ಸ್ಥಳ. ಇಲ್ಲೇ ಯಾವುದಾದರೂ ಸುಂದರ ಗುಡಿ ಇರಲೇಬೇಕು. ನಾನದನ್ನ ಅಗೆದು ಹೊರಗೆ ತೆಗೀತೀನಿ."

"ಅಪ್ಪಾ ಅವ್ರ, ನಿಮ್ಮ ಜೋಡಿ ನಾನು ಅದೀನಿ. ಬರ್ರಿ. ಏನಾದರೂ ಆಗಲಿ ನಾನು ನಿಮಗ ನೆರವ ಆಗ್ತೀನಿ" ಎಂದು ಶಂಕ್ರಪ್ಪ ನುಡಿದಾಗ ಚಂದ್ರುವಿಗಾದ ಆನಂದ ಅಷ್ಟಿಷ್ಟಲ್ಲ.

ಚಂದ್ರು, ಹಗಲಿರುಳು ಎನ್ನದೆ ಶಂಕ್ರಪ್ಪನ ನೆರವಿನೊಂದಿಗೆ ಉತ್ಖನನ ಕಾರ್ಯದಲ್ಲಿ ನಿರತನಾದ. ಆಳೆತ್ತರದ ವೀರಗಲ್ಲು,ನಂದಿವಾಹನ, ಶಿವ, ನರಸಿಂಹ, ಹರಿಹರ, ವರಾಹ ಮೊದಲಾದ ಮೂರ್ತಿಗಳು ದೊರೆತವು.

ಚಂದ್ರು ಕಾರ್ಯನಿರತನಾದಾಗಲೆಲ್ಲ ರುದ್ರಪ್ಪಗೌಡ, ನಂಜಪ್ಪ ಹಾಗೂ ಕೆಲ ಊರಿನ ಪ್ರಮುಖರು ಗುಡ್ಡದ ಮರೆಯಲ್ಲಿ ಅವಿತುಕೊಂಡು ಇವನ ಸಾವನ್ನು ನಿರೀಕ್ಷಿಸುತ್ತ ನಿಲ್ಲುತ್ತಿದ್ದರು. ಸಾವು ಬರದೇ ದೂರ ಸರಿದಾಗ ಹತಾಶಗೊಂಡವರು ರುದ್ರಪಗೌಡ ಮತ್ತು ನಂಜಪ್ಪ ಮಾತ್ರ.

ಚಂದ್ರುವಿಗೆ ಅಲ್ಲಿ ದೊರೆತ ಶಿಲ್ಪಗಳು ಯಾವ ಕಾಲದವು ಎಂಬುದನ್ನು ಅರಿತುಕೊಳ್ಳಲಿಕ್ಕಾಗಲಿಲ್ಲ. ಶಿಲಾಶಾಸನವನ್ನು ಓದುವದೂ ಕಷ್ಟವಾಯಿತು. ಒಮ್ಮೆಲೆ ಅವನಿಗೆ ಹೊಸನಗರದಲ್ಲಿದ್ದ ನಿವೃತ್ತ ಇತಿಹಾಸ ಪ್ರಾಧ್ಯಾಪಕರಾದ ಡಾ.ಜೋಶಿ ಅವರ ನೆನಪಾಯಿತು. ಮರುದಿನವೇ ಹೊಸನಗರಕ್ಕೆ ಧಾವಿಸಿದ, ಅವರ ಮನೆಗೆ ಹೋದ.

ವಯೋವೃದ್ಧರಾದ ಡಾ.ಜೋಶಿ ಮೂಲೆಯೊಂದರಲ್ಲಿದ್ದ ಕಾಟಿನ ಮೇಲೆ ಮಲಗಿದ್ದರು. ಅವರಿಗೆ ನಮಸ್ಕರಿಸಿ ತಾನು ಬಂದ ವಿಷಯವನ್ನು ವಿವರಿಸಿದ. ಡಾ. ಜೋಶಿ ಅವರು ನಡುಗುವ ಧ್ವನಿಯಲ್ಲಿ "ನೋಡು ಚಂದ್ರು, ಅಲ್ಲಿ ಚಾಲುಕ್ಯರ ದೇವಾಲಯವಿರಬೇಕು. ನನ್ನಲ್ಲಿ ಶಾಸನ ಅಧ್ಯಯನ ಮಾಡುವ ಬಗೆ, ಚಾಲುಕ್ಯರ ವಾಸ್ತು ಹಾಗೂ ಮೂರ್ತಿಶಿಲ್ಪದ ಬಗ್ಗೆ ಪುಸ್ತಕಗಳಿವೆ, ಕೊಡುತ್ತೇನೆ. ಓದಿ ನೀನೇ ಅಧ್ಯಯನ ಮಾಡು" ಎಂದು ಧೂಳು ಹಿಡಿದ ಕಪಾಟಿನಲ್ಲಿಯ ಪುಸ್ತಕಗಳನ್ನು ತೆಗೆದುಕೊಟ್ಟರು. ಚಂದ್ರು ಅವರಿಗೆ ವಂದಿಸಿ ಊರಿಗೆ ಮರಳಿದ.

ಚಂದ್ರು ಸುಮಾರು ಒಂದು ತಿಂಗಳು ಅವುಗಳ ಅಧ್ಯಯನದಲ್ಲಿ ನಿರತನಾದ. ಅದರಂತೆ ತನಗೆ ದೊರೆತ ಮೂರ್ತಿಗಳನ್ನು ಅವಲೋಕಿಸಿದ. ಶಿಲಾಶಾಸನ ಓದಲು ಪ್ರಯತ್ನಿಸಿದ. ಅದೊಂದು ದತ್ತಿ ಶಾಸನವಾಗಿತ್ತು. ಚಂದ್ರು ಮತ್ತೆ ಉತ್ಖನನ ಕಾರ್ಯ ಆರಂಭಿಸಿದಾಗ ನಾಲ್ಕು ಸುಂದರ ಶಿಲಾಸ್ತಂಬಗಳು ದೊರೆತವು. ಕಂಬಗಳ ಕಾಂಡ ಭಾಗದಲ್ಲಿ ಭಾಗವತ, ರಾಮಾಯಣ, ಮಹಾಭಾರತ, ಪುರಾಣಗಳು ಹಾಗೂ ಪಂಚತಂತ್ರಗಳಿಂದಾಯ್ದ ದೃಶ್ಯಗಳನ್ನು ಕೆತ್ತಿದ್ದು ಗೋಚರಿಸಿತು.

ಏಕಾಂಗಿಯಾಗಿ ಹೋರಾಡುತ್ತಿದ್ದ ಚಂದ್ರುವಿಗೆ ಅಲ್ಲಿ ಅಪಾರ ಪ್ರಾಚೀನ ನಿಧಿ ಸಿಕ್ಕುವ ಸಾಧ್ಯತೆ ಗೋಚರಿಸಿತು. ಈ ವಿಷಯವನ್ನು ಪುರಾತತ್ವ ಇಲಾಖೆಗೆ ತಿಳಿಸಿದರೆ ಅವರೇ ಇದರ ಉಸ್ತುವಾರಿ ವಹಿಸಬಹುದು ಅಥವಾ ತನ್ನ ನೆರವಿಗೆ ಬರಬಹುದೆಂದು ಭಾವಿಸಿ ಅರ್ಜಿ ಬರೆದುಕೊಂಡು ಮತ್ತೆ ಹೊಸನಗರಕ್ಕೆ ಧಾವಿಸಿದ.

ಚಂದ್ರು ಪುರಾತತ್ವ ಇಲಾಖೆಯ ಕಟ್ಟಡದಲ್ಲಿ ಪ್ರವೇಶಿಸುತ್ತಿದ್ದಂತೆ ಅಕ್ಕಪಕ್ಕದಲ್ಲಿರಿಸಿದ ಆಳೆತ್ತರದ ದ್ವಾರಪಾಲಕ ಶಿಲಾಮೂರ್ತಿಗಳು ಗೋಚರಿಸಿದವು. ಒಳಗಡೆ ಹಲವಾರು ಭಗ್ನ ಮೂರ್ತಿಗಳನ್ನು, ಶಿಲಾಶಾಸನಗಳನ್ನು ಸಾಲಾಗಿ ಜೋಡಿಸಲಾಗಿತ್ತು. ಹಿರಿಯ ಅಧಿಕಾರಿಯ ಕೋಣೆಗೆ ಬೀಗ ಹಾಕಿತ್ತು. ಹಾಲಿನಲ್ಲಿದ್ದ ನಾಲ್ಕೈದು ಜನ ಫೈಲುಗಳನ್ನು ನೋಡತೊಡಗಿದ್ದರು. ಅಲ್ಲಿದ್ದ ಒಬ್ಬ ವ್ಯಕ್ತಿಯನ್ನು ವಿಚಾರಿಸಿ ತಾನು ಬಂದ ವಿಷಯ ತಿಳಿಸಿದ. "ಅದೆಲ್ಲಾ ಚಾಲುಕ್ಯರು ಆಳಿದ ಪ್ರದೇಶ. ಇಂಥಾವೆಲ್ಲಾ ಪ್ರತಿಯೊಂದು ಹಳ್ಳಿಯೊಳಗೆ ಬೇಕಾದಷ್ಟು ಸಿಗತಾವ ಹೋಗ್ರಿ. ಅರ್ಜಿ ಕೊಡ್ರಿಲ್ಲೆ. ಸಾಹೇಬ್ರು ಬಂದಮ್ಯಾಲೆ ಕೊಡ್ತೀನಿ, ನೋಡೋಣಂತ" ಎಂದು ಆ ವ್ಯಕ್ತಿ ಚಂದ್ರುವನ್ನು ಸಾಗು ಹಾಕಿ ಮತ್ತೆ ತನ್ನ ಫೈಲಿನಲ್ಲಿ ಮುಳುಗಿದ.

ಚಂದ್ರುವಿಗೆ ಸ್ವಲ್ಪ ಸಮಯ ನಿರಾಶೆ ಆವರಿಸಿದರೂ ಅವರಿಂದ ಮೈ ಕೊಡವಿ ಹೊರಬಂದು ಉತ್ಖನನದಲ್ಲಿ ನಿರತನಾದ. ಮತ್ತೆ ಸುಂದರ ಕೆತ್ತನೆಯ ಶಿಲಾಸ್ತಂಭಗಳು ದೊರೆತವು. ಅವುಗಳಲ್ಲಿ

ನ್ನ ಸ್ತ್ರೀ ಶಿಲ್ಪಗಳು, ಪಕ್ಷಿಗಳು, ಹೂ ಬಳ್ಳಿಗಳು ಆಕರ್ಷಕವಾಗಿ ಕೆತ್ತಲ್ಪಟ್ಟಿದ್ದವು. ಅವುಗಳು ದೇವಾಲಯದ ಸಭಾಮಂಟಪದ ಕಂಬಗಳಿರಬೇಕೆಂದು ಅವನಿಗೆನ್ನಿಸಿತು. ಹಾಗಿದ್ದರೆ ಸಭಾಮಂಟಪದಾಚೆ ದೇವಾಲಯವಿರಬಹುದೆಂದು ಭಾವಿಸಿ ಬೇವಿನ ಮರದ ಬಳಿ ಅಗೆಯಲೆತ್ನಿಸಿದ. ಅಗೆಯುತ್ತಿದ್ದಂತೆ ಗೋಪುರ ಗೋಚರಿಸಿತು. ಅತ್ಯಂತ ಜಾಗರೂಕತೆಯಿಂದ ಅದನ್ನು ಹೊರತರಲು ಯತ್ನಿಸಿದ. ಒಂದು ವಾರ ಶಂಕ್ರಪ್ಪನ ನೆರವಿನೊಂದಿಗೆ ಹೋರಾಡಿದ ನಂತರ ಗರ್ಭಗುಡಿ ಹೊರಬಂತು. ದೇವಾಲಯದ ಶಿಖರ ದ್ರಾವಿಡ ಶೈಲಿಯದ್ದಾಗಿತ್ತು. ಚಂದ್ರು ಸಂತಸದಿಂದ ಕುಣಿದು ಕುಪ್ಪಳಿಸಿದ. ಅದರ ಒಳಹೊಕ್ಕು ನೋಡಿದ. ಸುಂದರ ಈಶ್ವರಲಿಂಗ ಕಂಗೊಳಿಸಿತು. ಅದನ್ನು ಶುಚಿಗೊಳಿಸಿದ.

ಗರ್ಭಗೃಹ, ಸುಖನಾಸಿ ಅಲ್ಪಸ್ವಲ್ಪ ಭಗ್ನವಾಗಿದ್ದರೂ ಆಕರ್ಷಕವಾಗಿದ್ದವು. ಆದರೆ ಮುಖಮಂಟಪ, ಸಭಾಮಂಟಪಗಳು ಬಿದ್ದುಹೋಗಿದ್ದವು. ತನ್ನ ಅಧ್ಯಯನಕ್ಕೆ ತಕ್ಕಂತೆ ದೇವಾಲಯಕ್ಕೆ ರೂಪಕೊಡಲು ಚಂದ್ರು ನಿರತನಾದ. ಸಬಾ ಮಂಟಪದ ಮೇಲ್ಛಾವಣಿ ಬಿದ್ದು ಹೋಗಿದ್ದರಿಂದ ಗರ್ಭಗೃಹ, ಸುಖನಾಸಿ ಮುಂದೆ ದೊರೆತು ಹದಿನೆಂಟು ಕಂಬಗಳನ್ನು ನಾಲ್ಕು ಸಾಲುಗಳಲ್ಲಿ ನಿಲ್ಲಿಸಲು ಹೆಣಗತೊಡಗಿದ. ಇದನ್ನು ವೀಕ್ಷಿಸುತ್ತಿದ್ದ ದನಕಾಯುವ ಯುವಕರು "ಎಪ್ಪಾ, ನೀವಿಬ್ಬರ ಇಷ್ಟೆಲ್ಲಾ ಮಾಡೀರಿ. ನಾವು ನೋಡಾಕ ಹತ್ತೀವಿ. ಬರ್ರೀ ನಾವು ನೆರವಾಗ್ತೀವಿ" ಎನ್ನುತ್ತ ಹಿಂಡುಹಿಂಡಾಗಿ ಮುಂದೆ ಬಂದರು. ಸಭಾಮಂಟಪದ ದೊಡ್ಡ ದೊಡ್ಡಕಂಬಗಳನ್ನು ಎತ್ತಿ ನಿಲ್ಲಿಸಿದರು. ಅಲ್ಲಿ ರಾಶಿ ರಾಶಿ ದೊರೆತ ಕಲ್ಲು, ಮಣ್ಣು, ಇಟ್ಟಿಗೆಗಳಿಂದ ಚಂದ್ರು ಆ ದೇವಾಲಯಕ್ಕೆ ಪ್ರಾಕಾರವನ್ನು ನಿರ್ಮಿಸಿದ. ಬಿಡಿ ಬಿಡಿಯಾಗಿ ದೊರೆತ ಆಳೆತ್ತರದ ಸುಂದರ ಶಿಲಾಬಾಲಕಿಯರು, ದ್ವಾರಪಾಲಕರು, ನಟರಾಜ, ತ್ರಿವಿಕ್ರಮ, ಭಾವಣೆಯ ರಸಿಕ ದಂಪತಿಗಳ ಶಿಲ್ಪಗಳನ್ನು ಸಭಾಮಂಟಪದ ಕಂಬಗಳ ಬಳಿ, ಪ್ರಾಕಾರದ ಸುತ್ತು ನಿಲ್ಲಿಸಿದ. ಕೆಲ ಸಮಯದಲ್ಲಿ ಪ್ರಾಚೀನ ದೇವಾಲಯದ ಮರುಸೃಷ್ಟಿಯಾಯಿತು. ಹಿರೇಹಳ್ಳಿಯ ಜನ ತಂಡೋಪತಂಡವಾಗಿ ಈಶ್ವರನ ದರುಶನಕ್ಕೆ ಬರತೊಡಗಿದರು. ಎಲ್ಲರ ಬಾಯಲ್ಲೂ ಚಂದ್ರುವಿನ ಧೈರ್ಯ, ಸಾಹಸದ ಪ್ರಶಂಸೆ.

ರುದ್ರಪ್ಪಗೌಡನ ಮನಸ್ಸು ಇನ್ನಷ್ಟು ಕಸಿವಿಸಿಗೊಂಡಿತು. ನಂಜಪ್ಪನನ್ನು ಹತ್ತಿರ ಕರೆದು "ಇದ್ನ ಹ್ಯಾಂಗರ ಮಾಡಿ ಹಾಳ ಮಾಡಬೇಕು ತಿಳೀತ" ಎಂದು ಪಿಸುಗುಟ್ಟಿದರು. ಅದು ಹ್ಯಾಂಗ ಗೌಡ್ರ?" ನಂಜಪ್ಪ ಚಕಿತನಾಗಿ ಕೇಳಿದ. "ಇಲ್ಲೆ ಈಶ್ವರನ ಕೃಪಾ ಆಗೇದ. ಈ ಗುಡಿ ಊರಿಗೆ ಸೇರಿದ್ದು. ಈಶ್ವರಲಿಂಗಕ್ಕ ಮಜ್ಜನ ಮಾಡಿಸಿ ಜಾತ್ರೆ ಮಾಡಬೇಕು ಅಂತ ಊರು ಜನರ್ನ ತಯಾರು ಮಾಡು. ಮುಂದಾ ನಾ ನೋಡಕೋತೀನಿ. ಅದರ ಮಜಾ" ಎನ್ನುತ್ತ ರುದ್ರಪ್ಪಗೌಡ ಮೀಸೆ ಮೇಲೆ ಕೈ ಹಾಕಿ ತಿರುವುತ್ತ ನಂಜಪ್ಪನನ್ನು ಹುರಿದುಂಬಿಸಿದ.

ಅಂದು ಬೆಳಗ್ಗೆ ರುದ್ರಪ್ಪಗೌಡ ತನ್ನ ಎಂಟು ಹತ್ತು ಹಿಂಬಾಲಕರನ್ನು ಕರೆದುಕೊಂಡು ದೇವಾಲಯದ ಬಳಿ ಬಂದ. ಕೆಲಸದಲ್ಲಿ ನಿರತನಾಗಿದ್ದ ಚಂದ್ರು ಅವನತ್ತ ನೋಡಿ "ಇದೇನು

ರುದ್ರಪ್ಪ ಗೌಡರ, ಇತ್ಲಾಗ ಬಂದ್ರಿ?" ಎಂದು ಕೊಂಕುನುಡಿಯಲ್ಲಿ ಪ್ರಶ್ನಿಸಿದ. ಸಿಟ್ಟು ಸೆಡವಿನ ಮಡುವಾಗಿದ್ದ ಗೌಡ ತನ್ನ ಪರವಾಗಿ ಮಾತಾಡಲು ನಂಜಪ್ಪನಿಗೆ ಸನ್ನೆ ಮಾಡಿದ. ನಂಜಪ್ಪನ ಮಾತು ಕೇಳಿ ಚಂದ್ರು ಕೋಪತಪ್ತನಾದ. "ಇದು ನನ್ನ ಹೊಲಾ. ನಾನು ಬೆವರು ಸುರಿಸಿ ಈ ದೇವಾಲಯವನ್ನು ಭೂಮಿಯೊಳಗಿಂದ ಹೊರಗ ತೆಗದೀನಿ. ಯಾರಾದರೂ ಇದಕ್ಕೆ ಕೈ ಹಚ್ಚಿರಿ ನೋಡತೇನಿ, ಈಶ್ವರ ಲಿಂಗಕ್ಕೆ ಎಣ್ಣೆ ಎರದು ಜಾತ್ರಿ ಮಾಡಿ ಹಾಳು ಮಾಡಬೇಕು ಅನ್ನೋ ಕೆಟ್ಟಬುದ್ಧಿ ನಿಮ್ಮದು. ಇದು ಚಾರಿತ್ರ್ಯದ ಸ್ಥಳ. ತಿಳೀತ" ಎಂದು ಗುಡುಗಿದ. "ನೋಡೋಕೋತೀನಿ ಇದ್ನ ನೀ ಹ್ಯಾಂಗ ಇಟಗೋತೀ ಅಂತ" ಎಂದು ಅವಮಾನಿತನಾದ ರುದ್ರಪ್ಪ ಗೌಡ ಕಟಕಟ ಹಲ್ಲು ಕಡೆಯುತ್ತಾ ತನ್ನ ಗುಂಪಿನೊಂದಿಗೆ ಹೊರಟುಹೋದ.

ಚಂದ್ರು ದೇವಾಯದ ಪ್ರಾಕಾರದ ಸುತ್ತ ತೆಂಗು, ಮಾವು, ಬಾಳೆ ಹಾಗೂ ವಿವಿಧ ಜಾತಿಗಳ ಪುಷ್ಪಗಳನ್ನು ಬೆಳೆಸಿ ಅದನ್ನು ಅತ್ಯಂತ ಪ್ರೇಕ್ಷಣೀಯವಾಗಿ ರೂಪಿಸಿದ. ಹಿರೇಹಳ್ಳಿಯ ಅಕ್ಕಪಕ್ಕದ ಊರಿನ ಜನ ಚಕ್ಕಡಿಗಳಲ್ಲಿ ತುಂಬಿ ತುಂಬಿ ಬರತೊಡಗಿದರು. ಗುಡ್ಡ ಹಾಗೂ ಚಂದ್ರುವಿನ ಹೊಲದ ಮಧ್ಯ ಹಾದು ಹೋದ ರಹದಾರಿಯ ಮೇಲೆ ಓಡಾಡುವ ಬಸ್ಸುಗಳನ್ನು ನಿಲ್ಲಿಸಿ ಪ್ರಯಾಣಿಕರು ಸಾಲುಸಾಲಿನಲ್ಲಿ ನಿಂತು, ಈಶ್ವರಲಿಂಗದ ದರುಶನ ಪಡೆದು ದೇವಾಲಯದ ಸೌಂದರ್ಯವನ್ನು ಸವಿದು ಹೋಗತೊಡಗಿದರು.

ಆಗ ತಾನೆ ಸೂರ್ಯೋದಯವಾಗಿತ್ತು. ಎಳೆಯ ರಶ್ಮಿಗಳು ದೇವಾಲಯದ ಗೋಪುರವನ್ನು ಮುತ್ತಿ ಜಾಲಂದರದೊಳಗಿಂದ ತೂರಿ ಗರ್ಭಗುಡಿಯಲ್ಲಿಯ ಈಶ್ವರಲಿಂಗಕ್ಕೆ ನಮಿಸತೊಡಗಿದ್ದವು.

ಚಂದ್ರು ಅದಕ್ಕೆ ಮಲಪ್ರಭೆಯ ನೀರನ್ನೆರೆದು ಶುಭ್ರಗೊಳಿಸಿ ಹೊರಬಂದಾಗ, ಐದಾರು ಜನ ಪತ್ರಕರ್ತರು ಅವನನ್ನರಸಿ ಒಳಗೆ ಬಂದರು. "ಚಂದ್ರು ನೀವವರ..." ಅವರಲ್ಲಿಯ ಒಬ್ಬ ಮುಂದೆ ಬಂದು ಕೇಳಿದ. "ಹೌದು ಬರ್ರಿ, ಏನಾಗಬೇಕಿತ್ತು ನನ್ನಿಂದ" ಎಂದು ಕೇಳಿದ. "ನೀವು ಏಕಾಂಗಿಯಾಗಿ ಇಷ್ಟೊಂದು ಕೆಲಸ ಮಾಡೀರಂತ ನಮಗ ಸುದ್ದಿ ಬಂತು. ಭಾಳ ಸಂತೋಷ. ನಾವು ಒಳಗ ನೋಡಬಹುದಾ?" ಎಂದ ಇನ್ನೊಬ್ಬ. ಚಂದ್ರು ಸಹಕರಿಸಿದ. ಅವರಿಗೆಲ್ಲ ಕೈಕಲುಕಿ ಆದರದ ಸ್ವಾಗತ ನೀಡಿದ.

ಸುಮಾರು ಒಂದು ಗಂಟೆ ಆ ಪತ್ರಿಕೆ ಪ್ರತಿನಿಧಿಗಳು ದೇವಾಲಯವನ್ನು ಸುತ್ತು ಹಾಕಿ, ಚಂದ್ರುವಿನ ಸಂದರ್ಶನ ತೆಗೆದುಕೊಂಡು ಹೊರಟುಹೋದರು.

ಮರುದಿನ ಮಧ್ಯಾಹ್ನ ಚಂದ್ರು ಊಟ ಮುಗಿಸಿ ತನ್ನ ಕೋಣೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳ ತೊಡಗಿದ್ದ. ಶಂಕ್ರಪ್ಪ ಒಳಗೆ ಬಂದು "ಅಪ್ಪಾ ಅವ್ರ, ನಿಮ್ಮನ ನೋಡಲಿಕ್ಕೆ ಯಾರೋ ಬಂದಾರ" ಎಂದ.

ಚಂದ್ರು ಹೊರಬಂದು ನಮಸ್ಕರಿಸಿ ಆ ವ್ಯಕ್ತಿಗೆ ಕುಳಿತುಕೊಳ್ಳಲು ಹೇಳಿದ.

"ನಾನ್ ಡಾಕ್ಟರ್ ವೀರಭದ್ರಪ್ಪ ಅಂತ ಇಲ್ಲಿ ಸರಕಾರಿ ಆಸ್ಪತ್ರೆಗೆ ಹೊಸದಾಗಿ ನೇಮಕ ಆಗೀನಿ."

"ಬಾಳಾ ಸಂತೋಷ, ಯಾವಾಗ ಬಂದ್ರಿ?"

"ಈಗ ಬಂದೆ. ಚಂದ್ರಶೇಖರ ಅವರ" ನಿಮಗ ಅಭಿನಂದನೆ. ಇಲ್ಲೆ ನೋಡ್ರಿ ಕರ್ನಾಟಕದ ಎಲ್ಲಾ ಪತ್ರಿಕೆಗಳು ನಿಮ್ಮ ಸಾಹಸದ ಬಗ್ಗೆ ನಿಮ್ಮ ಬಗ್ಗೆ ಬರದಾವ" ಎನ್ನುತ್ತ ಡಾ. ವೀರಭದ್ರಪ್ಪ ಆ ಪತ್ರಿಕೆಗಳನ್ನು ಚಂದ್ರುವಿನ ಕೈಯಲ್ಲಿ ಕೊಟ್ಟ.

ಚಂದ್ರು ಅತ್ಯಂತ ಸಂತಸದಿಂದ ತನ್ನ ದೇವಾಲಯ ಹಾಗೂ ತನ್ನ ಫೋಟೋ ಸಮೇತ ಪ್ರಕಟವಾದ ವರದಿ ಓದಿದ. ಚಂದ್ರು ತನ್ನ ಸಂದರ್ಶನದಲ್ಲಿ ಶಂಕ್ರಪ್ಪ ಹಾಗೂ ದನಕಾಯುವ ಯುವಕರ ನೆರವನ್ನು ಸ್ಮರಿಸಿದ್ದೂ ಪ್ರಕಟವಾಗಿತ್ತು.

"ಚಂದ್ರಗೌಡರ, ನನಗ ಅನಸ್ತದ ನಿಮ್ಮ ಈ ಕಾರ್ಯಕ್ಕ ಪುರಸ್ಕಾರ ಸಿಕ್ಕ ಸಿಗತದ"

"ಅದೆಲ್ಲಾ ನಿಮ್ಮ ಶುಭಹಾರೈಕೆ" ಎಂದು ಚಂದ್ರು ಬೀಗುತ್ತ ನುಡಿದ.

ಶಂಕ್ರಪ್ಪ ತಂದುಕೊಟ್ಟ ಲೋಟ ಹಾಲನ್ನು ಕುಡಿದು ಡಾಕ್ಟರ ವೀರಭದ್ರಪ್ಪ ಮತ್ತೊಮ್ಮೆ ಚಂದ್ರುವಿಗೆ ಅಭಿನಂದನೆ ಹೇಳಿ ಹೊರಟುಹೋದರು.

ಚಂದ್ರುವಿಗೆ ತನ್ನ ಪರಿಶ್ರಮ ಸಾರ್ಥಕವಾಯಿತು ಎನ್ನಿಸಿತು.

'ಯಾರ ಗೊಡವೆಯೂ ಬೇಡ. ನಾನು ಇದ್ನ ರಕ್ಷಿಸ್ತೀನಿ' ಎಂದು ಹೆಮ್ಮೆಯಿಂದ ದೃಢ ನಿರ್ಧಾರ ಕೈಕೊಂಡ.

ನಿತ್ಯವೂ ಚಂದ್ರು ದೇವಾಲಯದ ಪರಿಸರದಲ್ಲೆ ಬಹಳ ಹೊತ್ತು ಕಳೆಯುತ್ತಿದ್ದ. ಅಲ್ಲಿಯ ಸುಂದರ ಮೂರ್ತಿಗಳ ಒಡನಾಟದಲ್ಲಿ ತನ್ಮಯನಾಗಿ ಹೋಗುತ್ತಿದ್ದ.

ಅಂದು ಪೂರ್ಣಿಮೆಯ ರಾತ್ರಿ. ಹನ್ನೆರಡು ಗಂಟೆಯಾಗಿರಬಹುದು. ನಿದ್ದೆ ಬಾರದೆ ದಿಗ್ಗನೆ ಎದ್ದು ಹೊರಹೊರಟ. ಅವನಿಗೆ ಅರಿವಿಲ್ಲದಂತೆ. ಕಾಲುಗಳು ದೇವಾಲಯದ ಬಳಿ ತಂದು ನಿಲ್ಲಿಸಿದವು. ಹುಣ್ಣಿಮೆಯ ಆ ತುಂಬು ಬೆಳದಿಂಗಳಲ್ಲಿ ಆಗಸದಿಂದ ದೇವತೆಗಳು ದೇವಾಲಯದ ಮೇಲೆ ಕ್ಷೀರಾಭಿಷೇಕ ಗೈಯ್ಯುತ್ತಿರುವಂತೆ ಗೋಚರಿಸಿತು. ಎಲ್ಲೆಡೆ ನಿಶ್ಶಬ್ದ ವಾತಾವರಣ. ಪ್ರಾಕಾರದ ಒಳ ನಡೆದ. ಇಡೀ ದೇವಾಲಯವೇ ಸುತ್ತಿದಂತಾಯಿತು. ಗೊಮ್ಮಟದಲ್ಲಿಯ ಗಂಟೆಗಳು ನಿನದಿಸಿದವು. ಅವನ ಮೈಯಲ್ಲಿ ಪ್ರಜ್ಞೆಯೇ ಇರಲಿಲ್ಲ. ಚಾಲುಕ್ಯ ದೊರೆಗಳ ಆಳಿದ ಶತಮಾನದಲ್ಲಿ ಪ್ರವೇಶಿಸಿದಂತಾಯಿತು. ಚಾಲುಕ್ಯರ ವೈಭವ ಶಿಲ್ಪಸಿರಿ ಕಣ್ಣು ಮುಂದೆ ಕಟ್ಟಿದಂತಾಯಿತು. ಅರೆ ಕ್ಷಣದಲ್ಲಿ ಆ ಸ್ವಪ್ನಲೋಕದಲ್ಲಿ ಮುಳುಗಿ ಹೋದ. ಬೆಳದಿಂಗಳು ಸುರಿಯತೊಡಗಿತು. ಸಭಾಮಂಟಪದ ಸ್ತಂಬದ ಬಳಿ ಇರಿಸಿದ ಆಳೆತ್ತರದ ಶಿಲಾಬಾಲಿಕೆ ಜೀವಂತವಾಗಿ ಕೈ ಮಾಡಿ ಕರೆದಂತಾಯಿತು. ಅತ್ತ ಧಾವಿಸಿದ. ಅದೆಂಥ ಮಂದಸ್ಮಿತ. ಅಧರಗಳ ಅಮೃತವನ್ನೀಯುವ ಆವೇಶ. ಆ ಮೂರ್ತಿ ಅಲುಗಿಂದಂತಾಯಿತು. ಅದರ ತುಂಬಿದ ಎದೆಯಲ್ಲಿ ಏರಿಳಿತ ಉಂಟಾಯಿತು. ಚಕಿತನಾಗಿ ಅದರ ಎದೆಗೆ ಕಿವಿಯಿರಿಸಿದ. ಆ ಬಡಿತ, ಆ ಮಿಡಿತ, ಬೆಚ್ಚನೆಯ ಆಲಿಂಗನ ಉನ್ಮಾದದ ಹೊಳೆಯಲ್ಲಿ ತೇಲಿಸಿತು. ದೇವಾಲಯದ ತುಂಬ ಕುಣಿದಾಡುತ್ತ, ನರ್ತಕಿಯರ ತಂಡದೊಡನೆ

ನಲಿದಾಡಿದ. ಗಂಧರ್ವ ದಂಪತಿಗಳ ಸೊಲ್ಲನ್ನು ಆಲಿಸಿದ. ಮಹಿಷಾಸುರ ಮರ್ಧಿನಿ, ಶಿವಪಾರ್ವತಿ, ತ್ರಿವಿಕ್ರಮರ ಅಡಿದಾವರೆಗಳಿಗೆ ವಂದಿಸಿದ. ಅವರು ಮುಗುಳ್ನಗೆಯಿಂದ ಆಶೀರ್ವದಿಸಿದಾಗ ರೋಮಾಂಚನಗೊಂಡ. ಪ್ರಾಕಾರದತ್ತ ನಡೆದು ಅಲ್ಲಿ ಇರಿಸಿದ ವೀರಗಲ್ಲುಗಳತ್ತ ಬಂದ. ಚಾಲುಕ್ಯ ವೀರರ, ಸೇನಾನಿಗಳ ಸಮೂಹ ವೀರಕಡಲಲ್ಲಿ ಓಲಾಡುತ್ತಿದ್ದಂತೆ ಗೋಚರಿಸಿತು.

ಅವರು ತಮ್ಮ ಹಣೆಗಳಿಗೆ ವಿಡ್ಡಗಳನ್ನು ತಿಕ್ಕಿ ಹರಿತಗೊಳಿಸುತ್ತಿದ್ದುದನ್ನು ಕಂಡು ಬೆರಗಾದ. ತಲ್ಲಣಿಸಿದ. ದೇವಾಲಯದ ತುಂಬ ಜೀವ ತಳೆದು ನಿಂತ ಮೂರ್ತಿಗಳೊಂದಿಗೆ ಬೆಳ್ಳಂಬೆಳಗು ಮನದಣಿ ಮಾತನಾಡಿದ. ಇತಿಹಾಸ ಗರ್ಭದಲ್ಲಿ ಪ್ರವೇಶಿಸಿ, ವರ್ತಮಾನವನ್ನು ಮರೆತು, ಭವಿಷ್ಯದ ಗೋಜಿಗೆ ಹೋಗದೆ, ಅಗೋಚರ ಅದ್ಭುತಲೋಕದಲ್ಲಿ ತಾದಾತ್ಮ್ಯ ಹೊಂದಿದ್ದ.

ಬೆಳಗು ಹರಿಯುತ್ತಿದ್ದಂತೆ ಚಂದ್ರುವಿಗೆ ಆ ಮಾಯಾ ಮೇರು ಕಣ್ಮರೆಯಾಗುತ್ತಿದ್ದಂತೆ ಭಾಸವಾಯಿತು. ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದ. ಮೈ ಭಾರವಾಗಿತ್ತು. ಕಣ್ಣುಜ್ಜಿಕೊಂಡು ಸುತ್ತಲು ನೋಡಿದ. ಜೀವ ತಳೆದ ಮೂರ್ತಿಗಳು, ಒಂದೊಂದಾಗಿ ಯೋಗಿ ತಮ್ಮ ತಮ್ಮ ಸ್ಥಳಗಳಲ್ಲೆ ನಿಲ್ಲತೊಡಗಿದ್ದವು. "ಅಪ್ಪಾ ಅವ್ರ, ಅಪ್ಪಾ ಅವ್ರ...." ಎಂಬ ಶಂಕ್ರಪ್ಪನ ಕೂಗು ಅವನನ್ನು ವಾಸ್ತವ ಪ್ರಪಂಚಕ್ಕೆ ಎಳೆದು ತಂದಿತು. ಅವನತ್ತ ನೋಡಿದ. ಶಂಕ್ರಪ್ಪನ ಹಿಂದೆ ಯಾರೋ ಅಪರಿಚಿತ ವ್ಯಕ್ತಿ ನಿಂತಿತ್ತು.

"ಇದೇನು ಅಪ್ಪಾ ಅವ್ರ... ರಾತ್ರೆಲ್ಲಾ ಇಲ್ಲೇ ಇದ್ದಬಿಟ್ಟರೇನು? ನಂಗ ಗೊತ್ತ ಆಗಲಿಲ್ಲ. ಈಗ ನಿಮ್ಮ ಖೋಲ್ಯಾಗ ಹೋಗಿ ನೋಡ್ದೆ ನೀವು ಇರಲೇ ಇಲ್ಲ. ಖಾತ್ರಿ ಇಲ್ಲೇ ಇರಬೇಕು ಅಂದ ಬಂದೆ" ಎಂದು ಶಂಕ್ರಪ್ಪ ಕಾತರದಿಂದ ನುಡಿದಾಗ, ಚಂದ್ರು ಮೆಲ್ಲಗೆ ಸಾವರಿಸಿಕೊಂಡು ಎದ್ದು 'ಇವರ್ಯಾರು' ಎಂದು ಕೇಳಿದ. 'ಇವರು ಗುಡಿ ಖಾತೆದವರು ಅಂತಾರಪ್ಪಾ.... ನಿಮಗೆ ಡಾಕ್ಟರ್ ಅದೇನೂ ಹೇಳಿದ್ರಲ್ಲ ಪುರಸ್ಕಾರ... ಅಂತ ಅದ್ನ ಕೊಡಾಕ ಬಂದಿರಬೇಕು.." ಎಂದ ಶಂಕರಪ್ಪ ಸಂತೋಷದಿಂದ.

ಚಂದ್ರು ಅವನತ್ತ ತಿರುಗಿ 'ಯಾರು ನೀವು, ಏನಾಗಬೇಕಿತ್ತು?' ಎಂದು ಕೇಳಿದ.

"ನಾನು ಹೊಸನಗರ ಪುರಾತತ್ವ ಇಲಾಖೆಯಿಂದ ಬಂದೀನಿ. ನಿನ್ನೆ ರಾತ್ರಿ ಗೌಡರ ಮನ್ಯಾಗ ಇಳಕೊಂಡಿದ್ದೆ. ಈಗ ಮತ್ತ ಹೊಸನಗರಕ್ಕೆ ಹೋಗಬೇಕು. ಈ ನೋಟೀಸು ತೊಗೊಂಡು ಸಹಿ ಮಾಡ್ರಿ" ಎನ್ನುತ್ತ ಆ ವ್ಯಕ್ತಿ ಲಕೋಟೆಯನ್ನು ಅವನ ಕೈಯಲ್ಲಿತ್ತ. ಚಂದ್ರು ಸರಸರನೆ ಅದನ್ನು ತೆಗೆದು ಓದಿದ.... "ನಿಮ್ಮ ಹೊಲದಲ್ಲಿ ದೊರೆತ ಈ ಪ್ರಾಚೀನ ದೇವಾಲಯ ನಮ್ಮ ಇಲಾಖೆಗೆ ಸೇರಬೇಕಾದದ್ದು. ಇದನ್ನು ನಮ್ಮ ವಶಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಈ ದೇವಾಲಯದ ವೀಕ್ಷಣೆಗೆ ನೀವು ಜನರಿಂದ ಹಣ ಪಡೆಯುತ್ತಿರುವಿರಾಗಿ ರುದ್ರಪ್ಪಗೌಡರು ಫಿರ್ಯಾದು ನೀಡಿದ್ದಾರೆ. ಈ ಸಂಬಂಧವಾಗಿ ನೀವು ಕೂಡಲೇ ಖುದ್ದಾಗಿ ಬಂದು ವಿವರಣೆ ನೀಡಬೇಕು."

ಒಕ್ಕಣೆ ಓದಿ ಚಂದ್ರು ಕುಸಿದು ಕುಳಿತ. "ಏನಾಯಿತು ಅಪಾ ಅವ್ರ....?" ಎನ್ನುತ್ತ ಶಂಕ್ರಪ್ಪ ಅವನ ಬಳಿ ಓಡಿ ಬಂದ. ಚಂದ್ರು ಸಾವರಿಸಿಕೊಂಡು ಎದ್ದು ಬಂದು ವ್ಯಕ್ತಿಯತ್ತ ತಿರುಗಿ "ಆಗಲಿ, ನೀವು ಹೋಗಿ. ನಾನು ಬರುತ್ತೇನೆ" ಎಂದು ನೋಡಿ ಸಹಿ ಹಾಕಿ ಅವನನ್ನು ಕಳುಹಿಸಿಕೊಟ್ಟ.

"ಏನ ಅಪ್ಪಾ ಅವ್ರ ಇದು...?"

ಎಂದು ಶಂಕ್ರಪ್ಪ ಕಾತರದಿಂದ ಕೇಳಿದ.

ಚಂದ್ರು ಒತ್ತಾಯದಿಂದ ನಗು ತಂದುಕೊಂಡು ಶಂಕರಪ್ಪನ ಎರಡೂ ಕೈಗಳಲ್ಲಿ ತನ್ನ ಕೈಯಿರಿಸಿ... "ಶಂಕರಪ್ಪಾ... ಇದು ನನಗ ದೊರೆತ ಪುರಸ್ಕಾರ..." ಎಂದ. ಆ ನಗೆಯಲ್ಲಿ ವಿಷಾದ ತುಂಬಿ ತುಳುಕುತ್ತಿತ್ತು. ಗರ್ಭಗುಡಿಯಲ್ಲಿ ಈಶ್ವರ ಲಿಂಗ ಮೂಕ ಬಿದ್ದಿತ್ತು.

○